ಬೀದರ್ ಕೋಟೆಯ ಐತಿಹ್ಯಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಬೇಬಿ

ಮಾರ್ಗದರ್ಶಕರು

ಡಾ. ಟಿ.ವಿಜಯ್ ಪೂಣಚ್ಚ
ಪ್ರಾಧ್ಯಾಪಕರು, ಚರಿತ್ರ ವಿಭಾಗ

ಚರಿತ್ರ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೭

140

140

140

ಬೀದರ್ ಕೋಟೆಯ ಐತಿಹ್ಯಗಳು

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗಕ್ಕೆ
ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಬೇಬಿ

ಮಾರ್ಗದರ್ಶಕರು
ಡಾ. ಟಿ.ವಿಜಯ್ ಪೂಣಚ್ಚ
ಪ್ರಾಧ್ಯಾಪಕರು, ಚರಿತ್ರೆ ವಿಭಾಗ

ಚರಿತ್ರೆ ವಿಭಾಗ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಜೂನ್ ೨೦೦೭

140

ಪ್ರಮಾಣ ಪತ್ರ

ಬೀದರ್ ಕೋಟೆಯ ಐತಿಹ್ಯಗಳು ಎಂಬ ನಿಬಂಧವನ್ನು ಡಾ. ಟಿ.ವಿಜಯ್ ಪೂಣಚ್ಚ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಸಮಾಜವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Baby

ಬೇಬಿ

ಸಂಶೋಧಕಿ

ಚರಿತ್ರೆ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 30-07-2007

ಮಾರ್ಗದರ್ಶಕರ ಪ್ರಮಾಣಪತ್ರ

ಬೀದರ್ ಕೋಟೆಯ ಐತಿಹ್ಯಗಳು ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಕುಮಾರಿ ಬೇಬಿ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. [illegible] ಪೂಣಚ್ಚ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೩೦.೦೧.೦೭

ಪರಿವಿಡಿ

ಅಧ್ಯಾಯ ೧ : ಪ್ರಸ್ತಾವನೆ ೧-೧೮

ಅಧ್ಯಾಯ ೨ : ಕೋಟೆಯ ನಿರ್ಮಾಣದ ಬಗೆಗಿರುವ ಐತಿಹ್ಯಗಳು ೧೯-೫೫

ಅಧ್ಯಾಯ ೩ : ಗರ್ಭಬುರ್ಜಿನ ಬಗೆಗಿರುವ ಐತಿಹ್ಯ ಮತ್ತು ಲಾವಣಿಗಳು ೫೬-೭೯

ಅಧ್ಯಾಯ ೪ : ಪಾಂಡುರಂಗನ ಪಾದುಕೆ ಬಗೆಗಿರುವ ಐತಿಹ್ಯಗಳು ೮೦-೯೪

ಅಧ್ಯಾಯ ೫ : ಬೊಮಗೊಂಡನ ಕೆರೆಯ ಬಗೆಗಿನ ಐತಿಹ್ಯಗಳು ೯೫-೧೦೭

ಅಧ್ಯಾಯ ೬ : ವೀರಸಂಗಯ್ಯನ ಗದ್ದುಗೆ ಬಗೆಗಿರುವ ಐತಿಹ್ಯಗಳು ೧೦೮-೧೨೩

ಅಧ್ಯಾಯ ೭ : ಅಹಮದ್-ಶಹ-ವಲೀ ಗೋರಿ ಬಗೆಗಿನ ಐತಿಹ್ಯಗಳು ೧೨೪-೧೪೦

ಅಧ್ಯಾಯ ೮ : ಮಹಮೂದ್ ಗವಾನ್‌ನ ಕೊಲೆಯ ಬಗೆಗಿನ ಐತಿಹ್ಯಗಳು ೧೪೧-೧೫೩

ಅಧ್ಯಾಯ ೯ ಉಪಸಂಹಾರ ೧೫೪-೧೫೬

ಗ್ರಂಥಋಣ ೧೫೭-೧೬೪

ವಕ್ತೃಗಳು ೧೬೫-೧೬೭

ಛಾಯಾಚಿತ್ರಗಳು

೧. ಬೀದರ್ ಕೋಟೆ, ಪು.೨೦

೨. ಮೂರು ವಿಶೇಷ ರೀತಿಯ ಕಂದಕಗಳು, ಪು.೨೩

೩. ಕೋಟೆಯ ಶಾರ್ಜಾ ದರವಾಜಾ, ಪು.೨೬

೪. ರಂಗೀನ್ ಮಹಲ್, ಪು.೨೭

೫. ಶಾಹಗಂಚ್ ದರವಾಜಾ, ಪು.೨೮

೬. ಫತ್ತೆ ದರವಾಜಾ, ಪು.೨೯

೭. ಮಂಗಲಪೇಟೆ ದರವಾಜಾ, ಪು.೩೦

೮. ದುಲಹನ್ ದರವಾಜಾ, ಪು.೩೦

೯. ಒಳಕೋಟೆಯಲ್ಲಿರುವ ತಖ್ತ್ ಮಹಲ್, ಪು.೫೭


೧೦. ಒಳಕೋಟೆಯಲ್ಲಿರುವ ಗರ್ಭ ಬುರ್ಜು, ಪು.೬೨

೧೧. ಗುಂಬಜ್ ದರವಾಜಾ, ಪು.೮೨
೧೨. ಪಾಂಡುರಂಗನ ಪಾದುಕೆ, ಪು.೮೮
೧೩. ಒಳಕೋಟೆಯ ದೃಶ್ಯ, ಪು.೯೭
೧೪. ಒಳಕೋಟೆಯಲ್ಲಿರುವ ಬೊಮಗೊಂಡನ ಕೆರೆ, ಪು.೧೦೪
೧೫. ಒಳಕೋಟೆಯಲ್ಲಿರುವ ವೀರಸಂಗಯ್ಯನ ಗುಡಿ, ಪು.೧೧೪
೧೬. ಅಷ್ಟೂರಿನಲ್ಲಿರುವ ಗುಂಬಜ್‌ಗಳು, ಪು.೧೧೦
೧೭. ಮಾಡ್ಯಾಳದಿಂದ ತರುವ ಧ್ವಜ, ಪು.೧೩೩
೧೮. ಕುದುರೆಯ ಮೇಲೆ ಕುಳಿತ ಮಾಡ್ಯಾಳದ ಜಂಗಮರು, ಪು.೧೩೪
೧೯. ಮಾಡ್ಯಾಳದ ಜಂಗಮರು, ಪು.೧೩೬
೨೦. ಮಹಮೂದ್ ಗವಾನ್ ವಿಶ್ವವಿದ್ಯಾಲಯ, ಪು.೧೪೫

ನಕ್ಷೆಗಳು

೧. ಬೀದರ್ ನಗರ ನಕ್ಷೆ, ಪು.೩
೨. ಬೀದರ್ ಜಿಲ್ಲೆಯ ತಾಲ್ಲೂಕು ನಕ್ಷೆ, ಪು.೮
೩. ಬೀದರ್ ಕೋಟೆಯ ನಕ್ಷೆ, ಪು.೨೧

ಕರ್ನಾಟಕದ ನಕ್ಷೆಯಲ್ಲಿ ಬೀದರ್



ಅಧ್ಯಾಯ ೧


ಪ್ರಸ್ತಾವನೆ

ಕರ್ನಾಟಕದ ಚರಿತ್ರೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಬಹುತೇಕ ಸಾಂಪ್ರದಾಯಿಕ ಆಕರಗಳನ್ನು ಮೂಲವಾಗಿಟ್ಟುಕೊಂಡು ಅಧ್ಯಯನ ಮಾಡುತ್ತಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಮೌಖಿಕ ಸಂಪ್ರದಾಯಗಳನ್ನು ಮತ್ತು ಆಕರಗಳನ್ನು ಚರಿತ್ರೆ ಬರವಣಿಗೆಗಳಲ್ಲಿ ಬಳಸಿಕೊಳ್ಳುವ ಅಧ್ಯಯನಗಳು ಕಳೆದ ಇಪ್ಪತ್ತು ವರ್ಷಗಳಿಂದ ಬಹಳ ಮುಖ್ಯವಾಗಿ ಜಾನಪದ ವಿದ್ವಾಂಸರಿಂದ ಆರಂಭವಾಯಿತು. ಬೀದರ್ ಕೋಟೆಯ ಐತಿಹ್ಯಗಳ ಬಗ್ಗೆ ಜನಪದ ಐತಿಹ್ಯಗಳನ್ನು ಪ್ರಮುಖ ಆಧಾರಗಳನ್ನಾಗಿಟ್ಟುಕೊಂಡು ಅಧ್ಯಯನವನ್ನು ಮಾಡಲಾಗಿದೆ. ಬೀದರ್ ಕೋಟೆಯ ಬಗ್ಗೆ ಜಿ.ಯಾಜ್ದಾನಿ ಮುಂತಾದ ವಿದ್ವಾಂಸರ ಬರವಣಿಗೆಗಳು ಹಾಗೂ ಇತ್ತೀಚಿನ ಉತ್ಖನಗಳ ವಿವರಗಳನ್ನು ತಿಳಿಸಿದ್ದರೂ, ಕೋಟೆಯ ಐತಿಹ್ಯಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಈಗಾಗಲೇ ಚರಿತ್ರೆಕಾರರಲ್ಲಿರುವ ಸಾಂಪ್ರದಾಯಿಕ ಆಕರಗಳೊಂದಿಗೆ ಐತಿಹ್ಯಗಳನ್ನಾಧರಿಸಿದ ಆಕರಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ ಕುರಿತದ್ದಾಗಿದೆ. ಬೀದರ್‌ನ ಭೌಗೋಳಿಕ ಹಿನ್ನೆಲೆ, ಹವಾಮಾನ ಮತ್ತು ಬೀದರ್ ಕೋಟೆಯಸ್ಥೂಲ ವಿವರ ಇಲ್ಲಿ ಅಭ್ಯಸಿಸಲಾಗಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದ ಅಧ್ಯಯನ ಮಾಡುವುದರಿಂದ ಚರಿತ್ರೆ ಬರವಣಿಗೆಯ ವಿವಿಧ ಹಂತಗಳನ್ನು ವಿಮರ್ಶೆ ಮಾಡಲು ಪ್ರಯತ್ನಿಸಲಾಗಿದೆ. ಅಧ್ಯಯನದ ವ್ಯಾಪ್ತಿ ಬೀದರ್ ಕೋಟೆಗೆ ಮಾತ್ರ ಸೀಮಿತವಾಗಿದೆ. ಕೋಟೆಯ ನಿರ್ಮಾಣ, ಸ್ಮಾರಕಗಳು ಮತ್ತು ಈಗಾಗಲೇ ದೊರಕಿರುವ ಲಿಖಿತ ಆಕರಗಳನ್ನು ಪೂರಕವಾಗಿ ಬಳಸಿಕೊಂಡು ಜನಪದೀಯ ನೆಲೆಯಿಂದ ವಸ್ತು ವಿಷಯವನ್ನು ಅರ್ಥಮಾಡಿಕೊಳ್ಳುವ ಸೈದ್ಧಾಂತಿಕ ನೆಲೆಗಳನ್ನು ಅಭ್ಯಸಿಸಲು ಪ್ರಯತ್ನ ಮಾಡಲಾಗಿದೆ.

ಹೀಗೆ ಮೌಖಿಕ ಪರಂಪರೆಯಲ್ಲಿ ಉಳಿದು ಬೆಳೆದು ಬಂದಿರುವ ಜನಪದ ಸಂಸ್ಕೃತಿಯ ಕುರುಹುಗಳಲ್ಲಿ ಜನಪದ ಚರಿತ್ರೆಯೂ ಒಂದಾಗಿದೆ. ಬೀದರ್ ಕೋಟೆಯ ಬಗ್ಗೆ ಇರುವ ಐತಿಹ್ಯಗಳನ್ನು ಸಾಧ್ಯವಾಗುವಷ್ಟರ ಮಟ್ಟಿಗೆ ಕಂಡುಕೊಳ್ಳಲು ಪ್ರಸ್ತುತ ಅಧ್ಯಯನವು ಪ್ರಯತ್ನಿಸಿದೆ.

ಬೀದರ್ ಪ್ರದೇಶವು ಭೌಗೋಳಿಕವಾಗಿ ಭಾರತದ ಮಧ್ಯಭಾಗದಲ್ಲಿದ್ದು ಕರ್ನಾಟಕ ರಾಜ್ಯದ ಉತ್ತರ ತುದಿಯಲ್ಲಿದೆ. ಇದು ಇಂದು ಬಸವಕಲ್ಯಾಣ, ಹುಮನಾಬಾದ್, ಭಾಲ್ಕಿ, ಔರಾದ್, ಬೀದರ್ ಎಂಬ ಐದು ತಾಲೂಕುಗಳನ್ನು ಹೊಂದಿದೆ. ಬೀದರ್‌ನ ಪೂರ್ವಕ್ಕೆ ಆಂಧ್ರ ಪ್ರದೇಶದ ನಿಜಾಮಾಬಾದ್ ಮತ್ತು ಮೇದಕ್ ಜಿಲ್ಲೆಗಳು ಹೊಂದಿಕೊಂಡಿವೆ. ಉತ್ತರ ಮತ್ತು ಪಶ್ಚಿಮ ಭಾಗಗಳಿಗೆ ಕ್ರಮವಾಗಿ ನಾಂದೇಡ್ ಮತ್ತು ಉಸ್ಮಾನಾಬಾದ್ ಜಿಲ್ಲೆಗಳಿವೆ. ಬೀದರ್‌ನ ದಕ್ಷಿಣಕ್ಕೆ ಗುಲ್ಬರ್ಗಾ ಜಿಲ್ಲೆಯಿದೆ.


ಬೀದರ್ ಪಟ್ಟಣ
N
ದುಲಹನ್
ದರವಾಜಾ

ದಖ್ಖಿನ್ ಪ್ರಸ್ಥ ಭೂಮಿಯ ಐತಿಹಾಸಿಕ ಕೇಂದ್ರಗಳಲ್ಲಿ ಒಂದಾದ ಬೀದರ್ ನಗರವು ೬೪೦ ಹಳ್ಳಿಗಳನ್ನು ಹೊಂದಿದ್ದು ದಕ್ಷಿಣೋತ್ತರವಾಗಿ ೭೬.೪೨'ಯಿಂದ ೭೭.೯೧' ರೇಖಾಂಶದವರೆಗೂ ಪೂರ್ವ ಪಶ್ಚಿಮವಾಗಿ ೧೭.೩೫° ಯಿಂದ ೧೮.೩೫° ಅಕ್ಷಾಂಶದವರೆಗೂ ಹರಡಿಕೊಂಡಿದೆ. ಬೀದರ್ ಜಿಲ್ಲೆಯ ಅರ್ಧಭಾಗ ಕಪ್ಪು ಮಣ್ಣಿನಿಂದ ಇನ್ನರ್ಧಭಾಗ ಕೆಂಪು ಮಣ್ಣಿನಿಂದ ಕೂಡಿದ್ದು ದಖ್ಖಿನ್ ಪ್ರದೇಶವೆಂದು ಪ್ರಸಿದ್ಧಿಯಾಗಿದೆ. ಜಿಲ್ಲೆಯಲ್ಲಿ ಹೇಳಿಕೊಳ್ಳುವಂಥ ಬೆಟ್ಟಗುಡ್ಡಗಳಿಲ್ಲ. ಬೆಂಗಳೂರಿನಿಂದ ೭೪೦ ಕಿ.ಮೀ, ಗುಲ್ಬರ್ಗಾದಿಂದ ೧೧೪ ಕಿ.ಮೀ, ಹೈದರಾಬಾದ್‌ನಿಂದ ೧೩೦. ಕಿ.ಮೀ. ದೂರದಲ್ಲಿದೆ. ಈ ಜಿಲ್ಲೆಯು ಸಮುದ್ರದ ಪಾತಳಿಯಿಂದ ೨೨೦೬ ಅಡಿ ಎತ್ತರದಲ್ಲಿದೆ. ಹವಾಮಾನ ಆರೋಗ್ಯಕರವಾಗಿದೆ. ನೀರು ಕೂಡ ಅಷ್ಟೇ ಸಿಹಿಯಾಗಿದ್ದು ಹೇಳಿಕೊಳ್ಳುವ ಬೆಟ್ಟಗುಡ್ಡಗಳಿಲ್ಲದ ಅರಣ್ಯ ಸಂಪತ್ತನ್ನು ಹೊಂದಿದೆ.

*** *** ***

ಬೀದರ್ ಜಿಲ್ಲೆಯು ಮೌರ್ಯ, ಶಾತವಾಹನ, ರಾಷ್ಟ್ರಕೂಟ, ಕಲ್ಯಾಣಿ ಚಾಲುಕ್ಯರು, ಕಲಚೂರಿಯರು, ದೇವಗಿರಿಯ ಯಾದವರು, ಓರಂಗಲ್ಲಿನ ಕಾಕತೀಯರು, ಖಿಲ್ಜಿ, ಬಹಮನಿ, ಮೊಘಲ್ ಹಾಗೂ ಹೈದರಾಬಾದ್ ನಿಜಾಮ ಇವರ ಆಡಳಿತಕ್ಕೊಳಪಟ್ಟಿತ್ತು. ಹೀಗಾಗಿ ಬೀದರ್ ಇತಿಹಾಸ ಅತ್ಯಂತ ಪ್ರಸಿದ್ಧವಾದುದು, ಬೇರೆ ಬೇರೆ ಭಾಗದ ವಿಭಿನ್ನ ಧರ್ಮದ ಹಲವು ರಾಜರು ಈ ಜಿಲ್ಲೆಯನ್ನು ಆಳಿರುವುದರಿಂದ ಇಲ್ಲಿಯ ಸಂಸ್ಕೃತಿಯೂ ವೈವಿಧ್ಯಮಯವಾದದ್ದು. ಬೀದರ್‌ನ್ನು ಮೊದಲು ವೀದರ್, ಬಿದಿರೂರು, ಬಿದಿರುಪುರ ಎಂಬ ಹೆಸರುಗಳಿಂದ ಕರೆಯುತಿದ್ದರು ಎಂದು ಇತಿಹಾಸ ತಿಳಿಸುತ್ತದೆ. ಬಹಮನಿ ಸುಲ್ತಾನರ ಕಾಲದಲ್ಲಿ ಇದಕ್ಕೆ ಎಂ.ಬೀದರ್ ಎಂತಲೂ ಔರಂಗಜೇಬನ ಆಳ್ವಿಕೆಯಲ್ಲಿ ಯಫರಾಬಾದ್ ಎಂತಲೂ ಕರೆಯುತ್ತಿದ್ದರು.

ಕ್ರಿ.ಪೂ.೩ನೇ ಶತಮಾನದಲ್ಲಿ ಚಿತ್ರದುರ್ಗದವರೆಗಿನ ಇಡೀ ದಕ್ಷಿಣಭಾಗವು ಮೌರ್ಯವಂಶದ ಅಶೋಕ ಸಾಮ್ರಾಟನಿಂದ ಆಕ್ರಮಿತವಾಗಿತ್ತು. ಆಗ ಈ ಬೀದರ್ ಜಿಲ್ಲೆಯೂ ಅವನ ಆಳ್ವಿಕೆಗೆ ಒಳಪಟ್ಟಿತ್ತು. ಮುಂದೆ ಕ್ರಿ.ಶ.೪ನೇ ಶತಮಾನದಲ್ಲಿ ಶಾತವಾಹನರ ಆಡಳಿತಕ್ಕೊಳಪಟ್ಟಿತ್ತು. ಆಗ ಶಾತವಾಹನರು ದಖ್ಖಿನ್ ಪ್ರದೇಶವನ್ನು ಆಳುತ್ತಿದ್ದರು. ಕ್ರಿ.ಶ.೮ನೇ ಶತಮಾನದಲ್ಲಿ ರಾಷ್ಟ್ರಕೂಟರ ಆಡಳಿತಕ್ಕೆ ಈ ಜಿಲ್ಲೆ ಒಳಪಟ್ಟಿತು. ಅತ್ಯಂತ ಪ್ರಸಿದ್ಧರಾದ ರಾಷ್ಟ್ರಕೂಟರ ದೊರೆಗಳು ಆಳುವ ಸಮಯದಲ್ಲಿ ಬೀದರ್ ಜಿಲ್ಲೆಯು ಸಂಪದ್ಭರಿತವಾಗಿತ್ತು. ಇವರ ಆಳ್ವಿಕೆಯ ಸಮಯದಲ್ಲಿ ಕನ್ನಡ ತಲೆಯೆತ್ತಿ ನಿಂತಿತ್ತು. ಕಲೆ ಸಾಹಿತ್ಯ ಸಂಸ್ಕೃತಿಗಳು ಹೂವಾಗಿ ಅರಳಿದವು. ರಾಷ್ಟ್ರಕೂಟರು ಕಲಾಪ್ರಿಯರು, ರಸಿಕರು ಆಗಿದ್ದರು. ನಂತರ ಕ್ರಿ.ಶ.೯೭೩ರಿಂದ ೧೧೯೮ರವರೆಗೆ ಕಲ್ಯಾಣಿ ಚಾಲುಕ್ಯರು ಈ ನಾಡನ್ನು ಆಳಲು ಆರಂಭಿಸಿದರು. ಕ್ರಿ.ಶ.೧೦೭೭ರಿಂದ ೧೧೨೭ರವರೆಗೆ ಈ ಅವಧಿಯಲ್ಲಿದ್ದ ಕಲ್ಯಾಣಿ ಚಾಲುಕ್ಯ ಚಕ್ರವರ್ತಿ ೬ನೇ ವಿಕ್ರಮಾದಿತ್ಯನ ಕಾಲದಲ್ಲಿ ಬೀದರ್ ಜಿಲ್ಲೆ ಸಮೃದ್ಧವಾಗಿ ಸಂಪದ್ಭರಿತವಾಗಿತ್ತು. ಆಗ ಈ ನಾಡಿನ ಘನತೆ ಗೌರವಗಳು ಹೆಚ್ಚಾದವು. ಈ ದೊರೆ ಅತ್ಯಂತ ಪರಾಕ್ರಮಿಯಾಗಿದ್ದನಲ್ಲದೆ, ಸಾಹಿತ್ಯ

ಪ್ರಿಯನೂ ಕಲಾಭಿಮಾನಿಯೂ ಆಗಿದ್ದ. ಅನೇಕ ಕವಿಗಳು ಪಂಡಿತರು ೬ನೇ ವಿಕ್ರಮಾದಿತ್ಯನ ಆಶ್ರಯದಲ್ಲಿದ್ದರು. ಆಗಲೇ ಈ ವಿಕ್ರಮಾದಿತ್ಯನ ರಾಜ್ಯ ರಾಮರಾಜ್ಯವಾಗಿತ್ತು. ಹಲವಾರು ಶಾಸನಗಳು ಈ ದೊರೆಯ ಆಡಳಿತವನ್ನು ಪ್ರಜೆಗಳ ಅಭ್ಯುದಯದ ಕಾಲವೆಂದು ಬಣ್ಣಿಸಿವೆ.

೬ನೇ ವಿಕ್ರಮಾದಿತ್ಯನ ಆಳ್ವಿಕೆಯು ಕರ್ನಾಟಕದ ಇತಿಹಾಸದಲ್ಲಿ ಮಹತ್ವಪೂರ್ಣವಾದುದು. ಪ್ರಜೆಗಳ ವಿಷಯದಲ್ಲಿ ಅನುಕಂಪ ಹೊಂದಿದ ರಾಜನು ವ್ಯಾಪಾರ, ಒಕ್ಕಲು ತನಕ್ಕಾಗಿ ಅನೇಕ ಜನಹಿತ ಕಾರ್ಯಗಳನ್ನು ಕೈಗೊಂಡನು. ಕಲ್ಯಾಣ ಹಾಗೂ ಇತರ ಸ್ಥಳಗಳು ವ್ಯಾಪಾರದ ಮುಖ್ಯ ಕೇಂದ್ರಗಳಾಗಿದ್ದವು. ಕರ್ನಾಟಕ, ಮಹಾರಾಷ್ಟ್ರ ಹಾಗೂ ಇತರ ಭಾಗದ ವ್ಯಾಪಾರಿಗಳು ಕಲ್ಯಾಣಕ್ಕೆ ಬಂದು ವ್ಯಾಪಾರ ಮಾಡುತ್ತಿದ್ದರು. ಬಸವ ಕಲ್ಯಾಣ ತಾಲೂಕಿನ ಗೋರ್ಟಾ ಗ್ರಾಮದಲ್ಲಿ ದೊರೆತ ಶಾಸನವು ಕಲ್ಯಾಣಿ ಚಾಲುಕ್ಯರ ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಅಲ್ಲದೆ ಘಾಟ್‌ಬೊರಾಳ ಮತ್ತು ನಾರಾಯಣಪುರ ಗ್ರಾಮಗಳಲ್ಲಿ ದೊರೆತಿರುವ ಶಾಸನಗಳು ಕಲ್ಯಾಣಿ ಚಾಲುಕ್ಯರ ಆರ್ಥಿಕ, ಸಾಮಾಜಿಕ, ಧಾರ್ಮಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತವೆ.

ಕಲ್ಯಾಣಿ ಚಾಲುಕ್ಯರ ಪತನದ ನಂತರ ಕ್ರಿ.ಶ.೧೧೫೬ರಲ್ಲಿ ಕಲಚೂರಿ ಮನೆತನದ ಆಳ್ವಿಕೆ ಬೀದರ್ ಜಿಲ್ಲೆಯ ಬಸವಕಲ್ಯಾಣದಿಂದ ಪ್ರಾರಂಭಗೊಳ್ಳುತ್ತದೆ. ಮೂರನೇ ತೈಲಪನನ್ನು ಅಧಿಕಾರದಿಂದ ತಳ್ಳಿ ಬಿಜ್ಜಳನು ಕಲ್ಯಾಣಿ ಚಾಲುಕ್ಯರ ಮನೆತನದಿಂದ ಪಟ್ಟಕ್ಕೆ ಬರುತ್ತಾನೆ. ಅಥವಾ ಇವನೇ ಕಲಚೂರಿ ಮನೆತನ ಸ್ಥಾಪಿಸಿದನೆಂದರೆ ತಪ್ಪಾಗಲಾರದು. ಕಲಚೂರಿಗಳ ಈ ಚಿಕ್ಕ ಆಳ್ವಿಕೆಯಲ್ಲಿ ನಾಡಿನಲ್ಲಿ ಶಾಂತಿಯಾಗಲಿ, ಸ್ಥಿರತೆಯಾಗಲಿ ಇರಲಿಲ್ಲ. ಆದರೂ ಕರ್ನಾಟಕ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಈ ಮನೆತನ ಪಡೆದಿದೆ. ಸಾಮಾಜಿಕ, ಧಾರ್ಮಿಕ ಹಾಗೂ ಸಾಹಿತ್ಯಕ ರಂಗಗಳಲ್ಲಿ ಮಹತ್ತರವಾದ ಸುಧಾರಣೆಯಾದದ್ದು ಇದೇ ಕಾಲದಲ್ಲಿ. ಇದಕ್ಕೆ ಮೂಲಕಾರಣ ಈ ಸಮಯದಲ್ಲಿ ಬಸವಣ್ಣನ ನೇತೃತ್ವದಲ್ಲಿ ನಡೆದ ಧಾರ್ಮಿಕ ಹಾಗೂ ಸಾಮಾಜಿಕ ಕ್ರಾಂತಿ. ಅಂತೆಯೇ ಈ ಶತಮಾನ ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆದ ಚಿರಂತನ ಕಾಲ. ಬಸವಣ್ಣ ಮತ್ತು ಉಳಿದ ಹಲವಾರು ಶರಣರ ಉದಯದಿಂದಲೇ ಕರ್ನಾಟಕದ ಚರಿತ್ರೆಯಲ್ಲಿ ಕಲಚೂರಿಗಳಿಗೆ ಹೆಚ್ಚಿನ ಮಹತ್ವವುಂಟಾಯಿತು.

ಕಲಚೂರಿಗಳ ನಂತರ ಯಾದವರು, ಕಾಕತೀಯರು ಸ್ವಲ್ಪ ಕಾಲ ಆಳ್ವಿಕೆ ನಡೆಸಿದರು. ಕ್ರಿ.ಶ.೧೩೨೧ರ ಸುಮಾರಿಗೆ ತುಘಲಕ್ ಬೀದರ್ ಪ್ರದೇಶವನ್ನು ತನ್ನದಾಗಿಸಿಕೊಂಡನು. ಬಸವ ಕಲ್ಯಾಣದಲ್ಲಿ ದೊರೆತ ಶಿಲಾಶಾಸನವೊಂದರಲ್ಲಿ ಈತನ ಹೆಸರು ಉಲ್ಲೇಖವಾಗಿದೆ. ಈ ಸಮಯದಲ್ಲಿ ನಸರತ್ ಖಾನ್ ಎಂಬುವನು ಬೀದರ್ ಭಾಗದ ಆಡಳಿತಗಾರನಾಗಿದ್ದ. ತುಘಲಕ್‌ನ ಆಡಳಿತ ಅಸಮರ್ಥವಾಗಿದ್ದರಿಂದ ದಕ್ಷಿಣದಲ್ಲಿ ಕ್ರಾಂತಿಯಾಯಿತು. ಈ ಕ್ರಾಂತಿಯ ಪರಿಣಾಮವಾಗಿ 'ಬಹಮನಿ' ಎಂಬ ಹೊಸ ರಾಜ್ಯ ಉದಯವಾಯಿತು.

ಕ್ರಿ.ಶ.೧೩೪೭ರಲ್ಲಿ ಬಹಮನಿ ಮನೆತನ ಅಲ್ಲಾವುದ್ದೀನ್ ಶಹನಿಂದ ಸ್ಥಾಪಿತವಾಯಿತು. ಎರಡು ಶತಮಾನಗಳವರೆಗೆ ಬಹಮನಿ ಸುಲ್ತಾನರು ರಾಜ್ಯವಾಳಿದರು. ಇವರು ಮೊದಲು ಗುಲಬರ್ಗಾವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ಸಮಯದಲ್ಲಿ ಬೀದರ್ ಇವರ ಪ್ರಾಂತೀಯ ರಾಜಧಾನಿಯಾಗಿತ್ತು. ೧೩೭೮ರಿಂದ ೧೩೯೭ರಲ್ಲಿ ಎರಡನೆ ಮಹಮದನ ಆಳ್ವಿಕೆಯು ಪ್ರಾರಂಭವಾಗುತ್ತದೆ. ಈ ಸಮಯದಲ್ಲಿ ಬೀದರ್‌ನಲ್ಲಿ ಅನಾಥರಿಗಾಗಿ ಶಾಲೆಗಳನ್ನು ತೆರೆದನು. ಕ್ರಿ.ಶ.೧೪೨೯ರಲ್ಲಿ ೧ನೇ ಅಹಮದ್ ಶಹ ಬಹಮನಿಯು ಕಲ್ಬುರ್ಗಿಯಿಂದ ಬೀದರ್ ನಗರಕ್ಕೆ ತನ್ನ ರಾಜಧಾನಿಯನ್ನು ವರ್ಗಾಯಿಸಿದನು. ಬೀದರ್‌ದ ಆರೋಗ್ಯಪೂರ್ಣ ಉತ್ತಮ ಹವೆ ಈತನನ್ನು ಆಕರ್ಷಿಸಿತು. ಈತನ ಕಾಲಕ್ಕೆ ಬೀದರ್‌ನಲ್ಲಿ ಕೋಟೆ-ಕೊತ್ತಲಗಳು ನಿರ್ಮಾಣವಾದವು. ಕ್ರಿ.ಶ.೧೪೩೬ರಲ್ಲಿ ಎರಡನೇ ಅಲ್ಲಾವುದ್ದಿನ್ ಅಹಮದ್ ಶಹನು ಪಟ್ಟಕ್ಕೆ ಬಂದನು. ೧೪೬೬ರಲ್ಲಿ ಮಹಮೂದ್ ಗವಾನ್‌ನನ್ನು ಪ್ರಧಾನ ಮಂತ್ರಿಯನ್ನಾಗಿ ನೇಮಕ ಮಾಡಿದನು. ೧೪೭೨ರಲ್ಲಿ ಮಹಮೂದ್ ಗವಾನ್‌ನು ಬೀದರ್‌ನಲ್ಲಿ ವಿದ್ಯಾಕೇಂದ್ರವನ್ನು ನಿರ್ಮಿಸಿದನು. ೧೪೮೧ರಲ್ಲಿ ಮಹಮೂದ್ ಗವಾನ್‌ನ ಕೊಲೆಯಾಯಿತು. ಕ್ರಿ.ಶ.೧೪೯೦ರಲ್ಲಿ ಬಹಮನಿ ರಾಜ್ಯ ಒಡೆದು ಐದು ಚಿಕ್ಕ ರಾಜ್ಯಗಳ ಉದಯವಾಯಿತು. ಬೀದರ್‌ನಲ್ಲಿ ಬರೀದ್ ಶಾಹಿಗಳ ಪ್ರಾಬಲ್ಯ ಅಸ್ತಿತ್ವಕ್ಕೆ ಬಂದಿತು. ಈ ಮನೆತನದ ಅಲೀಬರೀದ ಶಹನು ಬೀದರ್ ನಗರದ ಸುತ್ತ ಗೋಡೆ ಕಟ್ಟಿಸಿದ. ನಗರಕ್ಕೆ ರಕ್ಷಣಾ ದ್ವಾರಗಳು ನಿರ್ಮಿಸಲ್ಪಟ್ಟವು. ಕ್ರಿ.ಶ.೧೬೫೬ರ ಸುಮಾರಿಗೆ ಔರಂಗಜೇಬನು ಬೀದರ್ ಕೋಟೆಯನ್ನು ಮುತ್ತಿ ವಶಪಡಿಸಿಕೊಂಡನು. ಔರಂಗಜೇಬನ ನಿಧನದ ನಂತರ ಕ್ರಿ.ಶ.೧೭೧೮ರಿಂದ ಕೆಲವು ವರ್ಷ ಬೀದರ್ ಭಾಗ ಪೇಶ್ವೆಯರ ಆಡಳಿತದಲ್ಲಿತ್ತು. ೧೭೨೪ರಿಂದ ೧೯೪೮ರವರೆಗೆ ಬೀದರ್ ಪ್ರದೇಶ ಹೈದರಾಬಾದ್ ನಿಜಾಮನ ಆಡಳಿತದಲ್ಲಿತ್ತು. ನಿಜಾಮನ ಕಾಲದಲ್ಲಿ ಈ ನಾಡಿಗೆ ಅನೇಕ ಸುಧಾರಣೆಗಳಾದರೂ ಇದೇ ಸಮಯದಲ್ಲಿ ಅಂದರೆ ೧೯೪೦-೪೮ರ ವೇಳೆಗೆ ರಜಾಕಾರರ ಹಾವಳಿ ಪ್ರಾರಂಭವಾಯಿತು. ಈ ಸಮಯದಲ್ಲಿ ಅನೇಕ ಹಿಂದೂ ಜನರು ಹಿಂಸೆಗೆ ಒಳಗಾದರು. ಮನೆ-ಮಠ ಕಳೆದುಕೊಂಡು ಹಲವಾರು ಜನರು ಪ್ರಾಣಬಿಟ್ಟರು. ಇದು ಬೀದರ್ ಜಿಲ್ಲೆಯ ಇತಿಹಾಸದಲ್ಲೊಂದು ಕಹಿ ಘಟನೆ.

೧೯೪೨ರಿಂದ ದೇಶದಲ್ಲೆಲ್ಲ ಪ್ರಾರಂಭವಾದ ಸ್ವಾತಂತ್ರ್ಯ ಚಳುವಳಿಗೆ ಇಲ್ಲಿಯ ಧುರೀಣರೂ ಸೇರಿಕೊಂಡು ಸತ್ಯಾಗ್ರಹ ಮಾಡಿದರು. ೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿತಾದರೂ ಈ ಭಾಗದಲ್ಲಿ ಹೈದರಾಬಾದ್ ನಿಜಾಮನು ತನ್ನ ಅಧಿಕಾರ ಕಳೆದುಕೊಳ್ಳಲು ಸಿದ್ಧನಿರಲಿಲ್ಲ. ಕೊನೆಗೆ ೧೯೪೮ರಲ್ಲಿ ಭಾರತದ ಒಕ್ಕೂಟದಲ್ಲಿ ಹೈದರಾಬಾದ್ ರಾಜ್ಯ ವಿಲೀನವಾಯಿತು. ೧೯೫೬ರ ರಾಜ್ಯ ಪುನರ್ ವಿಂಗಡನೆಯ ಪ್ರಕಾರ ಬೀದರ್ ಕರ್ನಾಟಕ ರಾಜ್ಯಕ್ಕೆ ಸೇರಿತು. ಇದು ಈ ಜಿಲ್ಲೆಯ ಅತ್ಯಂತ ಸಂಕ್ಷಿಪ್ತ ಇತಿಹಾಸ ಪರಂಪರೆ.

*** *** ***

ದಕ್ಷಿಣ ಭಾರತದ ಕೋಟೆಗಳಲ್ಲಿಯೇ ರಕ್ಷಣಾ ತಂತ್ರದ ದೃಷ್ಟಿಯಿಂದ ರಚಿತಗೊಂಡ ಕೋಟೆಗಳಲ್ಲಿ ಬೀದರ್ ಕೋಟೆ ಮಹತ್ವದ ಸ್ಥಾನ ತಳೆದಿದೆ. ಒಂದು ರೀತಿಯಲ್ಲಿ ಬೀದರ್ ಕೋಟೆಯು ಕೋಟೆಗಳ ಕೋಟೆ ಆಗಿದೆ. ಕೆಲವು ಐತಿಹ್ಯಗಳಲ್ಲಿ ಕಾಕತೀಯರ ಕಾಲದಲ್ಲಿ ಕೋಟೆ ಇತ್ತೆಂದು ಹೇಳಲಾಗುತ್ತದೆ. ಆದರೆ ಅವು ಸ್ಪಷ್ಟಗೊಳ್ಳುತ್ತಿಲ್ಲವಾದರೂ ೧೩ನೇ ಶತಮಾನದಲ್ಲಿ ಕಾಕತೀಯರ ಕೋಟೆ ಇದ್ದು ಅದನ್ನೇ ಈಗ ಜನರು ಪುರಾನಾ ಖಿಲಾ ಎಂದು ಕರೆಯುತ್ತಾರೆ. ಕಾಕತೀಯರ ಕಾಲಕ್ಕೆ ಬೀದರ್‌ನ್ನು ಬೇಡಣಾದ ಕೂಟ ಎಂದು ಕರೆಯುತ್ತಿದ್ದರೆಂಬ ಐತಿಹ್ಯವಿದೆ.

೧೩೪೭ರಲ್ಲಿ ಬಹಮನಿಯರ ಆಳ್ವಿಕೆ ಆರಂಭಗೊಳ್ಳುವುದರೊಂದಿಗೆ ಬೀದರ್ ಪ್ರಾಂತೀಯ ರಾಜಧಾನಿಯಾಗಿ ಬೆಳೆಯಲಾರಂಭಿಸಿತು. ಬಹಮನಿಯರ ಸಾಮ್ರಾಜ್ಯ ಗೋದಾವರಿಯಿಂದ ವಿಶಾಖಪಟ್ಟಣದವರೆಗೆ ವಿಸ್ತರಿತವಾಯಿತು. ಇವರ ಸಾಮ್ರಾಜ್ಯ ವಿಸ್ತಾರಗೊಳ್ಳುತ್ತಾ ಸಾಗಿದಂತೆ ಬೀದರ್‌ನ ಮಹತ್ವ ಅಧಿಕಗೊಳ್ಳುತ್ತ ನಡೆಯಿತು.

೧ನೇ ಅಹಮದ್-ಶಹ-ವಲೀಯ ಆಳ್ವಿಕೆ ಕಾಲದಲ್ಲಿ ಕೋಟೆಯನ್ನು ಪುನರ್ ನಿರ್ಮಾಣ ಮಾಡಲಾಯಿತು. ಕಾಕತೀಯರ ಕೋಟೆ ಇದ್ದ ಸ್ಥಳದಲ್ಲಿ ಬೃಹತ್ ಗಾತ್ರದ ವಿವಿಧ ಮಹಲುಗಳು ನಿರ್ಮಾಣಗೊಂಡವು. ಕೋಟೆಯ ಗೋಡೆ, ಬುರ್ಜುಗಳು, ದ್ವಾರಗಳ ಪುನರ್ ನಿರ್ಮಾಣವಾಯಿತು. ಮೂರು ವಿಶೇಷ ರೀತಿಯ ಕಂದಕಗಳು ನಿರ್ಮಾಣವಾದವು. ಅಧಿಕಾರಿಗಳು ನಾಗರಿಕರು ವಾಸಿಸುತ್ತಿದ್ದ ಪ್ರದೇಶದಲ್ಲಿ ಬುರ್ಜು ದ್ವಾರಗಳ ಸಹಿತ ರಕ್ಷಣಾ ಗೋಡೆಯನ್ನು ರಚಿಸಿರುವುದು ಬೀದರಿನ ವಿಶೇಷವಾಗಿದೆ.

ಬೀದರ್ ಕೋಟೆ ನೆಲದುರ್ಗ ಕೋಟೆಯಾಗಿದೆ ಮತ್ತು ಕೋಟೆಯಲ್ಲಿ ಸುಮಾರು ೩೭ ಬುರ್ಜುಗಳಿವೆ ಎಂದು ಇತಿಹಾಸದಿಂದ ತಿಳಿದುಬರುತ್ತದೆ. ಆದರೆ ನಮಗೆ ಈಗ ನೋಡಲು ನಾಲ್ಕೈದು ಬುರ್ಜುಗಳು ಸಿಗಬಹುದು. ಅವು ಕೂಡ ಶಿಥಿಲಗೊಂಡಿವೆ. ಉಳಿದ ಬುರ್ಜುಗಳು ನಾಶಗೊಂಡಿವೆ. ಕೋಟೆಯ ಒಳಭಾಗದಲ್ಲಿರುವ ಕಟ್ಟಡಗಳ ಮೇಲೆ ಇಂಡೋಸಾರ್ಸೆನಿಕ್ ಶೈಲಿ ಅಳವಡಿಸಿರುವುದು ವಿಶೇಷವಾಗಿದೆ. ರಂಗೀನ ಮಹಲಿನ ಗೋಡೆಗಳ ಮೇಲೆ ಈಗಲೂ ಈ ಶೈಲಿ ನಮಗೆ ನೋಡಲು ಸಿಗುತ್ತದೆ.

ಸುಮಾರು ೫ ಕಿ.ಮೀ. ವ್ಯಾಪ್ತಿಯುಳ್ಳ ಪ್ರದೇಶದಲ್ಲಿ ಕೋಟೆಯು ವಿವಿಧ ದ್ವಾರಗಳಿಂದ ನಿರ್ಮಾಣವಾಗಿದೆ. ಕೋಟೆಗೆ ಮಹಾದ್ವಾರದಿಂದ ಪ್ರವೇಶವಿದ್ದು ಅದನ್ನು ದಾಟಿ ಸಾಗುವಾಗ ಎರಡನೆಯ ದ್ವಾರ ಕಾಣಸಿಗುತ್ತದೆ. ಶಾರ್ಜಾ ದ್ವಾರ, ಗುಂಬಜ್ ದ್ವಾರ, ಮಂಡು ದ್ವಾರ, ಕಲ್ಯಾಣಿ ದ್ವಾರ, ಕಲಮಡಗಿ ದ್ವಾರ, ಕಾರನಾಟಿಕ್ ದ್ವಾರ, ದೆಹಲಿ ದ್ವಾರ ಎಂಬ ೭ ದ್ವಾರಗಳಿವೆ. ಶಾರ್ಜಾ ದ್ವಾರದ ಕಮಾನಿನ ಮೇಲೆ ಎಡ ಬಲಕ್ಕೆ ಹುಲಿಗಳ (ಕಲ್ಲಿನಲ್ಲಿ ಕೆತ್ತಿದ) ಶಿಲ್ಪ ಚಿತ್ರಗಳಿವೆ. ಇದರಿಂದಾಗಿ ಇದಕ್ಕೆ ಶಾರ್ಜಾ (ಶಾರ್ದೂಲ) ದರವಾಜಾ ಎಂದು ಹೆಸರು ಬಂದಿದೆ. ಇದು ರಚನೆಯಾದದ್ದು ೧೫೦೩ರಲ್ಲಿ.

ಬೀದರ್ ಜಿಲ್ಲೆಯ ತಾಲ್ಲೂಕುಗಳು



ಪ್ರೇರಣೆ : ಹನುಮಾಕ್ಷಿ ಗೋಗಿ ಅವರ
ಬೀದರ್ ಜಿಲ್ಲೆಯ ಶಾಸನಗಳು,
ಸಂಪುಟ ೮

ಕೋಟೆಯ ಒಳಭಾಗದಲ್ಲಿ ರಂಗೀನ್ ಮಹಲ್, ರಾಜರ ಅಡುಗೆ ಮನೆ, ಶಾಹಿ ಹಮಾಮಖಾನಾ, ಸೋಲಾಕಂಬ ಮಸೀದಿ, ಗಗನ್ ಮಹಲ್ (ತರ್ಕಶ್ ಮಹಲ್), ದಿವಾನೇ ಆಮ್(ಅರಸರ ಸಭಾಮಂಟಪ), ಖಾಸ ಮಹಲ್ (ಮುಖ್ಯ ಅರಮನೆ) ಅಥವಾ (ತಖ್ತ್ ಮಹಲ್) ಗಳಂತಹ ಮುಸ್ಲಿಂರ ಕಾಲದ ಸ್ಮಾರಕಗಳನ್ನು ಕಾಣುತ್ತೇವೆ. ಅಲ್ಲದೆ ಕೋಟೆಯ ಒಳಗೆ ಹಿಂದೂ ದೇವಾಲಯವಾದ ವೀರಸಂಗಯ್ಯನ ಗುಡಿ (ಗದ್ದುಗೆ), ಕಾಳಿಕಾ ದೇವಿ ಮಂದಿರ ಹಾಗೂ ಬೊಮಗೊಂಡನ ಕೆರೆಯನ್ನು ಕಾಣಬಹುದು. ಈ ಕೆರೆ, ಗುಡಿ, (ಗದ್ದುಗೆ) ಮಂದಿರ, ತಮ್ಮದೆಯಾದ ವಿಶಿಷ್ಟ ರೀತಿಯ ಐತಿಹ್ಯಗಳನ್ನು ಹೊಂದಿವೆ. ಕೋಟೆಯ ಒಳಗೆ ತಖ್ತ್ ಮಹಲಿನ ದಕ್ಷಿಣಕ್ಕೆ ಹಜಾರ ಕೂಠರಿ ಎಂಬ ಸುರಂಗ ಮಾರ್ಗವಿದೆ. ಇದರ ಎದುರಿಗೆ ಕೊಳವೊಂದು ಇತ್ತು ಎಂದು ತಿಳಿದುಬರುತ್ತದೆ. ಆದರೆ ಈಗ ನಮಗೆ ನೋಡಲು ಸಿಗುವುದಿಲ್ಲ. ಆ ಕೊಳದಿಂದಲೇ ಅರಸರ ಸ್ನಾನಗೃಹಕ್ಕೆ ನೀರು ಸರಬರಾಜು ಆಗುತ್ತಿತ್ತು ಎಂದು ತಿಳಿದುಬರುತ್ತದೆ.

ಹೊರಕೋಟೆಯಲ್ಲಿ ೧೪೭೨ರಲ್ಲಿ ಮಹಮೂದ್ ಗವಾನ್ ನಿರ್ಮಿಸಿದ ಮದರಸಾ, ಕಾಕತೀಯ ಕಾಲಕ್ಕೆ ನಿರ್ಮಿಸಲ್ಪಟ್ಟಿದೆ ಎನ್ನಲಾಗುವ ನಾಲ್ಕು ರಸ್ತೆಗಳು ಸೇರುವ ಚೌಬಾರ, ಬೀದರ್ ಸಮೀಪದಲ್ಲಿರುವ ಅಷ್ಟೂರಿನ ಗುಂಬಜ್‌ಗಳು, ಕಿರ್ಮಾನಿ ಕಟ್ಟಡ ಕೂಡ ಬಹಮನಿ ಅರಸರ ಕಾಲದಲ್ಲಿಯೇ ನಿರ್ಮಿಸಲ್ಪಟ್ಟಿದೆ. ಚೌಬಾರದ ದಕ್ಷಿಣ ಪೂರ್ವ ಹಾಗೂ ಪಶ್ಚಿಮದೆಡೆಗೆ ಕ್ರಮವಾಗಿ ಫತ್ತೇ ದರವಾಜಾ, ಮಂಗಲಪೇಟ್ ದರವಾಜಾ, ನಯಾಕಮಾನ ದರವಾಜಾ, ಶಾಹಗಂಜ್ ದರವಾಜಾ, ತಾಳಘಟ್ ದರವಾಜಾ, ದುಲಹನ್ ದರವಾಜಾ ಎಂಬ ೬ ದ್ವಾರಗಳನ್ನು ಹೊಂದಿದ್ದು, ದುಲಹನ್ ದರವಾಜಾ ತನ್ನದೆಯಾದ ಐತಿಹಾಸಿಕ ಐತಿಹ್ಯವನ್ನು ಹೊಂದಿದೆ. ಆದರೆ ನಯಾಕಮಾನ ದ್ವಾರ ಈಗ ನಮಗೆ ನೋಡಲು ಸಿಗುವುದಿಲ್ಲ. ಕಳೆದ ವರ್ಷ ಅಗಸ್ಟ್ ೫ ರಂದು ಈ ಕಮಾನು ಬಿದ್ದು ಹೋಗಿದೆ. ಈಗ ಅದೇ ಮಾದರಿಯಲ್ಲಿ ದ್ವಾರ ಕಟ್ಟಬೇಕೆಂದು ಜಿಲ್ಲಾಡಳಿತ ಪ್ರಯತ್ನಿಸುತ್ತಿದೆ.

ಐತಿಹ್ಯವು ಮೌಖಿಕ ಪರಂಪರೆಯ ಜನಪದ ಇತಿಹಾಸ, ಜನಪದ ಇತಿಹಾಸವೆಂದಾಕ್ಷಣ ಜನಪದರು ರಚಿಸಿದ ಇತಿಹಾಸ, ಜನಪದರ ಬಗೆಗಿನ ಇತಿಹಾಸ ಇತ್ಯಾದಿ ಅರ್ಥಗಳು ತಲೆದೋರುತ್ತವೆ. ಈ ಜನಪದ ಇತಿಹಾಸವೆಂಬುದಕ್ಕೆ ವಿಸ್ತೃತವಾದ ನಿರ್ವಚನವನ್ನು ಈ ರೀತಿಯಾಗಿ ಕೊಟ್ಟಿರುವುದು ಕಂಡುಬರುತ್ತದೆ. ಜನಪದರು ರಚಿಸಿದ ಮೌಖಿಕ ಪರಂಪರೆಯಲ್ಲಿ ಉಳಿದು ಬಂದ ಜನಪದರ ಮತ್ತು ಅವರ ಸಂಪರ್ಕಕ್ಕೆ ಬಂದ ಶಿಷ್ಟರೆನಿಸಿದವರ ಇತಿಹಾಸವಾಗಿದೆ ಎಂದಿದ್ದಾರೆ”[೧] (ಸುಬ್ಬಣ್ಣ ರೈ, ೧೯೯೪: ೮೩).

ನಾಡಿನ ಸಂಸ್ಕೃತಿಗೆ ಐತಿಹ್ಯಗಳಂತಹ ಮೌಖಿಕ ಆಕರಗಳು ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡಿರುವ ಪರಂಪರೆಗಳಾಗಿ ಸಂಪ್ರದಾಯ, ಆಚರಣೆ, ನಂಬಿಕೆಗಳ ಮೂಲಕ ಪ್ರತಿನಿಧಿಸುತ್ತವೆ ಎಂಬುದನ್ನು ಅಧ್ಯಯನದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಒಂದು ಕೋಟೆ ನಿರ್ಮಾಣ ಕುರಿತಂತೆ, ಕಂಠಸ್ಥ ಪರಂಪರೆಯಿಂದ ಸಿಗಬಹುದಾದ ಮೌಖಿಕ ಆಕರಗಳು ಚರಿತ್ರೆಯನ್ನು

ನಿರ್ಮಿಸಲು ಹೇಗೆ ನೆರವಾಗಬಲ್ಲವು ಎಂಬುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಬೀದರ್ ಪ್ರದೇಶದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಚರಿತ್ರೆಯನ್ನು ಈಗಾಗಲೇ ಲಭ್ಯವಿರುವ ಇತಿಹಾಸದಿಂದ ತಿಳಿದುಕೊಳ್ಳಲು ಸಾಧ್ಯವಾಗುವುದಾದರೆ ಪ್ರಾದೇಶಿಕ ಚರಿತ್ರೆಯನ್ನು ಉಳಿಸಿಕೊಡುವ ಕುರುಹುಗಳಂತೆ ಕಂಡುಬರುವ ಐತಿಹ್ಯಗಳನ್ನು ಅದರಲ್ಲೂ ಬೀದರ್ ಕೋಟೆಯ ಐತಿಹ್ಯಗಳನ್ನು ಮತ್ತು ಚರಿತ್ರೆಯನ್ನು ಅರ್ಥ ಮಾಡಿಕೊಳ್ಳಲು ಮೌಖಿಕ ಆಕರಗಳು ಪ್ರಸ್ತುತ ಅಧ್ಯಯನದಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತಿರುವುದನ್ನು ನಾವು ನೋಡಬಹುದು.

ಮೌಖಿಕ ಪರಂಪರೆಯಲ್ಲಿ ಉಳಿದು ಬಂದ ಜನಪದ ಸಂಸ್ಕೃತಿಯ ಕುರುಹುಗಳಲ್ಲಿ ಜನಪದ ಸಾಹಿತ್ಯವೂ ಒಂದಾಗಿದೆ. ಈ ಜನಪದ ಸಾಹಿತ್ಯದಲ್ಲಿ ಐತಿಹ್ಯವೆಂಬುದನ್ನು ಒಂದು ಪ್ರಕಾರ. "ಭಾರತವು ಜಾನಪದದ ತೊಟ್ಟಿಲು ತವರು"[೨] ಇತ್ಯಾದಿಯಾಗಿ ಪಾಶ್ಚಿಮಾತ್ಯ ವಿದ್ವಾಂಸರು ಕೊಂಡಾಡಿದ್ದಾರೆ. ಜಾನಪದ ಸಂಗ್ರಹ ಅಧ್ಯಯನಗಳಿಗೆ ಜಗತ್ತಿನಾದ್ಯಂತ ಈಗ ಹೊಸ ಚಾಲನೆ ದೊರೆಯುತ್ತಿದೆ. ಇಂಥ ಮೌಖಿಕ ಕಥೆಗಳನ್ನು, ಐತಿಹ್ಯಗಳನ್ನು ಜನರು ಮೌಖಿಕವಾಗಿ ಹೇಳುತ್ತಾ ಬಂದಿದ್ದಾರೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ಬಾಯಿಂದ ಬಾಯಿಗೆ ಹರಿದುಬರುವ ಇಂಥ ಐತಿಹ್ಯಗಳನ್ನು ಕೆಲವೊಂದು ವಿದ್ವಾಂಸರು ಅಲ್ಲಗಳೆಯುತ್ತಲೇ ಬಂದಿದ್ದಾರೆ. "ಅವು ಕಟ್ಟುಕಥೆಗಳು ಎನ್ನುವ ದೃಢವಾದ ಭಾವನೆ ಕಥೆಗಳನ್ನು ಹೇಳುವ ಹಳ್ಳಿಯವರಲ್ಲಿಯೂ ಇರುವುದರಿಂದ ಅವುಗಳನ್ನು ಅವರು ಬಹಳ ಲಘುವಾಗಿ ಪರಿಗಣಿಸುತ್ತಾರೆ. ಬಹುತೇಕ ವಿದ್ವಾಂಸರು ಮತ್ತು ಸಂಗ್ರಾಹಕರು ಕೂಡ ಈ ದೃಷ್ಟಿಯಿಂದಲೇ ಜನಪದ ಕಥೆಗಳನ್ನು ಅವಗಣಿಸಿದ್ದಾರೆ. ಜಗತ್ತಿನ ಜನಪದ ಕಥೆಗಳ ಬಗ್ಗೆ ನಡೆದಿರುವ ಅಪಾರವಾದ ಸಂಶೋಧನೆ, ಅಧ್ಯಯನ ಆ ಮೂಲಕ ಪ್ರಾದೇಶಿಕ ಭಾಷೆಗಳ ಜನಪದ ಕಥೆಗಳು ಸಂಗ್ರಹಿತವಾಗಬೇಕಾದ ಅಗತ್ಯವಾದ ಈ ವಿಚಾರ ವೈಜ್ಞಾನಿಕವಾಗಿ ಇತ್ತೀಚಿಗೆ ಪ್ರಚಲಿತವಿರುವುದೇ ಅವಜ್ಞೆಗೆ ಕಾರಣ ಎಂದು ಜಾನಪದ ತಜ್ಞ ವಿವೇಕ ರೈ ಅವರು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ (ರೈ, ೧೯೮೫: ೩೧೩).

"ಐತಿಹ್ಯಗಳು ವ್ಯಕ್ತಿ, ಬೆಟ್ಟಗುಡ್ಡ, ಊರು ಮೊದಲಾದವುಗಳಿಗೆ ಆರೋಪಿತವಾಗಿರುತ್ತವೆ. ಅವು ನಿಜವಾಗಿ ನಡೆದ ಘಟನೆಗಳೋ ಎಂಬಂತೆ ಸಂಪ್ರದಾಯಿಕ ವಿಷಯಗಳನ್ನೊಳಗೊಂಡು ರೂಪಿತವಾಗಿ ನಿರೂಪಿತವಾಗಿರುತ್ತವೆ. ಐತಿಹ್ಯಗಳು ನಿಜವಾಗಿ ನಡೆದದ್ದು, ಘಟಿಸಿದ್ದು ಎಂಬಂತೆ ಜನಪದ ವಕ್ತೃಗಳು ಕೇಳುವವರಲ್ಲಿ ನಂಬಿಕೆಯನ್ನು ಮೂಡಿಸಿ ಹೇಳುತ್ತಾರೆ. ಅವರ ಹೇಳಿಕೆಯಂತೆ ಐತಿಹ್ಯಗಳು ನಿಜವಾಗಿ ನಡೆದವು ಎಂಬುದನ್ನು ನಂಬುವುದಾದರೆ ಮೂಲತಃ ಇವು ಐತಿಹಾಸಿಕವೆನಿಸುತ್ತವೆ. ಆದರೆ ಇಂಥ ಐತಿಹ್ಯಗಳಿಗೆ ಲಿಖಿತ ಸ್ವರೂಪವಿರುವುದಿಲ್ಲ. ಇತಿಹಾಸದ ಪುಟಗಳನ್ನು ತೆರೆದು ನೋಡಿದರೆ ಆಧಾರವೂ ಇರುವುದಿಲ್ಲ. ಐತಿಹ್ಯಗಳು ಕೇವಲ ಸಂಪ್ರದಾಯದ ಮೂಲದಿಂದ ಬಂದವು. ಸೃಷ್ಟಿಕಾರ್ಯ, ಭೂಮಿ

ರೂಪಗೊಂಡ ರೀತಿ, "ಸಾಂಸ್ಕೃತಿಕ ವೀರರು" ಮೊದಲಾದ ವಿಷಯಗಳನ್ನೊಳಗೊಂಡ ಐತಿಹ್ಯಗಳು ಪುರಾಣದ ನೆರವಿನಿಂದಲೇ ರೂಪಿತವಾಗಿರುತ್ತವೆ ಎನ್ನಬಹುದು. ಆದರೆ ಸೃಷ್ಟಿ ಇಲ್ಲವೆ ಜಗತ್ತಿನ ಮೂಲವನ್ನು ಕುರಿತ ವಿವರಣಾತ್ಮಕ ಐತಿಹ್ಯಗಳು ಪ್ರಕೃತಿಯ ಅದ್ಭುತಗಳನ್ನು ಅನೇಕ ವಿಚಿತ್ರ ವಿಶಿಷ್ಟ ಘಟನೆಗಳನ್ನು ನಿರೂಪಿಸುತ್ತವೆ. ಅಲ್ಲದೆ ಐತಿಹ್ಯಗಳ ಮೇಲೆ ಆಯಾ ಪ್ರದೇಶದ ಧಾರ್ಮಿಕ ಪ್ರಭಾವವಿರುತ್ತದೆ (ಬಿಳಿಮಲೆ, ೧೯೯೭: ೯೪).

ಪ್ರಚಲಿತ ಇತಿಹಾಸದ ಬರವಣಿಗೆಗಳು ಬಹುತೇಕ ರಾಜಕೇಂದ್ರಿತ ಅಧ್ಯಯನಗಳಾಗಿವೆ. ಇವುಗಳಲ್ಲಿ ಜನಸಾಮಾನ್ಯರ ಅಭಿಪ್ರಾಯಗಳು ಐತಿಹ್ಯಗಳು ದಾಖಲಾಗಿರುವುದು ಅಷ್ಟಾಗಿ ಕಂಡುಬರುವುದಿಲ್ಲ. ರಾಜ ಮನೆತನಗಳು ನಿರ್ಮಿಸಿದ ಪ್ರಾಚೀನ ಕೋಟೆಗಳು ಮತ್ತು ಅವುಗಳ ಬಗ್ಗೆ ಇರುವಂಥ ಕೆಲವು ಐತಿಹ್ಯಗಳು ಇಂದು ಉಪೇಕ್ಷೆಗೆ ಗುರಿಯಾಗುತ್ತಾ ನಡೆದಿವೆ. ರಾಜ್ಯದ, ಪಟ್ಟಣದ, ನಗರದ ಜನತೆಯನ್ನು ಶತ್ರುಗಳಿಂದ ರಕ್ಷಿಸಿ ತಲೆಯೆತ್ತಿ ನಿಲ್ಲುತ್ತಿದ್ದ ಕೋಟೆಗಳು ಬದಲಾದ ರಾಜಕೀಯ ಮತ್ತು ಯುದ್ಧ ನೀತಿಗಳಿಂದ ತಮ್ಮ ಮಹತ್ವವನ್ನು ಕಳೆದುಕೊಂಡು ಕೇವಲ ಗತವೈಭವದ ಕುರುಹುಗಳಾಗಿ ನಿಂತಿವೆ. ಇದರಿಂದ ದಿನೇ ದಿನೇ ಕ್ಷೀಣಿಸುತ್ತಿರುವ ಕೋಟೆ ಮತ್ತು ಅದಕ್ಕಿರುವ ಐತಿಹ್ಯಗಳನ್ನು ಅಕ್ಷರಗಳಲ್ಲಿ ಹಿಡಿದಿಡುವುದು ತುಂಬಾ ಅವಶ್ಯಕವಾಗಿತ್ತು. ಈ ಹಿನ್ನೆಲೆಯಲ್ಲಿ ಅಧ್ಯಯನವನ್ನು ಇಲ್ಲಿ ಕೈಗೊಳ್ಳಲಾಗಿದೆ.

ಕೋಟೆಗಳನ್ನು ಅರಸನು ತನ್ನ ಜನತೆ ಮತ್ತು ಸಾಮ್ರಾಜ್ಯದ ರಕ್ಷಣೆಗಾಗಿ ಕಟ್ಟಿಸುತ್ತಿದ್ದನು. ಅಂತಹ ಕೋಟೆಗಳೇ ಇಂದು ಗತಕಾಲದ ಇತಿಹಾಸ ಅರಿಯಲು ಸಹಾಯಕವಾಗಿವೆ. "ಕೋಟೆಯಿಲ್ಲದ ರಾಜನು ವಿಷವಿಲ್ಲದ ಹಾವಿನಂತೆ ಮದವಿಲ್ಲದ ಆನೆಯಂತೆ" (ಪ್ರಜಾವಾಣಿ, ೨೦೦೧: ೧೬೬). ಆದ್ದರಿಂದ ಅರಸನು ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ, ಪ್ರಜೆಗಳ ರಕ್ಷಣೆಗಾಗಿ ಅಥವಾ ಶತ್ರುಗಳಿಂದ ತನ್ನ ಸಾಮ್ರಾಜ್ಯ ರಕ್ಷಿಸಿಕೊಳ್ಳುವುದಕ್ಕಾಗಿಯಾಗಲಿ ಕೋಟೆ ಕಟ್ಟಲೇ ಬೇಕಾಗಿತ್ತು.

ಇತಿಹಾಸ ಪ್ರಸಿದ್ಧವಾಗಿರುವ ಈ ಬೀದರ್ ಪ್ರದೇಶವು ಬೇರೆ ಬೇರೆ ಕಾರಣಗಳಿಂದಾಗಿ ಸಾಕಷ್ಟು ಜನಪ್ರಿಯತೆ ಪಡೆದುಕೊಂಡಿದೆ. "ಕವಿಗಳಿಗೆ ಇದೊಂದು ಸುಂದರ ಸೊಬಗಿನ ನಾಡಾಗಿ ಕಂಡರೆ, ಇತಿಹಾಸಕಾರರಿಗೆ ವೈಭವದಿಂದ ಮೆರೆದ ರಾಜ ಮಹಾರಾಜರ ನಾಡಾಗಿ ಕಂಗೊಳಿಸುತ್ತದೆ. ಹಾಗೆಯೇ ಪುರಾತತ್ವ ಶಾಸ್ತ್ರಜ್ಞರಿಗೆ ಅತಿಪ್ರಾಚೀನ ಕಾಲದ ಜನವಸತಿಯ ಕೇಂದ್ರವಾಗಿ ಆಕರ್ಷಕವಾಗಿದೆ. ಆದರೆ ಇಲ್ಲಿನ ಜನಪದರ ನಾಲಿಗೆ ಮೇಲೆ ಸೃಷ್ಟಿಯಾಗಿರುವಂತಹ ಚರಿತ್ರೆಯು ಇವೆಲ್ಲದರ ಸೊಬಗನ್ನೆ ತನ್ನೊಳಗೆ ಮೈಗೂಡಿಸಿಕೊಂಡು ಹೊರಹೊಮ್ಮಿದೆ" (ಸೋಸಲೆ, ೨೦೦೩: ೭೦). ಏಕೆಂದರೆ ಇತಿಹಾಸ ಅಧ್ಯಯನದಲ್ಲಿ ಲಿಖಿತವಾದ ಆಕರಗಳು ಮೌನವಾಗಿದ್ದಾಗ ಮೌಖಿಕ ಆಕರಗಳು ಬಹಳ ಮಹತ್ವವನ್ನು ಪಡೆದುಕೊಂಡಿರುತ್ತವೆ. ಮೌಖಿಕ ಇತಿಹಾಸವು ಮನುಷ್ಯನ ಜೀವನದ ನಾನಾ ಮುಖಗಳನ್ನು ಪರಿಚಯಿಸುತ್ತದೆ.

ಐತಿಹ್ಯವು ನಿರೂಪಿಸುವ ಘಟನೆ ನೈಜತೆಗೆ ಹೆಚ್ಚು ಹತ್ತಿರವಾಗಿರುತ್ತದೆ. ಜನಪದ ಹೇಳಿಕೆಯ ಪರಿಧಿಯಲ್ಲಿ ಐತಿಹ್ಯ, ಪುರಾಣ, ದಂತಕಥೆಗಳೆಲ್ಲ ಕಥೆಗಳಷ್ಟೇ ಅಲ್ಲ, ಇವೆಲ್ಲ ಹಿಂದೆ ವಾಸ್ತವವಾಗಿ ನಡೆದ ಘಟನೆಗಳೇ ಆಗಿವೆ.

*** *** ***

ಹೈದರಾಬಾದ್ ನೈಜಾಮನ ಪ್ರದೇಶವೆಂದೇ ಕರೆಯಲಾಗುತ್ತಿದ್ದ ಬೀದರ್‌ನ ಬಗ್ಗೆ ಮತ್ತು "ಐತಿಹಾಸಿಕತೆಯ" ಬಗ್ಗೆ ೧೯೨೦ರವರೆಗೂ ಯಾರಿಗೂ ತಿಳಿದಿರಲಿಲ್ಲ. ಆದರೆ ಜಿ. ಯಾಜ್ದಾನಿಯವರು ಬೀದರ್ ಸ್ಮಾರಕಗಳ ಬಗ್ಗೆ ಪುಸ್ತಕ ಬರೆದಿದ್ದಾರೆ. ಇವರು ಈ ಪುಸ್ತಕದಲ್ಲಿ ಸ್ಮಾರಕಗಳ ಬಗ್ಗೆ, ಕೋಟೆಯ ಬಗ್ಗೆ ಬರೆದಿದ್ದಾರೆ. ಇವರ ಹಾದಿಯನ್ನು ಬಹುತೇಕ ವಿದ್ವಾಂಸರು ತುಳಿದಿದ್ದಾರೆ. ಇತಿಹಾಸ ಬರವಣಿಗೆಯಲ್ಲಿ ಇತ್ತೀಚಿನ ಪ್ರಭಾವವನ್ನು ಏಕಶಿಸ್ತೀಯ ಐತಿಹ್ಯಗಳ ಬಗ್ಗೆ ಹೆಚ್ಚು ಪ್ರಸ್ತಾಪಿಸಿಲ್ಲದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರಸ್ತುತ ಅಧ್ಯಯನದಲ್ಲಿ ಪ್ರಮುಖವಾಗಿ ಕೋಟೆಯ ನಿರ್ಮಾಣದ ಬಗ್ಗೆ ಇರುವ ಐತಿಹ್ಯಗಳನ್ನು ಒಂದೆಡೆ ಕಲೆಹಾಕಲು ಪ್ರಯತ್ನಿಸಲಾಗಿದೆ.

ಬೀದರ್‌ಗೆ ಸಂಬಂಧಿಸಿದಂತೆ ಜಿ.ಯಾಜ್ದಾನಿಯವರ "ಬೀದರ್ ಇಟ್ಸ್ ಹಿಸ್ಟರಿ ಆ್ಯಂಡ್ ಮಾನ್ಯುಮೆಂಟ್ಸ್" ಮತ್ತು 'ಆ್ಯಂಟಿಕ್ಸ್ ಆಫ್ ಬೀದರ್ "(೧೯೧೭), ಕೆ.ಎಂ.ಮೈತ್ರಿಯವರ "ಸುಲ್ತಾನ ಸುರುಳಿ"(೧೯೯೪), ಜಿ.ಎಂ.ಭೈರೊಡಗಿಯವರ "ಬೀದರ ಜಿಲ್ಲೆಯ ಶಾಸನಗಳು" (೧೯೯೦), ದೇವರ ಕೊಂಡಾರೆಡ್ಡಿಯವರ "ಬೀದರ ಜಿಲ್ಲೆಯ ಶಾಸನ ಸಂಪುಟ-೮" (೨೦೦೬), ಜಗನ್ನಾಥ್ ಹೆಬ್ಬಾಳೆಯವರ "ಬೀದರ ಜಿಲ್ಲೆಯ ಬುಲಾಯಿ ಹಾಡುಗಳು" (೧೯೯೬), ಸೂಗಯ್ಯ ಹಿರೇಮಠ ಅವರ "ಪ್ರಾತಿನಿಧಿಕ ಚಿಂತನ ಲೇಖನ'(೨೦೦೫), ಹೆಬ್ಬಾಳೆ ಮತ್ತು ಪಾಟೀಲ ಅವರ "ಜನಪದ ಕಥೆಗಳ ಸಂಗ್ರಹ"(೨೦೦೫), ರಾಜೇಂದ್ರ ಯರನಾಳೆಯವರ "ವಿಶ್ವವಿಖ್ಯಾತ ಬಿದ್ರಿಕಲೆ (೧೯೯೬), ದೇಶಾಂಶ ಹುಡುಗಿಯವರ "ಬೀದರ ಜಿಲ್ಲೆಯ ತತ್ವಪದಕಾರರು" (೨೦೦೫), ಚಂದ್ರಗುಪ್ತ ಚಾಂದಕವಠೆಯವರ "ಬೀದರ ಜಿಲ್ಲೆಯ ರಂಗಭೂಮಿ" (೨೦೦೫), ಬಸವರಾಜ ಸಬರದ ಅವರ "ಬೀದರ ಜಿಲ್ಲೆಯ ಸಾಂಸ್ಕೃತಿಕ ಅಧ್ಯಯನ" (೧೯೮೨), ಎಲ್.ಆರ್.ಕುಲಕರ್ಣಿಯವರ ಮಹಮೂದ್ ಗವಾನ್ ಉಪನ್ಯಾಸ ಗ್ರಂಥಮಾಲೆ (೧೯೭೯), ಆರ್.ಎಂ.ಷಡಕ್ಷರಯ್ಯ ಆರ್ಕ್ಯಾಲಜಿ ಇನ್ ಬೀದರ್ ಡಿಸ್ಟ್ರಿಕ್ಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ಮಾಂಜ್ರಾ ಆ್ಯಂಡ್ ಕಾರಂಜಾ ವಾಲೀಸ್" (೧೯೮೪), ವಿನಯ್ ಕುಮಾರ ವರ್ಮಾರವರ ಎಜುಕೇಷನ್ ಇನ್ ಬೀದರ್ ಎ ಸ್ಟಡಿ"(೨೦೦೬) ಮತ್ತು ಘರಾಮರ್ ಜಂಗ್ ಬಹದ್ದೂರ್‌ವರ "ಎ ಗೈಡ್ ಟು ಬೀದರ್ ವಿಥ್ ಹಿಸ್ಟಾರಿಕಲ್ಸ್ ನೋಟ್ಸ್" (೧೮೭೪), ಸುಬ್ಬಣ್ಣ ಅಂಬೆಸಂಗೆಯವರ "ಬೀದರ ಜಿಲ್ಲೆಯ ಕನ್ನಡ ಭಾಷಾ ಕುಸುಮ" (೧೯೯೬), ಕ್ಯಾತನಹಳ್ಳಿ ರಾಮಣ್ಣನವರ "ಬೀದರ ಜಿಲ್ಲೆಯ ಜನಪದ ಕತೆಗಳು" (೧೯೭೬), ಹಾಗೂ ಬೀದರ ಜಿಲ್ಲೆಯ ಜನಪದ ಗೀತೆಗಳು (೧೯೭೬), ವೀರೇಂದ್ರ ಸಿಂಪಿಯವರ

"ಚೆನ್ನಬಸವಣ್ಣ" (೧೯೯೭), ಮುರುಳಿಕುಲಕರ್ಣಿಯವರ "ಪ್ರವಾಸಿ ಕಂಡ ಬೀದರ" (೧೯೯೭) ಹೀಗೆ ಬೀದರ್‌ನ ಜಾನಪದ ಮತ್ತು ಇತರ ಕ್ಷೇತ್ರಗಳಲ್ಲಿ ಸಾಕಷ್ಟು ಅಧ್ಯಯನಗಳಾಗಿವೆ.

ಕೋಟೆಯ ಬಗ್ಗೆ ಮೌಖಿಕ ಚರಿತ್ರೆ ಏನು ಹೇಳುತ್ತದೆ ಎಂಬುದರ ಬಗ್ಗೆ ಸ್ಪಷ್ಟತೆಯಿಂದ ಕೂಡಿದ ವಿವರಣಾತ್ಮಕ ವಿಶ್ಲೇಷಣೆ ನಡೆದಿಲ್ಲವಾದ್ದರಿಂದ ಐತಿಹ್ಯಗಳನ್ನು ಕೇಂದ್ರವಾಗಿಟ್ಟುಕೊಂಡು ಪ್ರಕಟಿತ ಲೇಖನಗಳನ್ನು ಮತ್ತು ಗ್ರಂಥಗಳನ್ನು ಪ್ರಸ್ತುತ ನಿಬಂಧದಲ್ಲಿ ಪರಾಮರ್ಶಿಸಲಾಗಿದೆ. ಈ ಹಿನ್ನೆಲೆಯಲ್ಲಿ ಬೀದರ್ ಕೋಟೆಯ ಬಗ್ಗೆ ಚರಿತ್ರೆಯ ಇನ್ನೊಂದು ಆಯಾಮವನ್ನು ಐತಿಹ್ಯಗಳ ಮೂಲಕ ವಿವರಿಸುವ ಮತ್ತು ವಿಶ್ಲೇಷಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಮೌಖಿಕ ಆಕರಗಳನ್ನು ಬಳಸಿಕೊಳ್ಳುವುದರ ಜೊತೆಗೆ ಪ್ರಕಟಿತ, ಅಪ್ರಕಟಿತ ಗ್ರಂಥಗಳನ್ನು ಅದರಲ್ಲೂ ಜಾನಪದ ಹಾಗೂ ಐತಿಹ್ಯಗಳಿಗೆ ಸಂಬಂಧಿಸಿದ ಕೃತಿಗಳನ್ನು ಪರಿಶೀಲಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳು ಎ.ಸುಬ್ಬಣ್ಣ ರೈ ಅವರ "ದಕ್ಷಿಣ ಕನ್ನಡ ಜಿಲ್ಲೆಯ ಐತಿಹ್ಯಗಳು" (೧೯೯೪) ಪುರುಷೋತ್ತಮ ಬಿಳಿಮಲೆಯವರ "ಹಂಪಿ ಜಾನಪದ"(೧೯೯೬), ಸೋಮನಾಥ ಯಾಳವಾರ ಅವರ "ಬೀದರ ಜಿಲ್ಲಾ ದರ್ಶನ"(೨೦೦೫), ಬಿ.ಷೇಕ್ ಅಲಿಯವರ "ಕರ್ನಾಟಕ ಚರಿತ್ರೆ" ಸಂಪುಟ ೪ ಮತ್ತು ೭ (೧೯೯೭) ಕರ್ನಾಟಕ ಸರಕಾರ 'ಬೀದರ ಜಿಲ್ಲಾ ಗ್ಯಾಸೇಟಿಯರ್" (೧೯೭೭), ಎಂ.ಬಿ.ಪಾಟೀಲರವರ "ಗುಲ್ಬರ್ಗಾ ಜಿಲ್ಲೆಯ ಗ್ಯಾಸೇಟಿಯರ್ "(೧೯೯೭), ಎಲ್. ಎಸ್.ಶೇಷಗಿರಿರಾವ್ ಅವರ "ಕಿರಿಯರ ಕರ್ನಾಟಕ" (೧೯೯೪), ದೇಸಾಯಿ ಪಾಂಡುರಂಗರಾಯರ "ಕರ್ನಾಟಕದ ಕಲಚೂರಿಗಳು" (೧೯೮೩), "ಕರ್ನಾಟಕ ರಾಜ್ಯ ಗ್ಯಾಸೇಟಿಯರ್ ಭಾಗ-೩", ವಿಜಯ್ ಪೂಣಚ್ಚ ತಂಬಂಡರವರ "ಪಳಮೆ" (೨೦೦೪), ಎಂ.ವಿ.ವಸು ಅವರ "ಮೌಖಿಕ ಇತಿಹಾಸ"(೨೦೦೪), ಬಿ.ಎ.ವಿವೇಕ ರೈ ಅವರ "ಅನ್ವಯಿಕ ಜಾನಪದ" (೧೯೮೫) ಇತ್ಯಾದಿ.

ಪುರಾತತ್ವ ಮತ್ತು ಇತಿಹಾಸ ನೆಲೆಗಟ್ಟಿನಲ್ಲಿ ಕೋಟೆ ಕೊತ್ತಲಗಳು ಕಂಡುಬರುತ್ತವೆ. ಇಂಥ ಕೋಟೆ ಕೊತ್ತಲಗಳನ್ನು ಕುರಿತ ಅಧ್ಯಯನಗಳು ಅಷ್ಟಾಗಿ ನಡೆದಿಲ್ಲ. ಇದುವರೆಗೆ ಕೋಟೆ ಕೊತ್ತಲಗಳನ್ನು ಕುರಿತ ಎರಡು ಕೃತಿಗಳು ಮಾತ್ರ ಪ್ರಕಟಗೊಂಡಿವೆ. ಅವುಗಳಲ್ಲಿ ನೀ.ಕೃ.ರಾಮಶೇಷನ್ ಅವರ ಕರ್ನಾಟಕದ ಕೋಟೆ ಕೊತ್ತಲಗಳು (೧೯೮೦) ಮತ್ತು ಚನ್ನಬಸಪ್ಪ ಎಸ್.ಪಾಟೀಲರ ಕರ್ನಾಟಕದ ಕೋಟೆಗಳು (೧೯೯೯) ಮುಖ್ಯವಾಗಿವೆ. ಇವೆರಡು ಕೃತಿಗಳಲ್ಲಿ ಕರ್ನಾಟಕದ ಕೆಲವು ಕೋಟೆ ಕೊತ್ತಲಗಳ ಲಕ್ಷಣ, ಸ್ವರೂಪ ಮತ್ತು ಮಹತ್ವವನ್ನು ಚರ್ಚಿಸಿದ್ದಾರೆ. ಇತ್ತೀಚೆಗೆ ಕರ್ನಾಟಕದ ಕೋಟೆ ಕೊತ್ತಲಗಳನ್ನು ಜಿಲ್ಲೆಯ ವ್ಯಾಪ್ತಿ ಇಟ್ಟುಕೊಂಡು ಪಿಎಚ್.ಡಿ. ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಿವೆ.

ಬೀದರ್ ಕೋಟೆಗೆ ಸಂಬಂಧಿಸಿದಂತೆ ಜಿ.ಯಾಜ್ದಾನಿ ಮತ್ತು ಫರಾಮರ್‌ಜಂಗ್ ಅವರನ್ನು ಹೊರತುಪಡಿಸಿದರೆ ಪ್ರತ್ಯೇಕವಾಗಿ ಬೀದರ್ ಕೋಟೆಗೆ ಸಂಬಂಧಿದಂತೆ ಯಾವುದೇ ರೀತಿಯ ಅಧ್ಯಯನಗಳು

ನಡೆದಿರುವುದು ನಮಗೆ ಕಂಡುಬರುವುದಿಲ್ಲ. ಆದರೆ ಬಹಮನಿ ಸಾಮ್ರಾಜ್ಯದ ಆಡಳಿತಕ್ಕೆ ಸಂಬಂಧಿಸಿದಂತೆ ಪಿ.ಎಂ.ಜೋಶಿ, ಎಚ್.ಕೆ.ಶೇರವಾನಿ, ಎಸ್.ಕೆ.ಸಿಂಹ, ಡಾ.ಎಲ್.ಆರ್.ಕುಲಕರ್ಣಿ ಮುಂತಾದವರ ಕೆಲಸ ಗಮನ ಸೆಳೆಯುತ್ತವೆ. ಪ್ರಸ್ತುತ ಬಹಮನಿ ಸಾಮ್ರಾಜ್ಯದ ಸ್ಮಾರಕಗಳು, ಅವರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ವಿಷಯಗಳು ಕುರಿತಂತೆ ಅಧ್ಯಯನಗಳು ನಡೆಯುತ್ತಿವೆ.

ಈ ಎಲ್ಲ ಕೃತಿಗಳ ಜೊತೆಗೆ ಎಂ.ಫಿಲ್ ಮತ್ತು ಪಿಎಚ್.ಡಿ ಮಹಾಪ್ರಬಂಧಗಳಾದ ಕೆ.ವಿ. ಮುದ್ದವೀರಪ್ಪನವರ "ತುಮಕೂರು ಕೋಟೆ-ಕೊತ್ತಲಗಳ ಜಾನಪದ ಅಧ್ಯಯನ" (೨೦೦೪), ಸುಧಾ ಎ.ಸಿ. ಅವರ "ಜನಪದ ಕಾವ್ಯಗಳಲ್ಲಿ ಬಲಿದಾನ" (೨೦೦೫), ಲಕ್ಷ್ಮಿದೇವಿ ಎಲ್.ಅವರ "ಕೋಲಾರ ಜಿಲ್ಲೆಯ ಐತಿಹ್ಯಗಳು" (೨೦೦೬), ಎಂ.ಕೊಟ್ರೇಶ ಅವರ "ಬಳ್ಳಾರಿ ಜಿಲ್ಲೆಯ ಕೋಟೆ-ಕೊತ್ತಲಗಳ ಅಧ್ಯಯನ" (೨೦೦೨), ಕರಿಬಸಪ್ಪ ಎ. ಅವರ "ಬಳ್ಳಾರಿ ಜಿಲ್ಲೆಯ ಐತಿಹ್ಯಗಳು" (೨೦೦೨), ಸುಜಾತ ಮಲ್ಲನಗೌಡ ಅವರ "ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು"(೨೦೦೦), ಬಸವರಾಜ ಎಚ್.ಎಂ.ಅವರ "ಗುಡಕೋಟೆ ಒಂದು ಚಾರಿತ್ರಿಕ ಅಧ್ಯಯನ" (೨೦೦೨), ಶ್ರೀನಿವಾಸ ಬೇಂದ್ರೆಯವರ "ಬೀದರ ಕನ್ನಡ : ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇಧಗಳು" ಎಂಬ ಪ್ರಬಂಧಗಳ ಅವಲೋಕನವನ್ನು ಪ್ರಸ್ತುತ ನಿಬಂಧದಲ್ಲಿ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಒಂಬತ್ತು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಕುರಿತದ್ದಾಗಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಬೀದರ್‌ನ ಭೌಗೋಳಿಕ ಹಿನ್ನೆಲೆ, ಐತಿಹಾಸಿಕ ಹಿನ್ನೆಲೆ, ಹವಾಮಾನ ಮತ್ತು ಬೀದರ್ ಕೋಟೆಯ ನಿರ್ಮಾಣದ ಸ್ಥೂಲ ವಿವರವನ್ನು ನೀಡಲಾಗಿದೆ. ಈ ವಿಷಯಕ್ಕೆ ಪೂರಕವಾಗಿ ನಡೆದ ಇದುವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಪ್ರಸ್ತುತ ಅಧ್ಯಯನದ ವ್ಯಾಪ್ತಿಯನ್ನು ಬೀದರ್ ಕೋಟೆಗೆ ಮಾತ್ರ ಸೀಮಿತಗೊಳಿಸಲಾಗಿದೆ. ಕೋಟೆಯ ನಿರ್ಮಾಣ ಮತ್ತು ಸ್ಮಾರಕಗಳ ವಿವಿಧ ಆಯಾಮಗಳನ್ನು ಕುರಿತಂತೆ ಜನಪದೀಯ ನೆಲೆಯಿಂದ ಅಧ್ಯಯನ ನಡೆಸಲಾಗಿದೆ.

ಎರಡನೆಯ ಅಧ್ಯಾಯವು ವಿವಿಧ ಅರಸರ ಆಳ್ವಿಕೆಯ ಕಾಲದಲ್ಲಿ ಬೀದರ್ ಕೋಟೆಯ ನಿರ್ಮಾಣದ ಹಿಂದೆ ಘಟಿಸಿದ ಘಟನೆಗಳನ್ನು ಐತಿಹ್ಯಗಳಲ್ಲಿ ಕೇಂದ್ರವಾಗಿಟ್ಟುಕೊಂಡು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಬೀದರ್‌ನ ಕೋಟೆಯ ಮಹತ್ವ ಮತ್ತು ಲಕ್ಷಣದ ಬಗ್ಗೆ ಹೇಳಲಾಗಿದೆ. ವಿಷಯದ ಪಡಿಸಿದ ಐತಿಹ್ಯಗಳ ಪ್ರಕಾರ ಬಹಮನಿಯ ಅರಸನು ಬೇಸಿಗೆಯ ದಿನದಲ್ಲಿ ಬೇಟೆಯಾಡುತ್ತ ಬೀದರ್‌ನ ಬಿದಿರು ಘಟಕ್ಕೆ ಬಂದಿದ್ದನು. ಬೇಸಿಗೆಯ ದಿನಗಳಾದ್ದರಿಂದ ಅರಸನಿಗೂ ಮತ್ತು ಸೈನಿಕರಿಗೂ ನೀರಡಿಕೆಯಾಯಿತು. ನೀರು ಕುಡಿದ ಬಳಿಕ ಒಂದು ಮರದಡಿ ಕುಳಿತಾಗ ನಾಯಿಯನ್ನು ನರಿಯೊಂದು ಬೆನ್ನಟ್ಟಿ ಹೋಗುವ ವಿಸ್ಮಯದ ಘಟನೆಯ ಪ್ರಸ್ತಾಪವನ್ನು ಅಲ್ಲಿ ಕಾಣಬಹುದು. ಈ ಭೂಮಿಯು ಒಂದು "ವೀರತ್ವದ" ಭೂಮಿಯಾಗಿದೆ ಎಂದು ಅರಸನು ಕೋಟೆಯನ್ನು ನಿರ್ಮಿಸಿರುವುದರ ಬಗ್ಗೆ

ಉಲ್ಲೇಖಗಳನ್ನು ನೋಡಬಹುದು. ಮೌಖಿಕ ಹಾಗೂ ಲಿಖಿತ ಆಕರಗಳನ್ನು ಕ್ರೋಡೀಕರಿಸಿ ಮೌಖಿಕ ಮತ್ತು ಲಿಖಿತ ಆಕರಗಳ ಸಂಬಂಧವನ್ನು, ಹಾಗೂ ವ್ಯತ್ಯಾಸಗಳನ್ನು ಅರಿಯಲು ಈ ಭಾಗದಲ್ಲಿ ಪ್ರಯತ್ನಿಸಲಾಗಿದೆ.

ಮೂರನೆಯ ಅಧ್ಯಾಯವು ಬೀದರ್‌ನ ಒಳಕೋಟೆಯಲ್ಲಿರುವ ಗರ್ಭ ಬುರ್ಜಿಗೆ ಸಂಬಂಧಿಸಿದ ಐತಿಹ್ಯಗಳನ್ನು ಪ್ರಕಾರ ಆ ಬುರ್ಜನ್ನು ಯಾವ ಅರಸನ ಆಳ್ವಿಕೆ ಕಾಲದಲ್ಲಿ ನಿರ್ಮಿಸಲಾಗಿದೆ ಮತ್ತು ಬುರ್ಜು ನಿರ್ಮಿಸಲು ಇಡಲಾದ ಕಾರಣಗಳ ಮಾಹಿತಿಗಳು ಲಭ್ಯವಾಗುತ್ತವೆ. ಕಟ್ಟುತ್ತಿರುವ ಬುರ್ಜು ಪದೇ ಪದೇ ಬಿದ್ದು ಹೋಗಲು ಇರುವ ಕಾರಣಗಳ ಮತ್ತು ಬಿದ್ದು ಹೋಗುತ್ತಿರುವ ಬುರ್ಜನ್ನು ನಿಲ್ಲಿಸಲು ಕೈಗೊಂಡ ಕ್ರಮಗಳ ಮತ್ತು ಅದಕ್ಕೆ ಗರ್ಭ ಬುರ್ಜು ಎಂದು ಇರುವ ಕಾರಣಗಳ ಬಗ್ಗೆ ವಿವರಗಳನ್ನು ನೀಡಲಾಗಿದೆ. ಕೋಟೆಗೆ ಬಲಿಯಾದ ಸಂಗಮ್ಮಳ ಬದುಕಿನ ಚಿತ್ರಣವನ್ನು ಒಳಗೊಂಡಂತೆ ಇರುವ ಐತಿಹ್ಯಗಳನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು "ಪಾಂಡುರಂಗನ ಪಾದುಕೆಗೆ" ಸಂಬಂಧಿಸಿದೆ. ಈ ಅಧ್ಯಾಯದಲ್ಲಿ ಕೋಟೆಯ ಎರಡನೆಯ ದ್ವಾರವಾಗಿರುವ ಗುಂಬಜ್ ದ್ವಾರದಲ್ಲಿ ಇರುವ ಪಾಂಡುರಂಗನ ಪಾದುಕೆ ಕುರಿತಂತೆ ವಿವರಿಸಲಾಗಿದೆ. ಈ ಪಾದಕ್ಕೆ ಪಾಂಡುರಂಗನ ಪಾದವೆಂದು ಕರೆಯಲು ಇರುವ ಕಾರಣಗಳ ಮತ್ತು ಪಾಂಡುರಂಗನ ಪಾದ ಈ ದ್ವಾರದಲ್ಲಿ ಇರುವ ಕಾರಣಗಳ ಬಗ್ಗೆ ಪ್ರಸ್ತಾಪವಿದೆ. ಇದು ಪಾಂಡುರಂಗನ ಪಾದವೆಂದು ಜನರು ನಂಬಿರಲು ಇರುವ ಕಾರಣವನ್ನು ಮತ್ತು ಈ ನಂಬಿಕೆ ಯಾವ ಜನಾಂಗದವರಲ್ಲಿ ಹೆಚ್ಚಾಗಿದೆ ಎಂಬ ಅಂಶಗಳನ್ನು ಇಲ್ಲಿ ವಿವರಿಸಲಾಗಿದೆ. ಇಂದಿಗೂ ಜನರು ಆಚರಿಸುವ ಪದ್ಧತಿ ಮತ್ತು ಆಚರಣೆಗಳಾವುವು ಮತ್ತು ಪಾಂಡುರಂಗನು ಕೋಟೆಗೆ ಬರಲು ಇದ್ದ ಕಾರಣಗಳ ಬಗ್ಗೆ ಮಾಹಿತಿಗಳಿವೆ. ಯಾವ ಅರಸನ ಆಳ್ವಿಕೆ ಕಾಲದಲ್ಲಿ ಕೋಟೆಗೆ ಬಂದಿದ್ದನು ಎನ್ನುವ ಹಲವಾರು ವಿಷಯ ಗಳನ್ನು ಐತಿಹ್ಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯವು ಬೀದರ್ ಕೋಟೆಯಲ್ಲಿರುವ "ಬೊಮಗೊಂಡನ ಕೆರೆಗೆ" ಸಂಬಂಧಿಸಿ ದ್ದಾಗಿದೆ. ಬೀದರ್‌ನ ಒಳಕೋಟೆಯಲ್ಲಿರುವ ಬೊಮಗೊಂಡನ ಕೆರೆಯನ್ನು ನಿರ್ಮಿಸಿದ ಬಗೆಗಳನ್ನು ಬೊಮಗೊಂಡನ ಮತ್ತು ಯಾವ್ಯಾವ ಆರಸರ ಆಳ್ವಿಕೆ ಕಾಲದಲ್ಲಿ ಅವನ್ನು ನಿರ್ಮಿಸಲಾಗಿದೆ ಎಂಬುದನ್ನು ವಿವರಿಸಲಾಗಿದೆ. ಈ ಕೆರೆಯನ್ನು ನಿರ್ಮಿಸಲು ಕಾರಣಗಳನ್ನು ಮತ್ತು ಬೊಮಗೊಂಡನು ಒಬ್ಬ ಸಿದ್ಧಿಪುರುಷನಾಗಿ ಕಂಡುಬಂದ ಬಗೆಗಳನ್ನು, ಕೆರೆಗೆ ಬೊಮಗೊಂಡನ ಕೆರೆಯೆಂದು ಕರೆದ ಹಿನ್ನೆಲೆ ಬಗ್ಗೆ ಮತ್ತು ಅದಕ್ಕೆ ಇರುವ ಕಾರಣಗಳನ್ನು ಮೌಖಿಕ ಆಕರಗಳನ್ನು ಕ್ರೋಡೀಕರಿಸಿ ಚರ್ಚಿಸಲಾಗಿದೆ. ಬೊಮಗೊಂಡನ ಕೆರೆಗೆ ಸಂಬಂಧಿಸಿದಂತೆ ಇರುವ ಮೌಖಿಕ ಆಕರಗಳಲ್ಲಿ ಇರುವಂಥ ಭಿನ್ನತೆಗಳ ಪಠ್ಯ ವಿವರಗಳನ್ನು ಹೇಳಲು ಪ್ರಯತ್ನಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಬೀದರ್‌ನ ಒಳಕೋಟೆಯಲ್ಲಿರುವ "ವೀರಸಂಗಯ್ಯನ ಗದ್ದುಗೆ" ಕುರಿತಂತೆ ಇರುವಂಥ ಐತಿಹ್ಯಗಳನ್ನು ಸಂಗ್ರಹಿಸಿ ವಿವರಿಸಲಾಗಿದೆ. ವೀರಸಂಗಯ್ಯನು ಯಾರು, ಎಲ್ಲಿಂದ ಬಂದವನು ಮತ್ತು ವೀರಸಂಗಯ್ಯನ ಗದ್ದುಗೆಯು ಈ ಒಳಕೋಟೆಯಲ್ಲಿ ಇರಲು ಕಾರಣ, ಅವನ ವೃತ್ತಿ ಯಾವುದು ಎಂಬುವುದನ್ನು ಮತ್ತು ವೀರಸಂಗಯ್ಯನು ಒಂದು ಹೆಣ್ಣನ್ನು ಪಡೆಯುವುದಕ್ಕಾಗಿ ನಡೆಸಿದ ಸೆಣಸಾಟ ಐತಿಹ್ಯದಲ್ಲಿ ಕಂಡುಬರುವ ಅರಸ ಭಾಸ್ಕರರಾಯ ಯಾರೆಂಬುದನ್ನು ಹಾಗೂ ವೀರಸಂಗಯ್ಯನಿಗೂ ಮತ್ತು ಭಾಸ್ಕರ ರಾಯನ ಮಧ್ಯೆ ನಡೆದ ಹೋರಾಟದ ವಿವರಗಳನ್ನು ನೀಡಲಾಗಿದೆ. ವೀರಸಂಗಯ್ಯನ ಗದ್ದುಗೆ ಕುರಿತಂತೆ ಇರುವ ಮೌಖಿಕ ಮತ್ತು ಲಿಖಿತ ಆಕರಗಳಲ್ಲಿನ ವ್ಯತ್ಯಾಸವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಅಷ್ಟೂರಿನಲ್ಲಿರುವ "ಅಹಮದ್-ಶಹ-ವಲೀ ಗೋರಿ"ಯನ್ನು ಕುರಿತಂತೆ ಇರುವ ಐತಿಹ್ಯಗಳಲ್ಲಿ ಲಭ್ಯವಾದ ಐತಿಹ್ಯಗಳನ್ನು ಸಂಗ್ರಹಿಸಿ ವಿವರಿಸಲಾಗಿದೆ. ಅಷ್ಟೂರಿನಲ್ಲಿ ಬಹಮನಿ ಮನೆತನಕ್ಕೆ ಸಂಬಂಧಿಸಿದ ಗೋರಿಗಳು ಎಷ್ಟಿವೆ ಮತ್ತು ಅವು ಯಾರ ಯಾರ ಗೋರಿಗಳಾಗಿವೆ ಎಂಬುದನ್ನು ಮತ್ತು ಆ ಗೋರಿಗಳ ವಿನ್ಯಾಸದ ಬಗ್ಗೆ ಕೂಡ ಹೇಳಲಾಗಿದೆ. ವಿಶೇಷವಾಗಿ ಅಹಮದ್-ಶಹ-ವಲಿಯ ಗೋರಿ ಕುರಿತಂತೆ ಇರುವ ಐತಿಹ್ಯಗಳನ್ನು ಕ್ರೋಢೀಕರಿಸಿ ಉಲ್ಲೇಖಿಸಲಾಗಿದೆ. ಈ ಗೋರಿಗೆ ಅಲ್ಲಮ ಪ್ರಭುವಿನ ಗೋರಿ ಎಂದು ಕರೆಯಲು ಕಾರಣವೇನು? ಅಲ್ಲಮ ಪ್ರಭುವಿಗೂ ಈ ಅಹಮದ್-ಶಹ-ವಲಿ ಗೋರಿಗೂ ಇರುವ ಸಂಬಂದ ಮತ್ತು 'ಉರೂಸ್' ಆಚರಿಸುವ ಬಗೆ ಹೇಗೆ ಎಂಬ ವಿಷಯಗಳ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ "ಮಹಮೂದ್ ಗವಾನ್‌ನ ಕೊಲೆಗೆ" ಸಂಬಂಧಿಸಿದಂತೆ ಇರುವ ಮೌಖಿಕ ಐತಿಹ್ಯಗಳನ್ನು ಕ್ರೋಢೀಕರಿಸಿ ಚರ್ಚಿಸಲಾಗಿದೆ. ಒಬ್ಬ ದಕ್ಷ ಆಡಳಿತಗಾರನಾಗಿ ಮಹಮೂದ್ ಗವಾನ್‌ನು ಮಾಡಿದ ಕಾರ್ಯಗಳ ಬಗ್ಗೆ ಮತ್ತು ಪ್ರಸಿದ್ಧ ಐತಿಹಾಸಿಕ ಕಟ್ಟಡಗಳಲ್ಲಿ ಒಂದಾಗಿರುವ ಮದರಸಾವನ್ನು ಯಾರು ನಿರ್ಮಿಸಿದರು. ಆದರ ವಿನ್ಯಾಸದ ಬಗ್ಗೆ ಹೇಳಲಾಗಿದೆ. ಮಹಮೂದ್ ಗವಾನ್‌ನ ಕೊಲೆಗೆ ಸಂಬಂಧಿಸಿದಂತೆ ಇರುವ ಮೌಖಿಕ ಮತ್ತು ಲಿಖಿತ ಆಕರಗಳನ್ನು ಕ್ರೋಢೀಕರಿಸಿ ಇವೆರಡರ ವ್ಯತ್ಯಾಸಗಳನ್ನು ಕೂಡ ಹೊರತರಲು ಪ್ರಯತ್ನಿಸಲಾಗಿದೆ.

ನಿಬಂಧದ ಕೊನೆಯ ಅಧ್ಯಾಯ ಸಮಾರೋಪದಲ್ಲಿ ಒಟ್ಟು ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ಕೊಡಲು ಪ್ರಯತ್ನಿಸಲಾಗಿದೆ.

ಟಿಪ್ಪಣಿಗಳು

೧. ಜನಪದ ಇತಿಹಾಸದಲ್ಲಿ ಕಲ್ಪನೆ, ವೈಭವೀಕರಣ, ಉತ್ಪ್ರೇಕ್ಷೆಗಳೇ ಹೆಚ್ಚು. ವಾಸ್ತವಾಂಶಗಳು ಕಡಿಮೆ. ಇಂತಹ ಕಲ್ಪನೆ, ಉತ್ಪ್ರೇಕ್ಷೆ, ವೈಭವೀಕರಣಗಳು ಶಿಷ್ಟ ಸಾಹಿತ್ಯದಲ್ಲೂ ಕಡಿಮೆಯೇನಲ್ಲ. ಆದರೂ ಜನಪದ ಹಾಗೂ ಶಿಷ್ಟ ಸಾಹಿತ್ಯಗಳಲ್ಲಿ ಸಮಕಾಲೀನ ಜನಜೀವನ ಚಿತ್ರಣವಿರುತ್ತದೆಂಬುದಂತೂ ಸರ್ವವಿದಿತ. ಜನಪದರು ಹಾಗೂ ಶಿಷ್ಟರು ಆ ಜೀವನ ವಿಧಾನವನ್ನು ಕಂಡುಕೊಂಡು ಚಿತ್ರಿಸಿದ ಬಗ್ಗೆ ಮಾತ್ರ ಒಬ್ಬರಿಂದೊಬ್ಬರಿಗೆ ಭಿನ್ನವಾಗಿರಬಹುದು. ಚರಿತ್ರೆ ರಚನೆಗೆ ಪ್ರಮುಖ ಆಕರವಾಗಿ ಬಳಸುವ ಇನ್ನೊಂದು ಶಿಷ್ಟ ಸಾಧನವೆಂದರೆ ಶಾಸನ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ಹಿಂದಿನ ಕಾಲದಲ್ಲಿ ಶಾಸನ ರಚಿಸುತ್ತಿದ್ದವರೆಲ್ಲ ಅರಸರ ಆಶ್ರಯ ಪಡೆದವರೇ ಆಗಿರುತ್ತಿದ್ದರು. ಅರಸನನ್ನು ಹೊಗಳಿ ಅವನನ್ನು ಮೆಚ್ಚಿಸುವಂತೆ ಬರೆದು ಅವನಿಂದ ಷಹಬ್ಬಾಸ್‌ಗಿರಿಯನ್ನು ಪಡೆದ ಶಾಸನಗಳು ಯಾಕೆ ಆಗಿರಲಿಕ್ಕಿಲ್ಲ ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ.

ಆದುದರಿಂದ ಅಂಥವರ ಬರವಣಿಗೆಯಲ್ಲಿ ವೈಭವೀಕರಣ, ಉತ್ಪ್ರೇಕ್ಷೆಗಳು ತಾನೇ ತಾನಾಗಿ ನುಸುಳಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಆದರೆ ಜನಪದರು ರಾಜನ ನೇರವಾದ ಹಂಗಿನಲ್ಲಿರಲಿಲ್ಲ. ಹಾಗಾಗಿ ಅವರು ತಾವು ಕಂಡದ್ದನ್ನು, ಗಮನಿಸಿದ್ದನ್ನು, ಕೇಳಿದ್ದನ್ನು ಹೇಳುವ ಶಿಷ್ಟರಿಗಿಂತ ಭಿನ್ನವಾದ ಪ್ರತ್ಯೇಕ ಒಂದು ಜನವರ್ಗವಷ್ಟೇ ಇದನ್ನು ರಚಿಸಿ ಬಾಯಿಂದ ಬಾಯಿಗೆ ದಾಟಿಸುತ್ತಾ ಬಂದದ್ದು ಎನ್ನಬಹುದಾಗಿದೆ.

೨. ಭಾರತವು ಜಾನಪದದ ತೊಟ್ಟಿಲು ತವರು ಎಂದು ಅನೇಕ ವಿದ್ವಾಂಸರು ಕೊಂಡಾಡಿದ್ದಾರೆ. ಏಕೆಂದರೆ ಜಾನಪದ ಸಂಗ್ರಹ, ಅಧ್ಯಯನಗಳಿಗೆ ಜಗತ್ತಿನಾದ್ಯಂತ ಈಗ ಹೊಸ ಚಾಲನೆ ದೊರೆಯುತ್ತಿದೆ. ರಿಚರ್ಡ್ ಡಾರ್ಸನ್ ಸ್ಟಿತ್ ಥಾಂಪ್ಸನ್, ಬಾಗ್ಸ್ ಅರ್ನಆಂಟೆ, ಆಲನ್ ಡಂಡಿಸ್ ಮುಂತಾದ ಪಾಶ್ಚಿಮಾತ್ಯ ವಿದ್ವಾಂಸರು ತಮ್ಮ ಜಾನಪದ ಅಧ್ಯಯನಗಳಲ್ಲಿ ಲೆಜೆಂಡ್‌ಗಳನ್ನು (ಐತಿಹ್ಯ) ಅಧ್ಯಯನ ಮಾಡಿದ್ದಾರೆ. ಕೆಲವರಂತು ಇದರ ಬಗ್ಗೆ ವ್ಯಾಪಕವಾದ ಅಧ್ಯಯನ ನಡೆಸಿದ್ದಾರೆ. ಆದರೆ ಭಾರತದಲ್ಲಿ ಐತಿಹ್ಯಗಳ ಬಗ್ಗೆ ಇನ್ನೂ ವ್ಯಾಪಕವಾದ ಅಧ್ಯಯನಗಳು ನಡೆಯಬೇಕಾಗಿವೆ. ಎ.ಕೆ.ಘೋಷ್ ಅವರ Legends from Indian history (೧೯೮೫) ಗಳಂಥಹ ಬೆರಳೆಣಿಕೆಯ ಕೃತಿಗಳಷ್ಟೇ ಇಲ್ಲಿ ಉಲ್ಲೇಖನೀಯವಾಗುತ್ತವೆ (ರೈ, ೧೯೮೪: ೪). ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಎಸ್.ಎಸ್.ಭದ್ರಾಪುರ ಅವರ ಉತ್ತರ ಕರ್ನಾಟಕದ ಜನಪದ ಐತಿಹ್ಯಗಳು, ವೀರಣ್ಣ ಅವರ ಕನ್ನಡ ಕವಿಗಳ ಮೇಲಿನ ಐತಿಹ್ಯಗಳು, ಲಕ್ಷ್ಮೀದೇವಿಯವರ ಕೋಲಾರ ಜಿಲ್ಲೆಯ ಐತಿಹ್ಯಗಳು, ಮುದ್ದವೀರಪ್ಪನವರ ಕೋಟೆ-ಕೊತ್ತಲಗಳ ಅಧ್ಯಯನಗಳು ಜಾನಪದೀಯ ಹಿನ್ನೆಲೆಯಲ್ಲಿ ನಡೆದಿವೆ. ಒಟ್ಟಿನಲ್ಲಿ ಜನಪದ ಅಧ್ಯಯನದ ಕೃತಿಗಳಲ್ಲಿ ಅಲ್ಲಲ್ಲಿ ಐತಿಹ್ಯಗಳ ಕುರಿತಾದ ಬಿಡಿ ಲೇಖನಗಳು, ಪರಿಚಯಾತ್ಮಕ ಟಿಪ್ಪಣಿಗಳು ಉಲ್ಲೇಖವಾಗಿವೆ. ಇವಲ್ಲದೆ ಇನ್ನೂ ವಿವಿಧ ರೀತಿಯ ಐತಿಹ್ಯಗಳುಂಟು. ಆದರೆ ಅವುಗಳನ್ನು ಶೋಧಿಸಬೇಕಾಗುತ್ತದೆ. ಪ್ರತಿಯೊಂದು ವಸ್ತುವು ತನ್ನದೆಯಾದ ಐತಿಹ್ಯಗಳನ್ನು ಹಿನ್ನೆಲೆಯಾಗಿ ಹೊಂದಿರಲೇಬೇಕು.

೩. ಮಾನವನು ತನ್ನ ನಾಗರಿಕತೆಯ ಪ್ರಗತಿಪಥದಲ್ಲಿ ತನ್ನ ಮತ್ತು ತನ್ನ ಸಮುದಾಯದ ಲೌಕಿಕ ಸಂಪತ್ತು ಬೆಳೆಸುತ್ತಾ ನಡೆದನು. ಸಣ್ಣ ಸಣ್ಣ ಸಮುದಾಯಗಳು ಒಂದೆಡೆ ನೆಲೆಗೊಂಡಾಗ ಒಂದೊಂದು ವಿಶಿಷ್ಟ

ಹಿತಾಸಕ್ತಿಯ ಸಮಾಜಗಳು ನಿರ್ಮಾಣಗೊಂಡವು. ಸಮಾಜಗಳು ಹಾಗೆ ಬೆಳೆಯುತ್ತಾ ಹೋದಾಗ ಈ ಸಮಾಜದ ಅರಿವು ಮುಂದೆ ಕೋಟೆಯ ನಿರ್ಮಾಣಕ್ಕೆ ದಾರಿಯಾಯಿತು. ಕೆಳದಿಯ ಬಸವ ನೃಪರಾಜ ಶಿವತತ್ವ ರತ್ನಾಕರನು "ಕೋಟೆಯಿಲ್ಲದ ರಾಜನು ವಿಷವಿಲ್ಲದ ಹಾವಿನಂತೆ, ಮದವಿಲ್ಲದ ಆನೆಯಂತೆ" ಎಂದಿದ್ದಾನೆ.

ಅಂದರೆ ಅವನು ಎಲ್ಲರಿಗೂ ಸುಲಭವಾಗಿ ವಶವಾಗುವನು. ಒಂದು ಗಾದೆ ಮಾತಿನಂತೆ 'ಮನೆಯ ಖಳೆ ಮನೆಯ ಅಂಗಳವೇ' ಹೇಳುತ್ತದೆ ಎಂಬಂತೆ ಒಬ್ಬ ಅರಸ ಆಳ್ವಿಕೆ ಮಾಡಿದನು ಎಂದು ನಾವು ಗುರುತಿಸುವುದು ಮತ್ತು ಎಷ್ಟು ಬಲಿಷ್ಠವಾದ ಸಾಮ್ರಾಜ್ಯವಾಗಿರಬೇಕು ಎಂಬುದನ್ನು ಕೋಟೆ ನೋಡಿ ಹೇಳುತ್ತೇವೆ. ಹಾಗೆ ಬಹಮನಿ ಸಾಮ್ರಾಜ್ಯ ಎಂದರೆ ಮೊದಲು ನಮ್ಮ ಕಣ್ಣ ಮುಂದೆ ಬರುವುದು ಈ ಬೀದರ್‌ನ ಕೋಟೆ.

ಅಧ್ಯಾಯ ೨

ಕೋಟೆಯ ನಿರ್ಮಾಣದ ಬಗೆಗಿರುವ ಐತಿಹ್ಯಗಳು

ಬೀದರ್‌ನ ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯಗಳ ವಿವಿಧ ಮಾದರಿಗಳನ್ನು ಈ ಅಧ್ಯಾಯದಲ್ಲಿ ವಿವರಿಸಲು ಪ್ರಯತ್ನಿಸಲಾಗಿದೆ. ಕ್ಷೇತ್ರಕಾರ್ಯದಲ್ಲಿ ಅನೇಕ ಆಯಾಮಗಳನ್ನು ವಕ್ತೃಗಳ ಮೂಲಕ ಸಂಗ್ರಹಿಸಲಾಗಿದೆ. ಈಗಾಗಲೇ ದಾಖಲಾಗಿರುವ ಮೂಲಗಳನ್ನು ಅದರಲ್ಲೂ ಐತಿಹ್ಯಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಜಿ.ಯಾಜ್ದಾನಿ ಅವರ ಪ್ರಕಟಗೊಂಡಿರುವ ಸಂಶೋಧನೆಗಳು ಈ ನಿಟ್ಟಿನಲ್ಲಿ ಸಹಕಾರಿಯಾಗಿವೆ. ಯಾಜ್ದಾನಿ ಅವರು ಕಲೆ ಮತ್ತು ವಾಸ್ತುಶಿಲ್ಪದ ಮೇಲೆ ನೀಡಲಾದ ಆಕರಗಳನ್ನು, ಐತಿಹ್ಯಗಳನ್ನು ಅರ್ಥ ಮಾಡಿಕೊಳ್ಳುವಲ್ಲಿ ಬಳಸಿಕೊಳ್ಳಲಾಗಿದೆ.


ಅಧ್ಯಾಯವನ್ನು ಮುಖ್ಯವಾಗಿ ಮೂರು ಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯ ಭಾಗದಲ್ಲಿ ಕೋಟೆಗೆ ಸಂಬಂಧಿಸಿದಂತೆ ಲಿಖಿತ ಆಕರಗಳ ಬಗ್ಗೆ ಹೇಳಲಾಗಿದೆ. ಎರಡನೆಯ ಭಾಗದಲ್ಲಿ ಕೋಟೆಯ



ಬೀದರ್ ಕೋಟೆ

ನಿರ್ಮಾಣಕ್ಕೆ ಸಂಬಂಧಿಸಿದಂತೆ ಐತಿಹ್ಯಗಳಿರುವುದು ಕಂಡುಬರುತ್ತದೆ. ಈ ವಿಷಯಗಳನ್ನು ಸುಭಾಷರಾವ್ ಅಲ್ಲಾಪುರೆ, ನಾಗಶೆಟ್ಟಿ ಮಹಾದೇವ, ಶಿವರಾಯ್ ಒಡೆಯರ್, ಶಾಂತಲಿಂಗಸ್ವಾಮಿ, ಗೋದಾವರಿ ಎಂಬ ವಕ್ತೃರಿಂದ ಸಂಗ್ರಹಿಸಲಾಗಿದೆ. ಐತಿಹ್ಯ, ಲಾವಣಿ ಮತ್ತು ವಚನಗಳ ಮೂಲಕ ಪ್ರಸ್ತುತ ಅಧ್ಯಾಯದಲ್ಲಿ ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಅಧ್ಯಾಯದ ಮೂರನೆಯ ಭಾಗದಲ್ಲಿ ಬೀದರ್‌ನ ಕೋಟೆಗೆ ಸಂಬಂಧಿಸಿದ ಲಿಖಿತ ಹಾಗೂ ಮೌಖಿಕ ಆಕರಗಳ ಸಂಬಂಧ ಮತ್ತು ವ್ಯತ್ಯಾಸಗಳನ್ನು ಕಂಡುಕೊಳ್ಳಲು ಯತ್ನಿಸಲಾಗಿದೆ.




ಬೀದರ್ ಕೋಟೆ
ದೆಹಲಿ ದರವಾಜಾ
ಕಲಮಡಗಿ ದರವಾಜಾ
ಕಲ್ಯಾಣ ದರವಾಜಾ
ಕರ್ನಾಟಕ ದರವಾಜಾ
ಗುಂಬಜ್ ದರವಾಜಾ
N
೨ ವೀರಸಂಗಯ್ಯನ ಗುಡಿ
೧೦ ರಾಜರ ಅಡುಗೆಮನೆ
೧೧ ಸೈನ್ಯಾಧಿಪತಿ ಮನೆ
೧೩ ಲಾಲ್ ಬುರ್ಜ
ಪ್ರೇರಣೆ: ಜಿ. ಯಾಜ್ದಾನಿ ಅವರ
ಬೀದರ ಇಟ್ಸ್ ಹಿಸ್ಟರಿ ಆ್ಯಂಡ್
ಮಾನ್ಯುಮೆಂಟ್ಸ್

ಬೀದರ್ ನಗರದ ಆಗ್ನೇಯ ದಿಕ್ಕಿನಲ್ಲಿ ಕೋಟೆಗೆ ಪ್ರವೇಶ ನೀಡುವ ಶಾರ್ಜಾ ದರವಾಜವೇ ಮುಖ್ಯದ್ವಾರವಾಗಿದೆ. ಹೀಗಾಗಿ ನಗರದ ಆಗ್ನೇಯ ದಿಕ್ಕಿನಲ್ಲಿ ಕೋಟೆಯು ಇದೆ ಎಂದು ತಿಳಿದುಬರುತ್ತದೆ. ಕೋಟೆಯನ್ನು ಅನಿಯಮಿತಾಕಾರದ ಭೂಶಿರದ ಮೇಲೆ ಅದರ ಆಕಾರಕ್ಕನುಗುಣವಾಗಿ ಕಟ್ಟಲಾಗಿದೆ. ಭೂಶಿರದ ಭಾಗವು ಉತ್ತರ ಮತ್ತು ಪೂರ್ವಕ್ಕೆ ಅತೀ ಎತ್ತರವಾಗಿದ್ದು, ಕ್ರಮೇಣ ಕಡಿಮೆಯಾಗುತ್ತ ದಕ್ಷಿಣಕ್ಕೆ ಸುತ್ತಲಿನ ನೆಲಮಟ್ಟದಲ್ಲಿದೆ. ಕೋಟೆಯ ಸುತ್ತಲೂ ಹುಟ್ಟು ಬಂಡೆಯಲ್ಲಿ (Laterite) ಕೊರೆದ ಅಗಲ ಮತ್ತು ಆಳವಾದ ಕಂದಕವಿದೆ. ಕೋಟೆಯ ಉತ್ತರ ಭಾಗದಲ್ಲಿ ಭೂಶಿರವನ್ನು ಕಂದಕ ಮಾಡುವುದಕ್ಕಾಗಿ ಕೊರೆದಿರುವುದರಿಂದ ಬದಿಯನ್ನು ಕತ್ತರಿಸಿದ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿದಂತೆ ಕಾಣುತ್ತದೆ. ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಕೋಟೆಯನ್ನು ನೆಲಮಟ್ಟದಲ್ಲಿ ಕಟ್ಟಿರುವುದರಿಂದ ಇಲ್ಲಿ ಕಂದಕದ ಅಗಲ ಇನ್ನೂ ಹೆಚ್ಚಾಗಿದ್ದು ಮಧ್ಯದಲ್ಲಿ ಬಂಡೆಗಲ್ಲಿನ ಭಾಗಗಳನ್ನು ಕೊರೆಯದೆ ಗೋಡೆಯನ್ನು ಬಿಟ್ಟು ಮೂರು ಭಾಗಗಳಲ್ಲಿ ವಿಭಾಗಿಸಿದೆ. ೯ ಮೀ. ಆಳವಾಗಿರುವ ಕಂದಕದ ಒಳಗಿನ ಎರಡು ಭಾಗಗಳು ಸುಮಾರು ೧೦.೫೦ ಮೀ. ಅಗಲ ಮತ್ತು ಹೊರ ಭಾಗ ಸುಮಾರು ೧೩ ಮೀ. ಅಗಲವಾಗಿದೆ. ಈ ಮುಮ್ಮಡಿ ಕಂದಕವನ್ನು ಹೊಂದಿರುವುದು ಬೀದರ್ ಕೋಟೆಯ ವೈಶಿಷ್ಟ್ಯವಾಗಿದೆ (ಪಾಟೀಲ, ೧೯೯೯: ೧೩೭).

ಕೋಟೆಗಳು ಪ್ರಾಚೀನ ಪೂರ್ವಕಾಲದಲ್ಲೇ ರಚನೆಗೊಂಡಿದ್ದವು. ಕೋಟೆ ರಚನೆಯ ಉದ್ದೇಶವೇನು? ನಿರ್ಮಾಣದ ಬಗೆ ಹೇಗೆ? ರಕ್ಷಣೆಯ ದೃಷ್ಟಿಯಿಂದ ಕೋಟೆಕೊತ್ತಲಗಳನ್ನು ಎಲ್ಲೆಲ್ಲಿ ನಿರ್ಮಿಸುತ್ತಿದ್ದರು ಎಂಬುದನ್ನು ಲಿಖಿತ ಆಕರಗಳು ನಮಗೆ ತಿಳಿಸುತ್ತವೆ. ಲಿಖಿತ ಆಕರಗಳಂತೆ ಮೌಖಿಕ ಇತಿಹಾಸವು ಕೋಟೆಗಳ ನಿರ್ಮಾಣದ ಬಗೆಗೆ ತನ್ನದೇ ಆದ ವಿಚಾರಗಳನ್ನು ಕಥನಗಳಲ್ಲಿ ಅಭಿವ್ಯಕ್ತಿಸಿದೆ. ಇದರಲ್ಲಿ ಕೋಟೆಗಳ ಸ್ಥಾಪನೆ, ಕೋಟೆಗಳ ನಿರ್ಮಾಣ, ನಿರ್ಮಾಣದ ಹಂತದಲ್ಲಿ ಬಲಿಕೊಟ್ಟ ಸಂದರ್ಭಗಳು, ಕೋಟೆಗಳ ವರ್ಣನೆ, ಕೋಟೆಗಳ ಮೇಲೆ ಆಕ್ರಮಣ ಮತ್ತು ಕೋಟೆಗಳ ನಾಶ ಕುರಿತಂತೆ ವಿವರಗಳು ದೊರೆಯುತ್ತವೆ. ಹೀಗೆ ಈ ವಿವರಗಳನ್ನೊಳಗೊಂಡ ಮೌಖಿಕ ಆಕರಗಳ ವಿಶ್ಲೇಷಣೆಯನ್ನು ಪ್ರಸ್ತುತ ಅಧ್ಯಾಯದಲ್ಲಿ ಮಾಡಲಾಗಿದೆ.

ಪ್ರಾಚೀನ ಕಾಲದಲ್ಲಿ ಭದ್ರತೆಯ ದೃಷ್ಟಿಯಿಂದ ಕೋಟೆಗಳು ಮಹತ್ವದ ಪಾತ್ರ ವಹಿಸಿದ್ದವು. ಕರ್ನಾಟಕದ ಪ್ರದೇಶಗಳನ್ನಾಳಿದ ರಾಜರು ಕೋಟೆಯನ್ನು ಬೆಟ್ಟ-ಗುಡ್ಡ, ಅರಣ್ಯ ಹಾಗೂ ನೀರಿನಿಂದ ಕೂಡಿದ ಪ್ರದೇಶಗಳಲ್ಲಿ ನಿರ್ಮಿಸುತ್ತಿದ್ದರು. ಬೀದರ್‌ನ ಕೋಟೆಯು ಈ ಹಿನ್ನೆಲೆಯಲ್ಲಿ ಭಿನ್ನವಾಗಿದೆ. ಬೀದರ್ ಕೋಟೆಯ ಸುತ್ತ ಯಾವುದೇ ಬೆಟ್ಟ ಗುಡ್ಡಗಳಿಲ್ಲ ಮತ್ತು ಅದು ನೀರಿನಿಂದಲೂ ಆವೃತ್ತವಾಗಿಲ್ಲ. ಇದು ನೆಲದುರ್ಗದ ಕೋಟೆಯಾಗಿದ್ದು ಇದಕ್ಕೆ ಇರುವ ಮೂರು ರೀತಿಯ ವಿಶೇಷ ಕಂದಕಗಳೇ ಇದರ ರಕ್ಷಣೆಗಳಾಗಿವೆ.



ಮೂರು ವಿಶೇಷ ರೀತಿಯ ಕಂದಕಗಳು

ಕೋಟೆಯ ಮಹತ್ವ

ಪ್ರಾಚೀನ ಕಾಲದಲ್ಲಿ ಭದ್ರತೆಯ ದೃಷ್ಟಿಯಿಂದ ಕೋಟೆ ಮತ್ತು ಕೊತ್ತಲಗಳು ಮಹತ್ವದ ಪಾತ್ರ ವಹಿಸುತ್ತಿದ್ದವು. ಕೌಟಿಲ್ಯನ ರಾಜನೀತಿ ಗ್ರಂಥವಾದ ('ಅರ್ಥಶಾಸ್ತ್ರ'ದಲ್ಲಿ ಒಂದು ರಾಜ್ಯಕ್ಕೆ ಪ್ರಮುಖವಾಗಿ ಸಪ್ತಾಂಗಗಳಿರಬೇಕು. ಅವುಗಳೆಂದರೆ ರಾಜ, ಅಮಾತ್ಯ, ರಾಜಧಾನಿ, ಕೋಶ, ದುರ್ಗ, ಮಿತ್ರ ಮತ್ತು ಸೈನ್ಯ. ಇವುಗಳಲ್ಲಿ ದುರ್ಗ (ಕೋಟೆ) ಮುಖ್ಯವಾದುದು. ಹೀಗೆ ಅರ್ಥಶಾಸ್ತ್ರದಲ್ಲಿ ರಾಜನು ತನ್ನ ರಾಜ್ಯದ ಗಡಿಯ ನಾಲ್ಕು ದಿಕ್ಕುಗಳಲ್ಲಿ ಶತ್ರುಗಳನ್ನು ತಡೆಗಟ್ಟಲು ಸೂಕ್ತವಾದ ಕೋಟೆಗಳನ್ನು ಕಟ್ಟಬೇಕೆಂದು ಉಲ್ಲೇಖಿಸಿರುವುದು ಗಮನಾರ್ಹ (ರಂಗರಾಜನ್, ೧೯೮೭: ೪). ಮನುವಿನ ಅಭಿಪ್ರಾಯದಂತೆ ಒಬ್ಬ ಬಿಲ್ಲುಗಾರನು ಕೋಟೆ ಗೋಡೆಯ ಮರೆಯಲ್ಲಿ ನಿಂತು ನೂರಾರು ಶತ್ರುಗಳೊಂದಿಗೆ ಹೋರಾಡಬಹುದು ಎಂದು ಹೇಳುತ್ತಾ ಕೋಟೆ ಕಟ್ಟುವುದನ್ನು ಸಮರ್ಥಿಸಿಕೊಳ್ಳುತ್ತಾನೆ (ಕೃಷ್ಣಮೂರ್ತಿ, ೧೯೭೯: ೧೫೭). ಪಂಚತಂತ್ರ ಕೃತಿಯಲ್ಲಿ ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ಯುದ್ಧದಲ್ಲಿ ನಿರ್ವಹಿಸಲಾದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ಆಶ್ಚರ್ಯಕರವಾಗಿ ನಿರ್ವಹಿಸಬಲ್ಲನೆಂದು ಹೇಳಲಾಗಿದೆ. ಬೃಹಸ್ಪತಿಯ ರಾಜನೀತಿ ಪ್ರಕಾಶದಲ್ಲಿ ರಾಜನು ತನ್ನ ಪರಿವಾರ ಜನರು ಮತ್ತು ಸಂಪತ್ತಿನ ರಕ್ಷಣೆಗಾಗಿ ಭದ್ರವಾದ ಗೋಡೆ ಮತ್ತು ಬಾಗಿಲುಗಳುಳ್ಳ ಕೋಟೆಯನ್ನು ಅವಶ್ಯಕವಾಗಿ ಕಟ್ಟಬೇಕು ಎಂದು ಹೇಳಿದೆ (ಮುದ್ದವೀರಪ್ಪ, ೨೦೦೨: ೯೮). ಕಮಂದಕನ ನೀತಿಸಾರದಲ್ಲಿನ ಸಂಸ್ಕೃತ ಶ್ಲೋಕವನ್ನು ಎಂ.ಚಿದಾನಂದಮೂರ್ತಿಯವರು ಈ ರೀತಿ ವಿವರಿಸಿದ್ದಾರೆ. "ದುರ್ಗಾಹೀನೋ ನರಪತಿ ವಾತಾಭಾವಯ ವೈಸ್ಸಮ". ಅಂದರೆ ಭದ್ರವಾದ ಕೋಟೆಯಿಲ್ಲದ ರಾಜನು ಬಿರುಗಾಳಿಯ ಮುಂದಿನ ಮೊಡದ ತುಂಡುಗಳಿಗೆ ಸಮ ಎಂದರ್ಥ (ಚಿದಾನಂದಮೂರ್ತಿ, ೧೯೭೯: ೨೮೬). ಅಂದರೆ



ಪ್ರಾಚೀನ ಕಾಲದಿಂದಲೂ ಕೋಟೆಯನ್ನು ನಿರ್ಮಿಸುತ್ತ ಬಂದಿದ್ದು ಅದರ ಅವಶ್ಯಕತೆಯಿದ್ದು ಅನೇಕ ಶಾಸ್ತ್ರಜ್ಞರು ತಮ್ಮದೇಯಾದ ಹೇಳಿಕೆಗಳಲ್ಲಿ ಕೋಟೆಯ ಮಹತ್ವ ಮತ್ತು ಅವಶ್ಯಕತೆ ಮುಂತಾದವುಗಳ ಬಗ್ಗೆ ವಿವರಿಸಿದ್ದಾರೆ. ಪ್ರಸ್ತುತ ಅಧ್ಯಯನದ ಕೇಂದ್ರವಾದ ಬೀದರ್ ಕೋಟೆಯನ್ನು ಬಹಮನಿ ಅರಸರ ಕಾಲದಲ್ಲಿ ಬೀದರ್ ಪಟ್ಟಣದಲ್ಲಿ ನಿರ್ಮಿಸಲಾಗಿದೆ. ಇದರ ಬಗ್ಗೆ ವಿಶ್ಲೇಷಣಾತ್ಮಕ ವಿವರಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಕೈಗೊಳ್ಳಲಾಗಿದೆ.

ಕೋಟೆಯ ಲಕ್ಷಣ

ಕರ್ನಾಟಕದ ಕೋಟೆಗಳಲ್ಲಿಯೇ ಬೀದರ್‌ನ ಕೋಟೆಯು ಒಂದು ಅಭೇದ್ಯವಾದ ಕೋಟೆಯಾಗಿದೆ. ಈ ಕೋಟೆಯನ್ನು ನೈಸರ್ಗಿಕವಾಗಿ ದೊರೆಯುವ ಕಲ್ಲು ಮತ್ತು ಗಚ್ಚಿನ ಮಿಶ್ರಣದಿಂದ ನಿರ್ಮಿಸಲಾಗಿದೆ. ಕೋಟೆಯ ನಿರ್ಮಾಣದ ಉಸ್ತುವಾರಿಯನ್ನು ವಿದೇಶಿಗರಾದ ಪರ್ಶಿಯಾ ಮತ್ತು ತುರ್ಕಿ ದೇಶದ ವಾಸ್ತುಶಿಲ್ಪಿಗಳು ವಹಿಸಿದ್ದರು. ಕೋಟೆಯ ಹೊರಗೋಡೆಗೆ ಹೊಂದಿಕೊಂಡಂತೆ ಇರುವ ಮೂರು ಕಂದಕಗಳ ಗೋಡೆಯ ಮಧ್ಯ ೩೨ ಅಡಿ ೬ ಇಂಚು ಮೊದಲನೆಯ ಮತ್ತು ಎರಡನೆಯ ಗೋಡೆ ಮಧ್ಯೆ ಅಂತರ ೩೬ ಅಡಿ ೪ ಇಂಚು, ಎರಡನೆಯ ಗೋಡೆ ಮತ್ತು ಮೂರನೆಯ ಗೋಡೆಗೆ ೪೧ ಅಡಿ ೯ ಇಂಚು ಸ್ಥಳದ ಅಂತರವಿದೆ (ಪಾಟೀಲ, ೧೯೯೯: ೧೩೭).

ಬೀದರ್ ಕೋಟೆಯ ಬಗ್ಗೆ ವಿವರವಾಗಿ ಅಧ್ಯಯನ ಮಾಡಿದ ಜಿ.ಯಾಜ್ದಾನಿ ಅವರ "ಬೀದರ್ ಇಟ್ಸ್ ಹಿಸ್ಟರಿ ಆ್ಯಂಡ್ ಮಾನ್ಯುಮೆಂಟ್ಸ್" ಪುಸ್ತಕದಲ್ಲಿ ಕೋಟೆಯ ವಿವಿಧ ಆಯಾಮಗಳ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಕೋಟೆಯನ್ನು ಪ್ರವೇಶಿಸಲು ಪ್ರಮುಖವಾಗಿ ೫ ದ್ವಾರಗಳಿದ್ದು ಅವು ಕ್ರಮೇಣವಾಗಿ ೧. ಮಂಡು ದ್ವಾರ, ೨. ಕಲಮಡಗಿ ದ್ವಾರ ೩. ದೆಹಲಿ ದ್ವಾರ ೪. ಕಲ್ಯಾಣ ದ್ವಾರ ೫. ಕಾರನಾಟಿಕ್ ದ್ವಾರ ಎಂಬ ಐದು ದ್ವಾರಗಳಿವೆ ಎಂದು ಯಾಜ್ದಾನಿ ಹೇಳಿದ್ದಾರೆ.

ಮಂಡು ದ್ವಾರ

ಮಂಡು ದ್ವಾರವು ೧೪ ಅಡಿ ೯ ಇಂಚು ಎತ್ತರವಾಗಿದ್ದು ಸುತ್ತಳತೆ ೧೧ ಅಡಿ ೯ ಇಂಚು ಇದ್ದು ಸಮತಲವಾಗಿ ಕಮಾನುಗಳನ್ನು ಹೊಂದಿದೆ. ಇದನ್ನು ಕೋಟೆಯ ಉತ್ತರ ದಿಕ್ಕಿನಲ್ಲಿ ನಿರ್ಮಾಣ ಮಾಡಲಾಗಿದೆ. ನೆಲದಲ್ಲಿ ದೊರೆಯುವ ಲ್ಯಾಟರೈಟ್ ಕಲ್ಲುಗಳಿಂದ ಗಚ್ಚು ಮಿಶ್ರಣದಿಂದ ಈ ದ್ವಾರವನ್ನು ನಿರ್ಮಿಸಲಾಗಿದೆ (ಯಾಜ್ದಾನಿ, ೧೯೪೭: ೩೭).

ಕಲಮಡಗಿ ದ್ವಾರ

ಈ ದ್ವಾರವು ಕಲಮಡಗಿ ಊರಿಗೆ ಹೋಗುವ ದ್ವಾರವಾಗಿದೆ. ಇದನ್ನು ಕಲಮಡಗಿ ದ್ವಾರವೆಂದು ಕರೆಯುತ್ತಾರೆ. ಕಲಮಡಗಿ ದ್ವಾರವು ೧೮ ಅಡಿ ಎತ್ತರ ೧೨ ಅಡಿ ಇಂಚು ಸುತ್ತಳತೆ ಹೊಂದಿದೆ.

ದ್ವಾರದಲ್ಲಿ ಮೂರು ಸುಂದರವಾದ ಕಮಾನುಗಳನ್ನು ಸಮತಟ್ಟಾಗಿ ನಿರ್ಮಿಸಲಾಗಿದೆ. ಸುಂದರವಾದ ಕಮಾನುಗಳ ಮೇಲೆ ಕುರಾನ್ ಪದಗಳನ್ನು ಉಲ್ಲೇಖಿಸಲಾಗಿದೆ (ಯಾಜ್ದಾನಿ, ೧೯೪೭: ೩೭).

ದೆಹಲಿ ದ್ವಾರ

ದೆಹಲಿಗೆ ಹೋಗುವ ಮಾರ್ಗಕ್ಕೆ ದೆಹಲಿ ದ್ವಾರವೆಂದು ಕರೆಯುತ್ತಾರೆ. ಈ ದ್ವಾರವು ಕೋಟೆಯ ಪೂರ್ವಭಾಗದಲ್ಲಿದೆ ಈ ದ್ವಾರವು ಚೌಕಾಕಾರವಾಗಿದೆ. ಈ ದ್ವಾರಕ್ಕೆ ಉಕ್ಕಿನ ಬೃಹತ್ ಬಾಗಿಲುಗಳನ್ನು ಕೂಡಿಸಲಾಗಿದೆ. ಒಳಕಮಾನು ೧೧ ಅಡಿ ೩ ಇಂಚು ಸುತ್ತಳತೆ ಇದ್ದು ೧೬ ಅಡಿ ೩ ಇಂಚು ಎತ್ತರವಾಗಿದೆ. ಹೊರ ಕಮಾನು ೮ ಅಡಿ ೮ ಇಂಚು ಸುತ್ತಳತೆ ಹೊಂದಿದ್ದು ೧೨ ಅಡಿ ೮ ಇಂಚು ಎತ್ತರವಾಗಿದೆ (ಯಾಜ್ದಾನಿ, ೧೯೪೭: ೪೦).

ಕಲ್ಯಾಣಿ ದ್ವಾರ

ಈಗಿನ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿಗೆ ಪ್ರವೇಶಿಸುವ ದ್ವಾರವೇ ಈ ಕಲ್ಯಾಣಿ ದ್ವಾರವಾಗಿದೆ. ಕಲ್ಯಾಣಿ ದ್ವಾರ ೧೮ ಅಡಿ ೫ ಇಂಚು ಎತ್ತರ ಹಾಗೂ ೧೨ ಅಡಿ ಅಗಲದ ವಿಸ್ತೀರ್ಣದಲ್ಲಿ ನಿರ್ಮಾಣಗೊಂಡಿದೆ. ಒಳಕಮಾನು ೮ ಅಡಿ ೪ ಇಂಚು ಉದ್ದ ಹಾಗೂ ಎತ್ತರ ೧೨ ಅಡಿ ೬ ಇಂಚುಗಳಲ್ಲಿ ಕಮಾನು ನಿರ್ಮಾಣ ಮಾಡಲಾಗಿದೆ. ಇನ್ನೊಂದು ಒಳಕಮಾನು ೮ ಅಡಿ ೯ ಇಂಚು ಅಗಲ ಹಾಗೂ ೧೧ ಅಡಿ ೮ ಇಂಚು ಎತ್ತರದಲ್ಲಿ ನಿರ್ಮಾಣ ಮಾಡಲಾಗಿದೆ. ಹೊರ ಕಮಾನು ೮ ಅಡಿ ೬ ಇಂಚು ಅಗಲ ಹಾಗೂ ಎತ್ತರ ೧೦ ಅಡಿ ೯ ಇಂಚು ಹೊಂದಿದೆ (ಯಾಜ್ದಾನಿ, ೧೯೪೭: ೪೫).

ಕಾರನಾಟಿಕ್ ದ್ವಾರ

ತಖ್ತ್ ಮಹಲಿನ ಉತ್ತರದಿಕ್ಕಿನಲ್ಲಿ ಈ ದ್ವಾರವು ಇದೆ ಎಂದು ಉಲ್ಲೇಖಿಸಿರುವುದು ಪರಿಗಣಿಸಲಾಗಿದೆ ದ್ವಾರದ ಮೇಲೆ ಕಾರನಾಟಿಕ್ ಎಂಬ ಹೆಸರಿನ ತೋಪು ಇರುವುದರಿಂದ ಇದಕ್ಕೆ ಕಾರನಾಟಿಕ್ ದ್ವಾರವೆಂದು ಕರೆಯುತ್ತಾರೆ. ಆದರೆ ಈ ದ್ವಾರ ಮತ್ತು ತೋಪು ಯಾವುದೂ ಇಲ್ಲ. ಬಹುಶಃ ನಾಶ ಹೊಂದಿರಬೇಕು (ಯಾಜ್ದಾನಿ, ೧೯೪೭: ೩೭). ಬೀದರಿನ ಕೋಟೆಯು ಪ್ರಮುಖವಾಗಿ ೫ ದ್ವಾರಗಳನ್ನು ಹೊಂದಿದೆ ಎಂದು ಯಾಜ್ದಾನಿ ಹೇಳಿದ್ದಾರೆ.

ಆದರೆ ಎನ್ ಪಾಟೀಲ ಅವರು ಕರ್ನಾಟಕದ ಕೋಟೆಗಳು ಎಂಬ ಪುಸ್ತಕದಲ್ಲಿ ಕೋಟೆಯ ದ್ವಾರವನ್ನು ಪ್ರಮುಖವಾಗಿ ೮ ಭಾಗಗಳಲ್ಲಿ ವಿಂಗಡಿಸಿದ್ದಾರೆ. ಅವು ೧. ಶಾರ್ಜಾ ದರವಾಜಾ ೨. ಮಾಂಡು ದರವಾಜಾ ೩. ಕಲಮಡಗಿ ದರವಾಜಾ ೪. ಅನಾಮಿಕ್ ದರವಾಜಾ ೫. ದಿಲ್ಲಿ ದರವಾಜಾ ೬. ಕಲ್ಯಾಣಿ ದರವಾಜಾ ೭. ಕಾರನಾಟಿಕ್ ದರವಾಜಾ (ಪಾಟೀಲ, ೧೯೯೯: ೧೩೭).

ಆದರೆ ಈಗ ಪ್ರಮುಖವಾಗಿ ೭ ದ್ವಾರಗಳನ್ನು ಗುರುತಿಸಲಾಗುತ್ತದೆ. ೧. ಮಂಡು ದ್ವಾರ ೨. ಕಲಮಡಗಿ ದ್ವಾರ ೩. ದೆಹಲಿ ದ್ವಾರ ೪. ಕಲ್ಯಾಣಿ ದ್ವಾರ ೫. ಕಾರನಾಟಿಕ್ ದ್ವಾರ ೬. ಗುಂಬದ್

ದ್ವಾರ ೭. ಶಾರ್ಜಾ ದ್ವಾರ ಎಂದು ಏಳು ದ್ವಾರಗಳ ಹೆಸರಿನಿಂದ ಕರೆಯಲಾಗುತ್ತದೆ. ಕೋಟೆಗೆ ಇರುವಂತ ಮುಮ್ಮಡಿ ಕಂದಕದಲ್ಲೂ ನೀರನ್ನು ತುಂಬಿಸಿ ಪ್ರತಿಯೊಂದರಲ್ಲೂ ಕ್ರೂರವಾದ ಪ್ರಾಣಿಗಳನ್ನು ಒಳಗೆ ಬಿಡಲಾಗುತ್ತಿತ್ತು. ಶತ್ರುಗಳು ಒಳನುಗ್ಗಬಾರದೆಂಬ ಕಾರಣಕ್ಕಾಗಿ ಈ ರೀತಿಯಲ್ಲಿ ಕೋಟೆಯನ್ನು ರಕ್ಷಿಸಿಕೊಳ್ಳುತ್ತಿದ್ದರು.

ನಗರದೊಳಗಿಂದ ಆಗ್ನೇಯ ದಿಕ್ಕಿನಲ್ಲಿ ಕೋಟೆಗೆ ಪ್ರವೇಶ ನೀಡುವ ಶಾರ್ಜಾ ದರವಾಜವೇ ಮುಖ್ಯ ದರವಾಜಾ. ಈ ಬಾಗಿಲ ಸಂಕೀರ್ಣದಲ್ಲಿ ಒಂದರ ಹಿಂದೆ ಒಂದರಂತೆ ಮೂರು ಪ್ರತ್ಯೇಕ ಬಾಗಿಲು ಗಳಿವೆ. ಹೊರಬಾಗಿಲ ಕದಗಳನ್ನು ಆನೆಯ ದಾಳಿಯಿಂದ ರಕ್ಷಿಸಲು ಅವುಗಳಿಗೆ ಚೂಪಾದ ಶೂಲಗಳನ್ನು ಮತ್ತು ದಪ್ಪತಲೆಯ ಮೊಳೆಗಳನ್ನು ಜೋಡಿಸಲಾಗಿದೆ. ಪ್ರದೇಶದ ಒಳಮಾಳಿಗೆ ಕಮಾನಾಕಾರದಲ್ಲಿದೆ.



ಕೋಟೆಯ ಶಾರ್ಜಾದರವಾಜಾ

ಇದನ್ನು ಮೊಗಲರ ಪ್ರಾಂತಾಧಿಕಾರಿ ಮುಕ್ತರ್ ಖಾನ್ ಅಲ್ ಹುಸ್ಸೈನಿ ಕ್ರಿ.ಶ.೧೬೮೩ರಲ್ಲಿ ಕಟ್ಟಿಸಿದನೆಂದು ಶಾಸನವು ತಿಳಿಸುತ್ತದೆ. ಅಲ್ಲದೆ, ಹೊರ ಮತ್ತು ಮಧ್ಯದ ಬಾಗಿಲುಗಳ ನಡುವೆ ಇರುವ ತೆರೆದ ಆವರಣದ ಸುತ್ತಲೂ ಕಾವಲುಗಾರರ ಕೊಠಡಿಗಳಿವೆ. ಶಾರ್ಜಾ ದ್ವಾರದ ಮಧ್ಯದ ಎರಡನೆ ಬಾಗಿಲಿನ ಮೇಲೆ ಹುಲಿಗಳ ಎರಡು ಶಿಲ್ಪಗಳಿರುವುದರಿಂದ ಇದನ್ನು ಶಾರ್ಜಾ ದರವಾಜಾ ಎಂದು ಕರೆಯುತ್ತಾರೆ. ಅಹಮದ ಶಹವಲೀಯ ಪ್ರತಿರೂಪವಾದ ಹುಲಿಗಳು ಬಾಗಿಲನ್ನು ವೈರಿಗಳಿಂದ ರಕ್ಷಿಸುತ್ತವೆಂಬ ನಂಬಿಕೆಯಿತ್ತು. ಬಣ್ಣದ ಹಂಚುಗಳಿಂದ ಅಲಂಕೃತವಾದ ಈ ಬಾಗಿಲಿನ ಮೇಲ್ಭಾಗದಲ್ಲಿ ಸಂಗೀತ ಕೊಠಡಿ ಇದ್ದು ಈ ಬಾಗಿಲನ್ನು ಬಹಮನಿಯ ಅರಸ ಮಹಮ್ಮೂದ್ ಷಾನ ಆಳ್ವಿಕೆಯಲ್ಲಿ ಕ್ರಿ.ಶ.೧೪೦೩ರಲ್ಲಿ ಕಟ್ಟಿಸಿರುವುದು ಶಾಸನದಿಂದ ತಿಳಿಯುತ್ತದೆ (ಪಾಟೀಲ, ೧೯೯೯: ೧೩೮). ಇವರು ಉಲ್ಲೇಖಿಸಿರುವಂತೆ ಪರ್ಶಿಯನ್ ಶಾಸನವು ಶಾರ್ಜಾಗೇಟಿನ ಕುಂಬಿ ಗೋಡೆಯಲ್ಲಿ ದೊರೆತಿದೆ. ಕೋಟೆಯ ಈ ದ್ವಾರದ ನಿರ್ಮಾಣವು



ಸೈಫ್ ಖಾನ್ ಎಂದು ಬಿರುದನ್ನು ಧರಿಸಿದ ಆಯಾಜ್ ತೊತ್ ವಾಲ್ ಬೆಕ್‌ನಿಂದ ಆ.ಹಿ.೯೦೯ ಎಂದರೆ ಕ್ರಿ.ಶ.೧೫೦೩-೧೫೦೪ರಲ್ಲಿ ಮಹಮದ್ ಶಹ ಬಹಮನಿ ದೊರೆಯ ಆಳ್ವಿಕೆಯಲ್ಲಿ ನಡೆಯಿತು ಎಂದು ಶಾಸನದಲ್ಲಿ ದಾಖಲಿಸಲಾಗಿದೆ (ಪಾಟೀಲ, ೧೯೯೯: ೧೩೯). ಈ ಶಾಸನವನ್ನು ರಾಜಾ ಮಹಮೂದ್ ಶಹ ರಚಿಸಿದ್ದಾನೆ ಎಂಬ ಉಲ್ಲೇಖವಿದೆ. ಶಾಸನದ ಆಧಾರದ ಮೇರೆಗೆ ಈ ದ್ವಾರವು ಮಹಮದ್ ಶಹ ಕಟ್ಟಿಸಿದ್ದಾನೆಂದು ಹೇಳಬಹುದು.

ಈ ದ್ವಾರಗಳನ್ನು ಪ್ರವೇಶ ಮಾಡಿದಾಗ ನಮಗೆ ಒಳಕೋಟೆಯಲ್ಲಿ ನೋಡಲು ಅನೇಕ ರೀತಿಯ ಸ್ಮಾರಕಗಳು ಸಿಗುತ್ತವೆ. ಉದಾಹರಣೆಗೆ ರಂಗಿನಮಹಲ್. ಈ ಸ್ಮಾರಕಗಳಲ್ಲಿ ಕೆಲವನ್ನು ಬಹಮನಿ ಅರಸರು ಕಟ್ಟಿಸಿದರೆ, ಇನ್ನು ಕೆಲವನ್ನು ಬರೀದ್ ಶಾಹಿ ಅರಸರು ಕಟ್ಟಿಸಿದ್ದಾರೆ. ಈ ಒಳಕೋಟೆಯು ಅನೇಕ ಕೊತ್ತಲ (ಬುರ್ಜು) ಗಳನ್ನು ಒಳಗೊಂಡಿರುವುದಲ್ಲದೆ ಅನೇಕ ತೋಪುಗಳನ್ನು ಕೂಡ ಹೊಂದಿದೆ.

ಇನ್ನು ಬೀದರ್‌ನ ಒಳಕೋಟೆಯು ಪ್ರಮುಖವಾಗಿ ಏಳು ದ್ವಾರಗಳನ್ನು ಸುಮಾರು ೩೭ ಬುರ್ಜಗಳನ್ನು, ಅರಮನೆ, ಅಂತಪುರಗಳಂತಹ ಸ್ಮಾರಕಗಳನ್ನು ಒಳಗೊಂಡಿದರೆ ಹೊರ ಕೋಟೆಯು ಪ್ರಮುಖವಾಗಿ ೫ ಗೇಟ್‌ಗಳನ್ನು(ದ್ವಾರಗಳನ್ನು) ಹೊಂದಿದೆ.

ಶಾಹಗಂಜ್ ದರವಾಜಾ

ಈ ದ್ವಾರದ ಮೂಲ ಹೆಸರು ಮಕ್ಕಿ ದರವಾಜಾ (ಮೆಕ್ಕಾ ದರವಾಜಾ). ಇದನ್ನು ಈಗ ಶಾಹಗಂಜ್ ದರವಾಜಾ ಎಂದು ಕರೆಯಲಾಗುತ್ತದೆ. ಇದು ಮುಸ್ಲಿಮರ ಪವಿತ್ರ ಸ್ಥಳವಾದ ಮೆಕ್ಕಾ ದಿಕ್ಕಿನಲ್ಲಿ ನಿರ್ಮಿಸಲಾಗಿದೆ. ಶಾಹಗಂಜ್ ದರವಾಜಾ ಎರಡು ಕಮಾನುಗಳಿಂದ ನಿರ್ಮಿತವಾಗಿದೆ. ಈ



ರಂಗೀನ್ ಮಹಲ್



ದ್ವಾರಕ್ಕೆ ಕಟ್ಟಿಗೆಯ ಬಾಗಿಲುಗಳನ್ನು ನಿರ್ಮಿಸಲಾಗಿದ್ದು ಇದಕ್ಕೆ ಉಕ್ಕಿನ ಭದ್ರತೆಯನ್ನು ಒದಗಿಸಲಾಗಿದೆ. ಒಳಕಮಾನು ಮತ್ತು ಹೊರಕಮಾನುಗಳ ವಿಸ್ತೀರ್ಣ ಸರಿಸಮ ಹೊಂದಿದೆ. ೧೨ ಅಡಿ ೭ ಇಂಚು ಅಗಲ ೧೭ ಅಡಿ ಎತ್ತರವಿದೆ. ಶಾಹಗಂಜ್ ದರವಾಜಾದ ಒಟ್ಟು ಎತ್ತರ ೩೪ ಅಡಿ ೬ ಇಂಚುಗಳು. ಈ ದ್ವಾರದಿಂದ ಮುಂಡಾಬುರ್ಜ ಕೇವಲ ೩೬೦ ಯಾರ್ಡ್‌ಗಳ ದೂರದಲ್ಲಿದೆ. ಇದನ್ನು ಎರಡು ಅಂತಸ್ತುಗಳಲ್ಲಿ ನಿರ್ಮಿಸಲಾಗಿದ್ದು ಇದಕ್ಕೆ ಮೆಟ್ಟಿಲುಗಳನ್ನೂ ಕೂಡ ನಿರ್ಮಿಸಲಾಗಿದೆ. ಎರಡನೆಯ



ಶಾಹಗಂಜ್ ದರವಾಜಾ

ಅಂತಸ್ತಿನಿಂದ ಪಶ್ಚಿಮ ಮತ್ತು ದಕ್ಷಿಣ ಭಾಗಗಳನ್ನು ನೋಡಬಹುದಾಗಿದೆ (ಯಾಜ್ದಾನಿ, ೧೯೪೭: ೮೫). ಈ ಶಾಹಗಂಜ್ ಅಥವಾ ಮೆಕ್ಕಾ ದರವಾಜಾದ ಮುಖವು ಮೆಕ್ಕಾ ದಿಕ್ಕಿನೆಡೆಗೆ ಇದೆ ಎಂದು ಯಾಜ್ದಾನಿ ಹೇಳಿದ್ದಾರೆ ಈ ದ್ವಾರದ ಹೆಸರಿನ ಮೇರೆಗೆ ಬೀದರ್ ನಗರದಲ್ಲಿ ಶಾಹಗಂಜ್ ಎಂಬ ಓಣಿಯು ಇದೆ

ಫತ್ತೇ ದರವಾಜಾ

ಕ್ರಿ.ಶ.೧೬೫೬ರಲ್ಲಿ ಬೀದರ್ ಪಟ್ಟಣಕ್ಕೆ ಇದೇ ದ್ವಾರದಿಂದ ಪ್ರವೇಶವಿದ್ದುದರಿಂದ ಔರಂಗಜೇಬನು ಇದನ್ನು ಫತ್ತೇ ದರವಾಜಾ ಎಂದು ಕರೆದನೆಂದು ಹೇಳಲಾಗುತ್ತದೆ. ಫತ್ತೆ ಎಂದರೆ ಗೆಲುವು. ಯುದ್ಧಕ್ಕೆ ಹೋಗಿ ಜಯಗಳಿಸಿ ಬರುತ್ತಿರುವಾಗ ಈ ದ್ವಾರದಿಂದಲೇ ಬರುತ್ತಿದ್ದರು. ಆದ್ದರಿಂದ ಇದನ್ನು ಫತ್ತೇ



ದರವಾಜಾ ಎಂದು ಕರೆಯಲಾಗುತ್ತದೆ. ಈ ದ್ವಾರ ೨೨ ಅಡಿ ಅಗಲವಾಗಿದೆ. ಇದನ್ನು ೧೬೧೯ರಲ್ಲಿ ಬಿಜಾಪುರದ ಎರಡನೇ ಇಬ್ರಾಹಿಂ ಆದಿಲ್‌ಶಾಹ್ ನವರಸ ದರವಾಜಾ ಎಂದು ಕರೆಯುತ್ತಿದ್ದನು. ಇದು ಪಟ್ಟಣವನ್ನು ಪ್ರವೇಶಿಸುವ ಬಹುಮುಖ್ಯ ದ್ವಾರವಾಗಿದ್ದರಿಂದ ಸುರಕ್ಷತೆಯ ದೃಷ್ಟಿಯಿಂದ ಎರಡು



ಛತ್ರೀ ದರವಾಜಾ

ಕಡೆಗಳಲ್ಲಿ ಬೃಹತ್ ಗೋಡೆಗಳಿಂದ ನಿರ್ಮಾಣ ಮಾಡಲಾಗಿದೆ. ಇದನ್ನು ೧೭ ಅಡಿ ಉದ್ದ ೧೨ ಅಡಿ ೭ ಇಂಚು ಅಗಲ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿದೆ. ದರವಾಜಾವನ್ನು ಕಟ್ಟಿಗೆಯ ಬಾಗಿಲುಗಳು ಹಾಗೂ ಉಕ್ಕಿನ ಕವಚದಿಂದ ನಿರ್ಮಾಣ ಮಾಡಲಾಗಿದೆ (ಯಾಜ್ದಾನಿ, ೧೯೪೭: ೮೭).

ಮಂಗಲ್‌ಪೇಟ್ ದರವಾಜಾ

ಮಂಗಲ್‌ಪೇಟ್ ದರವಾಜಾದ ಹೆಸರು ಮೂಲ ಹೆಸರಾಗಿದೆ. ಪೇಟ್ ಎನ್ನುವುದು ಸಂಸ್ಕೃತ ಶಬ್ದವಾಗಿದೆ. ಪೇಟ್ ಎಂದರೆ ಮಾರುಕಟ್ಟೆ ಪ್ರತಿ ಮಂಗಳವಾರ ಮಾರುಕಟ್ಟೆ (ಸಂತೆ) ನಡೆಯುತ್ತಿದ್ದರಿಂದ ಮಂಗಲ್‌ಪೇಟೆ ದರವಾಜಾ ಎಂಬ ಹೆಸರು ಬಂದಿದೆ. ಇದನ್ನು ೧೮೫೦ರಲ್ಲಿ ಬೀದರ್ ತಾಲೂಕುದಾರರಾದ ಶಮ್ಸ-ಉದ್-ದಿನ್ ಅಲಿಯಾಸ್ ಅಬ್ಬಸ್ ಸಾಬ್ ಅವರು ಪುನರ್ ನಿರ್ಮಾಣ ಮಾಡಿದ್ದಾರೆಂದು ಹೇಳಲಾಗಿದೆ. ಇದಕ್ಕೆ ಎರಡು ಕಮಾನುಗಳನ್ನು ೯ ಅಡಿ ಅಂತರದಲ್ಲಿ ನಿರ್ಮಿಸಲಾಗಿದೆ. ಎರಡು ಕಮಾನುಗಳ ಅಳತೆ ಒಂದೇ ತೆರನಾಗಿ ಇದೆ. ೧೨ ಅಡಿ ೮ ಇಂಚು ಕಮಾನುಗಳನ್ನು ಹೊಂದಿದ್ದು ೧೮ ಅಡಿ ೧ ಇಂಚು ಎತ್ತರವಾಗಿದೆ. ಇದಕ್ಕೆ ಉಕ್ಕಿನ ಕವಚದ ದ್ವಾರಗಳನ್ನು ನಿರ್ಮಿಸಲಾಗಿದೆ (ಯಾಜ್ದಾನಿ, ೧೯೪೭: ೮೮).



ದುಲಹನ್ ದರವಾಜಾ

ಹೊಸದಾಗಿ ಮದುವೆಯಾಗಿ ಬರುವ ವಧು ವರರು ಈ ದರವಾಜಾದ ಮೂಲಕವೇ ನಗರವನ್ನು ಪ್ರವೇಶ ಮಾಡುತ್ತಿದ್ದರು. ಇದನ್ನು ಅರಸನು ವೀಕ್ಷಿಸುತ್ತಿದ್ದನು. ಏಕೆಂದರೆ ಹೊಸದಾಗಿ ಮದುವೆಯಾಗಿ



ಮಂಗಲ್‌ಪೇಟ್ ದರವಾಜಾ

ಬರುವ ಯಾವುದೇ ವಧು ತನ್ನ ಮೊದಲ ರಾತ್ರಿಯನ್ನು ಅರಸನಲ್ಲಿಯೇ ಕಳೆಯಬೇಕಾಗಿತ್ತು. ಅದಕ್ಕಾಗಿಯೇ ಈ ದರವಾಜಾನ್ನು ದುಲಹನ್ ದರವಾಜಾ ಎಂದು ಕರೆಯುತ್ತಾರೆ ಎಂದು ಶಾಂತಪ್ಪ ದೇವರಾಯ ಎಂಬ ವಕ್ತೃ ಹೇಳುತ್ತಾರೆ.



ದುಲಹನ್ ದರವಾಜಾ





ಮಂಗಲ್‌ಪೇಟ್ ದರವಾಜಾದಿಂದ ದುಲಹನ್ ದರವಾಜಾ ೩½ ಫರ್ಲಾಂಗ್ ದೂರದಲ್ಲಿದೆ. ಇದು ಕಮಾನುಗಳಿಂದ ನಿರ್ಮಿತವಾಗಿದೆ. ಈ ದ್ವಾರವು ೧೨ ಅಡಿ ೮ ಇಂಚು ಅಗಲವಾಗಿದ್ದು ೨೧ ಅಡಿ ೨ ಇಂಚು ಎತ್ತರವಾಗಿದೆ. ಪರರಾಜ್ಯಗಳಿಂದ ಆಗುವ ಆಕ್ರಮಣವನ್ನು ತಡೆಯಲು ಈ ದ್ವಾರವನ್ನು ಕಿರಿದಾಗಿ ನಿರ್ಮಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ (ಯಾಜ್ದಾನಿ, ೧೯೪೭ : ೮೯).

ತಲಘಾಟ್ ದರವಾಜಾ

ದುಲಹನ್ ದರವಾಜಾದಿಂದ ೩½ ಫರ್ಲಾಂಗ್‌ದಲ್ಲಿ ತಲಘಾಟ್ ದರವಾಜಾ ನಿರ್ಮಾಣವಾಗಿದೆ. ಈ ದರವಾಜಾ ೧೭ ಅಡಿ ೫ ಇಂಚು ಹೊಂದಿರುವ ಕಮಾನುಗಳಿಂದ ನಿರ್ಮಾಣಗೊಂಡಿದ್ದು ೧೭ ಅಡಿ ೨ ಇಂಚು ಎತ್ತರದಲ್ಲಿ ಇದೆ. ಒಟ್ಟಾರೆ ದರವಾಜಾದ ಎತ್ತರ ೨೮ ಅಡಿ ೧೦ ಇಂಚು ಆಗಿದೆ. ಇದನ್ನು ಭದ್ರತಾ ದೃಷ್ಟಿಯಿಂದ ದಶದಿಕ್ಕುಗಳು ಕಾಣುವಂತೆ ನಿರ್ಮಾಣ ಮಾಡಲಾಗಿದೆ (ಯಾಜ್ದಾನಿ, ೧೯೪೭: ೮೯). ಈ ತಲಘಾಟ್ ದರವಾಜಾ ಕೋಟೆಯ ಮುಖ್ಯದ್ವಾರಗಳಲ್ಲಿ ಒಂದಾಗಿದೆ. ಈ ದ್ವಾರದ ಹೆಸರಿನ ತಲಘಾಟ್ ಎಂಬ ಚಿಕ್ಕದಾದ ಊರು ದ್ವಾರಕ್ಕೆ ಹತ್ತಿಕೊಂಡಿದೆ. ಈ ಊರಿನ ಹೆಸರಿನ ಮೇರೆಗೆ ದ್ವಾರಕ್ಕೆ ತಲಘಾಟ್ ಎಂದು ಕರೆಯಲಾಯಿತೋ ಅಥವಾ ಈ ದ್ವಾರದ ಹೆಸರಿನ ಮೇರೆಗೆ ಊರು ಹುಟ್ಟಿಕೊಂಡಿದೆಯೋ ಎಂಬುದು ಸ್ಪಷ್ಟಗೊಳ್ಳುತ್ತಿಲ್ಲ.

ಒಟ್ಟಾರೆ ಕೋಟೆಯ ಬಗೆಗಿನ ಶಿಷ್ಟ ಪಠ್ಯಗಳನ್ನು ಗಮನಿಸಿದರೆ ಕೋಟೆಯ ಚಿತ್ರಣವು ಒಂದು ರಾಜಕೀಯ ಯುದ್ಧದ ಭಾಗವಾಗಿ ವರ್ಣಿತವಾಗಿರುವುದು ಕಂಡುಬರುತ್ತದೆ. ಒಬ್ಬ ರಾಜ ಪ್ರಬಲನಾಗಲು ಸಾಮ್ರಾಜ್ಯವನ್ನು ಸುರಕ್ಷಿತವಾಗಿಟ್ಟುಕೊಳ್ಳಲು ಕೈಗೊಳ್ಳಬೇಕಾದ ಎಚ್ಚರವನ್ನು ಅದು ಯುದ್ಧದ ಸಂದರ್ಭದಲ್ಲಿ ವಹಿಸುವ ಪಾತ್ರವನ್ನು ಕುರಿತು ವಿವರಿಸುವುದನ್ನು ಈಗಾಗಲೇ ನೋಡಲಾಗಿದೆ. ಆದರೆ ಇದರಾಚೆಯೂ ಸಮುದಾಯದ ಜನಜೀವನ ಭಾಗವಾಗಿ ಕೋಟೆಗಳು ಇದ್ದವು ಎನ್ನುವ ಕುರಿತು ಶಿಷ್ಟ ಪಠ್ಯಗಳು ಹೆಚ್ಚಾಗಿ ಗಮನಿಸುವುದಿಲ್ಲ. ಸುಬ್ಬಣ್ಣ ರೈ ಅವರು ಗಮನಿಸಿದಂತೆ,

> "ಈ ಹಿನ್ನೆಲೆಯಲ್ಲಿ ಕೋಟೆಯ ಸುತ್ತಮುತ್ತ ಇರುವ ಜನಸಮುದಾಯಗಳ ಕಥೆ, ಹಾಡು, ನಂಬಿಕೆ, ಆಚರಣೆ ಇನ್ನಿತರ ಅಂಶಗಳು ಬಹುತೇಕವಾಗಿ ದೊರೆಯುತ್ತವೆ. ಇವು ಶಿಷ್ಟ ಸಾಹಿತ್ಯದಿಂದ ಬಹುದೂರ ಉಳಿದಿವೆ. ಕೋಟೆಗಳ ಸ್ಥಾಪನೆ, ನಿರ್ಮಾಣ ಮತ್ತು ನಾಶ ಎನ್ನುವುದು ಶಿಷ್ಟ ಸಾಹಿತ್ಯದಲ್ಲಿ ಶೌರ್ಯದ ಪರಾಕ್ರಮ ಸಂಕೇತವಾಗಿ ಚಿತ್ರಿತವಾಗಿದ್ದರೆ ಮೌಖಿಕ ಸಾಹಿತ್ಯದಲ್ಲಿ ಜೀವನದ ಭಾಗವಾಗಿ ಚಿತ್ರಣಗೊಂಡಿದೆ" (ರೈ, ೧೯೯೪: ೮೪).

ಕೋಟೆಗಳಿಗೆ ಸಂಬಂಧಿಸಿದಂತೆ ಶಿಷ್ಟ ಮತ್ತು ಮೌಖಿಕ ಚರಿತ್ರೆಯಲ್ಲಿ ಅಪಾರವಾದ ಭಿನ್ನತೆಯನ್ನು ಕಾಣಬಹುದು. ಮೌಖಿಕ ಚರಿತ್ರೆಯು ಕೋಟೆಯನ್ನು ಜನಜೀವನದ ಭಾಗವಾಗಿ ದಾಖಲಿಸಿರುವುದನ್ನು

ಕಾಣಬಹುದು. ಕೋಟೆಯ ಸ್ಥಾಪನೆ, ನಿರ್ಮಾಣ ಮತ್ತು ನಾಶದ ಕುರಿತ ಹಾಡುಗಳನ್ನು ಗಮನಿಸಿದರೆ ಜನಪದರು ಈ ಕೋಟೆಯೊಂದಿಗೆ ಹೊಂದಿರುವ ಅಂತಃಸಂಬಂಧ ಅರಿವಾಗುತ್ತದೆ.

ಕರ್ನಾಟಕಕ್ಕೆ ಸಂಬಂಧಿಸಿದಂತೆ ಮೌಖಿಕ ಪಠ್ಯಗಳೆಲ್ಲವು ೧೭-೧೮-೧೯ನೇ ಶತಮಾನಗಳಲ್ಲಿ ರಾಜ್ಯಭಾರ ಮಾಡಿದ ಮಾಂಡಲಿಕರು, ಪಾಳೇಗಾರರು, ಅಮರನಾಯಕರಿಗೆ ಸಂಬಂಧಿಸಿದ್ದಾಗಿವೆ. ಅದರಲ್ಲೂ ದೊಡ್ಡ ಸಾಮ್ರಾಜ್ಯದ ಕೋಟೆಗಳ ವರ್ಣನೆಗಿಂತ ಚಿಕ್ಕಪುಟ್ಟ ಪಾಳೆಗಾರರು ಕಟ್ಟಿಸಿದ ಕೋಟೆಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರಕಿರುವುದು ಕಂಡುಬರುತ್ತದೆ (ಮುದ್ದವೀರಪ್ಪ, ೨೦೦೨: ೨೭).

ಬೀದರ್ ಕೋಟೆಯು ಯಾವ ಕಾಲಘಟ್ಟದಲ್ಲಿ ಸ್ಥಾಪಿತವಾಗಿದೆ ಎಂಬುದನ್ನು ಲಿಖಿತ ಚರಿತ್ರೆಯು ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಅಂದರೆ ಶಾಸನಗಳು, ಹಸ್ತಪ್ರತಿಗಳು ಮತ್ತು ಗ್ರಂಥಗಳು ಇತ್ಯಾದಿಯಾಗಿ ಹಲವು ದಾಖಲೆಗಳ ಆಧಾರದಿಂದ ಸಂಸ್ಥಾನಗಳು ಸ್ಥಾಪನೆಯಾಗಿದ್ದಕ್ಕೆ ನಿಖರವಾದ ಕಾಲವನ್ನು ವಿವರಿಸುವುದು ಕಾಣುತ್ತೇವೆ.

ಆದರೆ ಕೋಟೆ ಕಟ್ಟಲು ಅದರ ಹಿಂದಿರುವ ವಿವರಣೆಯನ್ನು ಒದಗಿಸಿಕೊಡುವುದಿಲ್ಲ. ಅಂತಹ ಸಂದರ್ಭದಲ್ಲಿ ಸ್ಥಳೀಯರ ಮೌಖಿಕ ವಿಚಾರವನ್ನು ಪರಿಶೀಲಿಸಿದರೆ ಸಹಜವಾಗಿಯೇ ಸಂಸ್ಥಾನ ಸ್ಥಾಪಿಸಿದ್ದಕ್ಕೆ, ಕೋಟೆ ಕೊತ್ತಲ ನಿರ್ಮಿಸಿದ್ದಕ್ಕೆ ಮಹತ್ವದ ವಿಷಯಗಳು ದೊರೆಯುತ್ತವೆ. ಮೌಖಿಕ ವಿಚಾರಗಳು ಹಲವು ಕಾರಣಗಳಿಂದ ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಾಣ ಮಾಡುವುದಕ್ಕೆ ಸಹಾಯವಾಗಬಲ್ಲವೆಂದು ಹೇಳಬಹುದು.

ಬೀದರ್ ಕೋಟೆ ಸ್ಥಾಪನೆಯ ಹಿನ್ನೆಲೆಯ ಬಗ್ಗೆ ಲಿಖಿತ ಚರಿತ್ರೆಯಲ್ಲಿ ಕಾಣಲಾಗದ ಹಲವಾರು ವಿಚಾರಗಳನ್ನು ಇಲ್ಲಿನ ಜನ ಸಮುದಾಯಗಳು ಹೇಳುತ್ತವೆ. ಪರಂಪರೆಯಿಂದ ಉಳಿಸಿಕೊಂಡು ಬಂದಿರುವ ಈ ಜನಸಾಮಾನ್ಯರ ವಿಚಾರಗಳ ಕಡೆಗೆ ಗಮನ ಹರಿಸಿದಾಗ ವಿಶಿಷ್ಟವಾದ ರೀತಿಯಲ್ಲಿ ಜನಪದರ ನಂಬಿಕೆಗಳು ಹೊರಬೀಳುತ್ತವೆ. ಈ ವಕ್ತೃವಿನ ಐತಿಹ್ಯಗಳಿಂದಲೇ ಬೀದರ್ ಕೋಟೆಯ ಸ್ಥಾಪನೆ ಹಿನ್ನೆಲೆಯನ್ನು ಅರಿಯುವುದು ಬಹಳ ಮುಖ್ಯ. "ಮೌಖಿಕ ಕಥನಗಳು ಸಾಮಾನ್ಯವಾಗಿ ಅಲೌಕಿಕವಾದ ನಿರೂಪಣೆಯಿಂದ ಕೂಡಿರುತ್ತವೆ. ಇವು ಸಮುದಾಯದ ಬದುಕಿನ ಚೈತನ್ಯವನ್ನು ಹಾಗೂ ಧಾರ್ಮಿಕ ಶ್ರದ್ಧೆಯನ್ನು ಹೆಚ್ಚಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದ ಮೌಖಿಕ ಕಥನಗಳು ಕೂಡ ಧಾರ್ಮಿಕ ಶ್ರದ್ಧೆಯನ್ನು, ಬದುಕುವ ಉತ್ಸಾಹವನ್ನು ಹೆಚ್ಚಿಸುವಲ್ಲಿ ರಚಿತವಾದವುಗಳೇ ಆಗಿವೆ. ಆದರೆ ಮುಖ್ಯವಾಗಿ ಈ ರೀತಿ ರಚಿತವಾಗುವ ಅಲೌಕಿಕ ಮೌಖಿಕ ಕಥನಗಳ ಹಿಂದಿರುವ ಲೌಕಿಕ ಒತ್ತಡಗಳನ್ನು ನಾವು ಗಮನಿಸಬೇಕಿದೆ. ಈ ಸಮುದಾಯದ ಯಾವ ಒತ್ತಡಗಳು ಇಂಥದೊಂದು ಕಥನಗಳ ರಚನೆಗೆ ಕಾರಣವಾಗಿದೆ ಎಂಬುದನ್ನು ಅರಿತರೆ ಅವು ಪವಾಡಗಳಂತೆ ಅತಿಮಾನುಷವಾಗಿ ಚಿತ್ರಿತವಾಗಿದ್ದರೂ ಅವುಗಳೊಂದಿಗೆ ಸಂಬಂಧ ಹೊಂದಿರುವ ಸಮುದಾಯದ ಲೌಕಿಕ

ಆಶೋತ್ತರಗಳನ್ನು ಗಮನಿಸಬೇಕಾಗುತ್ತದೆ (ಮುದ್ದವೀರಪ್ಪ, ೨೦೦೨: ೨೦೮). ಮೌಖಿಕ ಕಥನಗಳು ಧಾರ್ಮಿಕ ಶ್ರದ್ಧೆಯನ್ನು ಮತ್ತು ಬದುಕುವ ಉತ್ಸಾಹವನ್ನು ಹೆಚ್ಚಿಸುವುದರೊಂದಿಗೆ ಇವು ನಮಗೆ ಪವಾಡಗಳಂತೆ ಕಂಡಿದ್ದರೂ ಈ ಕಥನಗಳ ಹಿಂದೆ ಅಧಿಕವಾಗಿ ಲೌಕಿಕ ಒತ್ತಡಗಳು ಇರುವಂಥ ಉದಾಹರಣೆಗಳು ನಮಗೆ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಅಂಥ ಕಥನಗಳ ಉದಾಹರಣೆಯಲ್ಲಿ ಬೀದರ್ ಕೋಟೆಯ ಕಥನವು ಒಂದಾಗಿದೆ.

ಒಂದು ಕೋಟೆಯಾಗಲಿ, ಸಂಸ್ಥಾನವಾಗಲಿ, ಸ್ಥಾಪನೆಯಾಗಬೇಕಾದರೆ ಅಲ್ಲಿನ ಭೌಗೋಳಿಕವು ವಿಶೇಷ ಪ್ರಾಶಸ್ತ್ಯವನ್ನು ಹೊಂದಿರಬೇಕು. ಮೊದಲಿಗೆ ಅದು ವೀರಭೂಮಿ-ಗಂಡುಭೂಮಿ ಆಗಿರಬೇಕು. ಇವೆರಡು ಸರಿ ಎಂದು ಭಾವಿಸಿದಲ್ಲಿ ಸಾಮ್ರಾಜ್ಯ ಸ್ಥಾಪಿಸಿ ಕೋಟೆ ನಿರ್ಮಿಸುವುದು ವಾಡಿಕೆ. ಅಲ್ಲದೆ ರಕ್ಷಣೆ ಒದಗಿಸಲು ಯೋಗ್ಯ ಸ್ಥಳವಾಗಿರಬೇಕು ಎಂಬುದು ಕೂಡ ತುಂಬಾ ಮುಖ್ಯವಾಗಿರುತ್ತದೆ (ಕೊಟ್ರೇಶ್, ೨೦೦೨: ೮).

ಕೋಟೆಗಳ ನಿರ್ಮಾಣದ ಪೂರ್ವದ ಘಟನೆಗಳಿಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಭಾರತದಾದ್ಯಂತ ಹಲವು ಕಥನ ಮಾದರಿಗಳು ಪ್ರಚಲಿತದಲ್ಲಿವೆ. ಈ ಕಥನ ಮಾದರಿಗಳು ಸಣ್ಣಪುಟ್ಟ ಕೋಟೆಗಳಿಂದ ಹಿಡಿದು ದೊಡ್ಡ ಸಾಮ್ರಾಜ್ಯದವರೆಗೆ ವ್ಯಾಪಿಸಿವೆ. ಇವುಗಳ ಸ್ಥಾಪನೆಯ ಸಂದರ್ಭದಲ್ಲಿ ಜನಸಮುದಾಯಗಳು ಆ ಪ್ರದೇಶಗಳನ್ನು ಕುರಿತಂತೆ ಹೇಗೆ ಕಂಡಿದ್ದಾರೆಂಬುದನ್ನು ಇಲ್ಲಿ ಕಾಣಬಹುದು.

ಮೊಲವೊಂದು ನಾಯಿಯನ್ನು ಬೆನ್ನಟ್ಟಿ ಹೋಗುವುದು, ಚಿಗುರೆಯೊಂದು ಹುಲಿಯನ್ನು ಬೆನ್ನಟಿಸಿ ಹೋಗುವುದು, ಮೊಲವೊಂದು ನರಿಯನ್ನು ಬೆನ್ನಟ್ಟಿಸಿಕೊಂಡು ಹೋಗುವುದು, ನೀರು ತುಂಬಿದ ಕುಂಡದ ಮಹಿಮೆ, ಬಡಿಗೆ (ಕೋಲು) ಮಹಿಮೆ, ಈ ರೀತಿಯಾದ ಐತಿಹ್ಯಗಳು ಬೀದರ್ ಕೋಟೆ ನಿರ್ಮಾಣದ ಪೂರ್ವದಲ್ಲಿ ಕಾಣಿಸಿಕೊಂಡಿರುವುದನ್ನು ಕಾಣಬಹುದು.

"ಇಂಥ ಕಥೆಗಳು ಭಿನ್ನ ಭಿನ್ನವಾಗಿ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಲಿತದಲ್ಲಿವೆ. ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಿನ್ನವಾಗಿರುವ ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇವು ಐತಿಹ್ಯದ ರೂಪದಲ್ಲಿ ಜನಪ್ರಿಯವಾಗಿವೆ (ಮುದ್ದವೀರಪ್ಪ, ೨೦೦೪: ೨೧೦).

ಅದೇ ರೀತಿ ಬೀದರ್ ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಿದಿರು ಘಟವಿರುವ ಈ ಪ್ರದೇಶದಲ್ಲಿ ಮೊಲವು ನಾಯಿಯನ್ನು ಬೆನ್ನಟ್ಟಿಕೊಂಡು ಹೋಗಿರುವುದು ಕಂಡುಬಂದಿದ್ದು, ಅದರಿಂದಾಗಿ ಈ ನೆಲವು "ವೀರತ್ವ"ದ ಗುಣವನ್ನು ಹೊಂದಿದೆ ಎಂಬ ಜನಪ್ರಿಯ ಮಾತುಗಳು ಪ್ರಚಲಿತದಲ್ಲಿವೆ. "ವೀರತ್ವ" ಹೊಂದಿರುವ ನೆಲದಲ್ಲಿ ಕೋಟೆಯನ್ನು ನಿರ್ಮಿಸುವುದರಿಂದ ಅದು ಸುಲಭವಾಗಿ ಯಾವ ಶತ್ರುವಿನಿಂದಲೂ ಸೋಲಿಸಲಾಗದ ಸಾಮ್ರಾಜ್ಯ ಸ್ಥಾಪನೆಗೆ ಕಾರಣವಾಗಿರುತ್ತದೆಂದು ನಂಬಲಾಗಿದೆ. ಈ

ನಂಬಿಕೆಯೇ ಬೀದರ್ ಕೋಟೆಯ ಸ್ಥಾಪನೆಗೆ ಕಾರಣವಾಗಿದೆ. ಅಲ್ಲದೆ ಈ ಪ್ರದೇಶವು ಮಹಾಪುರುಷರು ಓಡಾಡಿದ ಸ್ಥಳವಾಗಿದ್ದು, ಇದೊಂದು ಪುಣ್ಯಭೂಮಿಯಾಗಿದೆ ಎಂದು ಕೋಟೆಯ ಸುತ್ತಮುತ್ತಲಿನ ಜನಪದರ ನಂಬಿಕೆಯಾಗಿವೆ. ಈ ತರಹದ ಘಟನೆಗಳು ಒಂದು ಕೋಟೆ ಅಥವಾ ಸಂಸ್ಥಾನ ಸ್ಥಾಪನೆಗೆ ಪ್ರಮುಖ ಕಾರಣವಾಗುತ್ತದೆ ಎನ್ನುವುದು. ಏಕೆಂದರೆ ಒಂದು ಕೋಟೆ ಅಥವಾ ಸಂಸ್ಥಾನ ಸ್ಥಾಪನೆಗೆ ಈ ರೀತಿಯ ಘಟನೆಗಳಿಂದ ಘಟನಾ ಶಕ್ತಿ, ರಾಜಕೀಯ ಮುತ್ಸದ್ದಿತನ ಮತ್ತು ಶೌರ್ಯ ಮುಂತಾದವು ಮುಖ್ಯವಾಗುತ್ತವೆ. ಹಾಗಾದರೆ ಈ ರೀತಿಯ ಐತಿಹ್ಯಗಳು ಹುಟ್ಟಿಕೊಳ್ಳಲು ಕಾರಣವೇನು ಎಂಬುದನ್ನು ಜನಪದರಿಂದ ಕ್ಷೇತ್ರದಲ್ಲಿ ಹೊರತಂದಿರುವ ಐತಿಹ್ಯಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

*** *** ***

ಐತಿಹ್ಯಗಳು

ಕೋಟೆ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯಗಳು ಹಲವು ಇವೆ. ಆದರೆ ಸಂಗ್ರಹಣೆಯಲ್ಲಿ ಐದು ಐತಿಹ್ಯಗಳು ದೊರಕಿವೆ. ಇದರಲ್ಲಿ ನಾಲ್ಕು ಐತಿಹ್ಯಗಳನ್ನು ವಕ್ತೃಗಳಿಂದ ಸಂಗ್ರಹಿಸಿ ಇಲ್ಲಿ ಉಲ್ಲೇಖಿಸಲಾಗಿದೆ. ಒಂದು ಐತಿಹ್ಯವನ್ನು ಕೆ.ಎಂ.ಮೈತ್ರಿಯವರ 'ಸುಲ್ತಾನ ಸುರಳಿ'ಯಿಂದ ಬಳಸಿಕೊಳ್ಳಲಾಗಿದೆ.

ಅರಸನು ಒಂದು ಸ್ಥಳದಲ್ಲಿ ಕೋಟೆಯನ್ನು ಕಟ್ಟಲು ಪ್ರಾರಂಭಿಸುವುದು, ಆಗ ಅಲ್ಲೊಂದು ಅಪಶಕುನ ಕಂಡು ಆ ಸ್ಥಳವನ್ನು ಬಿಟ್ಟು ಮುಂದೆ ಹೋಗುವುದು. ಮುಂದೆ ಅರಣ್ಯ ಪ್ರದೇಶಕ್ಕೆ ಬಂದಾಗ ಅರಸನಿಗೆ ತುಂಬಾ ನೀರಡಿಕೆಯಾಗುವುದು, ಒಂದು ಸಣ್ಣ ಕುಂಡದ ನೀರನ್ನು ಕುಡಿಯುವುದು. ನಂತರ ಒಂದು ಪ್ರಬಲ ಪ್ರಾಣಿಯ ಮೇಲೆ ದುರ್ಬಲ ಪ್ರಾಣಿಯು ದಾಳಿ ಮಾಡುವುದನ್ನು ಅರಸನು ಕಂಡು ಈ ಭೂಮಿಯು ಒಂದು ಪುಣ್ಯಭೂಮಿಯಾಗಿದೆ ಎಂದು ತಿಳಿದು ಕೋಟೆಯನ್ನು ಕಟ್ಟುವುದು. ಈ ರೀತಿಯಾಗಿ ಕೋಟೆಯ ನಿರ್ಮಾಣದ ಪೂರ್ವದಲ್ಲಿ ಪ್ರಮುಖವಾದ ಐತಿಹ್ಯದ ಅಂಶಗಳು ಕಂಡುಬರುತ್ತವೆ. ಅವುಗಳನ್ನು ಕೆಳಗಿನಂತೆ ವಿವರಿಸಲಾಗಿದೆ. ಪ್ರತಿ ಐತಿಹ್ಯವನ್ನು ವಕ್ತೃವಿನ ಆಡು ಭಾಷೆಯಲ್ಲೇ ನೀಡಲಾಗಿದೆ. ನಂತರ ಅದನ್ನು ಸರಳಗನ್ನಡದಲ್ಲಿ ಹೇಳುವ ಪ್ರಯತ್ನವನ್ನು ಮಾಡಲಾಗಿದೆ.

ಮೊದಲನೆಯ ಐತಿಹ್ಯ

ಮೊದಲನೆಯ ಐತಿಹ್ಯವನ್ನು ಸುಭಾಷ್‌ರಾವ್ ಅಲ್ಲಾಪುರೆ ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಅವರ ಮಾತಿನಲ್ಲೇ ಅದನ್ನು ವಿವರಿಸಲಾಗಿದೆ.

> ನೆಮತಾಬಾದ್ ಎಂಬ ಊರಿನಾಗ ಪಯಿಲೇ ಖಿಲ್ಲಾ ತಯಾರಾಗಲತಿತ್ತು. ಆಗ ಒಂದು ಅಪಶಕುನ ಆಯ್ತು. ಆ ಅಪಶಕುನ ಅಂದುರ್ ಕರೀ ಕಾಗಿ ಬಂದ ಖಿಲ್ಲಾದ ಮ್ಯಾಲ್

ಕುಂತ ನೀರ ಕುಡಿತು, ಇದು ನೋಡಿದ ರಾಜಾಗ ಈ ಜಾಗಾ ಅವಲಕ್ಷಣ ಅಂತ ಅನುಸ್ತು. ಅದುಕ್ ಅಲಿಂದ್ ಆಳು-ಕಾಳು, ಗುದ್ದಲಿ, ಸಲಕಿ, ಬುಟ್ಟಿ ಎಲ್ಲಾ ಸಾಮಾನ್ ತೂಗೊಂಡಿ ಅಲ್ಲಿಂದ ಗುಳೆ ಎಳಬೇಕೆಂದ ರಾಜಾನ್ ಹುಕುಂ ಆಯ್ತು. ರಾಜಾನ್ ಹುಕುಂ ಆದ್ ಮ್ಯಾಲ್ ಎಲ್ಲರೂ ಅಲ್ಲಿಂದ್ ಜಾಗಾಖಾಲಿ ಮಾಡ್ದುರ. ಹೀಂಗೆ ರಾಜಾ ಮತ್ ಅವನ ಆಳು-ಕಾಳು ಎಲ್ಲಾ ಕರ್‌ರ್ ಅಂತ ಬಿಸಲಾಗ್ ಹೊಯ್ತಾರ್. ಬರಪರಿ ಹಾದ್ಯಾಗ ಆನಿಗಿ ಕುದುರಿಗಿ, ಒಂಟಿಗಿ, ರಾಜಾಗ, ಅವನ ಆಳಿಗಿ ಎಲ್ಲರಿಗಿಭೀ ನೀಡಿಕಿ ಆಯ್ತುದ್. ಅಲ್ಲಿ ಯಾಕ್‌ಡಭಿ ನೋಡ್ದುರ ನೀರ್ ಕಾಣಸಾಲ್ ಬರೀ ಬಿದಿರು ಘುಟನೇ ಕಾಣುಸ್ತುದ್ ಅದುಕ್ ರಾಜಾ ಮತ ಅವನ ಆಳು ಎಲ್ಲಾ ಒಂದ್ ಗಿಡುದ್ ಬುಡುಕ್ ಕೂಡ್ತಾರ್. ಆಗ್ ರಾಜಾನ್ ಒಬ್ಬವ ಆಳು ರಾಜರೇ ನಾನ್ ನೀರ್ ಎಲ್ಲಾನ ಅವಾ ಏನೋ ನೋಡ್ಕೊಂಡಿ ಬರ್ತಾ ಅಂತ ಹೊಯ್ತಾನ್. ಹೋದುನ ಹೋದುನ್ ಬೊಕ್ಕೊಳ್ ದೂರ್ ರಾಜಾನ ಆಳು ಹೋದುನ್ .ಈ ಕಡೀ ರಾಜಾಗ ಎಲ್ಲಾ ಬೊಕ್ಕೂಳ ನೀಡಕಿ ಆಗಿತ್. ಅದು ಇವುರೆಲ್ಲ ನೀರಿಗಾಗಿ ತಡಪಡ್ಕೊತಾ ಕುಂತೀರ. ನೀರ ಹುಡುಕಲಾಕ್ ಹೋಗಿದ ಆಳಿಗೆ ಒಬ್ಬವ ಕುರಿಕಾಯ ಮುದುಕ ಸಿಗತಾನ ಆದೂರ್ ನೀರ್ ಸಿಗಾಲ್. ಈ ಕುರಿ ಕಾಯ ಮನಸ್ಯಾಗ್ ಕೇಳ್ದುರ್ ನೀರ್ ಸಿಗ್ತಾವ್ ಅಂತ ರಾಜಾನ ಆಳು ಆ ಕುರಿಕಾಯ ಮನಸ್ಯಾಗ "ಏನಪ ಇಲ್ಲಿ ಎಲ್ಲಾರಾ ಕುಡಿಲಾಕ ನೀರ್ ಸಿಗ್ತಾವ ಏನ್" ಅಂತಾನ. ಅದುಕ ಕುರಿ ಕಾಯ ಮನಸ್ಯಾ ಅಂತಾನ ಇಲ್ಲಿಂದ ಥೂಡೆ ದೂರ್ ಹೋದುರ್ ನೀರ್ ಸಿಗ್ತಾವ್ ಅಂದುನ್. ನಾನ್ ಒಬ್ಬಾವನೇ ಇಲ್ಲ, ನನ್ನ ಹಿಂದ್ ರಾಜಾ ಹರಾ. ಅವರ ಬಲ್ಲಿ ಬೊಕ್ಕೊಳ ಸೈನಿಕುರು ಆನಿ, ಕುದುರಿ ಎಲ್ಲಾ ಆವಾ ಅವುಕೆಲ್ಲ ನೀರ್ ಬೇಕ ಅಂದುನ್ ಅದುಕ್ ಕುರಿ ಕಾಯುವ ಮನಸ್ಯಾ ಅಂತಾನ್ ನೋಡು ಅಲ್ಲೊಂದು ಸಣ್ಣುದ್ ಗುಂಡಾ ಅದಾ. ಅದುರ್ ಮ್ಯಾಲ್ ಒಂದ್ ಕಲ್ಲ್ ಮುಚ್ಚಿದ ಅದಾ. ಅದು ತಗ್ದುರ್ ಬೊಕ್ಕೊಳ್ ನೀರ ಬರ್ತಾವ ಕುಡಿರಿ ಅಂತಾನ. ಅದುಕ್ ರಾಜಾನ್ ಆಳು ಓಡ್ಕೊತ ಓಡ್ಕೊತಾ ಹೋಗಿ ರಾಜಾಗ ಹೇಳ್ತಾನ್ ರಾಜರೇ ರಾಜರೇ ಅಲ್ಲಿ ನೀರ್ ಅವಾ ಮತ ಅದುರ್ ಮ್ಯಾಲಿನ ದೊಡ್ದುದ ಬಂಡೆಗಲ್ಲ ಸರಸಬೇಕ್ ಅಂದುರ್ ಅದರ್ ಕೆಳಗ್ ನೀರ್ ಸಿಗ್ತಾವ್ ಅಂತಾನ್. ಅದುಕ ಅಲ್ಲಿಂದ ರಾಜಾ ಮತ ಅವನ ಆಳಮಕ್ಕಳೆಲ್ಲ ಆ ನೀರ್ ಇರ ಬಂಡ್ಗೆಲ್ ಬಲ್ಲಿ ಬರ್ತಾರ್, ಬಂದ ನೋಡಿ ಬಂಡೆಗಲ್ಲ್ ಸರಸಲಾಕ್ ಹೋಯ್ತಾರ್ ಅದು ಜಾಗ್ ಬಿಟ್ಟ ಥೋಡೆಭಿ ಸರೆಲೇ ಹೊಯಿತುದ್ ನೀಡಿಕಿ ಅಂದುರ ತಾಳಲ್ದಾಂಗ್ ಆದು. ಅದುಕ್ ರಾಜಾ ಮತ್ತ ಅಲ್ಲೇ ಕುರಿಕಾಯಿತಿದ್ ಮುದುಕುಗ್ ಕರೀತಾರ 'ಥೋಡೇ ಬಾರಪ್ಪ ಮತ್ ನಮುಗ್ ಗುಂಡುದ್ ಮ್ಯಾಲ್ ಮುಚ್ಚಿದ ಕಲ್ಲ್ ತಗಿಲಾಕ್ ಬರಾಲ್ದ ಹೋಗ್ಯಾದ ಅಂತಾನ್'. ಅದುಕ ಆ ಕುರಿಕಾಯ ಮುದುಕ ಅಂತಾನ್ 'ನೀವ್ ಅಷ್ಟೊಂದು ಮಂದ್ಗಿ ಬರಲ್ದ್ ಅಂದುರ್ ನನಗ್ ಒಬ್ಬಾವನಿಗೆ ಹ್ಯಾಂಗ ಸರಿತುದ್' ಅಂದ್. ನಡೀರಿ ನೋಡ್ಲಾಕರಾ ನೋಡರಿ ಅಂತ್ ಹೊಯ್ತಾರ್. ಅಲ್ಲಿ ಹೊಯ್ತಿಲ್ಲಕೆ ಕುರಿಕಾಯ ಮುದುಕ ತನ್ನ ಕೈಯ್ಯಾಗ ಇರ

ಬಡ್ಡಿಲಿಂದ ಬಂಡ್ಗೆಲ್ ಸರಸ್ತಾನ್. ಇದು ನೋಡಿದ್ ರಾಜಾಗ ಮತ್ತ ರಾಜಾನ್ ಸೈನಿಕುರಿಗೆಲ್ಲ ಬೊಕ್ಕೊಳ್ ತಾಜೂಬ್ ಆಯ್ತಿ ಆ ಮ್ಯಾಗ್ ಎಲ್ಲರೂ ನೀರ್ ಕುಡಿತಾರ್, ಆನಿಗಿ ಒಂಟಿಗಿ, ಕುದುರಿಗಿ ಎಲ್ಲಾಕಭೀ ನೀರ ಕುಡುಸ್ತಾರ್. ಇಸ್‌ಮಂದಿ ಎಲ್ಲಾ ಕೊಂಡುರ್ ಭೀ ಗುಂಡುದಾಗಿಂದ ನೀರ ಸರೆಲ್ದೆಹೋಯ್ತಿ. ಎಲ್ಲರು ನೀರ್ ಕೊಂಡಿನ ಮ್ಯಾಕ್ ಮುಂದುಕ್ ಹೊಂಟುರ್. ಬರ್ತಾ ಬರ್ತಾ ಹಾದ್ಯಾಗ ಒಂದ ಮೊಲಾ ನಾಯ್ಗಿ ಹಿಂಬಳಿ ಹತ್ತಿತ್ತು. ಇದುಭೀ ನೋಡಿ ರಾಜಾಗ್ ಬೊಕ್ಕೊಳ್ ವಿಚಿತ್ರ ಅನ್ನುಸ್ತು. ಅಲ್ಲಿ ನೋಡ್ದುರ್ ಒಂದು ಸಣ್ಣ ಬಡ್ಗಿ ದೂಡ್ಡ ಬಂಡೆಗಲ್ ಸರಿಸ್ತು. ಇಲ್ಲಿ ನೋಡ್ದುರ್ ಮೊಲನೇ ನಾಯ್ಗಿ ಹಿಂಬಳಿ ಹತ್ಯಾದ ಅಲಾ ಇದೊಂದು 'ಪುಣ್ಯದ ಭೂಮಿನೆ' ಇದ್ದಿರಬೇಕ್, ಈಲ್ಲೆಲ್ಲ ಕುರುಬನ ಬಡ್ಗಿ ಓಡಾಡಿದ್ ಜಾಗಾನೆ ಅದಾ. ಮತ್ತ ಇಲ್ಲೊಂದು ಖಿಲ್ಲಾ ಕಟ್ಟಿ ರಾಜಾಸ್ಥಾಪನಾ ಮಾಡಬೇಕ್ ಅಂತ ರಾಜಾ ಖಿಲ್ಲಾ ಕಟ್ತಾನ್.

ಕೋಟೆಯ ನಿರ್ಮಾಣ ಕುರಿತಂತೆ ಸುಭಾಷರಾವ್ ಅಲ್ಲಾಪುರೆಯವರು ಮೌಖಿಕವಾಗಿ ಹೇಳಿರುವ ಐತಿಹ್ಯವನ್ನು ಸರಳಗನ್ನಡದಲ್ಲಿ ಈ ಕೆಳಗಿನಂತೆ ತಿಳಿಸಲು ಪ್ರಯತ್ನಿಸಲಾಗಿದೆ.

ಒಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅವನು ತುಂಬಾ ಬುದ್ಧಿವಂತನು, ಚತುರನು, ಪಾರಮಾರ್ಥಿಕ ಜ್ಞಾನವನ್ನು ಹೊಂದಿರುವವನು ಆಗಿದ್ದನು. ಅವನು ಒಂದು ದಿನ ತನ್ನ ರಾಜದರ್ಬಾರಿನಲ್ಲಿ ಅಷ್ಟ ಪ್ರಧಾನಿಗಳನ್ನು ಹಾಗೂ ಅಧಿಕಾರಿಗಳನ್ನು ಕರೆಯಿಸಿ, ಪೂರ್ವದಿಕ್ಕಿನಲ್ಲಿ ಯಾವ ಯಾವ ರಾಜರ ದೇಶಗಳಿವೆ, ಚಮತ್ಕಾರಗಳಿವೆ, ಮಹಿಮೆಗಳಿವೆ, ಎಷ್ಟು ದೇವಸ್ಥಾನಗಳಿವೆ, ಯಾವ ಸ್ಥಳದಲ್ಲಿ ಯಾವ ಚಮತ್ಕಾರವಿದೆ, ಅದ್ಭುತಗಳಿವೆ, ಯಾವ ಪೀರ ಪೈಗಂಬರ ದೇವಸ್ಥಾನಗಳಿವೆ ಎಂಬುವುದನ್ನು ಅವರೊಂದಿಗೆ ಸಮಾಲೋಚಿಸಿ, ಒಂದು ದಿನ ಜೋಯಿಸರನ್ನು ಕರೆಯಿಸಿ ಮುಹೂರ್ತ ಕೇಳುತ್ತಾನೆ. ಅದಕ್ಕೆ ಜೋಯಿಸರು ಹಸ್ತ ನಕ್ಷತ್ರ ಮುಹೂರ್ತ ಚೆನ್ನಾಗಿದೆ ಎಂದು ಹೇಳುತ್ತಾರೆ. ಅದಕ್ಕೆ ಅರಸನು ತನ್ನ ಸಮಸ್ತ ಸೈನಿಕರೊಂದಿಗೆ ಪ್ರವಾಸವನ್ನು ಕೈಗೊಂಡನು. ರಾಜನು ದೇಶದ ಎಲ್ಲ ಊರುಗಳನ್ನು ಪಟ್ಟಣಗಳನ್ನು ನೋಡುತ್ತಾ ಪ್ರಯಾಣ ಬೆಳೆಸಿದನು. ಪ್ರಯಾಣ ಬೆಳೆಸಿ ಊರು-ಕೇರಿ ಕಾಡು-ಮೇಡುಗಳಲ್ಲಿ ಸುತ್ತಿ ಕೊನೆಗೆ ಬಿದಿರು ಘಟವಿರುವ ಪ್ರದೇಶಕ್ಕೆ ಬಂದನು. ತನ್ನ ಸೈನಿಕರು ಮತ್ತು ತಾನು ಒಂದು ಮರದಡಿ ವಿಶ್ರಾಂತಿಗಾಗಿ ಕುಳಿತರು. ರಾಜನು ಮತ್ತು ಅವನ ಸೈನಿಕರು ಕುಳಿತಿರುವ ಪ್ರದೇಶ ನದಿಯ ದಂಡೆ ಪ್ರದೇಶವಾಗಿತ್ತು. ಅರಸನು ಆ ಪ್ರದೇಶವನ್ನು ನೋಡಿ ಅಲ್ಲೊಂದು ಕೋಟೆ ಕಟ್ಟಬೇಕು ಎಂದು ತಿಳಿದು ಒಂದು ದಿನ ತನ್ನ ಸೈನಿಕರನ್ನೆಲ್ಲ ಕರೆದು ತಾನು ಕೋಟೆ ಕಟ್ಟಬೇಕು ಎಂಬ ವಿಷಯದ ಬಗ್ಗೆ ತಿಳಿಸಿ, ನನಗೆ ಈ ಪ್ರದೇಶವು ತುಂಬಾ ಹಿಡಿಸಿದೆ, ಅದಕ್ಕೆ ಇಲ್ಲೊಂದು ಕೋಟೆ ನಿರ್ಮಿಸಬೇಕೆಂಬ ಆಸೆ ಇದೆ. ನೀವೆಲ್ಲ ನಾಳೆಯಿಂದಲೇ ಕೋಟೆ ಕಟ್ಟಲು ಪ್ರಾರಂಭಿಸಿ ಎಂದನು. ಸೈನಿಕರು ರಾಜನ ಆಜ್ಞೆ ಹೊರಡುವುದೇ ತಡ ಕೋಟೆಯನ್ನು ಕಟ್ಟಲಿಕ್ಕೆ ಪ್ರಾರಂಭಿಸಿದರು. ಕೋಟೆಯನ್ನು ಕಟ್ಟುತ್ತಾ ಅರ್ಧದವರೆಗೆ ಕಟ್ಟಿದರು. ಒಂದು ದಿನ ತುಂಬಾ ಮಳೆಯು ಬರುತ್ತದೆ. ಮಳೆಯಿಂದ ಹಳ್ಳ-ಕೊಳ್ಳ, ಕೆರೆ-ತೊರೆ

(ನದಿ) ಗಳೆಲ್ಲ ತುಂಬಿ ಹರಿಯುತ್ತವೆ. ಆಗ ರಾಜನು ಕಟ್ಟಿಸುತ್ತಿದ್ದ ಕೋಟೆಯು ನೀರಿನಲ್ಲಿ ಮುಳುಗಿ ಹೋಯಿತು. ನೀರಲ್ಲಿ ಮುಳುಗಿದ ಕೋಟೆಯ ಒಂದು ಕುಂಬಿ ಮೇಲೆ ಕಾಗೆಯೊಂದು ಕುಳಿತು ನೀರು ಕುಡಿಯಲು ಪ್ರಾರಂಭಿಸಿತ್ತು. ಕಾಗೆಯು ನೀರು ಕುಡಿಯುವುದನ್ನು ನೋಡಿದ ರಾಜನು ಈ ಸ್ಥಳ ಅಪಶಕುನವೆಂದು ತಿಳಿದು ಅಲ್ಲಿಂದ ರಾಜನು ಅವನ ಎಲ್ಲ ಆಳುಗಳು (ಸೈನಿಕರು) ಕೋಟೆಯನ್ನು ಕಟ್ಟಲು ಬೇಕಾಗಿರುವ ಗುದ್ದಲಿ, ಸಲಕಿ, ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ಅರಸನು ಮತ್ತು ಅವನ ಸೈನ್ಯಪರಿವಾರವೆಲ್ಲ ಹೊರ ಬರುತ್ತಿರುವಾಗ ದಾರಿಯಲ್ಲಿ ರಾಜನಿಗೆ ಬರೀ ಬಿದಿರು ಘಟವಿರುವ ಪ್ರದೇಶ ಸಿಕ್ಕಿತು. ಆಗ ಅರಸನಿಗೆ ಮತ್ತು ಅವನ ಸೈನ್ಯಕ್ಕೆಲ್ಲ ತುಂಬಾ ನೀರಡಿಕೆಯಾಯಿತು. ಅವರು ನೀರಿಗಾಗಿ ಇಡೀ ಬಿದಿರು ಘಟವೆಲ್ಲ ಶೋಧ ಮಾಡುತ್ತಾರೆ. ಆಗ ಅಲ್ಲೆ ದೂರದಲ್ಲಿ ಒಬ್ಬ ಕುರಿಕಾಯುವ ವೃದ್ಧನು ಕಾಣಿಸುತ್ತಾನೆ. ಆಗ ಅರಸ ಮತ್ತು ಅವನ ಸೈನಿಕರು ಆ ಕುರಿಕಾಯುವ ಕುರುಬನ ಹತ್ತಿರ ಹೋಗಿ 'ಏನಪ್ಪ ಇಲ್ಲಿ ಕುಡಿಯುವುದಕ್ಕೆ ನೀರು ಸಿಗುತ್ತದೆಯೇ' ಎಂದು ಕೇಳಿದರು. ಅದಕ್ಕೆ ಕುರಿ ಕಾಯುವ ವೃದ್ಧನು ಹೇಳುತ್ತಾನೆ. 'ಇಲ್ಲೆ ಸ್ವಲ್ಪ ದೂರದಲ್ಲೇ ಒಂದು ಚಿಕ್ಕದಾದ ಕುಂಡವಿದೆ ಅದರ ಮೇಲೆ ಒಂದು ಕಲ್ಲನ್ನು ಮುಚ್ಚಲಾಗಿದ್ದು ಅದನ್ನು ಪಕ್ಕಕ್ಕೆ ಸರಿಸಿದರೆ ಅದರ ಕೆಳಗೆ ನೀರು ಇದೆ ಅದನ್ನು ಕುಡಿಯಬಹುದು' ಎನ್ನುತ್ತಾನೆ. 'ನಮ್ಮ ಸೈನ್ಯಪರಿವಾರಕ್ಕೆಲ್ಲ ಸಾಕಾಗುತ್ತದಾ ಆ ನೀರು' ಎಂದು ಅರಸನು ಕೇಳುತ್ತಾನೆ. ಅದಕ್ಕೆ ಕುರುಬ ವೃದ್ಧನು ಸಾಕಾಗುತ್ತದೆ ಹೋಗಿ ಕುಡಿಯಿರಿ ಎನ್ನುತ್ತಾನೆ. ಅದಕ್ಕೆ ಅರಸನ ಪರಿವಾರವೆಲ್ಲ ಹೋಗಿ ನೀರಿನ ಮೇಲೆ ಮುಚ್ಚಿದ ಬಂಡೆಗಲ್ಲನ್ನು ಸರಿಸಲಿಕ್ಕೆ ಪ್ರಯತ್ನಿಸುತ್ತಾರೆ. ಆದರೆ ಆ ಬಂಡೆಗಲ್ಲು ತನ್ನ ಸ್ಥಳ ಬಿಟ್ಟು ಸ್ವಲ್ಪವೂ ಸರಿಯಲಿಲ್ಲ. ಆದ್ದರಿಂದ ಅರಸನು ಪುನಃ ಕುರಿಕಾಯುವ ಕುರುಬನ ಹತ್ತಿರ ಬಂದು 'ನಮಗೆ ತುಂಬಾ ನೀರಡಿಕೆಯಾಗಿದೆ. ದಯವಿಟ್ಟು ಆ ಕುಂಡದ ಮೇಲೆ ಮುಚ್ಚಿರುವ ಬಂಡೆಗಲ್ಲನ್ನು ಸರಿಸಿದರೆ ತುಂಬಾ ಅನುಕೂಲವಾಗುತ್ತದೆ' ಎನ್ನುತ್ತಾನೆ. ಅದಕ್ಕೆ ಕುರಿಕಾಯುವ ಕುರುಬ ವೃದ್ಧನು 'ನೀವು ಅಷ್ಟೊಂದು ಸೈನಿಕರನ್ನೆ ತೆಗೆದುಕೊಂಡು ಹೋಗಿದ್ದರೂ ಆ ಬಂಡೆಗಲ್ಲು ಸರಿಯಲಿಲ್ಲ. ಅಂದರೆ ನನ್ನ ಒಬ್ಬನಿಂದ ಸರಿಸಲಿಕ್ಕೆ ಸಾಧ್ಯವೆ?' ಎಂದು ಪ್ರಶ್ನಿಸಿ 'ನಡೀರಿ ನಮ್ಮ ಪ್ರಯತ್ನ ನಾವು ಮಾಡೋಣ ಮುಂದೆ ದೇವರ ಇಚ್ಛೆ' ಎಂದು ನೀರಿರುವ ಕುಂಡದತ್ತ ಸಾಗುತ್ತಾರೆ. ಕುಂಡದ ಬಳಿ ಹೋದಬಳಿಕ ಕುರುಬನು ತನ್ನ ಕೈಯಲ್ಲಿರುವ ಕೊಲಿನಿಂದ ಕುಂಡದ ಮೇಲೆ ಮುಚ್ಚಿರುವ ಕಲ್ಲನ್ನು ಸರಿಸುತ್ತಾನೆ. ಆಗ ರಾಜನು ಮತ್ತು ಅವನ ಸೈನ್ಯ ಪರಿವಾರವೆಲ್ಲ ನೀರು ಕುಡಿದು ತೃಪ್ತರಾಗುತ್ತಾರೆ. ಎಷ್ಟು ನೀರು ಕುಡಿದರೂ ಆ ಚಿಕ್ಕ ಕುಂಡದಲ್ಲಿರುವ ನೀರು ಮುಗಿತಾನೆ ಇಲ್ಲ ಇದನ್ನು ನೋಡಿ ಅರಸನಿಗೆ ತುಂಬಾ ಸಂತೋಷ, ಆಶ್ಚರ್ಯವಾಯಿತು. ನಂತರ ಅರಸನ ಸೈನ್ಯ ಪರಿವಾರವೆಲ್ಲ ನೀರು ಕುಡಿದ ಬಳಿಕ ಮುಂದೆ ಸಾಗಿದರು. ಸ್ವಲ್ಪ ಮುಂದೆ ಹೋಗಿದ ಬಳಿಕ ಮೊಲವೊಂದು ನಾಯಿಯನ್ನು ಬೆನ್ನೆಟ್ಟಿಸಿಕೊಂಡು ಹೋಗುತ್ತಿತ್ತು. ಅರಸನಿಗೆ ಇದನ್ನು ನೋಡಿ ತುಂಬಾ ಆಶ್ಚರ್ಯವಾಯಿತು. ಅಲ್ಲಿ ನೋಡಿದರೆ ಕುರುಬನ ಕೈಯಲ್ಲಿರುವ ಕೋಲು ಒಂದು ದೊಡ್ಡ ಬಂಡೆಗಲ್ಲನ್ನು ಎತ್ತಿ ಹಾಕಿತು. ಇಲ್ಲಿ ನೋಡಿದರೆ ಮೊಲವೇ

ನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿದೆ. ಈ ಪ್ರದೇಶವು ಒಂದು ಅಸಾಮಾನ್ಯ ಪ್ರದೇಶ. ಇದೊಂದು ಪುಣ್ಯಭೂಮಿಯಾಗಿದೆ. ಇಂಥ ಪ್ರದೇಶದಲ್ಲಿ ರಾಜ್ಯವನ್ನು ಸ್ಥಾಪಿಸಿ ಕೋಟೆಯನ್ನು ಕಟ್ಟಬೇಕು ಎಂದು ತಿಳಿದು ಬಿದಿರು ಘಟವನ್ನೆಲ್ಲ ಕಡಿದು ಒಂದು ಅಭೇದ್ಯವಾದ ಕೋಟೆಯನ್ನು ಕಟ್ಟಿಸಿದನು ಎಂದು ಇಲ್ಲಿನ ವಕ್ತೃರು ಹೇಳುತ್ತಾರೆ.

ಎರಡನೆಯ ಐತಿಹ್ಯ

ಎರಡನೆಯ ಐತಿಹ್ಯವನ್ನು ನಾಗಶೆಟ್ಟಿ ಮಹಾದೇವಪ್ಪ[2] ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಈ ಐತಿಹ್ಯವನ್ನು ಕಥೆಯ ರೂಪದಲ್ಲಿ ಹೇಳಿದ್ದಾರೆ.

> ಎರಡನೆಯ ಐತಿಹ್ಯದಲ್ಲೂ ಮೊದಲಿನ ಐತಿಹ್ಯದಂತೆ ಕಥೆಯು ಪ್ರಾರಂಭಗೊಳ್ಳುತ್ತದೆ. ಒಬ್ಬ ಅರಸನಿದ್ದು ಅವನು ಬೇಟೆಯಾಡಲು ಬಿದಿರು ಘಟಕ್ಕೆ ಬರುವುದು ಹೀಗೆ ಕಥೆಯು ಪ್ರಾರಂಭಗೊಳ್ಳುತ್ತದೆ. ಅರಸನಿಗೆ ಕಾಡಿನ ಮಧ್ಯ ಬಂದಾಗ ಬಾಯಾರಿಕೆಯಾಗುವುದು. ನಂತರ ಒಂದು ಸಣ್ಣ ಕುಂಡದಲ್ಲಿನ ನೀರು ಕುಡಿಯುವುದು. ಮತ್ತೆ ಬೇಟೆ ಮುಂದುವರೆಸುವುದು. ಹೀಗೆ ಕಥೆಯೆಲ್ಲ ಮೊದಲಿನ ಐತಿಹ್ಯದಂತೆ ಮುಂದುವರೆಯುತ್ತದೆ. ಆದರೆ ಇಲ್ಲಿ ಪ್ರಾಣಿಗಳು ಮಾತ್ರ ಬೇರೆ ಬೇರೆಯಾಗಿವೆ. ಮೊದಲನೆಯ ಐತಿಹ್ಯದಲ್ಲಿ ಕಾಡಿನಲ್ಲಿರುವ ಮೊಲ ಮತ್ತು ನಾಯಿ ಎಂಬ ಎರಡು ಪ್ರಾಣಿಗಳು ಕಾಣಿಸಿಕೊಳ್ಳುತ್ತವೆ. ಆದರೆ ಈ ಎರಡನೆ ಐತಿಹ್ಯದಲ್ಲಿ ಅರಸನು ತನ್ನ ಜೊತೆಯಲ್ಲೇ ತಂದಿರುವ ನಾಯಿಯನ್ನು ಕಾಡಿನಲ್ಲಿರುವ ಮೊಲದ ಮೇಲೆ ಬೇಟೆಗಾಗಿ ಬಿಡುತ್ತಾನೆ. ಇಲ್ಲಿಯು ಸಹ ಪ್ರಬಲ ಪ್ರಾಣಿಯ ಮೇಲೆ ದುರ್ಬಲ ಪ್ರಾಣಿಯು ದಾಳಿ ಮಾಡಿ ಸೋಲಿಸುತ್ತದೆ. ಹೀಗೆ ಎರಡನೆಯ ಐತಿಹ್ಯದಲ್ಲಿ ಕಂಡುಬರುತ್ತದೆ.

ಮೂರನೆಯ ಐತಿಹ್ಯ

ಮೂರನೆಯ ಐತಿಹ್ಯವನ್ನು ಶಿವರಾಯ್ ಒಡೆಯರ್[3] ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಈ ಐತಿಹ್ಯವನ್ನು ಕಥೆಯ ರೂಪದಲ್ಲಿ ಹೇಳಿದ್ದಾರೆ.

> ಮೂರನೆಯ ಐತಿಹ್ಯವು ಕೂಡ ಮೊದಲನೆ ಮತ್ತು ಎರಡನೆಯ ಐತಿಹ್ಯದಂತೆ ಪ್ರಾರಂಭ ಗೊಳ್ಳುತ್ತದೆ. ಐತಿಹ್ಯದಲ್ಲಿ ಯಾವುದೇ ರೀತಿಯ ಬದಲಾವಣೆಗಳು ಕಂಡುಬರುವುದಿಲ್ಲ. ಆದರೆ ಮೂರನೆಯ ಐತಿಹ್ಯದಲ್ಲಿ ಅರಸನು ಬೇಟೆಗಾಗಿ ಈ ಬಿದಿರು ಘಟಕ್ಕೆ ಬಂದಿರು ವಾಗ ಹುಲಿಯೊಂದಕ್ಕೆ ಚಿಗರೆಯು ಬೆನ್ನಟ್ಟಿಕೊಂಡು ಹೋಗುತ್ತಿರುವುದನ್ನು ಅರಸನು ನೋಡುತ್ತಾನೆ. ಕಥೆಯೆಲ್ಲ ಮೊದಲೆರಡು ಐತಿಹ್ಯಗಳಂತೆಯೇ ಮುಂದುವರೆಯುತ್ತದೆ.

ಆದರೆ ಪ್ರಾಣಿಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಪ್ರಬಲ ಪ್ರಾಣಿಯ ಮೇಲೆ ಸಣ್ಣದಾದ ಪ್ರಾಣಿಯು ಬೇಟೆಯನ್ನು ಮಾಡಿರುವುದು ಅರಸನು ನೋಡಿ ಇದು ಒಂದು ವಿಚಿತ್ರ ಘಟನೆಯಾಗಿದ್ದು, ಈ ಭೂಮಿಯಲ್ಲಿ ಯಾವುದೋ ಒಂದು ಪ್ರಬಲವಾದ ಶಕ್ತಿ ಇದೆ ಎಂದು ತಿಳಿದು ಒಂದು ಪುಣ್ಯ ಪವಿತ್ರ ಸ್ಥಳ ಇದಾಗಿದ್ದು, ಇಲ್ಲಿ ಕೋಟೆಯನ್ನು ಕಟ್ಟಿ ರಾಜಕೀಯ ಮಾಡಬೇಕು ಎಂದು ಅರಸನು ಕೋಟೆಯನ್ನು ಕಟ್ಟುತ್ತಾನೆ. ಆ ಕೋಟೆಯೇ ಈಗೀರುವ ಬೀದರ್‌ನ ಕೋಟೆ ಎಂದು ಜನಪದರು ಐತಿಹ್ಯಗಳನ್ನು ಹೇಳುತ್ತಾರೆ.

ಜನಪದರು ಕೋಟೆಯ ನಿರ್ಮಾಣ ಕುರಿತಂತೆ ಹೇಳಿರುವ ಇನ್ನೊಂದು ಐತಿಹ್ಯವು ತುಂಬಾ ರೋಮಾಂಚಕವಾಗಿದೆ. ಅರಸನಿಗೆ ಕೋಟೆ ಕಟ್ಟುತ್ತಿರುವಾಗ ಹಣ ಕಡಿಮೆ ಬೀಳುತ್ತದೆ. ಆಗ ಅರಸನಿಗೆ ಕುರುಬ ಬೊಮಗೊಂಡನು ಹಣವನ್ನು ನೀಡಿ ಕೋಟೆ ಕಟ್ಟಲು ನೆರವಾಗುತ್ತಾನೆ. ಆ ಹಣ ಬೊಮಗೊಂಡ ಹೇಗೆ ನೀಡಿದನು? ಅಷ್ಟೊಂದು ಹಣ ಎಲ್ಲಿಂದ ಬಂತು? ಎಂಬುದನ್ನೆಲ್ಲ ಈ ಐತಿಹ್ಯದಲ್ಲಿ ವ್ಯಕ್ತಪಡಿಸಲಾಗಿದೆ.

ನಾಲ್ಕನೆಯ ಐತಿಹ್ಯ

ನಾಲ್ಕನೆಯ ಐತಿಹ್ಯವನ್ನು ಆಡುಭಾಷೆಯಲ್ಲಿ ಹೇಳದೆ ಕಥೆ ರೂಪದಲ್ಲಿ ಶಾಂತಲಿಂಗಸ್ವಾಮಿ[6] ಇವರು ಹೇಳಿರುವುದನ್ನು ದಾಖಲಿಸಲಾಗಿದೆ.

ಬೀದರ್ ಕೋಟೆ ನಿರ್ಮಾಣವಾಗುವ ಮುಂಚೆ ಈ ಪ್ರದೇಶ ಘಟದಿಂದ ಆವರಿಸಿಕೊಂಡಿತು. ಅಲ್ಲಿ ಬೊಮಗೊಂಡನೆಂಬ ಕುರುಬನಾಯಕ ದಿನಾ ಕುರಿಗಳನ್ನು ಮೇಯಿಸುತ್ತಿದ್ದನು. ಅಲ್ಲಿ ಒಂದು ಚಿಕ್ಕ ಗುಂಡ (ಕುಂಡ) ಇತ್ತು. ಅಲ್ಲೇ ಅವನು ತನ್ನ ಕುರಿಗಳಿಗೆ ನೀರು ಕುಡಿಸುತ್ತಿದ್ದ. ಅಲ್ಲಿಂದ ಸ್ವಲ್ಪ ದೂರದಲ್ಲಿದ್ದ ಕಾಳಿಕಾದೇವಿ ಗುಡಿಗೆ ಗೋಸಾಯಿ ಎಂಬ ಒಬ್ಬ ಸಿದ್ಧಿಪುರುಷ ಬಂದನು. ಬೊಮಗೊಂಡನು ಕೂಡ ಒಬ್ಬ ಸಿದ್ಧಿ ಪುರುಷನೆ ಆಗಿದ್ದನೆಂದು ಗೋಸಾಯಿ ತಿಳಿದುಕೊಂಡಿದ್ದ. ಹೇಗಾದರೂ ಮಾಡಿ ಬೊಮಗೊಂಡನ ವಿಶ್ವಾಸವನ್ನು ಸಂಪಾದಿಸಿ ತನ್ನ ಹೋಮಕ್ಕೆ ಬಲಿ ಕೊಟ್ಟು ಬಂಗಾರದ ಪುತ್ಥಳಿಯನ್ನಾಗಿ ಮಾಡಬೇಕು ಎಂದು ಅಂದುಕೊಂಡನು. ಹೀಗೆ ಒಂದು ದಿವಸ ಬೊಮಗೊಂಡನಿಗೆ ಕರೆದು 'ನಾನೊಂದು ಹೋಮ ಮಾಡಬೇಕು. ಅದಕ್ಕೆ ನಿನ್ನ ಸಹಕಾರ ಬೇಕು' ಎಂದು ಕೇಳಿಕೊಂಡ. ಆಗ ಬೊಮಗೊಂಡ ಈ ಹೋಮದಿಂದ ಏನು ಲಾಭ? ಯಾಕೆ ಮಾಡಬೇಕು? ಎಂದು ಪ್ರಶ್ನೆ ಹಾಕಿದ. ಅದಕ್ಕೆ ಕುಟಿಲ ಗೋಸಾಯಿ ಹೀಗೆ ಹೇಳುತ್ತಾನೆ. 'ಈ ಹೋಮದಿಂದ ನಮ್ಮ ಕಣ್ಣಿಗೆ ದೇವರು ಕಾಣಿಸುತ್ತಾನೆ. ಮತ್ತೆ ಮಳೆ, ಬೆಳೆ ಚೆನ್ನಾಗಿ ಆಗುತ್ತದೆ. ಇದರಿಂದ ಜನರು ಸುಖವಾಗಿ ಬಾಳುತ್ತಾರೆ' ಎಂದು ಉತ್ತರಿಸುತ್ತಾನೆ. ಸರಳ ಮನಸ್ಸಿನವನಾದ ಬೊಮಗೊಂಡ ಪರಮಾತ್ಮನನ್ನು ಕಾಣುವ ಹಂಬಲದಿಂದ ಜೊತೆಗೆ ಮೇಲಿಂದ ಮೇಲೆ ಬರುತ್ತಿರುವ ಬರಗಾಲ ತಪ್ಪಿ ಜನರಿಗೆ ಒಳ್ಳೆಯದಾಗಬಹುದು ಎಂಬ ದೃಷ್ಟಿಯಿಂದ ಗೋಸಾಯಿಯ ಮಾತನ್ನು ಒಪ್ಪಿಕೊಳ್ಳುತ್ತಾನೆ.

'ಹೇಳು ಈ ಧರ್ಮ ಕಾರ್ಯಕ್ಕೆ ನನ್ನಿಂದ ಏನು ಸಹಾಯ ಬೇಕು ಕೇಳು' ಎನ್ನುತ್ತಾನೆ. ಅದಕ್ಕೆ ಗೋಸಾಯಿ ನೀನೊಬ್ಬ ಕುರಿ ಕಾಯುವ ಕುರುಬ (ಗೊಂಡ). ಕುರಿ ಕಾಯುವಾಗ ನಿನಗೆ ಅನೇಕ ಜಾತಿಯ ಗಿಡಗಳು ಜಡಿ ಬೂಟಿಗಳು, ಎಲೆ-ಕಾಯಿ ಹೂಗಳು ಕಾಣಿಸುತ್ತವೆ. ಆದ್ದರಿಂದ ನಾ ಹೇಳುವ ಎಲ್ಲ ರೀತಿಯ ಗಿಡದ ಕಟ್ಟಿಗೆಗಳನ್ನು ಸಂಗ್ರಹಿಸಿ ನನಗೆ ತಂದು ಕೊಡು ಎಂದು ಹೇಳಲು ಇದೊಂದು ಧರ್ಮಕಾರ್ಯವೆಂದು ನಂಬಿ ಕೆಲವು ದಿನಗಳಲ್ಲಿಯೇ ಅವುಗಳನ್ನು ಸಂಗ್ರಹಿಸಿ ಗೋಸಾಯಿಗೆ ಕೊಟ್ಟನು.

ಹೋಮದ ತಯಾರಿ ನಡೆಸಿದ ಗೋಸಾಯಿಯ ಮನಸ್ಸಿನಲ್ಲಿ ನಡೆಯುವ ತಂತ್ರವೇ ಬೇರೆಯಾಗಿತ್ತು. ಹೇಗಾದರೂ ಮಾಡಿ ಈ ಹೋಮಕ್ಕೆ ಬೊಮಗೊಂಡನನ್ನು ಬಲಿ ಕೊಟ್ಟು ಬಂಗಾರದ ಪುತ್ಥಳಿಯಾಗಿ ಮಾಡಿ ತನ್ನ ವಶದಲ್ಲಿಟ್ಟುಕೊಳ್ಳಬೇಕು ಎಂದಿದ್ದ. ಇದರ ಯಾವುದೇ ಸುಳಿವು ಇರದ ಬೊಮಗೊಂಡ ಎಲ್ಲ ರೀತಿಯ ಸಹಾಯ ಮಾಡಲು ಮುಂದಾದನು. ಇಬ್ಬರು ಕೂಡಿಯೇ ಹೋಮದ ತಯಾರಿ ಮಾಡಿದರು. ಹೋಮದ ಸಂದರ್ಭದಲ್ಲಿ ಬೊಮಗೊಂಡನಿಗೆ ತನ್ನ ಜೊತೆಯಲ್ಲಿಯೇ ಇರಲು ಹೇಳಿದನು. ಇಬ್ಬರು ಸ್ನಾನ ಮಾಡಿ ಹೋಮವನ್ನು ಸುಡತೊಡಗಿದರು. ಹೋಮಕ್ಕೆ ಸುತ್ತು ಹಾಕುವ ನೆಪದಿಂದ ಬೊಮಗೊಂಡನಿಗೂ ಎದ್ದು ಸುತ್ತು ಹಾಕಲು ಹೇಳಿದ. ಒಂದೆರಡು ಸುತ್ತು ಹಾಕುವ ಹೊತ್ತಿಗೆ ಗೋಸಾಯಿ ಬೊಮಗೊಂಡನನ್ನು ಎತ್ತಿ ಹೋಮಕ್ಕೆ ಹಾಕಲು ಪ್ರಯತ್ನಿಸಿದ. ದಿಗ್ಭ್ರಮೆಗೊಂಡ ಬೊಮಗೊಂಡ ತನ್ನನ್ನು ಬೆಂಕಿಗೆ ಹಾಕಲು ನೋಡುತ್ತಿರುವ ಗೋಸಾಯಿಯನ್ನು ಕಾಯದೆ ಇವನೇ ಗೋಸಾಯಿಯನ್ನು ಹೋಮಕ್ಕೆ ನೂಕಿದ. ಕಂಗಾಲಾದ ಗೋಸಾಯಿ ಅಲ್ಲೆ ಇರುವ ಗಿಡ ಮೂಲಿಕೆ ರಸವನ್ನು ತನ್ನ ಮೇಲೆ ಹಾಕುವುದಾಗಿ ಹೇಳಿದ. ರಸ ಅವನ ಮೇಲೆ ಹಾಕುವಷ್ಟರಲ್ಲಿಯೇ ಕೆಲವೇ ಕೆಲವು ಕ್ಷಣಗಳಲ್ಲಿ ಗೋಸಾಯಿ ಬಂಗಾರದ ಮೂರ್ತಿಯಾಗಿ ಪರಿವರ್ತನೆಗೊಂಡ.

ಕಥೆಯ ರೂಪದಲ್ಲಿರುವ ಈ ಐತಿಹ್ಯವು ಧರ್ಮಾಂಧನಾದ ಗೊಸಾಯಿಯನ್ನು ಬೊಮಗೊಂಡನು ಸುಟ್ಟು ತಾನೊಬ್ಬ ಧರ್ಮವಂತನಾಗಿ ಮೆರೆದಿದ್ದಾನೆ. ಬಂಗಾರದ ಪುತ್ಥಳಿ ಮತ್ತು ಬೊಮಗೊಂಡನೊಂದಿಗೆ ಬೆಸೆದುಕೊಂಡಿರುವ ಈ ಐತಿಹ್ಯವು ಒಬ್ಬ ಧಾರ್ಮಿಕ ಸಂತ ರಾಜಪ್ರಭುತ್ವಕ್ಕೆ ಬೆಂಬಲ ನೀಡುವ ಮೂಲಕ ರಾಜ್ಯದಲ್ಲಿ ಅಧಿಕೃತವಾಗಿ ತನ್ನ ಪ್ರಭಾವವನ್ನು ಬೆಳೆಸಿಕೊಳ್ಳಲು ಸಹಾಯವಾಗುತ್ತದೆ. ಇಂಥ ಧಾರ್ಮಿಕ ಸಂತನಿಗೆ ದಾನ ದತ್ತಿಗಳನ್ನು ನೀಡುವ ಮೂಲಕ ಅವರನ್ನು ಆರಾಧಿಸುವ ಜನ ಸಮುದಾಯದ ಬೆಂಬಲವನ್ನು ಪಡೆಯಲು ರಾಜಪ್ರಭುತ್ವ ಪ್ರಯತ್ನಿಸುತ್ತದೆ.

ಕೆ.ಎಂ.ಮೈತ್ರಿಯವರು ಕೂಡ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಹಣ ಕಡಿಮೆ ಬಿದ್ದಾಗ ಬಂಗಾರದ ಪುತ್ಥಳಿ ಮಾರಿ ಕೋಟೆ ನಿರ್ಮಿಸಲಾಯಿತು ಎಂಬುದರ ಬಗ್ಗೆ 'ಸುಲ್ತಾನ ಸುರುಳಿ'ಯಲ್ಲಿ ಉಲ್ಲೇಖಿಸಿದ್ದಾರೆ. ಅದನ್ನು ಈ ಅಧ್ಯಾಯದಲ್ಲಿ ದಾಖಲಿಸಲಾಗಿದೆ.

ಸುಲ್ತಾನ-ಎ-ಅಹ್ಮದ್ ಶಹ ಬೀದರಿನ ಕೋಟೆಯನ್ನು ನಿರ್ಮಿಸುತ್ತಿದ್ದಾಗ ಅರಸನಿಗೆ ಕೋಟೆ ಕಟ್ಟಲು ಹಣ ಕಡಿಮೆ ಬಿದ್ದಿತಂತೆ. ಅಂಥ ಸಮಯದಲ್ಲಿ ಬೊಮಗೊಂಡನೆಂಬ ಕುರುಬನು ತನ್ನಲ್ಲಿರುವ ಬಂಗಾರದ ಪುತ್ಥಳಿಯನ್ನು ಕಡಿದು ದಿನಕ್ಕೆ ೩ ಲಕ್ಷ ರೂಪಾಯಿಗಳನ್ನು ಸತತವಾಗಿ ೧೨ ವರ್ಷಗಳ ಕಾಲ ಬೊಮಗೊಂಡನು ಅರಸನಿಗೆ ಕೋಟೆಯನ್ನು ಕಟ್ಟಲಿಕ್ಕೆ ಸಹಾಯ ಮಾಡಿದನೆಂಬ ಐತಿಹ್ಯವೊಂದು ಇದೆ (ಮೈತ್ರಿ, ೧೯೯೪: ೨೫).

ಪುತ್ಥಳಿಯು ಬೊಮಗೊಂಡನಿಗೆ ಎಲ್ಲಿಂದ ಬಂತು? ಅದನ್ನು ಯಾರು ಕೊಟ್ಟರು. ಯಾವ ಕಾರಣಕ್ಕಾಗಿ ಕೊಟ್ಟರು? ಎಂಬ ವಿಷಯಕ್ಕೆ ಬಂದಾಗ ಅದರ ಸುತ್ತಲೂ ವಕ್ತಾರರು ಐತಿಹಾಸಿಕ ಐತಿಹ್ಯವನ್ನು ಮೌಖಿಕವಾಗಿ ಈ ಮೇಲಿನ ರೀತಿ ಹೇಳುತ್ತಾರೆ.

ಈ ರೀತಿಯ ಕಥೆಗಳೆಲ್ಲವು ಕಾಲ್ಪನಿಕವಲ್ಲ. ಅದು ಇತಿಹಾಸದಲ್ಲಿ ನಡೆದು ಹೋದದ್ದೆ ಆಗಿರುತ್ತದೆ. ಇಂಥ ಐತಿಹ್ಯಗಳಲ್ಲಿ ಕೆಲವು ಸಂಗತಿಗಳು ಹುದುಗಿಕೊಂಡಿವೆ. ಪುರಾಣ, ಐತಿಹ್ಯ, ಹಾಗೂ ಸಾಮಾನ್ಯ ಕಥೆಗಳ ನಡುವೆ ಗೆರೆ ಎಳೆದಂತೆ ಸ್ಪಷ್ಟವಾದ ವ್ಯತ್ಯಾಸಗಳನ್ನು ಗುರುತಿಸಲು ಅಸಾಧ್ಯ ಇಲ್ಲಿ ಧರ್ಮಾಂಧನಾದ ಗೋಸಾಯಿಯು ನಿಧಿಯ ಆಸೆಗೆ ಬಿದ್ದು ನರಬಲಿಯನ್ನು ಕೊಡಲು ಹೊರಟ ವ್ಯಕ್ತಿಯನ್ನೇ ಬಲಿಗೆ ತಳ್ಳಿದ ಒಬ್ಬ ಐತಿಹ್ಯದ ಪುರುಷನು ಎನಿಸಿಕೊಂಡನು.

ಕೆರೆಯಲ್ಲಿರುವ ಪುತ್ಥಳಿಯ ಬಗ್ಗೆ ಮತ್ತು ಆ ಪುತ್ಥಳಿಯಿಂದಲೇ ಅರಸನಿಗೆ ಕೋಟೆಯನ್ನು ಕಟ್ಟಲಿಕ್ಕೆ ಬೊಮಗೊಂಡನು ಸಹಾಯ ಮಾಡಿದನೆಂಬುವುದಕ್ಕೆ ಐತಿಹ್ಯಗಳನ್ನಲ್ಲದೆ ಜಾನಪದ ಹಾಡೊಂದು ಕೂಡ ಕಂಡುಬರುತ್ತದೆ. ವಕ್ತಾರರಾದ ಗೋದಾವರಿ ಸದಾಶಿವ್[1] ಅವರು ಈ ರೀತಿಯ ಹಾಡೊಂದನ್ನು ಹಾಡುತ್ತಾರೆ.

ಬೀದರ್ ಕೋಟೆಯೊಳಗೆ ಐತಿ ಬೊಮಗೊಂಡನ ಕೆರೆಯು
ಶರಣು ಶರಣು ಬೊಮಗೊಂಡೇಶ ಭೂಮಿಗೆ ಬಂದ ಜಗದೀಶ
ಅಲ್ಲಿ ಸ್ನಾನ ಮಾಡಲು ದೊರೆಯುವುದು ನಿನಗೆ ಮುಕ್ತಿ
ತಮ್ಮ ದೊರೆಯುವುದು ಮುಕ್ತಿ
ಕೋಟಿ ನಡು ಕೆರೆ ಕಟಸ್ಯಾರ
ಇಲ್ಲಿ ಝಳಕಾ ಮಾಡು ಒಮ್ಮೆಯ್ಯಾರ
ಕೆರೆಯೊಳಗೆ ಬಂಗಾರ ಮೂರ್ತಿ ಇತ್ತಂತ
ಮೂರ್ತಿ ದಿವಸ ಮುಕುತ ಮಾರಿ
ಕೋಟಿ ಕಟಸ್ಯಾರ ಬರಗಾಲದಾಗ
ಮುಕುತ ಮಾರಿ ಅನ್ನ ದಾಸೋಹ ಮಾಡ್ಯಾರ

ಈ ಹಾಡಿನಲ್ಲಿ ಜನಪದರು ಕೋಟೆಯನ್ನು ಕಟ್ಟಲೂ ಸುಲ್ತಾನ್‌ನಾದ ಅಹಮದ್ ಶಹನಿಗೆ ಬೊಮಗೊಂಡನು ತನ್ನಲ್ಲಿರುವ ಬಂಗಾರದ ಮೂರ್ತಿಯನ್ನು ಕಟೆದು ಹಣ ನೀಡುತ್ತಾನೆ ಎಂಬ ಅಂಶವು ಒಳಗೊಂಡಿದೆ.

ಹಾಡಿನ ಮೊದಲನೆ ಸಾಲುಗಳು ಬೀದರ್ ಕೋಟೆಯ ಒಳಕೋಟೆಯಲ್ಲಿ ಬೊಮಗೊಂಡನ ಕೆರೆಯೊಂದಿದೆ ಎಂಬುದನ್ನು ಖಚಿತಪಡಿಸುತ್ತದೆ. ಕೆರೆಯ ಮಧ್ಯದಲ್ಲಿ ಬಾವಿಯೊಂದಿದೆ ಎಂದು ಐತಿಹ್ಯದಿಂದಲೇ ಗೊತ್ತಾಗುತ್ತದೆ. ಏಕೆಂದರೆ ಕೆರೆಯ ತುಂಬ ನೀರು ತುಂಬಿಕೊಂಡಿರುವುದರಿಂದ ಬಾವಿಯನ್ನು ಗುರುತಿಸುವುದು ಕಷ್ಟ. ಬಾವಿಯೊಳಗೆ ಬಂಗಾರದ ಮೂರ್ತಿಯಿದೆ ಎಂದು ಜನರು ಹೇಳುತ್ತಾರೆ. ಬಂಗಾರದ ಮೂರ್ತಿಗೆ ಕಾರಣ ಯಜ್ಞ ಮಾಡಿದ ಕುಂಡ. ಗೋಸಾಯಿ ಮತ್ತು ಬೊಮಗೊಂಡ ಸೇರಿ ಮಾಡಿದ ಯಜ್ಞದ ಕುಂಡವೇ ಆ ಬಾವಿಯಾಗಿರಬೇಕು. ದಿನ ಕಳೆದಂತೆ ಬಾವಿ ಮುಚ್ಚಿಕೊಂಡಾಗ ಅದರ ಮೇಲೆ ಈ ಕೆರೆ ಕಟ್ಟಿರಬಹುದೆಂದು ಐತಿಹ್ಯಗಳ ಆಧಾರದ ಮೇರೆಗೆ ಹೇಳಬಹುದು. ತನ್ನಲ್ಲಿರುವ ಆ ಬಂಗಾರದ ಮೂರ್ತಿಯನ್ನೆ ದಿನಾಲು ಕಟೆದು ಅದರಿಂದ ಬಂದ ಹಣವನ್ನು ಅರಸನಿಗೆ ಕೋಟೆ ಕಟ್ಟಲು ಸಹಾಯ ಮಾಡಿದನೆಂದು ತಿಳಿದುಬರುತ್ತದೆ. ಬರಗಾಲದ ಸಮಯದಲ್ಲಿ ಆ ಬಂಗಾರದ ಮೂರ್ತಿ ಅನ್ನದಾಸೋಹ ಕಾರ್ಯಕ್ಕಾಗಿ ಕೂಡ ಸಹಾಯಕವಾಗುತ್ತದೆ.

ಇತಿಹಾಸದ ರಚನೆಯಲ್ಲಿ ಲಿಖಿತ ಪರಂಪರೆಯನ್ನು ಅವಲಂಬಿಸಿ ಬಹುಸಂಖ್ಯಾತ ಜನಸಮುದಾಯದ ಭಾವನೆಗಳನ್ನು ಸಂಪೂರ್ಣ ಕಡೆಗಣಿಸಿ ನಾವು ಇಲ್ಲಿಯವರೆಗೆ ಸಾಕಷ್ಟು ತಪ್ಪುಗಳನ್ನು ಮಾಡಿದ್ದೇವೆ. ಆ ಲಿಖಿತ ಇತಿಹಾಸಗಳು ಅಪರಿಪೂರ್ಣ, ಪಾರ್ಶ್ವಿಕ, ಅರ್ಧ ಸತ್ಯಗಳನ್ನು ಒಳಗೊಂಡಿರುತ್ತವೆ ಎಂದು ಕಡೆಗಣಿಸುತ್ತಲೇ ಬರಲಾಗಿದೆ. ಆದರೆ ಎಷ್ಟೊ ಸಂದರ್ಭದಲ್ಲಿ ನಮಗೆ ಗೊತ್ತಿರದ ಹಾಗೆಯೇ ಜನಸಮುದಾಯದ ಭಾವನೆಗಳು ಮೌಖಿಕ ಇತಿಹಾಸವು ನಮ್ಮ ಇತಿಹಾಸ ರಚನೆಯಲ್ಲಿ ಸೇರಿಕೊಂಡಿರುತ್ತವೆ. ಅಲ್ಲದೆ ಅನೇಕ ಸಲ ಲಿಖಿತ ಆಧಾರಗಳು ಲಭ್ಯವಾಗದೆ ಇದ್ದಾಗ ಇಂಥ ಮೌಖಿಕ ಆಕರಗಳೇ ಇತಿಹಾಸ ರಚನೆಗೆ ಸಹಕಾರಿಯಾಗಿರುತ್ತವೆ. ಇಂಥ ಇತಿಹಾಸವನ್ನು ನಾವು ಕಡೆಗಣಿಸುವುದು ತಪ್ಪಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಎಲ್ಲಿಯೂ ಉಲ್ಲೇಖವಾಗಿರದ ಹೊಸ ವಿಷಯವನ್ನೇ ಇಂಥ ಮೌಖಿಕ ಇತಿಹಾಸವು ತಿಳಿಸುತ್ತದೆ. ಇತಿಹಾಸ ರಚನೆಯಲ್ಲಿ ಮೌಖಿಕ ಐತಿಹ್ಯಗಳನ್ನು ಆಕರಗಳ ರೂಪದಲ್ಲಿ ಬಳಸಿಕೊಳ್ಳುವುದರಲ್ಲಿ ತಪ್ಪೇನಿಲ್ಲ. ಇಂದು ಜಾನಪದವು ಐತಿಹಾಸಿಕ ಮೂಲ ಸಾಮಗ್ರಿಯಾಗಿದೆ.

ಅರಸನು ಅಲ್ಲಿನ ಭೌಗೋಳಿಕ ಮತ್ತು ನೀರಿನ ಸೌಲಭ್ಯಗಳಿರುವ ಭೂಮಿಯಲ್ಲೇ ಕೋಟೆಯನ್ನು ಕಟ್ಟಬೇಕು ಅಂದುಕೊಳ್ಳುತ್ತಾನೆ. ಅದರಂತೆ ಈ ಪ್ರದೇಶದ ಬಗ್ಗೆ ಅರಸನು ತನ್ನ ಸಂಸ್ಥಾನದ ಮತ್ತು ಆ ಪ್ರದೇಶದ ಗುರು ಹಿರಿಯರ ಸಲಹೆಗಳನ್ನು ಕೂಡ ಕೋಟೆ ನಿರ್ಮಿಸುವ ಪೂರ್ವದಲ್ಲಿ ಕೇಳುತ್ತಾನೆ. ಅವರಿಂದ ಶುಭ ಸೂಚನೆಗಳು ಬಂದ ಬಳಿಕವೇ ಈ ಬೀದರಿನ ಕೋಟೆಯನ್ನು ಕಟ್ಟಲು ಪ್ರಾರಂಭಿಸಿದನು. ಕೋಟೆ ಕೊತ್ತಲ ನಿರ್ಮಾಣದ ಪೂರ್ವದಲ್ಲಿ ನಡೆದ ನಾಯಿ ಮತ್ತು ಮೊಲ ಹುಲಿ ಮತ್ತು ಚಿಗರೆ

ಕುರುಬನು ಸಣ್ಣಕೊಂಡದ ನೀರನ್ನು ತನ್ನ ಇಡೀ ಸೈನ್ಯಕ್ಕೆ ಪೂರೈಸಿದ್ದು ಮತ್ತು ಕುರುಬನ ಕೈಯಲ್ಲಿರುವ ಬಡಿಗೆ (ಕೋಲಿನ) ಮಹಿಮೆಯನ್ನು ನೋಡಿ ಅರಸನು ಇದೊಂದು ಪುಣ್ಯ ಭೂಮಿ "ವೀರರ" ಭೂಮಿಯೆಂದು ತಿಳಿದು ಕೋಟೆಯನ್ನು ನಿರ್ಮಿಸಿದನು.

ಸಾಮಾನ್ಯವಾಗಿ ಕೋಟೆಗಳ ನಿರ್ಮಾಣಕ್ಕೆ ಭೌಗೋಳಿಕವಾಗಿ ದುರ್ಗಮವಾದ ಪ್ರದೇಶವೋ ಭಯಾನಕವಾದ ಕಾಡುಳ್ಳ ಪ್ರದೇಶವೋ, ನದಿಗಳ ತಟದ ಪ್ರದೇಶವೊ ಬಹಳ ಪ್ರಾಶಸ್ತ್ಯವಾದುದಾಗಿದೆ. ಆದರೆ ಬೀದರ್ ಕೋಟೆಯು ನೆಲದುರ್ಗದ ಕೋಟೆಯಾಗಿದೆ. ಏಕೆಂದರೆ ಕೋಟೆಯ ಸುತ್ತಲೂ ದಟ್ಟವಾದ ಭಯಾನಕವಾದ ಅರಣ್ಯವು ಇಲ್ಲ. ನದಿಯ ತಟದ ಪ್ರದೇಶವೂ ಇಲ್ಲ. ಸುತ್ತಲೂ ಯಾವುದೇ ರೀತಿಯ ಬೆಟ್ಟ ಗುಡ್ಡಗಳಿಲ್ಲ. ಸಮತಟ್ಟಾದ ಪ್ರದೇಶದಲ್ಲೇ ಕೋಟೆ ಸ್ಥಾಪನೆಯಾಗಿರುವುದು ಕಾಣಬಹುದು. ಎಂ.ಎಂ. ಕಲಬುರ್ಗಿಯವರು ಅಭಿಪ್ರಾಯ ಪಟ್ಟಿರುವಂತೆ "ಸಮುದಾಯಗಳಿಂದ ಸುರಕ್ಷಿತವಾಗಿ ಬದುಕಲು ಈ ತರದ ಅನುಕೂಲತೆಗಳನ್ನು ಹುಡುಕಿಕೊಳ್ಳುವುದು ಅನಿವಾರ್ಯವಾಗಿತ್ತು. ಈ ಅನಿವಾರ್ಯತೆಯೇ ಕೋಟೆಗಳ ಸ್ಥಾಪನೆಗೆ ಪ್ರಮುಖ ಕಾರಣವೇ ಹೊರತು ಮೇಲಿನ ಮಿಥ್‌ಗಳಲ್ಲ"[೬] (ಕಲಬುರ್ಗಿ, ೨೦೦೨ : ೨೧).

ಎಂ.ಎಂ.ಕಲಬುರ್ಗಿಯವರು ಪ್ರಾಚೀನ ಕಾಲದಲ್ಲಿ ಕೋಟೆಯನ್ನು ನಿರ್ಮಿಸಲೇಬೇಕಾಗಿತ್ತು ಎಂದು ಹೇಳುತ್ತಾರೆ. ಏಕೆಂದರೆ ತಮ್ಮ ಪ್ರಜೆಗಳನ್ನು ಮತ್ತು ಜನಸಮುದಾಯಗಳನ್ನು ಸುರಕ್ಷಿತವಾಗಿ ಇಡುವುದು ಅನಿವಾರ್ಯವಾಗಿತ್ತೆ ಹೊರತು ಜನರು ಹೇಳುತ್ತಿರುವ ಮಿಥ್‌ಗಳಲ್ಲ ಎನ್ನುತ್ತಾರೆ. ಹಾಗಾದರೆ ಈ ಮಿಥ್‌ಗಳಲ್ಲಿನ ಸಂದೇಶವೇನು? ಈ ಐತಿಹ್ಯಗಳು ಎಷ್ಟೇ ಅಲೌಕಿಕ ಎನ್ನುವ ರೀತಿ ರೂಪುಗೊಂಡಿದ್ದರೂ ಇದರೊಳಗೆ ಲೌಕಿಕ ಆಸೆ ಆಕಾಂಕ್ಷೆಗಳು ಇದ್ದೇ ಇವೆ. ಕೋಟೆ ಕೊತ್ತಲು ನಿರ್ಮಾಣ ಪೂರ್ವದ ಘಟನಾವಳಿಗಳನ್ನು ಸಮುದಾಯಗಳು ವ್ಯಕ್ತಪಡಿಸುವ ಐತಿಹ್ಯಗಳೆಲ್ಲವೂ ಒಂದು ಹೊಸ ರೀತಿಯಲ್ಲಿ ಚರಿತ್ರೆ ನಿರ್ಮಾಣಕ್ಕೆ ನೆರವಾಗುತ್ತವೆ ಎಂದು ತಿಳಿದು ಬರುತ್ತದೆ.

ಇಲ್ಲಿ ನಾಯಿ ಮೊಲ ಪ್ರಸಂಗದ ಮೂಲಕ ಒಂದು ಚಿಕ್ಕ ಸಂಸ್ಥಾನವು ಪ್ರಬಲವಾದುದನ್ನು ಸ್ಥಾಪಿಸಿದ ಕೋಟೆಯು ಯಾವುದೇ ಪ್ರಬಲ ಸಾಮ್ರಾಜ್ಯದ ಕೋಟೆಗಿಂತ ಬಲಿಷ್ಠವೆಂತಲೋ ಸಂದೇಶವನ್ನು ನೀಡುತ್ತಿದ್ದರೆ, ಇನ್ನೊಂದು ಕಡೆ ರಾಜಕೀಯ ಪ್ರಭುತ್ವಕ್ಕೆ ಜನ ಸಮುದಾಯದ ಗುರು ಹಿರಿಯರ ಬೆಂಬಲವನ್ನು ಸೂಚಿಸುತ್ತದೆ. ರಾಜಕೀಯ ಪ್ರಭುತ್ವದಷ್ಟೇ ಪ್ರಭಾವವನ್ನು ಸಮುದಾಯದ ಮೇಲೆ ಅರಸರು ಹೊಂದಿದ್ದರೆನ್ನಬಹುದು. ರಾಜಕೀಯ ಪ್ರಭುತ್ವದ ಆಡಳಿತಕ್ಕೆ ಬೇಕಾದ ಲೋಕದೃಷ್ಟಿಯನ್ನು ಜನ ಸಮುದಾಯದ ಮೇಲೆ ಉಂಟು ಮಾಡುತಿದ್ದರು. ಇಂಥ ಸಂದರ್ಭದಲ್ಲಿ ಅರಸನಿಗೆ ರಾಜಕೀಯ ಪ್ರಭುತ್ವಕ್ಕೆ ಜನಸಮುದಾಯದ ಬೆಂಬಲವು ಕೂಡ ಸಿಗುತ್ತಿತ್ತು. ಇಂಥ ಪ್ರಯತ್ನದ ಫಲವಾಗಿಯೇ ಜನ ಸಮುದಾಯದಲ್ಲಿ ಈ ರೀತಿಯಾದ ವಿವಿಧ ಮಾದರಿಯ ಐತಿಹ್ಯಗಳು ಹುಟ್ಟಿಕೊಳ್ಳುತ್ತವೆ.

"ವೀರತ್ವ" ಹೊಂದಿರುವ ನೆಲದಲ್ಲಿ ಕೋಟೆಯನ್ನು ನಿರ್ಮಿಸುವುದರಿಂದ ಅದು ಸುಲಭವಾಗಿ ಯಾವ ಶತ್ರುವಿನಿಂದಲೂ ಸೋಲಿಸಲಾಗದ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಗಿರುತ್ತವೆಂದು ನಂಬಲಾಗಿದೆ. ಈ ನಂಬಿಕೆಯೇ ಬೀದರ್‌ನ ಕೋಟೆಯ ಸ್ಥಾಪನೆಗೆ ಕಾರಣ ಎಂದು ಬೀದರ್‌ನ ಜನತೆಯ ನಂಬಿಕೆಯಾಗಿದೆ.

ಕೋಟೆಯ ನಿರ್ಮಾಣದ ಪೂರ್ವದಲ್ಲಿ ನಡೆದಂಥ ಘಟನೆಗಳ ಬಗ್ಗೆ ವಕ್ತೃರು ಐತಿಹ್ಯಗಳನ್ನು ಹೇಳುತ್ತಾರೆ. ಅಲ್ಲದೆ ಆ ಕಾಲಜ್ಞನ ವಚನವು ಕೂಡ ಕೋಟೆಗೆ ಸಂಬಂಧಿಸಿದ ಐತಿಹ್ಯವಾಗಿದೆ. ಕೋಟೆಯನ್ನು ಕಟ್ಟುವುದಕ್ಕಿಂತ ಮುಂಚೆ ಕಾಲಜ್ಞನು ಹೇಳಿರುವ ವಚನ ಇದ್ದು. ಅದನ್ನು ಗಂಗಮ್ಮಾ[2] ಎನ್ನುವ ವಕ್ತೃವಿನಿಂದ ಸಂಗ್ರಹಿಸಲಾಗಿದೆ.

ಮಾಂಜ್ರಾ ತೊರಿ ನೀರ್ ಬೀದರಿಗೆ ಬರಬೇಕು
ಕ್ಯಾಟಿ ಬಿಲ್ಲೆ ಮೇಲೆ ಕುಂತು
ಕರಿಕಾಗಿ ನೀರು ಕುಡಿಬೇಕು

ಇದು ಕಾಲಜ್ಞನ ವಚನದ ಹೇಳಿಕೆಯಾಗಿದ್ದು, ಬೀದರ್‌ನ ಕೋಟೆ ಕಟ್ಟುವುದಕ್ಕಿಂತ ಪೂರ್ವದಲ್ಲಿ ಹೇಳಿದಂತಹ ಕಾಲಜ್ಞಾನದ ಹೇಳಿಕೆಯಾಗಿದೆ. ಯಾವುದಾದರೂ ಕಾರ್ಯವನ್ನು ಮಾಡಲು ತಕ್ಕ ಸಮಯ, ಕಾಲ ಮತ್ತು ಋತುಮಾನಗಳನ್ನು ತಿಳಿದವನೇ ಕಾಲಜ್ಞ ಮುಂದೆ ಆಗುವುದನೆಲ್ಲ ತಿಳಿಸುವುದೇ ಕಾಲಜ್ಞಾನ. ಇದರ ಬಗ್ಗೆ ಆಳವಾದ ಅಧ್ಯಯನ ಮಾಡಿದವನೇ, ತಿಳಿದುಕೊಂಡವನೇ ಕಾಲಜ್ಞಾನಿ. ಈ ಕಾಲಜ್ಞಾನಿ ಭವಿಷ್ಯವನ್ನು ಹೇಳುವುದರಲ್ಲಿ ಚುರುಕಾಗಿರುತ್ತಾನೆ. ಹೊಸದೊಂದು ಸತ್ಯಯುಗ ಬರುತ್ತದೆಂದು ಹೇಳಿ ಜನರನ್ನು ಎಚ್ಚರಿಸುತ್ತಾನೆ. ಚಿಂತನೆಗೆ ಒಳಗಾಗಿಸುತ್ತಾನೆ. ಕಾಲಜ್ಞಾನ ಸಂಪ್ರದಾಯ ವಂಶ ಪರಂಪರೆಯದಾಗಿರುತ್ತದೆ.

ಬೀದರ್ ಜಿಲ್ಲೆಯಲ್ಲಿ ಇರುವ ಬಸಂತಪುರ ಗ್ರಾಮದಲ್ಲಿ ಇವರಿದ್ದರು. ಕಾಲ ಎಂಬುದು ಸಮಯ ವೇಳೆ ಎಂಬ ಅರ್ಥಗಳನ್ನು ನೀಡುತ್ತದೆ. ಸಮಯದ ಜ್ಞಾನವಿರುವ, ಮುಂದೆ ಏನಾಗಬಹುದು ಎಂದು ಆಲೋಚಿಸುವ ಶಕ್ತಿಯನ್ನು ಹೊಂದಿರುವ ಈ ಕಾಲಜ್ಞಾನಿಗಳು ಮುಂದೆ ಆಗುವುದನ್ನೆಲ್ಲ ಖಡಾ ಖಂಡಿತವಾಗಿ ಕಡ್ಡಿ ಮುರಿದ ಹಾಗೆ ಹೇಳುತ್ತಾರೆ. ವರ್ತಮಾನದಲ್ಲೇ ಇದ್ದುಕೊಂಡು ಮುಂದೆ ಭವಿಷ್ಯದಲ್ಲಿ ಏನು ನಡೆಯಬಹುದು? ಏನು ನಡೆಯಲಿಕ್ಕಿಲ್ಲ ಎಂಬುದನ್ನು ತನ್ನ ಬುದ್ಧಿಶಕ್ತಿಯಿಂದ ಹೇಳುತ್ತಾನೆ. ಈ ಕಾಲಜ್ಞಾನಿಗಳು ಯಾವುದೇ ಓದು ಬರಹವನ್ನು ಕಲಿತವರಲ್ಲ. ಅಕ್ಷರದ ಅರಿವು ಇವರಿಗೆ ಗೊತ್ತಿರುವುದಿಲ್ಲ. ಆದರೂ ಮುಂದೆ ಏನಾಗಬಹುದು ಎಂಬ ವಿಷಯವನ್ನೆಲ್ಲ ಹೇಳುತ್ತಾರೆ. ಅಲ್ಲದೆ ಕಲಿಯುಗದ ಅನ್ಯಾಯ, ಕೊಲೆ, ದರೋಡೆ, ಮೋಸ, ವಂಚನೆ, ಅತ್ಯಾಚಾರ ಮುಂತಾದವುಗಳಿಂದಲೇ ಮುಂದೊಂದು ದಿನ ಪ್ರಕೃತಿಯ ವಿಕೋಪಕ್ಕೆ ಸಿಲುಕಿ ಒಳ್ಳೆಯವರು ಬದುಕುತ್ತಾರೆ, ಕೆಟ್ಟವರು ಸಾಯುತ್ತಾರೆ ಎಂದು ಕಾಲಜ್ಞಾನಿ ವಚನವೊಂದು ಹೇಳುತ್ತಾನೆ. ಈ ರೀತಿಯಾದ ವಚನವನ್ನು ಹೇಳುವ ಕಾಲಜ್ಞಾನಿಗಳು ಸಾಧಾರಣವಾದ ಖಾದಿ (ಕಾವಿ) ಬಟ್ಟೆಯನ್ನು ಧರಿಸುತ್ತಾರೆ. ಹಣೆಗೆ ವಿಭೂತಿ, ಒಂದು ಕೈಯಲ್ಲಿ ಕಂದೀಲು

ಇನ್ನೊಂದು ಕೈಯಲ್ಲಿ ಕಾವಿ ಬಟ್ಟೆಯಿಂದ ಮಾಡಿದ ಕೊಡೆ (ಛತ್ರಿ) ತಲೆಯ ಮೇಲೆ ಹಿಡಿದುಕೊಂಡು ಕಾಲಜ್ಞಾನವನ್ನು ಹೇಳುತ್ತಾರೆ. ಸಾಮಾನ್ಯವಾಗಿ ಇವರು ರಾತ್ರಿ ಸಮಯದಲ್ಲಿ ಮನೆ ಮನೆಗೆ ಬಂದು ಮುಂದಿನ ದಿನಗಳಲ್ಲಿ ಹೀಗಾಗುತ್ತೆ ಹೀಗಾಗುವುದಿಲ್ಲ ಎಂಬ ವಿಷಯವನ್ನು ಜನರಿಗೆ ಹೇಳುತ್ತ ಎಚ್ಚರಿಸುತ್ತ ಅವರಿಂದ ಜೋಳ, ಅಕ್ಕಿ, ಉದ್ದು, ಹೆಸರು, ಕಡಲೆ, ತೊಗರಿ ಇವುಗಳನ್ನು ದಾನ ಪಡೆದು ಮತ್ತೆ ಮುಂದಿನ ಮನೆಗೆ ಹೋಗುತ್ತಾರೆ.

ಒಟ್ಟಾರೆ ಕೋಟೆ ನಿರ್ಮಾಣ ಪೂರ್ವದ ಘಟನೆಗಳಿಗೆ ಸಂಬಂಧಿಸಿದಂತೆ ಈ ವಿವಿಧ ಮೌಖಿಕ ಐತಿಹ್ಯಗಳು ಏನನ್ನು ಸೂಚಿಸುತ್ತವೆ? ಅಲೌಕಿಕ ಎನ್ನಬಹುದಾದ ಈ ಮಿಥ್‌ಗಳನ್ನು ವಿಶ್ಲೇಷಣೆಗೆ ಒಳಪಡಿಸಿದರೆ ಕಂಡುಬರುವ ಸತ್ಯಗಳು ಅತ್ಯಂತ ಲೌಕಿಕ ಎನಿಸಿದವುಗಳಾಗಿವೆ. ಮೊಲ-ನಾಯಿ, ಕುರುಬನ ಕೋಲು, ಸಣ್ಣ ಕುಂಡದ ನೀರು, ಹುಲಿ-ಚಿಗರೆ, ಪ್ರಸಂಗ ಇವೆಲ್ಲವು ಕೋಟೆಯ ಸ್ಥಾಪನೆಗೆ, ನಿರ್ಮಾಣಕ್ಕೆ ಪ್ರಮುಖ ಕಾರಣ ಎನ್ನುವುದು ಮುಖ್ಯವಾದುದು.

ಐದನೆಯ ಐತಿಹ್ಯ

ಕೋಟೆ ನಿರ್ಮಾಣ ಕುರಿತಂತೆ ಜನಪದರು ಹೇಳುವ ಮೌಖಿಕ ಐತಿಹ್ಯಗಳನ್ನು ಈ ಅಧ್ಯಾಯದಲ್ಲಿ ದಾಖಲು ಮಾಡಲಾಗಿದೆ. ಇದರೊಂದಿಗೆ ಈಗಾಗಲೇ ಪ್ರಕಟವಾಗಿರುವ ಐತಿಹ್ಯಗಳ ವಿವರಗಳನ್ನು ಅಧ್ಯಾಯದ ಈ ಭಾಗದಲ್ಲಿ ಚರ್ಚಿಸಲಾಗಿದಿತೀ ಐದನೆಯ ಐತಿಹ್ಯವನ್ನು ಘರಾಮರ್ ಜಂಗ್ ಅವರು 'ಎ ಗೈಡ್ ಟು ಬೀದರ್ ವಿಥ್ ಹಿಸ್ಟಾರಿಕಲ್ ನೋಟ್ಸ್' ಎಂಬ ಪುಸ್ತಕದಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ.

> ಬಿದಿರು ಪ್ರದೇಶದಲ್ಲಿ ರಾಜನು ನರಿಯನ್ನು ಬೇಟೆಯಾಡುತ್ತಿದ್ದಾಗ, ಅದು ಓಡಿ ಹೋಗದೆ ತಿರುಗಿ ರಾಜನ ಮೇಲೆ ಬಿತ್ತಂತೆ. ಅದಕ್ಕೆ ರಾಜ ಆಶ್ಚರ್ಯಚಕಿತನಾಗಿ ಈ ನೆಲದಲ್ಲಿ ಎಂಥ ಶಕ್ತಿ ಇದೆ ಎಂದುಕೊಂಡು, ಮುಂದೆ ತನ್ನ ಬೇಟೆ ಕಾರ್ಯ ಮುಂದುವರಿಸಿದನು. ಆಗ ಸಂಜೆಯಾಗುತ್ತಿತ್ತು. ಒಂದು ಮರದಡಿಯಲ್ಲಿ ಅವನು ಮತ್ತು ಅವನ ಸೈನಿಕರು ಆಶ್ರಯಪಡೆದರು. ಆಗ ರಾಜನಿಗೂ ಸೈನಿಕರಿಗೂ ತುಂಬಾ ನೀರಡಿಕೆಯಾಗಿತ್ತು. ನೀರಿಗಾಗಿ ಒಬ್ಬನನ್ನು ಕೇಳಿದಾಗ ಅವನು ಅಲ್ಲೇ ಪಕ್ಕದಲ್ಲಿರುವ ನೀರಿನ ಝರಿಯನ್ನು ತೋರಿಸಿದನಂತೆ ರಾಜನ ಸೈನಿಕರು ಹೋಗಿ ಆ ಝರಿ ಮೇಲೆ ಮುಚ್ಚಿದ ಬಂಡೆಗಲ್ಲನ್ನು ಸರಿಸಲು ಪ್ರಯತ್ನಿಸಿದರು. ಆದರೆ ಅವರಿಗೆ ಬಂಡೆಗಲ್ಲನ್ನು ಸರಿಸಲು ಆಗಲಿಲ್ಲ. ಒಬ್ಬ ವೃದ್ಧನನ್ನು ಮನವಿ ಮಾಡಿಕೊಂಡಾಗ ಆ ವೃದ್ಧನು ತನ್ನ ಕೈಯಲ್ಲಿರುವ ಕೋಲಿನಿಂದ ಕಲ್ಲನ್ನು ಸರಿಸಿದಾಗ ಮೂಕವಿಸ್ಮಿತನಾದ ರಾಜನು ಆ ಮುದುಕನ ಹೆಸರು ಏನೆಂದು ಕೇಳಿದಾಗ, ಅವನು ಬೊಮಗೊಂಡನೆಂದು ಹೇಳಿದನು. ನಂತರ ರಾಜನು ಆ ಸ್ಥಳದ ಮಹತ್ವವನ್ನು ಅರಿತು ಕೋಟೆಯೊಂದನ್ನು ನಿರ್ಮಿಸಲು ಯೋಜನೆ ರೂಪಿಸಿ ಬೃಹತ್ತಾದ ಕೋಟೆಯೊಂದನ್ನು ನಿರ್ಮಿಸಿದನು (ಜಂಗ್, ೧೯೬೮: ೨೧).

ಆರನೆಯ ಐತಿಹ್ಯ

ಈ ಆರನೆಯ ಐತಿಹ್ಯವನ್ನು ಜಿ.ಯಾಜ್ದಾನಿ ಅವರು 'ದಿ ಆ್ಯಂಟಿಕ್ಸ್ ಆಫ್ ಬೀದರ್' ಎಂಬ ಪುಸ್ತಕದಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ.

> ಒಂದು ದಿನ ರಾಜ ಸುಲ್ತಾನ ಎ-ಅಹಮದ್-ಷಾ ಬೇಟೆಯಾಡುತ್ತ ಬಿದಿರು ಘಟವಿರುವ ಪ್ರದೇಶಕ್ಕೆ ಬಂದನು. ಅಲ್ಲಿ ಒಂದು ನಾಯಿ ನರಿಯನ್ನು ಅಟ್ಟಿಸಿಕೊಂಡು ಹೋಗುತ್ತಿತ್ತು. ಆದರೆ ನಾಯಿ ನರಿಯನ್ನು ಸಮೀಪಿಸುತ್ತಿದ್ದಂತೆ ನರಿಯು ಹಿಂತಿರುಗಿ ನಾಯಿಯನ್ನು ಬೆನ್ನಟ್ಟಿ ಓಡಿಸಲು ಪ್ರಾರಂಭಿಸಿತ್ತು. ಈ ಆಶ್ಚರ್ಯವನ್ನು ಕಂಡ ಸುಲ್ತಾನನು ಈ ಸ್ಥಳದಲ್ಲಿ ಯಾವುದೋ ಒಂದು ದೈವ ಶಕ್ತಿಯಿದ್ದು ಇದೊಂದು ಪುಣ್ಯಭೂಮಿಯಾಗಿದೆ ಎಂದು ಆ ಸ್ಥಳದಲ್ಲಿಯೇ ಕೋಟೆಯನ್ನು ನಿರ್ಮಿಸಿದನು (ಯಾಜ್ದಾನಿ, ೧೯೧೭: ೩).

ಕೆ.ಎಂ.ಮೈತ್ರಿಯವರು ಮೌಖಿಕವಾಗಿ ಸಂಗ್ರಹಿಸಿದ ಬೊಮಗೊಂಡನ ಕುರಿತ ಐತಿಹ್ಯಗಳಲ್ಲಿ ಕೋಟೆಯ ನಿರ್ಮಾಣದ ಬಗೆಗಿರುವ ಐತಿಹ್ಯವೊಂದು ಕಂಡುಬರುತ್ತದೆ. ಅವರು ಸಂಗ್ರಹಿಸಿದ ಐತಿಹ್ಯ ಮತ್ತು ಜನಪದರಿಂದ ಮೌಖಿಕವಾಗಿ ಸಂಗ್ರಹಿಸಿದ ಐತಿಹ್ಯಗಳು ಒಂದೇ ರೀತಿಯಾಗಿವೆ. ಆದರೆ ಐತಿಹ್ಯದ ನಿರೂಪಕರು ಬೇರೆ ಬೇರೆಯಾಗಿದ್ದಾರೆ. ಸಂಗ್ರಹಿಸಿದ ಐತಿಹ್ಯವನ್ನು ಮೈತ್ರಿಯವರು 'ಸುಲ್ತಾನ ಸುರುಳಿ'ಯ ೨೪ನೇ ಪುಟದಲ್ಲಿ ಉಲ್ಲೇಖಿಸಿದ್ದಾರೆ.

ಏಳನೆಯ ಐತಿಹ್ಯ

ಕ್ಯಾತನಹಳ್ಳಿ ರಾಮಣ್ಣನವರು 'ಬೀದರ ಜಿಲ್ಲೆಯ ಜನಪದ ಕಥೆಗಳು' ಎಂಬ ಆಯ್ದ ಕಥೆಗಳ ಸಂಗ್ರಹದ ಪುಸ್ತಕದಲ್ಲಿ ಕೋಟೆ ನಿರ್ಮಾಣ ಕುರಿತಂಥ ಐತಿಹ್ಯವನ್ನು 'ಕಿರಿಯ ಮಗ ತಂದ ಹೆಣ್ಣು' ಶೀರ್ಷಿಕೆಯಡಿಯಲ್ಲಿ ಉಲ್ಲೇಖಿಸಿದ್ದಾರೆ. ಇವರು ಕೂಡ ಮೌಖಿಕವಾಗಿ ಸಂಗ್ರಹಿಸಿದ ಐತಿಹ್ಯವಾಗಿದ್ದು, ಅದು ಈ ಕೆಳಗಿನಂತಿದೆ.

> ಇಬ್ಬರು ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳಿರುತ್ತಾರೆ. ಮೊದಲ ಇಬ್ಬರಿಗೆ ಮದುವೆ ಆಗಿರುತ್ತದೆ. ಆದರೆ ಕಿರಿಯವನಿಗೆ ಮಾತ್ರ ಮದುವೆ ಆಗಿರಲಿಲ್ಲ. ಆಗ ಆತನು ನಾನೇ ನನ್ನ ಹೆಂಡತಿಯನ್ನು ಹುಡುಕುತ್ತೀನಿ ಎಂದು ಹೊರಡುತ್ತಾನೆ. ಅಲ್ಲಿಂದ ಒಂದು ಊರಿಗೆ ಹೋಗುತ್ತಾನೆ. ಅಡವಿಯಲ್ಲಿ ಋಷಿ ತಪಸ್ಸಿಗಾಗಿ ಕುಂತಿರುತ್ತಾನೆ. ಆತನ ಸುತ್ತ ಜನರೆಲ್ಲ ನೆರೆದಿರುತ್ತಾರೆ. ಆದರೆ ಋಷಿಯನ್ನು ಯಾರೂ ಮಾತಾಡಿಸಲಿಲ್ಲ, ಆಗ ಇವನು ಅಲ್ಲಿಗೆ ಬರುತ್ತಾನೆ. ಸುಮ್ಮನೆ ನಿಂತಿದ್ದೀರಲ್ಲ ಅವರನ್ನು ಮಾತಾಡಿಸಿ ಎನ್ನುತ್ತಾನೆ. ಅದಕ್ಕೆ ಜನರು ಸುಮ್ಮನೆ ಮಾತಾಡಿಸೊ ಹಾಗಿಲ್ಲ. ಒಂದು ಟವೆಲ್ಲನ್ನು ನೀರಲ್ಲಿ ನೆನೆಸಿ ಅದರ

ಒಂದೊಂದು ಹನಿ ಆತನ ಜಡೆಯ ಮೇಲೆ ಬೀಳಬೇಕು. ಹಾಗೆ ಟಾವಲ್ ಒಣಗಬೇಕು ಅಂದಾಗ ಆತನು ಮಾತಾಡುತ್ತಾನೆ ಎಂದು ಹೇಳುತ್ತಾರೆ. ಋಷಿಯ ಮೈಯಲ್ಲಿ ಹುತ್ತ ಏರಿತು. ಹನಿ ಹನಿ ನೀರು ಬೀಳುತ್ತಾ ಹುತ್ತ ಕರಗಿ ಹೋಯಿತು. ಆಗ ಋಷಿ ಖುಷಿಯಿಂದ ಎದ್ದು ಕುಳಿತ ನಂತರ ಆ ಹುಡುಗನಿಗೆ ನನಗೆ ತುಂಬಾ ಸಂತೋಷವಾಗಿದೆ, ಏನು ಬೇಕು ಕೇಳು ಎನ್ನುತ್ತಾನೆ. ಅದಕ್ಕೆ ಹುಡುಗ ನಾನು ಮದುವೆಯಾಗಬೇಕು, ನನಗೆ ಚೆನ್ನಾಗಿರೋ (ರೂಪವತಿ) ಹುಡುಗಿ ಬೇಕು ಎನ್ನುತ್ತಾನೆ. ಅಗೋ ಆ ದೂರದಲ್ಲಿ ಒಂದು ಪರ್ವತವಿದೆ. ಅದರಲ್ಲಿ ಬರೀ ದಾಳಿಂಬೆ ಗಿಡಗಳೇ ಇವೆ ಆದರೆ ಅಲ್ಲಿ ರಾಕ್ಷಸರು ಅವರಿಗೊಬ್ಬ ನಾಯಕ ಇದ್ದಾನೆ. ನೀನು ಅಲ್ಲಿಂದ ಒಂದು ಹಣ್ಣು ಕಡಿದುಕೊಂಡು ಬಾ ಎಂದನು. ಹೋಗಿ ಹುಡುಗ ಹಣ್ಣನ್ನು ತಂದನು. ನಂತರ ಋಷಿಯು ಇದನ್ನು ಜೋಕೆಯಿಂದ ನೋಡಿಕೊಂಡು ಮನೆಯನ್ನೆಲ್ಲ ಸ್ವಚ್ಛಗೊಳಿಸಿ (ಸಾರಿಸಿ) ನಡುಮನೆಯಲ್ಲಿಡು ಎನ್ನುತ್ತಾನೆ. ಅವನು ಆ ಹಣ್ಣನ್ನು ಜೇಬಿನಲ್ಲಿಟ್ಟುಕೊಂಡು ಬರುತ್ತಾನೆ. ಬರುತ್ತಾ ದಾರಿಯಲ್ಲಿ ಅವನಿಗೆ ತುಂಬಾ ದಣಿವಾಗುತ್ತದೆ. ಅಲ್ಲೇ ಸಮೀಪದಲ್ಲಿ ಒಂದು ಊರು ಇರುತ್ತದೆ. ಆ ಊರು ಬಿಳಿಕೆರೆಗೆ (ಬೆಳಕೇರಿ) ಅಲ್ಲಿ ಬರುತ್ತಾನೆ. ಅವನಿಗೆ ತುಂಬಾ ದಣಿವಾದ್ದರಿಂದ ಊರಿನ ಬಾವಿಯೊಂದರ ಕಟ್ಟೆ ಮೇಲೆ ಮಲಗುತ್ತಾನೆ. ಆಗ ಅವನಿಗೆ ಗಾಢವಾದ ನಿದ್ದೆ ಬರುತ್ತದೆ. ಅಷ್ಟರಲ್ಲಿ ಜೇಬಿನಲ್ಲಿರುವ ಹಣ್ಣು ಒಡೆದು ಸುಂದರ ಹುಡುಗಿ ಹೋರಬಂದು ಆತನ ತಲೆಯ ಬಳಿ ಕುಳಿತಿರುತ್ತಾಳೆ. ಸ್ವಲ್ಪ ಸಮಯದ ಬಳಿಕ ಆಕೆಗೆ ತುಂಬಾ ಬಾಯಾರಿಕೆಯಾಗುತ್ತದೆ. ಆಕೆಗೆ ದೂರದಲ್ಲಿ ಒಬ್ಬಾಕೆ ಕುರುಡಿ ಬರುತ್ತಿರುವುದು ಕಾಣಿಸುತ್ತದೆ. ಆ ಕುರುಡಿಯ ಬಳಿಗೆ ಹೋಗಿ 'ನನಗೆ ತುಂಬಾ ಬಾಯಾರಿಕೆ ಆಗಿದೆ ನೀರು ತೋರಿಸು' ಎನ್ನುತ್ತಾಳೆ. ಆಗ ಆ ಕುರುಡಿ 'ನಿನ್ನ ಮೈಮೇಲಿರುವ ಬಟ್ಟೆ ನನಗೆ ಕೊಡು ನಾನು ನೀರು ಇರುವ ಸ್ಥಳಕ್ಕೆ ಕರೆದೊಯ್ಯುತ್ತೇನೆ' ಎನ್ನುತ್ತಾಳೆ. ಸರಿ ಆಕೆ ಬಟ್ಟೆ ಬಿಚ್ಚುತ್ತಾಳೆ. ನಂತರ ಬಾವಿಯ ಬಳಿಗೆ ಕರೆದೊಯ್ದು ಬಾವಿಯಲ್ಲಿ ನೂಕುತ್ತಾಳೆ. ನಂತರ ಆ ಹುಡುಗನ ತಲೆಯ ಬಳಿ ಬಂದು ಕುಳಿತುಕೊಳ್ಳುತ್ತಾಳೆ. ಆವಾಗ ಆತನಿಗೆ ಎಚ್ಚರವಾಗುತ್ತದೆ. ಕುರುಡಿ ಹೆಣ್ಣು ನೋಡಿ ನನ್ನ ಹಣೆಬರಹಕ್ಕೆ ಇವಳೇ ಇರಬಹುದೆಂದು ಮನೆಗೆ ಕರೆದೊಯ್ದು ಲಗ್ನವಾಗುತ್ತಾನೆ. ನಂತರ ಒಂದು ದಿನ ಬೇಟೆಯಾಡಲು ಹೊರಗೆ ಬರುತ್ತಾನೆ. ಆ ಬಾವಿಯಲ್ಲಿ ಬಿದ್ದಿರುವ ಹುಡುಗಿ ಮೈಯಲ್ಲಿ ಕ್ಯಾಟಿ ಖಿಲ್ಲೆ ಆಗುತ್ತದೆ. ಆ ಖಿಲ್ಲೇನೇ ಈಗಿನ ಬೀದರ ಕೋಟೆ ಆಗಿದೆ (ರಾಮಣ್ಣ, ೧೯೭೬: ೨೨).

ಕೋಟೆಯ ನಿರ್ಮಾಣದ ಬಗೆಗಿನ ಲಿಖಿತ ಐತಿಹ್ಯಗಳು ಕೂಡ ವಕ್ಕರ ಮೌಖಿಕ ಐತಿಹ್ಯಗಳಿಗೇನೂ ಭಿನ್ನವಾಗಿಲ್ಲ. ಮೌಖಿಕ ಮತ್ತು ಲಿಖಿತ ಆಕರಗಳಲ್ಲಿ ವ್ಯತ್ಯಾಸವಿಲ್ಲದ ಸಂಬಂಧಗಳನ್ನು ಕಾಣಬಹುದು.

*** *** ***

ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ದೊರಕಿರುವ ಮೌಖಿಕ ಮತ್ತು ಲಿಖಿತ ಐತಿಹ್ಯಗಳ ಸಂಬಂಧವನ್ನು ವಿವರಿಸುವ ಯತ್ನವನ್ನು ಅಧ್ಯಾಯದ ಈ ಭಾಗದಲ್ಲಿ ಮಾಡಲಾಗಿದೆ.

ಮೌಖಿಕ ಚರಿತ್ರೆಯು ಮನುಷ್ಯನ ಸಮಸ್ತ ವ್ಯವಹಾರಗಳನ್ನು ನಿರೂಪಿಸಿದರೆ ಲಿಖಿತ ಚರಿತ್ರೆಯು ಮನುಷ್ಯನ ಭೂತಕಾಲದ ಚಟುವಟಿಕೆಗಳನ್ನು ನಿರೂಪಿಸುತ್ತದೆ. ಮೌಖಿಕ ಚರಿತ್ರೆಯಲ್ಲಿ ಮನುಷ್ಯನ ಸಮಸ್ತ ವ್ಯವಹಾರಗಳು ತಾನು ಅನುಭವಿಸಿದ, ಕಂಡುಕೊಂಡ, ಕೇಳಿ ಮತ್ತು ಕಲ್ಪಿಸಿಕೊಂಡ ಅನೇಕ ವಿಚಾರಗಳನ್ನು ತಮ್ಮ ಸ್ಮೃತಿಯಲ್ಲಿಟ್ಟುಕೊಂಡು ಸಹೃದಯರಿಗೆ ರಂಜಕ ಮತ್ತು ಇನ್ನಿತರ ಸಂದರ್ಭದಲ್ಲಿ ಮನ ಮುಟ್ಟುವಂತೆ ಹೇಳುವುದೇ ಆಗಿದೆ. ಇವರಿಗೆ ಲಿಖಿತ ಆಧಾರವಿಲ್ಲ. "ಲಿಖಿತ ಚರಿತ್ರೆಯು ಭೂತಕಾಲದ ಘಟನೆಗಳ ಮೊತ್ತದ ದಾಖಲೆಯಾಗಿದೆ. ಇದು ಮನುಷ್ಯನ ಬದುಕಿನ ರಾಜಸ್ಥಿತಿಯನ್ನು ದಾಖಲೆಗಳಲ್ಲಿ ನಿರೂಪಿಸುವ ಉದ್ದೇಶವನ್ನು ಹೊಂದಿರುತ್ತದೆ ಮತ್ತು ಸಂಪ್ರದಾಯಕ ಇತಿಹಾಸವೆಂತಲೂ ಕರೆಯಲಾಗುತ್ತದೆ. ಇದು ಒಂದು ಶಿಸ್ತಾಗಿ ಇತಿಹಾಸವನ್ನು ಭೂತಕಾಲದ ದಾಖಲೆ ಎಂದೆ ಪರಿಗಣಿಸಲಾಯಿತು. ಅಂದರೆ ಭೂತಕಾಲದಲ್ಲಿ ನಡೆದು ಹೋದ ಘಟನೆಗಳ ಒಂದು ಕ್ರಮಾಗತ ಸರಣಿಯಲ್ಲಿ ನಡೆದು ಮತ್ತು ಆ ಘಟನೆಗಳ ವಿವರಗಳನ್ನು ಅವುಗಳ ಸಂದರ್ಭಗಳಿಗೆ ಅನುಗುಣವಾಗಿ ಕಂಡುಕೊಳ್ಳಬಹುದೆಂಬ ಅರ್ಥದಲ್ಲಿ ಇತಿಹಾಸವನ್ನು ಭೂತಕಾಲದ ಬಗೆಗಿನ ದಾಖಲೆ ಎಂದೇ ಪರಿಗಣಿಸಲಾಗುತ್ತಿದೆ" ಎಂದು ಲಕ್ಷ್ಮಣ್ ತೆಲಗಾವಿ ಹೇಳಿದ್ದಾರೆ (ತೆಲಗಾವಿ, ೨೦೦೩: ೩೫).

ಭೂತಕಾಲದಲ್ಲಿ ನಡೆದಂಥ ಘಟನೆಗಳ ವಿವರಗಳನ್ನು ಕ್ರಮಾನುಗತ ಅಧ್ಯಯನ ಮಾಡುವುದೆ ಇತಿಹಾಸವಾಗಿದೆ. ಇದು ಲಿಖಿತ ದಾಖಲೆಯಾಗಿದೆ. ಆದರೆ ಮೌಖಿಕ ಚರಿತ್ರೆಗೆ ಯಾವುದೇ ಕ್ರಮಾನುಗತ ಎಂಬುದು ಇರುವುದಿಲ್ಲ. ಜನರು ತಮ್ಮ ಜ್ಞಾನಪರ ಶಕ್ತಿಯ ಮೂಲಕ ಚರಿತ್ರೆಯ ಬಗ್ಗೆ ಹೇಳುತ್ತಾರೆ. ಇದು ಕೂಡ ಚರಿತ್ರೆಗೆ ಸಮೀಪವೇ ಆಗಿರುತ್ತದೆ. ಆದರೆ ತೋರಿಸಲು ಗಟ್ಟಿಯಾದ ಆಧಾರ ಇರುವುದಿಲ್ಲ.

ಈ ದಾಖಲೆಗಳಿಗಾಗಿ ಇತಿಹಾಸಕಾರರು ಶಾಸನಗಳನ್ನು, ತಾಮ್ರಪಟಗಳನ್ನು, ವಿದೇಶಿ ಬರಹಗಳನ್ನು, ಕವಿಗಳ ಲಿಖಿತ ಸಾಹಿತ್ಯವನ್ನು, ಕೈಫಿಯತ್ತುಗಳನ್ನು, ನಾಣ್ಯಗಳನ್ನು, ಆಳ್ವಿಕೆಯ ಕಾಲದಲ್ಲಿ ನಿರ್ಮಿಸಿದ ಸ್ಮಾರಕಗಳನ್ನು ಮರೆತು ಹೋಗಿರುವುದು ಕಾಣಬಹುದು. ಮೌಖಿಕ ಚರಿತ್ರೆಯನ್ನು ಕುರಿತು ಹಿ.ಶಿ.ರಾಮಚಂದ್ರೇಗೌಡರು ಈ ರೀತಿ ಹೇಳುತ್ತಾರೆ. "ಜಾನಪದವೇ ಒಂದು ಪ್ರತ್ಯೇಕ ಐತಿಹಾಸಿಕ ಪರಂಪರೆ, ಅದನ್ನು ನಾವು ಮೌಖಿಕ ಇತಿಹಾಸವೆಂದು ಕರೆಯುತ್ತೇವೆ." ಇದರ ಘಟಕಗಳು ಜನಪದ ಇತಿಹಾಸವನ್ನು ಮೌಖಿಕವಾಗಿ ಉಳಿಸಿಕೊಂಡು ಬರುತ್ತವೆ. ಜಾನಪದ ಒಂದು ಸುಂದರ ಕಲ್ಪನೆ ಎನ್ನುವವರಿಗೆ ಇದು ಹಿಡಿಸುವುದಿಲ್ಲ. ಜಾನಪದ ಸುಂದರ ಕಲ್ಪನೆ ಎಂಬ ಅಭಿಪ್ರಾಯ ಮಾತ್ರ ತಪ್ಪು. "ಜಾನಪದ ಇತಿಹಾಸವೆಂಬುದು ಸಾಮಾಜಿಕ ಕ್ರಿಯೆ. ಜನಪದವು ನಡೆದ ಮತ್ತು ನಡೆಯಿತ್ತೆಂದು ಹೇಳಲಾದ ಘಟನೆಗಳ ಮೊತ್ತ. ಘಟನೆ ನಡೆಯದೆ ಇತಿಹಾಸ ಸೃಷ್ಟಿಯಾಗುವುದು ಸಾಧ್ಯವಿಲ್ಲ. ಆದರೆ ನಡೆದದ್ದು ಯಾವ ಮಾದರಿಯ ಇತಿಹಾಸ ಎನ್ನುವುದು ಮುಖ್ಯ. ಇತಿಹಾಸ ಮರುಕಳಿಸುವಂತೆ ಅಥವಾ

ಪ್ರತ್ಯೇಕವಾಗಿ ಘಟಿಸಿದೆ ಎಂಬ ತೀರ್ಮಾನದ ಮೇಲೆ ಜನಪದ ಇತಿಹಾಸ ಮುಖಗಳು ತೆರೆದುಕೊಂಡಿವೆ'' ಎಂದು ರಾಮಚಂದ್ರೇಗೌಡ ಹೇಳುತ್ತಾರೆ (ರಾಮಚಂದ್ರೇಗೌಡ, ೧೯೮೭: ೮೮).

ಜನಪದರು ಹೇಳುವ ಮೌಖಿಕ ಐತಿಹ್ಯಕ್ಕೂ ಪ್ರಕಟಗೊಂಡಿರುವ ಐತಿಹ್ಯಕ್ಕೂ ಅವಿನಾಭಾವ ಸಂಬಂಧವಿದೆ ಎಂದು ಹೇಳಬಹುದು. ಅದು ಸುಭಾಷರಾವ್ ಅಲ್ಲಾಪುರೆ ವಕ್ಫರು ಬೀದರ್‌ನ ಕೋಟೆಯ ನಿರ್ಮಾಣ ಕುರಿತಂತೆ ಹೇಳಿರುವ ಐತಿಹ್ಯಕ್ಕೂ ಘರಾಮರ್ ಜಂಗ್‌ರವರು 'ಎ ಗೈಡ್ ಟು ಬೀದರ್ ವಿಥ್ ಹಿಸ್ಟಾರಿಕಲ್ ನೋಟ್ಸ್' ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವ ಐತಿಹ್ಯಕ್ಕೂ ಈ ಸಂಬಂಧವಿದೆ. ಅರಸನೊಬ್ಬ ಬಿದಿರು ಘಟಕ್ಕೆ ಬೇಟೆಯಾಡಲು ಬಂದಾಗ ಅವನಿಗೆ ತುಂಬಾ ಬಾಯಾರಿಕೆ ಆಗುತ್ತದೆ. ಆಗ ನೀರಿಗಾಗಿ ಅರಸನು ಮತ್ತು ಅವನ ಸೈನ್ಯ ಪರಿವಾರವೆಲ್ಲ ಶೋಧ ನಡೆಸುತ್ತಿರುವುದು. ಅಂಥ ಸಮಯದಲ್ಲಿ ಕುರಿ ಕಾಯುವ ಕುರುಬನನ್ನು ನೀರಿನ ಬಗ್ಗೆ ಕೇಳುವುದು. ಅವನು ಒಂದು ಕುಂಡವನ್ನು ತೋರಿಸುವುದು. ಕುಂಡದ ಮೇಲೆ ಮುಚ್ಚಿರುವ ಕಲ್ಲನ್ನು ವಂಕನ ಕೋಲಿನಿಂದ ಸರಿಸುವುದು. ನಂತರ ಅರಸನು ಬೇಟೆಯಾಡಲು ಬಿದಿರು ಘಟಕ್ಕೆ ಬರುವುದು ಅಲ್ಲಿ ನರಿಯೊಂದು ನಾಯಿಯನ್ನು ಅಟ್ಟಿಸಿಕೊಂಡು ಹೋಗುವುದು ಇವೆಲ್ಲವುಗಳನ್ನು ಕಂಡ ಅರಸನು ಆಶ್ಚರ್ಯಚಕಿತನಾಗುವುದು. ಕುರುಬನಿಂದ ಭೂಮಿಯ ಮಹಿಮೆಯನ್ನು ಕೇಳಿ ಅಲ್ಲೊಂದು ಕೋಟೆ ನಿರ್ಮಿಸುವುದು.

ಜನಪದರು ಮೌಖಿಕವಾಗಿ ಬಾಯಿಂದ ಬಾಯಿಗೆ ಹೇಳಿಕೊಂಡುಬರುವ ಐತಿಹ್ಯಕ್ಕೂ ಲಿಖಿತ ಐತಿಹ್ಯಕ್ಕೂ ಸಂಬಂಧವಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಅನೇಕ ವಿದ್ವಾಂಸರ ಅಭಿಪ್ರಾಯ ಉಲ್ಲೇಖಗಳನ್ನು ಬೀದರ್ ಕೋಟೆಯ ಬಗೆಗಿರುವ ಐತಿಹ್ಯಗಳು ಮೀರಿ ನಿಂತಿವೆ ಎಂದು ಹೇಳಬಹುದು. ಐತಿಹ್ಯಗಳು ಕಾಲಕಳೆದಂತೆ ಕಿವಿಯಿಂದ ಬಾಯಿಗೆ ಬಾಯಿಂದ ಕಿವಿಗೆ ಹರಡುವಾಗ ಇದರಲ್ಲಿ ಅನೇಕ ರೀತಿಯ ಬದಲಾವಣೆಗಳಿಗೆ, ಮಾರ್ಪಾಡುಗಳಿಗೆ ಅನಿವಾರ್ಯವಾಗಿ ಒಳಗಾಗಬೇಕಾಗುತ್ತದೆ (ರಾಮಚಂದ್ರೇ ಗೌಡ, ೨೦೦೩: ೮೩). ಈ ಸಂದರ್ಭದಲ್ಲಿ ಐತಿಹ್ಯಗಳು ಬದಲಾವಣೆ ಹೊಂದುವುದು ವಿರಳ ಎಂತಲೇ ಹೇಳಬೇಕಾಗುತ್ತದೆ. ಏಕೆಂದರೆ ಇಲ್ಲಿಯವರೆಗೆ ನಡೆದಿರುವಂಥ ಅಧ್ಯಯನಗಳು ಐತಿಹ್ಯಗಳನ್ನು ಕಡೆಗಣಿಸುತ್ತಲೇ ಬಂದವುಗಳಾಗಿವೆ. ಆದ್ದರಿಂದ ಅವರು ಹೇಳಿರುವುದರಲ್ಲಿ ಯಾವುದೇ ತಪ್ಪಿಲ್ಲವೆನಿಸುತ್ತದೆ.

ಈ ರೀತಿ ಜನಪದರು ಹೇಳುವ ಐತಿಹ್ಯಕ್ಕೂ ಪ್ರಕಟಿತ ಗ್ರಂಥಗಳಲ್ಲಿನ ಐತಿಹ್ಯಕ್ಕೂ ಸಂಬಂಧವಿದೆ ಎಂತಲೇ ಹೇಳಬಹುದು. ಏಕೆಂದರೆ ಕೋಟೆಯ ನಿರ್ಮಾಣಕ್ಕಿಂತ ಪೂರ್ವದಲ್ಲಿ ಯಾವ ರೀತಿ ಪರಿಸರ ವಿತ್ತು. ಅಲ್ಲಿನ ಜನಸಮುದಾಯಗಳು ಆ ಪ್ರದೇಶವನ್ನು ಕುರಿತಂತೆ ಹೇಗೆ ಕಂಡಿದ್ದಾರೆ ಎಂಬುದನ್ನು ಗುರುತಿಸುವಲ್ಲಿ ಮತ್ತು ಲಿಖಿತವಾಗಿ ಉಲ್ಲೇಖಿತಗೊಂಡಿರುವುದರಲ್ಲಿ ಸಂಬಂಧಗಳನ್ನು ಕಾಣುತ್ತೇವೆ. ಇಂಥ ಐತಿಹ್ಯಗಳು ಅನೇಕ ಸಲ ನಮಗೆ ಲಿಖಿತ ಚರಿತ್ರೆಯಲ್ಲಿ ಕಾಣಲಾಗದ ಹಲವಾರು ವಿಷಯಗಳನ್ನು ವಿಚಾರಗಳನ್ನು, ಜನಪದರ ಮೂಲಕ ತಿಳಿಸುತ್ತವೆ.

ಬೀದರ್ ಕೋಟೆಯ ನಿರ್ಮಾಣದ ಪೂರ್ವದಲ್ಲಿ ಇದ್ದಂಥ ಕೋಟೆಯ ಬಗೆಗಿನ ಐತಿಹ್ಯಗಳಂತೆ "ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಹಾಗಲವಾಡಿ, ಬಿಜ್ಜಾವರ, ಚಿಕ್ಕನಾಯಕನಹಳ್ಳಿ, ಎಲ್ಲಪ್ಪನಾಯಕನ ಹೊಸಕೋಟೆ, ಸಿರಾ ಕೋಟೆ ಮುಂತಾದ ಕೋಟೆಗಳಿಗೆ ಸಂಬಂಧಿಸಿದಂತೆ ಕೋಟೆಯ ನಿರ್ಮಾಣದ ಪೂರ್ವದಲ್ಲಿ ನಡೆದಂಥ ೧. ಮೊಲವು ನಾಯಿಯನ್ನು ಅಟ್ಟಿಸಿಕೊಂಡು ಹೋಗುವುದು. ೨. ಹುತ್ತಕ್ಕೆ ಹಸುವೊಂದು ಹಾಲೆರೆಯುವುದು. ೩. ಕನಸಿನಲ್ಲಿ ಅಶರೀರ ವಾಣಿಯೊಂದು ನುಡಿಯುವುದು" ಮುಂತಾದ ರೀತಿಯ ಘಟನೆಗಳು ಅವು ಐತಿಹ್ಯಗಳ ರೂಪದಲ್ಲಿ ಮುಂದೆ ಜನರ ಮೂಲಕ ಮೌಖಿಕವಾಗಿ ಹೊರಹೊಮ್ಮಿರುವುದನ್ನು ಕಾಣಬಹುದು (ಸತ್ಯನಾಥ, ೧೯೭೬: ೨೭).

ಈ ರೀತಿ ಬೀದರ್ ಕೋಟೆಯ ಐತಿಹ್ಯಗಳಿಗೆ ಸಂಬಂಧಿಸಿದಂತೆ ಸುಭಾಷರಾವ್ ಅಲ್ಲಾಪುರೆ, ನಾಗಶೆಟ್ಟಿ ಮತ್ತು ಶಿವರಾಯ್ ಒಡೆಯರ್ ಅವರು ಮೂರು ರೀತಿಯಲ್ಲಿ ಭಿನ್ನ ಭಿನ್ನ ಐತಿಹ್ಯಗಳನ್ನು ತಿಳಿಸುತ್ತವೆ. ಐತಿಹ್ಯಗಳಲ್ಲಿ ಉಲ್ಲೇಖಿಸಿರುವ ಪ್ರಾಣಿಗಳ ವಿವರಗಳು ಒಂದೇ ಬಗೆಯದಲ್ಲ. ಈ ಪ್ರಾಣಿಗಳ ಹೆಸರುಗಳು ಭಿನ್ನ ಭಿನ್ನ ಐತಿಹ್ಯಗಳಲ್ಲಿ ಭಿನ್ನ ಭಿನ್ನವಾಗಿದೆ. ಆದರೆ ವಕ್ತೃಗಳ ಆಶಯ ಒಂದೇ ಆಗಿರುವುದನ್ನು ಗಮನಿಸಬಹುದು.

*** *** ***

ಬೀದರ್ ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇರುವ ಲಿಖಿತ ಮತ್ತು ಮೌಖಿಕ ಆಕರಗಳ ವ್ಯತ್ಯಾಸದ ಬಗ್ಗೆ ಉಲ್ಲೇಖಿಸಲಾಗಿದೆ.

ಈ ಶಿಷ್ಟ ಮತ್ತು ಮೌಖಿಕ ಆಕರಗಳಲ್ಲಿ ಅಪಾರವಾದ ಭಿನ್ನತೆ ಕಂಡು ಬರುತ್ತದೆ. ಮೌಖಿಕ ಇತಿಹಾಸವು ಕೋಟೆಯನ್ನು ಜನಜೀವನದ ಭಾಗವಾಗಿ ದಾಖಲಿಸಿದೆ. ಲಿಖಿತ ಮತ್ತು ಮೌಖಿಕ ಚರಿತ್ರೆಗಳ ಘಟನೆಗಳಿಗೆ ಒಂದೇ ವಸ್ತುವಾಗಿದ್ದರೂ ಕಾಲಾನಂತರದಲ್ಲಿ ಭಿನ್ನ ಭಿನ್ನ ರೀತಿಯಾಗಿ ಒಂದಕ್ಕೊಂದು ಕಾಣಿಸಿಕೊಳ್ಳುತ್ತವೆ. ಲಿಖಿತ ಪರಂಪರೆಯು ಯಥಾಸ್ಥಿತಿಯಲ್ಲಿ ಮುಂದುವರೆದು, ಮೌಖಿಕ ಚರಿತ್ರೆಯು ಪರಂಪರೆಯಲ್ಲಿ ಸ್ಮೃತಿಯಲ್ಲಿರುವುದರಿಂದ ಕೆಲವು ವಿಚಾರಗಳು ಸೇರುತ್ತವೆ. ಕೆಲವು ಮರೆಯಾಗುತ್ತವೆ. ಇದರಿಂದ ವಸ್ತುಗಳು ಭಿನ್ನವಾಗಿರುತ್ತವೆಂದು ತಿಳಿದುಬರುತ್ತದೆ.

ಮೊದಲನೆಯ ವ್ಯತ್ಯಾಸ ರಾಜನು ನರಿಯನ್ನು ಬೆನ್ನಟ್ಟಿದಾಗ ಅದು ತಿರುಗಿ ರಾಜನ ಮೇಲೆ ಬೀಳುತ್ತದೆ ಎಂದು ಲಿಖಿತ ಐತಿಹ್ಯದಲ್ಲಿ ಉಲ್ಲೇಖಿತವಾಗಿದೆ. ಆದರೆ ಯಾವ ಮೌಖಿಕ ಐತಿಹ್ಯದಲ್ಲೂ ಈ ವಿಷಯ ಕಂಡುಬರುವುದಿಲ್ಲ. ಅಷ್ಟೇ ಅಲ್ಲದೇ ಜಿ.ಯಾಜ್ದಾನಿ ಇವರ "ದಿ ಆ್ಯಂಟಿಕ್ಸ್ ಆಫ್ ಬೀದರ್" ಎನ್ನುವ ಪುಸ್ತಕದಲ್ಲಿ ಬರುವ ಐತಿಹ್ಯದಲ್ಲಿ ಒಂದು ಪ್ರಾಣಿಯನ್ನು ತೆಗೆದುಕೊಂಡಿದ್ದಾರೆ. ಎರಡನೆಯ ವ್ಯತ್ಯಾಸವೆಂದರೆ ವಕ್ತೃರ ಐತಿಹ್ಯದಲ್ಲಿ ಹುಲಿ ಮತ್ತು ಚಿಗರೆ ಎಂಬ ಎರಡು ಪ್ರಾಣಿಗಳನ್ನು ತೆಗೆದುಕೊಂಡು ಐತಿಹ್ಯವನ್ನು ಹೆಣೆಯಲಾಗಿದೆ. ಮೂರನೆಯ ವ್ಯತ್ಯಾಸ ವಕ್ತೃರ ಐತಿಹ್ಯದಲ್ಲಿ ನರಿ ಮತ್ತು ನಾಯಿ ಎಂಬ ಎರಡು ಪ್ರಾಣಿಗಳನ್ನು ತಮ್ಮ ಐತಿಹ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಇತಿಹಾಸ ನಿರೂಪಕರು ಲಿಖಿತ ದಾಖಲೆಗಳನ್ನು ಆಧರಿಸಿಕೊಂಡು ಒಂದು ಕಾಲದಲ್ಲಿ ನಡೆದ ಸಂಗತಿಯನ್ನು ತಾವು ಕಂಡಂತೆ ನಿರೂಪಿಸಿದರೆ ಐತಿಹ್ಯ ನಿರೂಪಕರು (ಕತೆ ಅಥವಾ ದಂತಕಥೆಯ ನಿರೂಪಕರು) ಮೌಖಿಕ ಪರಂಪರೆಯ ದಾಖಲೆಗಳನ್ನು ಆಧರಿಸಿಕೊಂಡು ಒಂದು ಕಾಲದಲ್ಲಿ ನಡೆದ ಸಂಗತಿಗಳನ್ನು ತಾವು ಕಂಡಂತೆ ನಿರೂಪಿಸುತ್ತಾರೆ ಎಂದು ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ (ಬಿಳಿಮಲೆ, ೧೯೯೭: ೯೪).

> ಈ ಬಗೆಯ ನಿಲುವುಗಳಿಗೆ ತಾತ್ವಿಕವಾಗಿ ಪಳಮೆ ಪುಸ್ತಕದಲ್ಲಿ ಕೆಲವು ಪ್ರಶ್ನೆಗಳನ್ನು ವಿಜಯ್ ಪೂಣಚ್ಚ ಅವರು ಎತ್ತಿರುವುದು ಗಮನಾರ್ಹವಾಗಿದೆ. ಕಳೆದ ನೂರಾರು ವರ್ಷಗಳಿಂದ ಹಾಗೂ ಪ್ರಸ್ತುತವಾಗಿ ಸಮಾಜವನ್ನು ತನ್ನ ನಿಯಂತ್ರಣದಲ್ಲಿಟ್ಟು ಕೊಂಡಿರುವುದು ಕಂಡುಬರುತ್ತದೆ. ಆದ ಕಾರಣ ರಾಜ್ಯಾಧಿಕಾರವನ್ನು ರೂಪಿಸುವ ಹಾಗೂ ನ್ಯಾಯಬದ್ಧಗೊಳಿಸುವ ಚರಿತ್ರೆಯನ್ನು ಅಭ್ಯಾಸ ಮಾಡುವ ಸಂದರ್ಭದಲ್ಲಿ 'ಶಿಷ್ಟ ಮತ್ತು ಪರಿಶಿಷ್ಟ'ವನ್ನು ಮುಖಾಮುಖಿಯಾಗಿ ನಿಲ್ಲಿಸುವ ಬದಲು, ಅವುಗಳನ್ನು ಪೂರಕವಾಗಿ ಅಭ್ಯಾಸ ಮಾಡುವುದು ಸಮಂಜಸ. ಆ ಮೂಲಕ 'ಪರಿಶಿಷ್ಟ' ಎಂದು ಗುರುತಿಸಲ್ಪಡುತ್ತಿರುವ 'ಅನಕ್ಷರಸ್ಥ' ಸಮಾಜದ ನೋವು ನಲಿವುಗಳನ್ನು ಕೇವಲ 'ಫ್ಯಾಂಟಸಿ'ಯಾಗಿಯೇ ಉಳಿಯುವ/ಉಳಿಸುವ ಮಿತಿಯನ್ನು ಮೀರಲು ಇರುವ ಸಾಧ್ಯತೆಗಳನ್ನು ಪರಿಶೀಲಿಸಿದ್ದಾರೆ.[೮]

ಈ ಬಗೆಯ ತಾತ್ವಿಕತೆಯು ಬೀದರ್ ಕೋಟೆಗೆ ಸಂಬಂಧಿಸಿದ ಚರಿತ್ರೆಯಲ್ಲಿಯು ನೋಡಬಹುದು. ದಾಖಲೆಗಳು ಮತ್ತು ಐತಿಹ್ಯಗಳು ಜೊತೆ ಜೊತೆಯಾಗಿಯೇ ಮುಂದುವರಿದಿರುವುದನ್ನು ನಾವು ಈ ಅಧ್ಯಾಯದಲ್ಲಿ ನೋಡಬಹುದು.

ಟಿಪ್ಪಣಿಗಳು

೧. ಸುಭಾಷ್‌ರಾವ್ ಇವರ ತಂದೆಯ ಹೆಸರು ಮಾಣಿಕಪ್ಪಾ ಅಲ್ಲಾಪುರೆ ಇವರು ಬೀದರ್‌ನ ಹಳೆಯ ಪಟ್ಟಣದ ಬ್ರಹ್ಮನವಾಡಿ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಮೂಲತಃ ಇವರು ದೂರವಾಣಿ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸರಳ ಸಜ್ಜನಿಕೆಯನ್ನು ಹೊಂದಿದ ಅಲ್ಲಾಪುರೆಯರು ತಮ್ಮ ಬಿಡುವಿನ ಸಮಯವನ್ನು ಭಜನೆ, ಕೀರ್ತನೆ ಮತ್ತು ಪುರಾಣ ಹೇಳುವ, ಕೇಳುವುದರಲ್ಲಿ ಕಾಲ ಕಳೆಯುತ್ತಾರೆ. ಇವರು ಬಿಡುವಿನ ಸಮಯದಲ್ಲಿ ಪುರಾಣ, ಕೀರ್ತನೆಗಳಿಗಾಗಿ ಬೇರೆ ಊರುಗಳಿಗೆ ಹೋಗುತ್ತಾರೆ. ಹೀಗಾಗಿ ಬಿಡುವಿನ ಸಮಯದಲ್ಲೂ ನಮಗೆ ಸಿಗುವುದಿಲ್ಲ. ಇವರು ತಮ್ಮ ವೃತ್ತಿಯ ಜೊತೆಗೆ ಐತಿಹಾಸಿಕ ಸ್ಥಳಗಳ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿದ್ದಾರೆ.

೨. ನಾಗಶೆಟ್ಟಿ ಇವರ ತಂದೆಯ ಹೆಸರು ಮಹಾದೇವಪ್ಪ ಇವರು ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಗುರಂಪಳ್ಳಿ ಎಂಬ ಗ್ರಾಮದಲ್ಲಿ ವಾಸವಾಗಿದ್ದಾರೆ. ಮೂಲತಃ ಒಕ್ಕಲುತನವನ್ನು ಅವಲಂಬಿಸಿದ್ದಾರೆ. ಇವರಿಗೆ ೮೫ ವರ್ಷ ವಯಸ್ಸಾಗಿದ್ದು ಇವರಿಗೆ ಮೂರು ಜನ ಗಂಡು ಮಕ್ಕಳಿದ್ದು, ಅವರಲ್ಲಿ ಒಬ್ಬರು ಒಕ್ಕಲುತನವನ್ನು ಅವಲಂಬಿಸಿದ್ದು, ಇನ್ನಿಬ್ಬರು ಸರಕಾರಿ ನೌಕರಸ್ಥರಾಗಿದ್ದಾರೆ. ಇವರು ಐತಿಹಾಸಿಕವಾಗಿ ಬೀದರ್ ಜಿಲ್ಲೆ ಕುರಿತಂತೆ ಹಲವಾರು ವಿಷಯಗಳನ್ನು ತಿಳಿದುಕೊಂಡಿದ್ದಾರೆ. ಅಕ್ಷರ ಜ್ಞಾನವಿಲ್ಲದ ಇವರು ಹೆಚ್ಚಾಗಿ ಬೀದರ್ ಕೋಟೆ ನಿರ್ಮಾಣ ಕುರಿತಂತೆ ಹಲವಾರು ವಿಷಯಗಳನ್ನು ಹೇಳುತ್ತಾರೆ. ಇವರಿಂದ ಬೀದರ್ ಕೋಟೆ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯಗಳಲ್ಲಿ ಒಂದನ್ನು ಪ್ರಸ್ತುತ ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ. ಇವರು ಕೋಟೆಗೆ ಸಂಬಂಧಿಸಿದಂತೆ ಹಲವಾರು ವಿಷಯಗಳನ್ನು ತಿಳಿದಿದ್ದರೂ ಕೆಲವನ್ನು ಮರೆತಿರುವಂತೆ ಕಾಣಿಸುತ್ತದೆ.

೩. ಶಿವರಾಯ್ ಒಡೆಯರ್ ಇವರು ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಮಾಡ್ಯಾಳ ಗ್ರಾಮದಲ್ಲಿ ವಾಸವಾಗಿದ್ದು, ಮಾಡ್ಯಾಳವು ಬೀದರ್‌ನಿಂದ ಸುಮಾರು ೨೦೦ ಕಿ.ಮೀ ದೂರದಲ್ಲಿದೆ. ಈ ಗ್ರಾಮದಲ್ಲಿ ಆನುವಂಶಿಕವಾಗಿ ಪೊಲೀಸ್ ಪಾಟೀಲರಾಗಿರುವ ಇವರು ಶೈವ ಜಂಗಮರಾಗಿದ್ದು, ಈಗ ಇವರು ಮಾಡ್ಯಾಳದ ಕೆಲವೊಂದು ದೇವಾಲಯಗಳನ್ನು ಮತ್ತು ಅಷ್ಟೂರಿನಲ್ಲಿರುವ ಅಹಮದ್ ಶಹ ವಲಿ ಗೋರಿಯ ಪೂಜಾರಿಕೆಯನ್ನು ಮಾಡುತ್ತಾರೆ. ಅಷ್ಟೂರಿನಲ್ಲಿ ನಡೆಯುವ ಉರುಸ್ ಅಥವಾ ಅಲ್ಲಮಪ್ರಭುವಿನ ಜಾತ್ರೆಯ ಸಂದರ್ಭದಲ್ಲಿ ಅವರನ್ನು ಭೇಟಿ ಮಾಡಲಾಯಿತು. ಅವರು ಬೀದರ್ ಕೋಟೆ ನಿರ್ಮಾಣ ಮತ್ತು ಅಹಮದ್-ಶಹ-ವಲೀ ಗೋರಿ ಬಗ್ಗೆ ಕೆಲವೊಂದು ಐತಿಹ್ಯಗಳನ್ನು ಹೇಳಿದ್ದಾರೆ.

೪. ಶಾಂತಲಿಂಗಸ್ವಾಮಿ ಹಿರೇಮಠ ಇವರು ಬೀದರ್ ಜಿಲ್ಲೆಯಲ್ಲಿರುವ ಲಾಡಗೇರಿ ಎಂಬ ಹಳೆಯ ಪಟ್ಟಣದಲ್ಲಿ ವಾಸವಾಗಿದ್ದಾರೆ. ಇವರಿಗೆ ೬೮ ವರ್ಷ ವಯಸ್ಸಾಗಿದ್ದು, ಇವರು ಬೀದರ್‌ನ ಕೋಟೆಯಲ್ಲಿರುವ ವೀರಸಂಗಯ್ಯನ ಗದ್ದುಗೆ ಕುರಿತಂತೆ ಅಧ್ಯಯನ ಕೈಗೊಂಡವರಲ್ಲಿ ಮೊದಲಿಗರು. ವೀರಸಂಗಯ್ಯನ ಕುರಿತ ಭಜನೆ ಹಾಡುಗನ್ನು ಸಂಗ್ರಹ ಮಾಡಿ 'ವೀರಸಂಗಯ್ಯನ ಭಜನೆ' ಎಂಬ ಚಿಕ್ಕದಾದ ಲೇಖನ ಪ್ರಕಟಿಸಿದ್ದಾರೆ. ಅಲ್ಲದೆ 'ನೀವು ಒಂದಾಗಿರಿ' ಎಂಬ ಲೇಖನವನ್ನು ಪ್ರಕಟಿಸಿದ್ದಾರೆ. ನಾನು ಅವರನ್ನು ಭೇಟಿ ಮಾಡಿದಾಗ ಕೋಟೆಯಲ್ಲಿರುವ ವೀರಸಂಗಯ್ಯನ ಗದ್ದುಗೆ ಮತ್ತು ಕೆರೆ ನಿರ್ಮಾಣ ಕುರಿತಂತೆ ಐತಿಹ್ಯಗಳನ್ನು ಹೇಳಿದ್ದಾರೆ.

ವಿದ್ವಾಂಸರಾದ ಎಲ್.ಆರ್.ಕುಲಕರ್ಣಿ ಇವರಿಗೂ ವೀರಸಂಗಯ್ಯನ ಕುರಿತಂತೆ "ಇತಿಹಾಸ ದರ್ಶನ ಸಂಪುಟ ೬"ರಲ್ಲಿ ಪ್ರಕಟವಾದ ಎನ್ನುವ ಲೇಖನಕ್ಕೆ ಮಾಹಿತಿಗಳನ್ನು ನೀಡಿದುದರ ಬಗ್ಗೆ ಹೇಳುತ್ತಾರೆ. ಇವರು ಸತತ ಒಂಬತ್ತು ವರ್ಷಗಳ ಕಾಲದವರೆಗೆ ವೀರಸಂಗಯ್ಯನ ಕುರಿತಂತೆ ಸಂಶೋಧನೆ ಕೈಗೊಂಡಿರುವುದಾಗಿ ಹೇಳುತ್ತಾರೆ.

೫. ಗೋದಾವರಿ ಇವರು ಪ್ರಸ್ತುತದಲ್ಲಿ ಬೀದರ್ ಪಟ್ಟಣದ ವಿದ್ಯಾನಗರ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಮನೆಗೆಲಸ ಮಾಡುವ ಗೋದಾವರಿಯವರು ಅನೇಕ ಕೋಲುಪದದ ಗೀತೆ, ಸೋಬಾನ ಗೀತೆ, ಬುಲಾಯಿ ಹಾಡು, ಕುಟ್ಟುವ, ಬಿಸುವ ಹಾಡುಗಳನ್ನು ಹಾಡುತ್ತಾರೆ. ಅಕ್ಷರ ಜ್ಞಾನವಿಲ್ಲದ ಗೋದಾವರಿಯವರು ಕಂಠಪಾಠದಲ್ಲಿ ಹಾಡನ್ನು ಹೇಳುತ್ತಾರೆ. ಇವರು ಹೇಳುವ 'ಗೋಡೆಗೆ ಬಲಿಕೊಟ್ಟ ಸಂಗಮ್ಮಳ ಹಾಡ'ನ್ನು ಸಂಗ್ರಹಿಸಿ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಪುಟ್ಟದಾದ ಮನೆಯನ್ನು ಹೊಂದಿದ ಗೋದಾವರಿ ಮತ್ತು ಗಂಡ ಸದಾಶಿವ ಅವರಿಗೆ ನಾನು ಕೈಗೊಂಡ ಸಂಶೋಧನೆಯ ಬಗ್ಗೆಯು ತಿಳಿಸಿದೆ. ಹೀಗಾಗಿ ಗೋದಾವರಿ ಅವರು ಕೋಟೆಗೆ ಸಂಬಂಧಿಸಿದ ಹಾಡುಗಳನ್ನು ಹೇಳಿದರು. ಅದನ್ನು ದಾಖಲು ಮಾಡಿದ್ದೇನೆ.

೬. ಮೊಲ ಮತ್ತು ನಾಯ ಕಥೆಯ ಪ್ರಸ್ತಾಪ ಗಾತ್ರದಲ್ಲಿ ಚಿಕ್ಕದಾದ ಮೊಲ ಹೇಗೆ ನಾಯಿಯನ್ನು ಸೋಲಿಸುವುದು. ಅದೇ ರೀತಿಯಾಗಿ ಚಿಕ್ಕದಾದ ಒಂದು ಸಂಸ್ಥಾನವು ಸಹ ಬಲಿಷ್ಠತೆಯನ್ನು ಪಡೆದುಕೊಳ್ಳುವುದು ಕೋಟೆಯಿಂದಲೇ ಎಂಬ ಸಂದೇಶವನ್ನು ಈ ಮೊಲ ಮತ್ತು ನಾಯಿಯ ಕಥೆಯಿಂದ ಪ್ರಸ್ತಾಪಿಸಬಹುದು. ಮತ್ತೊಂದು ಘಟನೆಯನ್ನು ಉದಾಹರಣೆಯಾಗಿ ಹೇಳುವುದಾದರೆ, ದೈವದ ಹಿನ್ನೆಲೆಯಲ್ಲಿ ಕಂಡಂತೆ ಕನಸಿಗೆ ಪ್ರಾಮುಖ್ಯತೆ ನೀಡುವಂಥ ಕಾಲದಲ್ಲಿ ಸಂತನ ಕನಸಿನಲ್ಲಿ ದೈವವು ಪ್ರತ್ಯಕ್ಷವಾಗಿ ಇಂಥ ಪ್ರದೇಶದಲ್ಲಿ ಕೋಟೆ ನಿರ್ಮಾಣ ಮಾಡುವುದರಿಂದ ರಾಜಪ್ರಭುತ್ವ ಬಲಿಷ್ಠವಾಗುತ್ತದೆ ಎಂಬ ವಿಚಾರವನ್ನು ಜನಸಮುದಾಯದ ಮುಂದೆ ವ್ಯಕ್ತಪಡಿಸುವ ಉದಾಹರಣೆಗಳುಂಟು. ಇಂಥ ಘಟನೆಗಳು ಹೊಸ ರೀತಿಯ "ಸಾಂಸ್ಕೃತಿಕ ಚರಿತ್ರೆಯ" ನಿರ್ಮಾಣಕ್ಕೆ ನೆರವಾಗುತ್ತವೆ ಎನ್ನಬಹುದು.

೭. ಗಂಗಮ್ಮಾ ಇವರು ಬೀದರ್ ಪಟ್ಟಣದ ಬ್ರಹ್ಮಪುರ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಸುಮಾರು ಅರವತ್ತು ವರ್ಷ ವಯಸ್ಸಿನವರಾಗಿದ್ದು, ಬೀದರ್ ಕೋಟೆಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಇರುವ ಕಾಲಜ್ಞಾನ ವಚನವನ್ನು ಹೇಳಿದ್ದಾರೆ. ಬಸವಣ್ಣ, ಅಕ್ಕಮಹಾದೇವಿಯ ಹಾಡುಗಳನ್ನು ಕೂಡ ಹಾಡುತ್ತಾರೆ.

೮. ವಿಜಯ್ ಪೂಣಚ್ಚ ಅವರು ಬಳಿಮಲೆಯವರ ನಿಲುವುಗಳಿಗೆ ತಾತ್ವಿಕವಾಗಿ ಪ್ರಶ್ನೆಗಳನ್ನು ಎತ್ತುವುದರ ಮೂಲಕ ಈ ರೀತಿ ವಿವರಿಸಿದ್ದಾರೆ. ಬಳಿಮಲೆ ಅವರು ಭಾರತದಲ್ಲಂತೂ "ಅಕ್ಷರ ಬಲ್ಲವರು" ಆಳುವ ವರ್ಗದವರೊಂದಿಗೆ ತಮ್ಮನ್ನು ಗುರುತಿಸಿಕೊಂಡಿದ್ದರಿಂದ ಬಹುಸಂಖ್ಯಾತರು ದೂರವೇ ಉಳಿಯುವಂತಾಯಿತು. "ಅಕ್ಷರವು ಬ್ರಾಹ್ಮಣರ ಸೊತ್ತಾಗಿದ್ದರಿಂದ" "ಭಾರತೀಯ" ಪುರಾತನ ವಿದ್ಯಾಭ್ಯಾಸ ಪದ್ಧತಿಯ ಪಾರಿಭಾಷಿಕ ಪದಗಳೆಲ್ಲವೂ ಬ್ರಾಹ್ಮಣ ಕೇಂದ್ರಿತವಾಗಿರುವುದು ಸ್ಪಷ್ಟವಾಗಿದೆ ಎಂದು ಹೇಳುವುದನ್ನು ಒಪ್ಪುವುದು ಕಷ್ಟ ಎಂದು ಇವರು ಹೇಳುತ್ತಾರೆ. ಹಿ.ಚಿ.ಬೋರಲಿಂಗಯ್ಯನವರು ಹೆಚ್ಚು ಕಡಿಮೆ ಬಳಿಮಲೆಯವರ ವಾದಗಳನ್ನು

ಪುರಸ್ಕರಿಸುವಂತೆ "ಲಿಪಿ ಬಲ್ಲವರು ರೂಪಿಸಿದ ಸಂಪ್ರದಾಯವಾದೀ ಚೌಕಟ್ಟಿನೊಳಗಿನ ಎಲ್ಲ ಒಪ್ಪಿತ ಮೌಲ್ಯಗಳ ಸಂಚಯವೇ ಶಿಷ್ಟ ಇವರ ದೃಷ್ಟಿಯಲ್ಲಿ ಅದೇ ಹೆದ್ದಾರಿ; ಉಳಿದವೆಲ್ಲ ಉಪ ಅಥವಾ ಕಾಲುದಾರಿಗಳು ಮಾತ್ರ. ಅವರ ಚಿಂತನೆಗಳಿಗೆ ಪರ್ಯಾಯವಾಗಿ ಸಾಗುವ ಅಥವಾ ಸಮಾನಂತರವಾದ ಇತರ ದಾರಿಗಳ ಇರುವಿಕೆಯನ್ನು ಅವರು ಒಪ್ಪುವುದಿಲ್ಲ" ಎಂದು ಬರೆದಿರುವುದನ್ನು ಗಮನಿಸಬಹುದು (ಬೋರಲಿಂಗಯ್ಯ, ೨೦೦೦)

ಬಿಳಿಮಲೆ, ಬೋರಲಿಂಗಯ್ಯನವರನ್ನು ಸೇರಿಸಿದಂತೆ ಅನೇಕ ವಿದ್ವಾಂಸರು ನಿರ್ವಚಿಸಲು ಪ್ರಯತ್ನಿಸಿರುವ ಶಿಷ್ಟ-ಪರಿಶಿಷ್ಟ ದ್ವೈಕಾಟಮಿಗಳ ಮರುಪರಿಶೀಲನೆ ಅಗತ್ಯ ಎಂದು ನಾನು ಭಾವಿಸಿದ್ದೇನೆ. ಮೌಖಿಕ ಆಕರಗಳ ಮೇಲಿನ ಅತೀವ ಪ್ರೀತಿಯಿಂದ ಕೆಲವು ಹೇಳಿಕೆಗಳನ್ನು ಇವರೆಲ್ಲ ಬಹಳ ಸಾಮಾನ್ಯೀಕರಿಸಿರುವುದು ಇಲ್ಲಿ ಗೋಚರವಾಗುತ್ತದೆ. ಬ್ರಾಹ್ಮಣರು ಬಹುತೇಕವಾಗಿ ಬಳಸುತ್ತಿದ್ದ ಸಂಸ್ಕೃತವು ಭಾರತ ಉಪಖಂಡದ ನೂರಾರು ಭಾಷೆಗಳಲ್ಲಿ ಒಂದು ಎನ್ನುವುದು ಇಲ್ಲಿ ಮುಖ್ಯವಾದ ವಿಚಾರವಾದರೆ, "ಪುರಾತನ ಕಾಲದಲ್ಲಿ" ಜೈನ ಮತ್ತು ಬೌದ್ಧ ಬೌದ್ಧಿಕ ಪ್ರಪಂಚವು ಶಕ್ತಿಶಾಲಿಯಾಗಿದ್ದುದು ಕೂಡ ಮುಖ್ಯವೇ. ಹಾಗೆಯೇ "ಮಧ್ಯಕಾಲೀನ ಭಾರತದಲ್ಲಿ" ಕನ್ನಡವೂ ಸೇರಿದಂತೆ ಉಳಿದ ದಕ್ಷಿಣ ಭಾರತೀಯ ಭಾಷೆಗಳು (ದ್ರಾವಿಡ ಭಾಷೆಗಳು ಎಂದು ಕೆಲವು ವಿದ್ವಾಂಸರಿಂದ ಗುರುತಿಸಲ್ಪಡುವವು), ಉರ್ದು, ಪರ್ಷಿಯನ್ ಮತ್ತು ಅರೇಬಿಕ್ ಭಾಷೆಗಳ ಅಕ್ಷರ ಪ್ರಪಂಚ ಹಾಗೂ ಅವುಗಳಿಂದ ಮೂಡಿಬಂದ ಅನೇಕ ಬಗೆಯ ಸಂವಾದಗಳನ್ನು ನಾವು ಈ ಸಂದರ್ಭದಲ್ಲಿ ಅರ್ಥಮಾಡಿಕೊಳ್ಳುವ ಜರೂರಿದೆ. ಈ ಹಿನ್ನೆಲೆಯಲ್ಲಿ, ಕನ್ನಡದ ಸಂದರ್ಭದಲ್ಲಿ ೧೨ನೆಯ ಶತಮಾನದ ವೀರಶೈವ ಬೌದ್ಧಿಕ ಪ್ರಪಂಚವು ಹುಟ್ಟುಹಾಕಿದ ಅನೇಕ ಬಗೆಯ ಚರ್ಚೆಗಳೂ ಇದರಿಂದ ಹೊರತಲ್ಲ. ಆ ಕಾಲದಲ್ಲಿ "ಭಾರತೀಯ" ಎನ್ನುವ ಚಿಂತನೆಯೊಂದಿತ್ತು ಎನ್ನುವ ವಾದವು ಸಂದೇಹಾಸ್ಪದವಾಗಿ ಕಾಣುತ್ತದೆ. ೧೯ನೆಯ ಶತಮಾನದಲ್ಲಿ ಯುರೋಪಿನಾದ್ಯಂತ ಬೆಳೆದ ಉಗ್ರ ರಾಷ್ಟ್ರೀಯತೆಯ ಭಾವನೆಯಿಂದಾಗಿ ಯುರೋಪಿನ ಪ್ರತಿಯೊಂದು ದೇಶವು ತನ್ನ ಸಾಂಸ್ಕೃತಿಕ ಅನನ್ಯತೆಯನ್ನು ಸ್ಥಾಪಿಸಲು ಮೌಖಿಕ ಜಾನಪದ ವಾಙ್ಮಯವನ್ನು ಬಳಸಿಕೊಂಡಿತು. ಜರ್ಮನಿಯ ಜೆ.ಜೆ.ಪರ್ಡರ್ ಎಂಬ ವಿದ್ವಾಂಸನು ಜರ್ಮನ್ ರಾಷ್ಟ್ರವಾದವು ತನ್ನ ವಿಶಿಷ್ಟತೆಯನ್ನು ಕಾಪಾಡಿಕೊಳ್ಳಬೇಕಾದರೆ ಆ ಕಾಲದಲ್ಲಿ ಪ್ರಭಾವಿಯಾಗಿದ್ದ ಫ್ರೆಂಚ್ ಅನ್ನೂ ಸೇರಿದಂತೆ 'ಅನ್ಯ-' ಸಾಹಿತ್ಯ ಸಂಸ್ಕೃತಿಗಳಿಂದ, 'ಶಿಷ್ಟ, ಕೃತಿಮ, ಲಿಖಿತ' ಸಾಹಿತ್ಯಗಳಿಂದ ದೂರವಿರಬೇಕೆಂಬ ಚರ್ಚೆಯನ್ನು ಬೆಳೆಸಿದನು. ಈ ಹಿನ್ನೆಲೆಯಲ್ಲಿ ಅವನು ಮೌಖಿಕ ಜಾನಪದ ವಾಙ್ಮಯ ಭಂಡಾರವನ್ನು ಕಂಡುಕೊಳ್ಳಲು ಯತ್ನಿಸುವನು ಎಂಬ ಸಿ.ಎಸ್.ರಾಮಚಂದ್ರನ್ ಅವರ ವಿಶ್ಲೇಷಣೆಯ ಈ ಸಂದರ್ಭದಲ್ಲಿ ಮುಖ್ಯವೆನಿಸುತ್ತವೆ (ರಾಮಚಂದ್ರನ್, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ೬,೧೨,೨,೮).

ಯೂರೋಪಿನ ಬೇರೆ ಬೇರೆ ಭೂಭಾಗಗಳ ಜನರ ಅನನ್ಯತೆಯ ಹುಡುಕಾಟದ ಸಂದರ್ಭದಲ್ಲಿ ಬೆಳೆಸಲಾದ ಈ ಬಗೆಯ ವಾಙ್ಮಯಗಳು ಅಲ್ಲಿನ ಕೆಲವು ವರ್ಗಗಳ ಜನರ ಆಶೋತ್ತರಗಳನ್ನು ಪೂರೈಸುವಲ್ಲಿ (ಉದಾಹರಣೆಗಾಗಿ ಫಿನ್ಲೆಂಡಿನ ಸಂದರ್ಭದಲ್ಲಿ ಅಲ್ಲಿನ ಜನಪದರು ಕಲೆ ಹಾಕಿದ "ಕಲೇವಾಲ" ಕಾವ್ಯಗಳು) ಶಕ್ತವಾದರೂ, ಅದೇ ಬಗೆಯ ವಾಙ್ಮಯಗಳನ್ನು ಭಾರತದಂತಹ ದೇಶಗಳು ಡಿ-ಕೊಲನೈಸ್ ಆಗಿ ಐವತ್ತು ವರ್ಷಗಳ ನಂತರ ನಿರ್ವಚಿಸುತ್ತಿದ್ದರೆ ಅಷ್ಟು ಉಚಿತವೆನ್ನಿಸಲಾರದು. ಇಲ್ಲಿ ಯಾರು "ಶಿಷ್ಟ" ಮತ್ತು ಯಾರು

"ಪರಿಶಿಷ್ಟ" ಎನ್ನುವ ಪ್ರಶ್ನೆಯಷ್ಟೇ ಮುಖ್ಯವಾಗಿರುವುದು "ಪರಿಶಿಷ್ಟ" ಜಗತ್ತನ್ನು ಕೇಂದ್ರವಾಗಿಟ್ಟುಕೊಂಡು ವ್ಯಾಖ್ಯಾನಿಸುವ ವಿದ್ವಾಂಸರ ಬಗೆಗಳು. ಇವರೆಲ್ಲ ಶಿಷ್ಟ ಜಗತ್ತನ್ನು ಅನುಮಾನಿಸಿ, ಟೀಕಿಸುವ "ಶಿಷ್ಟ" ಪರಂಪರೆಯ ವಿದ್ವಾಂಸರ ರೀಸರ್ಚ್ ಮೆಥಾಡಾಲಜಿಯ ಭಾಗಗಳಾಗಿರುವುದು ಗಮನಿಸಬೇಕಾದ ಸಂಗತಿಯಾಗಿದೆ. ಮಾರ್ಕ್ಸಿಸಂ, ನಿಯೋಮಾರ್ಕ್ಸಿಸಂ, ನ್ಯೂಹಿಸ್ಟಾರಿಸಿಸಂನ ಭಾಗಗಳಾಗಿಯೇ ಇವರ ಅಭಿಪ್ರಾಯಗಳು ರೂಪುಗೊಂಡಿರುವುದು ಈ ಸಂದರ್ಭದಲ್ಲಿ ಮುಖ್ಯವಾದ ವಿಚಾರವಾಗುತ್ತದೆ. ಈ ಹಿನ್ನೆಲೆಯಲ್ಲಿ "ಶಿಷ್ಟಚರಿತ್ರೆ" ಅಥವಾ "ಪರಿಶಿಷ್ಟ ಚರಿತ್ರೆ" ಎನ್ನುವ ಪರಸ್ಪರ ವಿರುದ್ಧವಾದ ನೆಲೆಗಟ್ಟಿನಲ್ಲಿ ಕಂಡುಕೊಳ್ಳುವ ವಾಗ್ವಾದಗಳನ್ನು ಗಮನದಲ್ಲಿರಿಸಿಕೊಂಡು ಅವುಗಳು ಪರಸ್ಪರ ಪೂರಕಗಳಾಗಿರುತ್ತವೆ ಆಶಯದೊಂದಿಗೆ ಪ್ರಸ್ತುತ ಅಧ್ಯಯನ ಕೈಗೆತ್ತಿಕೊಳ್ಳಲಾಗಿದೆ. ಶಿಷ್ಟ ಸಾಹಿತ್ಯವೆಂದರೆ ಅದು ಅಕ್ಷರಸ್ಥ ಸಮಾಜದ್ದು. ಹಾಗಾಗಿ ಶಿಷ್ಟ ಸಾಹಿತ್ಯವು ಉಚ್ಚ ಜಾತಿಯವರದ್ದು ಮತ್ತು 'ಪರಿಶಿಷ್ಟ' ಎಂದರೆ ಅನಕ್ಷರಸ್ಥ ಸಮಾಜ ಅದರಲ್ಲೂ ಕೆಳ ಜಾತಿಗಳಿಗೆ ಸಂಬಂಧಿಸಿದ ಸಾಹಿತ್ಯ ಎನ್ನುವ ಸಂಕಥನದ ಬಗ್ಗೆ ಈ ಮೇಲಿನ ಕಾರಣಗಳಿಂದಾಗಿಯೇ ನನಗೆ ಭಿನ್ನಾಭಿಪ್ರಾಯವಿದೆ. ಇಂದಿನ ಆಧುನೀಕರಣ ಹಾಗೂ ಜಾಗತೀಕರಣ ಪ್ರಕ್ರಿಯೆಯಲ್ಲಿ ಈ ರೀತಿಯ ಮುಖಾಮುಖಿಯು ಅರ್ಥವನ್ನು ಕಳೆದುಕೊಳ್ಳುತ್ತದೆ. ಏಕೆಂದರೆ ಕೆಳಜಾತಿ/ವರ್ಗಗಳಿಂದ ಬಂದವರು ಇಂದು ಅನಕ್ಷರಸ್ಥರಾಗಿಯೇ ಉಳಿದಿಲ್ಲ. ಭೂತಕಾಲದಲ್ಲಿ ಕೂಡ ಪರಿಸ್ಥಿತಿ ಹೆಚ್ಚು ಭಿನ್ನವಾಗಿಯೇನಿರಲಿಲ್ಲ. 'ಪರಿಶಿಷ್ಟ' ಎಂದು ಇಂದೂ ಪ್ರಸ್ತುತದಲ್ಲಿರುವ ಕೆಳವರ್ಗಗಳ/ದಲಿತರಲ್ಲಿರುವ ಜಾತಿ ಶ್ರೇಣಿಕೃತ ಆಧಾರಿತ ಸಮಾಜವನ್ನು "ಯೂನಿಕ್" ಎಂದು ಪರಿಭಾವಿಸುವುದು, ಕೆಳವರ್ಗಗಳಲ್ಲಿರುವ ಕೆಳವರ್ಗಗಳಿಗೆ, ಕೆಳಜಾತಿಗಳಲ್ಲೇ ಕೆಳಜಾತಿಗಳಾಗಿರುವವರಿಗೆ ಅಥವಾ ದಲಿತರಲ್ಲೇ ದಲಿತರಾಗಿರುವವರಿಗೆ ನ್ಯಾಯ ಒದಗಿಸಿದಂತೆ ಆಗುವುದಿಲ್ಲ ಎಂದು ವಿಜಯ್ ಪೂಣಚ್ಚರವರು ಪ್ರಶ್ನೆಗಳನ್ನು ಎತ್ತುವುದರ ಮೂಲಕ ತಾತ್ವಿಕವಾಗಿ ಚರ್ಚಿಸಿದ್ದಾರೆ (ವಿಜಯ್ ಪೂಣಚ್ಚ ೨೦೦೪ : ೪, ೫, ೬).

ಅಧ್ಯಾಯ ೩

ಗರ್ಭಬುರುಜಿನ ಬಗೆಗಿರುವ ಐತಿಹ್ಯ ಮತ್ತು ಲಾವಣಿಗಳು

ಮೂರನೆಯ ಅಧ್ಯಾಯವನ್ನು ಒಟ್ಟು ಮೂರು ಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆ ಭಾಗದಲ್ಲಿ ತಖ್ತ್‌ಮಹಲಿಗೆ ಸಂಬಂಧಿಸಿದಂತೆ ಇರುವ ಆಕರಗಳ ಬಗ್ಗೆ ಹೇಳಲಾಗಿದೆ. ಎರಡನೆ ಭಾಗದಲ್ಲಿ ಗರ್ಭಬುರ್ಜಿಗೆ ಸಂಬಂಧಿಸಿದಂತೆ ಇರುವ ಐತಿಹ್ಯಗಳ ಬಗ್ಗೆ ಹೇಳಲಾಗಿದೆ. ಮುಖ್ಯವಾಗಿ 'ಬಲಿ' ಬಗ್ಗೆ ಐತಿಹ್ಯಗಳಿರುವುದು ಕಂಡುಬರುತ್ತದೆ. ಈ ವಿಷಯಗಳನ್ನು ವಿಶ್ವನಾಥ ಮತ್ತು ಗೋದಾವರಿ ಅವರಿಂದ ಸಂಗ್ರಹಿಸಿ ಐತಿಹ್ಯ ಹಾಗೂ ಲಾವಣಿಗಳ ಮೂಲಕ ಪ್ರಸ್ತುತ ಅಧ್ಯಾಯದಲ್ಲಿ ಪರಿಶೀಲಿಸಲು ಪ್ರಯತ್ನಿಸಲಾಗಿದೆ. ಗರ್ಭಬುರ್ಜಿಗೆ ಬಲಿಯಾದ ಸಂಗಮ್ಮಳ ಕಥೆಯನ್ನು ವಿವರಿಸಲಾಗಿದ್ದು, ನಂತರ ಇದೇ ಗರ್ಭಬುರ್ಜಿಗೆ ಬಲಿಯಾದ ಸಂಗಮ್ಮಳ ಬಲಿಯ ಬಗ್ಗೆ ಲಾವಣಿ ಮೂಲಕ ತಿಳಿಸಲು ಪ್ರಯತ್ನಿಸಲಾಗಿದೆ.

ಬೀದರ್‌ನ ಕೋಟೆಯೊಳಗೆ ತಖ್ತ್‌ಮಹಲಿಗೆ ಹೊಂದಿಕೊಂಡಂತೆ ರಾಣಿಯ ಅಂತಪುರದ ಹಿಂದಿನ ಭಾಗದಲ್ಲಿ ಒಂದು ಬುರ್ಜು ಇದೆ. ಈ ಬುರ್ಜಿಗೆ ಜನಪದರು ಗರ್ಭಬುರ್ಜು ಎಂದು ಕರೆಯುತ್ತಾರೆ. ಬುರ್ಜಿಗೆ ಹೊಂದಿಕೊಂಡಂತೆ ಕೆಳಭಾಗದಲ್ಲಿ ಒಳಕೋಟೆಯನ್ನು ಪ್ರವೇಶಿಸಲು ಒಂದು ದ್ವಾರವಿದೆ. ಈ ಬುರ್ಜು ತನ್ನದೆಯಾದ ಒಂದು ಐತಿಹಾಸಿಕ ಐತಿಹ್ಯವನ್ನು ಹೊಂದಿದೆ. ಈ ಬುರ್ಜನ್ನು ಒಂದನೇ ಶಹಾಬುದ್ದಿನ್‌ನ ಆಳ್ವಿಕೆ ಕಾಲದಲ್ಲಿ ಕಟ್ಟಲಾಗಿದೆ ಎಂದು ಷೇಕ್ ಅಲಿಯವರ ಉಲ್ಲೇಖವಿದೆ (ಷೇಕ್‌ಅಲಿ, ೧೯೯೭ : ೧೪೬). ಈ ಉಲ್ಲೇಖದ ಮೇರೆಗೆ ಬುರ್ಜನ್ನು ೧ನೇ ಶಹಾಬುದ್ದಿನ್‌ನ ಆಳ್ವಿಕೆ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ ಎಂದು ಒಂದು ತೀರ್ಮಾನಕ್ಕೆ ಬರಬಹುದು.



ಒಳಕೋಟೆಯಲ್ಲಿರುವ ತಖ್ತ್‌ಮಹಲ್



ಬಹಮನಿಯ ಅರಸರ ಆಳ್ವಿಕೆಯ ಕಾಲದಲ್ಲಿ ಈ ತಖ್ತ್ ಮಹಲ್ ಕಟ್ಟಡವು ಅರಸರ ಪರಿವಾರದ ವಾಸಸ್ಥಾನವಾಗಿತು. ಕೆಲಕಾಲ ಇದರೊಳಗೆ ಸಿಂಹಾಸನ ಕೂಡ ಇರಿಸಲಾಗಿತ್ತೆಂದು ಕಾಣುತ್ತದೆ. ಹೀಗಾಗಿ ಜನರು ಅದನ್ನು ತಖ್ತ್ (ಸಿಂಹಾಸನ) ಮಹಲ್ ಎಂದಾಗಿಯೇ ಕರೆಯುತ್ತಾರೆ. ಈ ಕಟ್ಟಡವು ಕೂಡ ಇಂದು ಭಗ್ನಾವಸ್ಥೆಯಲ್ಲಿ ಇದೆ. ಈ ತಖ್ತ್ ಮಹಲ್ ಬಹಮನಿಯರ ಅರಸ ೧ನೇ ಶಹಾಬುದ್ದಿನ್ ಅಹಮದನ ಅರಮನೆಯಾಗಿತ್ತು. ಆವೃತ್ತದ ಅಂಗಳದ ಉತ್ತರಕ್ಕೆ ಮುಖಮಾಡಿ ಸ್ವಾಗತ ವಿಭಾಗವಿದೆ. ಅಲ್ಲಿ ಸಣ್ಣ ಸಣ್ಣ ಕೊಠಡಿಗಳ ಸಾಲು ಇದೆ. ಅಂಗಳದ ಪಶ್ಚಿಮ ದಿಕ್ಕಿನಲ್ಲಿ ವಿಶಾಲವಾದ ಮಹಾದ್ವಾರ ಇನ್ನೂ ಉಳಿದುಕೊಂಡಿದೆ. ಇದರಲ್ಲಿ ಬಹಮನಿಯರ ಕಾಲದಲ್ಲಿ ಹಾಕಿದ ಸಿರಾಮಿಕ್ ಬಿಲ್ಲೆಗಳು ಉಳಿದಿವೆ. ಹುಲಿ ಮತ್ತು ಸೂರ್ಯ ಗುರುತಿನ ರಾಜ ಚಿಹ್ನೆಯೂ ಕಾಣಸುತ್ತದೆ. ವಿವಿಧ ರೀತಿಯ ಅಲಂಕಾರಗಳಿಂದ ಶೃಂಗರಿಸಲ್ಪಟ್ಟಿದ್ದು ಕೆತ್ತನೆ ಕೆಲಸ ಟೈಲುಗಳ ಅಲಂಕಾರದ ಕುರುಹುಗಳನ್ನು ಇಂದಿಗೂ ಕಾಣಬಹುದಾಗಿದೆ. ಬಹುಮಹಡಿಯ ಕಟ್ಟಡ ಇದಾಗಿದ್ದಿತು. ದೊಡ್ಡ ಕೋಣೆಯ ಒಳಗಡೆ ನೀರಿನ ಕೊಳ, ಕಾರಂಜಿ ವಿಶೇಷ, ಸ್ಮಾರಕದ ದಕ್ಷಿಣದೆಡೆಗೆ ಬಿಸಿ ನೀರಿನ ಈಜುಕೊಳ, ರಾಣಿಯರಿಗೆ ಪ್ರತ್ಯೇಕ ದಾರಿಗಳು ಹಾಗೂ ನೀರು ಹಾಯಿಸಲು ಪೈಪುಗಳನ್ನು ಕೂಡ ಅಳವಡಿಸಲಾಗಿದೆ (ಷೇಕ್‌ಅಲಿ, ೧೯೯೭: ೩೧೧).

ಕೋಟೆಯಲ್ಲಿರುವ ಸ್ಮಾರಕಗಳಲ್ಲಿ ಹೆಚ್ಚಿನ ಭಾಗ ನಾಶವಾಗದೆ ಇರುವ ಕಟ್ಟಡವೆಂದರೆ ಈ ತಖ್ತ್‌ಮಹಲ್ ಎಂದು ಹೇಳಬಹುದು. ರಾಣಿಯರ ಸ್ನಾನ ಕೊಳದ ಮೇಲಿನ ಭಾಗವು ಬಿದ್ದು ಹೋಗಿದೆ. ಸಣ್ಣಾದದ ಕೊಠಡಿಗಳ ಮೂಲಕವೇ ಸ್ನಾನದ ಕೊಳಕ್ಕೆ ಬರಲು ಹೋಗಲು ಮೆಟ್ಟಿಲುಗಳಿದ್ದು ಅವು ನಾಶವಾಗದೆ ಹಾಗೆ ಉಳಿದಿದೆ.

ಈ ತಖ್ತ್ ಮಹಲಿನಲ್ಲಿ ಪ್ರೇಕ್ಷಕರ ಪ್ರವೇಶಕ್ಕಾಗಿ ಉತ್ತರ ದಿಕ್ಕಿನ ದ್ವಾರವನ್ನು ನಿರ್ಮಿಸಲಾಗಿತ್ತು. ಇದಕ್ಕೆ ಪರ್ಶಿಯಾ ಸಂಸ್ಕೃತಿಯನ್ನು ಬಿಂಬಿಸುವ ಹೊರ ಕಮಾನುಗಳನ್ನು ನಿರ್ಮಿಸಲಾಗಿದೆ. ಹೊರ ಕಮಾನನ್ನು ೮ ಅಡಿ ೭ ಇಂಚು ಅಗಲ ೧೭ ಅಡಿ ೪ ಇಂಚು ಎತ್ತರದಲ್ಲಿ ನಿರ್ಮಿಸಲಾಗಿದೆ. ಹೊರ ಕಮಾನು ಮತ್ತು ಒಳಕಮಾನುಗಳ ಮಧ್ಯ ೭ ಅಡಿ ಉದ್ದ ೧೫ ಅಡಿ ೬ ಇಂಚು ಅಗಲವಾಗಿರುವ ಸ್ಥಳವನ್ನು ಪ್ರೇಕ್ಷಕರ ಪ್ರವೇಶಕ್ಕಾಗಿ ಮೀಸಲಿಡಲಾಗಿತ್ತು. ಇದರ ಸುತ್ತಲು ಭದ್ರಕಾವಲುಗಾಗಿ ೬೨ ಅಡಿ ಉದ್ದ ೧೮ ಅಡಿ ೪ ಇಂಚು ಸ್ಥಳದಲ್ಲಿ ಕೋಣೆಗಳನ್ನು ನಿರ್ಮಿಸಲಾಗಿತ್ತು. ತಖ್ತ್ ಮಹಲಿನಲ್ಲಿ ನ್ಯಾಯಾಲಯವು ೨೦೫ ಅಡಿ ಉದ್ದ ೧೪೫ ಅಡಿ ಅಗಲವಾದ ವಿಸ್ತೀರ್ಣ ಹೊಂದಿದೆ. ನ್ಯಾಯಾಲಯದ ಪಶ್ಚಿಮಕ್ಕೆ ಕೋಣೆಗಳಿದ್ದು, ೧೯ ಅಡಿ ೭ ಇಂಚು ೩೪ ಅಡಿ ಅಗಲವನ್ನು ಹೊಂದಿದೆ. ನ್ಯಾಯಾಲಯದ ದಕ್ಷಿಣ ಭಾಗವನ್ನು ರಾಜನ ಕುಟುಂಬಕ್ಕೆ ಮೀಸಲಿಡಲಾಗಿತ್ತು. ಈ ಮಹಲಿನ ಸೌಂದರ್ಯಕರಣಕ್ಕಾಗಿ ಕುಶನ್ ಪ್ರದೇಶದಿಂದ ವಾಸ್ತುಶಿಲ್ಪಿಗಳನ್ನು ಕರೆಯಿಸಿ ಅವರಿಂದ ನಿರ್ಮಾಣ ಮಾಡಲಾಗಿದೆ (ಯಾಜ್ದಾನಿ, ೧೯೪೭: ೬೭).

ಆಧುನಿಕ ನ್ಯಾಯಾಲಯದಂತೆ ಇದ್ದ ಈ ತಖ್ತ್ ಮಹಲ್ ಸ್ಮಾರಕ ಈಗಲೂ ನೋಡಲು ಸಿಗುತ್ತದೆ. ವಿಶಾಲವಾದ ಮಂಟಪವನ್ನು ಹೊಂದಿದ್ದು, ಇಂದಿಗೂ ಮಹಲಿನಲ್ಲಿ ಅರಸನು ಕೂಡುವ ಸಿಂಹಾಸನ ಮತ್ತು ಪರಿವಾರ ವಾಸದ ಕೋಣೆಗಳನ್ನು ಕಾಣಬಹುದಾಗಿದೆ.

*** *** ***

ಈ ತಖ್ತ್‌ಮಹಲಿನ ಹಿಂದೆ ಇರುವ ಬುರ್ಜಿಗೆ ಗರ್ಭಬುರುಜು ಎನ್ನುತ್ತಾರೆ. ಈ ಬುರ್ಜಿಗೆ ಬಲಿಕೊಟ್ಟು ಕಟ್ಟಲಾಗಿದೆ ಎಂದು ಜನಪದರ ನಂಬಿಕೆ. 'ಬಲಿ'ಗೆ ಸಂಬಂಧಿಸಿದಂತೆ ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದು ಅವುಗಳನ್ನು ಅಧ್ಯಾಯದಲ್ಲಿ ಬಳಸಿಕೊಳ್ಳಲಾಗಿದೆ.

> ಜಗತ್ತಿನ ಎಲ್ಲಾ ಭಾಗಗಳಲ್ಲಿರುವಂತೆ ಭಾರತ ಹಾಗೂ ಕರ್ನಾಟಕದಲ್ಲಿ ಬಲಿಪದ್ಧತಿ ಆರಣೆಯಲ್ಲಿತ್ತು. ನಮ್ಮ ಜನಪದರ ಸಂಪ್ರದಾಯ, ಆಚರಣೆ, ನಂಬಿಕೆಗಳು ತುಂಬಾ ಸಂಕೀರ್ಣಯಾದವುಗಳು. ಭಯ ಭಕ್ತಿ ವಿಸ್ಮಯಗಳಿಂದ ಹುಟ್ಟಿರುವ ಇವುಗಳ ಹಿನ್ನೆಲೆಯಲ್ಲಿ ಅನೇಕ ನಿಷ್ಪಾಪಿ ಜೀವಿಗಳು ಬಲಿಯಾಗಿರುವುದನ್ನು ಕಾಣುತ್ತೇವೆ. ಅದರಲ್ಲಿ ಹೆಚ್ಚಾಗಿ ಮಹಿಳೆಯರೇ ಬಲಿಯಾಗಿರುವುದನ್ನು ಗಮನಿಸಬಹುದು. ಬಲಿಯ ಉದ್ದೇಶವು ಒಂದನ್ನು ಹಾಳುಮಾಡುವುದರಿಂದ ಇನ್ನೊಂದನ್ನು ಉಳಿಸುವ ಕೆಲಸವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಗರ್ಭಿಣಿ ಮಹಿಳೆಯರು ಬಲಿಯಾಗಿರುವುದಕ್ಕೆ ಹಲವಾರು ಗೀತೆಗಳಲ್ಲಿ ವ್ಯಕ್ತವಾಗಿದೆ. ಗರ್ಭಿಣಿಯರನ್ನು ಕೋಟೆಗೋಡೆ, ಬಾಗಿಲಿಗೆ ಮತ್ತು ಮನೆಯ ಬಾಗಿಲು ಹಾಗೂ ಕೆರೆಗೆ ಹಾರವಾಗಿ ಕೊಡುತ್ತಿದ್ದುದು ಜನಪದ ಗೀತೆಗಳಲ್ಲಿ ಉಲ್ಲೇಖಗೊಂಡಿವೆ."(ಸುಧಾ, ೨೦೦೫: ೧೨೯).

ಜನಪದರ ನಂಬಿಕೆಗಳು ಹಲವಾರು. ಅವು ಯಾವ ನಂಬಿಕೆಯಲ್ಲಾದರೂ ನೆರವೇರಬಹುದು. ಅದೇ ಕೋಟೆ, ಕೆರೆ, ಇನ್ನಿತರ ಕಟ್ಟಡ ನಿರ್ಮಾಣದ ಸಂದರ್ಭದಲ್ಲಿ ಇಟ್ಟ ಬಾಗಿಲು ಕಟ್ಟಿದ ಗೋಡೆಗಳು ಬಿದ್ದು ಹೋಗುವುದಕ್ಕೆ ಗರ್ಭಿಣಿ ಮಹಿಳೆಯರನ್ನು ಬಲಿ ಕೊಡುವುದರಿಂದ ಬಾಗಿಲು ಗೋಡೆಗಳು ನಿಲ್ಲುತ್ತಿದ್ದವು ಎಂಬ ನಂಬಿಕೆ ಜನಪದರಲ್ಲಿ ಬಲವಾಗಿತ್ತು. ಇದರಿಂದ ಕೋಟೆಯ ನಿರ್ಮಾಣ ಸಂದರ್ಭದಲ್ಲಿ ಕೋಟೆಯ ಬಾಗಿಲು ಗೋಡೆಗಳು ನಿಲ್ಲದೆ ಹೋದಾಗ ಗರ್ಭಿಣಿ ಮಹಿಳೆಯರ ಬಲಿ ಕಾರ್ಯ ಸರ್ವೇಸಾಮಾನ್ಯವಾಗಿತ್ತು ಎನಿಸುತ್ತದೆ. ಯಾವುದೇ ಶುಭಕಾರ್ಯಗಳಿಗೆ ಅಡ್ಡಿಯುಂಟಾದಾಗ ಬಲಿ ಕೊಡುವುದು ನಮ್ಮ ಜನಪದರ ಪದ್ಧತಿಯಾಗಿದೆ.

"ಬಲಿಗಳಲ್ಲೂ ಹಲವಾರು ಬಗೆಗಳಿವೆ, ನರಬಲಿ, ಪ್ರಾಣಿಬಲಿ, ಸಾಂಕೇತಿಕ ಬಲಿ, ಲೈಂಗಿಕ ಮೂಲಕ ಬಲಿದಾನ, ಧಾರ್ಮಿಕ ಬಲಿದಾನ, ಲೌಕಿಕ ಬಲಿದಾನ, ನರಬಲಿಯಲ್ಲೂ ಕೋಟೆ, ಕೆರೆ, ಬಾವಿ, ನದಿಗಳಿಗೆ ಬಲಿಕೊಡುವುದುಂಟು. ಅಲ್ಲದೆ ಶಿಶುಗಳ ಬಲಿ ಮಹಾಸತಿಯ ಸ್ತ್ರೀಯರ ಆತ್ಮಬಲಿದಾನಗಳಿವೆ.

ಜೋಹಾರ ಪದ್ಧತಿಯು ಸಾಮಂತ ಮಹಿಳೆಯರ ಅಗ್ನಿ ಪ್ರವೇಶದ ಬಲಿದಾನಗಳು ಕೂಡ ಇವೆ"(ಸುಧಾ, ೨೦೦೫: ೮೯).

ಎ.ಸಿ.ಸುಧಾ ಅವರು ಬಲಿದಾನಗಳಲ್ಲಿ ಹಲವಾರು ಬಗೆಗಳಿದ್ದು, ಅವು ವಿಶೇಷವಾಗಿ ಕೋಟೆ, ಕೆರೆ ಮತ್ತು ಬಾವಿ ಮುಂತಾದವುಗಳಿಗೆ ಬಲಿಗಳನ್ನು ನೀಡುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ. ಇವರು ಹೇಳಿರುವಂತೆ ಬಲಿಯ ಪ್ರಕಾರಗಳಲ್ಲಿ ನರಬಲಿಯೊಂದು ಬೀದರ್‌ನ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ನಡೆದಿರುವುದು ಕಂಡುಬರುತ್ತದೆ. ಕೆರೆಗೆ ಹಾರವಾಗಿರುವುದನ್ನು 'ಕೆರೆಗೆ ಹಾರ' ಎಂಬ ಪುಸ್ತಕದಲ್ಲಿ ಮತ್ತು 'ಸ್ಥಳೀಯ ಚರಿತ್ರೆ' ಪುಸ್ತಕಗಳಲ್ಲಿ ಉಲ್ಲೇಖಿಸಿರುವುದು ಗಮನಾರ್ಹವಾಗಿದೆ.

ಬಲಿಗೆ ಸಂಬಂಧಿಸಿದಂತೆ ರಾಜಾರಾಮ ಹೆಗಡೆಯವರು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ. ಮೂಲ ಆಚರಣೆಗಳು ಸಂಸ್ಕೃತ ಪೌರಾಣಿಕ ಪ್ರಪಂಚದಷ್ಟು ವೈಚಾರಿಕ ವಿವರಗಳನ್ನು ತಳೆದಿರುವುದಿಲ್ಲ.

> "ಇಲ್ಲಿ ಆಚರಣೆ ಬಹಳ ಮುಖ್ಯವಾಗಿರುತ್ತದೆ. ಆ ಆಚರಣೆಯ ಸಂದರ್ಭವೇ ಎಲ್ಲ ಮಹತ್ವವನ್ನು ಹೊಂದಿದೆ. ಇಂಥ ಆಚರಣೆಗಳನ್ನು ಶಾಬ್ದಿಕವಾಗಿ ನಿರೂಪಿಸುವ ಕೆಲಸ ಮಾಡುವ ಪ್ರದೇಶಿಕ ಭಾಷೆಯ ಹಾಗೂ ಸಂಸ್ಕೃತ ಪುರಾಣಗಳು ಈ ಆಚರಣೆಯ ಅರ್ಥ ಪ್ರಪಂಚವನ್ನು ಕಟ್ಟಿಕೊಡುತ್ತವೆ. ಅದರಲ್ಲಿ ಇಂಥ ಆಚರಣೆಗಳಿಗೆ ವೈಚಾರಿಕತೆಯನ್ನು ಕಟ್ಟಿಕೊಡುವ ಕೆಲಸ ಮಾಡುತ್ತವೆ"(ಹೆಗಡೆ, ೨೦೦೧: ೮೦).

ಹೀಗೆ ಬಲಿ ಕೊಟ್ಟಿರುವುದನ್ನು ಹಲವಾರು ಪುಸ್ತಕಗಳಲ್ಲಿ ಓದಿದ್ದೇವೆ, ಕೇಳಿದ್ದೇವೆ. ಹಾಗಾದರೆ ಬಲಿ ಎಂದರೇನು? ಬಲಿ ನೀಡುವವರು ಯಾರು? ಯಾವ ಸ್ಥಳ ಮತ್ತು ಯಾವ ಸಮಯದಲ್ಲಿ ಬಲಿ ನೀಡಲಾಗುತ್ತದೆ? ಯಾವ ಕಾರಣಕ್ಕಾಗಿ ಬಲಿ ನೀಡಲಾಗುತ್ತದೆ? ಬಲಿ ಪಡೆಯುವ ದೈವತ್ವಗಳಾವುವು? ಬಲಿಯ ವಿಧಾನಗಳು ಯಾವುವು. ಇಂಥ ಹತ್ತಾರು ಪ್ರಶ್ನೆಗಳ ಹಿನ್ನೆಲೆಯಲ್ಲಿ ಸಿಗಬಹುದಾದ ಉತ್ತರಗಳೇ ಬಲಿಯ ನಿಜವಾದ ಸ್ವರೂಪವನ್ನು ಅರಿಯಲು ಸತ್ವದ ಸಾಧನಗಳಾಗಬಲ್ಲವು. ಬಲಿಯ ಹಿಂದಿನ "ಸಾಂಸ್ಕೃತಿಕ ಚರಿತ್ರೆ"ಯನ್ನು ಅರಿಯಲು ನೆರವಾಗಬಲ್ಲವು. ಯಾವ ಕಾಲದಲ್ಲೇ ಬಲಿ ನೀಡಿರಲಿ ಯಾವ ಉದ್ದೇಶಕ್ಕೆ ಬಲಿ ಕೊಟ್ಟಿರಲಿ, ಬಲಿ ಎಂಬುದು ಒಂದು ಹಿಂಸಾ ಮನೋಧರ್ಮದ ನಡವಳಿಕೆಯೇ ಆಗಿರುತ್ತದೆ.

ಜಗತ್ತಿನ ಎಲ್ಲ ರೀತಿಯ ಬಲಿ ಮತ್ತು ಬಲಿದಾನಗಳ ಹಿಂದೆಯೂ ಆಯಾಯಾ ಬುಡಕಟ್ಟುಗಳ ಆದಿಮ ಸ್ವರೂಪದ ಧರ್ಮವೇ ಮುಖ್ಯ ಪ್ರೇರಣಾ ನೆಲೆಯಾಗಿರುವುದು. ಧರ್ಮದಿಂದ ಬೇರ್ಪಡಿಸಿ ಬಲಿಯ ಕಲ್ಪನೆಯನ್ನು ಯಾರೂ ನಿರ್ವಹಿಸಲಾಗುವುದಿಲ್ಲ. ಸಾಮಾನ್ಯವಾಗಿ ಜನಪದರ ಕಾವ್ಯಗಳಲ್ಲಿ ಬರುವ ಮಹಿಳೆಯರ ಬಲಿ-ಬಲಿದಾನಗಳ ವಿಷಯವಂತೂ ಶಾಸ್ತ್ರಗಳಲ್ಲಿ ಕಾಣಿಸಿಕೊಂಡಿರುವುದು ಅತ್ಯಂತ ಅಪರೂಪ (ಸುಧಾ, ೨೦೦೫: ೧೧೨).

ಸುಧಾ ಅವರು ಧಾರ್ಮಿಕತೆಯ ನಂಬಿಕೆಗಳನ್ನು ಹೊರತುಪಡಿಸಿ ಬಲಿ ಮತ್ತು ಬಲಿದಾನಗಳು ನಡೆಯಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಯಾವುದೇ ಕಾರ್ಯಕ್ಕೆ ಬಲಿಯನ್ನು ನೀಡುತ್ತಿದ್ದಾರೆ ಎಂದರೆ ಅಲ್ಲಿ ಧರ್ಮವೇ ಮುಖ್ಯ ಪ್ರೇರಕವೆಂದು ತಿಳಿದು ಬರುತ್ತದೆ.

ಇಂಥ "ಬಲಿದಾನಗಳಿಗೆ" ಹೆಸರುವಾಸಿಯಾದ ಕೋಟೆಗಳಲ್ಲಿ ಬೀದರ್ ಕೋಟೆಯು ಒಂದಾಗಿದೆ. ಬಹಮನಿಯ ಅರಸರ ಆಳ್ವಿಕೆಯ ಕಾಲದಲ್ಲಿ ಈ ಕೋಟೆಯನ್ನು ಕಟ್ಟಲಾಗಿದೆ ಎಂದು ಲಿಖಿತ ಆಕರಗಳು ತಿಳಿಸುತ್ತವೆ. ಆದರೆ ಕೋಟೆಯ ನಿರ್ಮಾಣ ಪೂರ್ವದಲ್ಲಿ ನಡೆದಂತಹ ಘಟನೆಗಳ ಬಗ್ಗೆ ಇತಿಹಾಸವು ಉಲ್ಲೇಖಿಸಿಲ್ಲ. ಕೋಟೆಯನ್ನು ಆ ಅರಸ ಕಟ್ಟಿದನು. ಅವನ ಆಳ್ವಿಕೆ ಕಾಲದಲ್ಲಿ ಕಟ್ಟಲಾಗಿದೆ. ಇಂಥ ಇಸ್ವಿಯಲ್ಲಿ ಕಟ್ಟಲಾಗಿದೆ. ಹೀಗೆ ಹಲವಾರು ವಿಷಯಗಳನ್ನು ನಾವು ಲಿಖಿತ ಆಕರಗಳಲ್ಲಿ ಕಾಣುತ್ತೇವೆ. ಆದರೆ ಕೋಟೆಯನ್ನು ಕಟ್ಟುವ ಕಾಲದಲ್ಲಿ ಯಾರನ್ನು ಬಲಿಕೊಟ್ಟರು. ಯಾವ ಕಾರಣಕ್ಕಾಗಿ ಬಲಿಕೊಟ್ಟರು ಎಂಬ ಹಲವಾರು ವಿಷಯಗಳು ಈ ಕೋಟೆಯ ಸುತ್ತಮುತ್ತಲೂ ವಾಸಿಸುವ ವಕ್ತøರು ಮೌಖಿಕವಾಗಿ ಕೋಟೆಯ ಬಗ್ಗೆ ಈ ಕಥೆ, ಐತಿಹ್ಯ, ಹಾಡು ಮತ್ತು ಗಾದೆಗಳ ಮೂಲಕ ಕೋಟೆಯ ಸಂಕುಲವನ್ನು ಬಿಚ್ಚಿಡುತ್ತಾರೆ. ಇಂಥ ಬಲಿಕೊಡುವ ಶಾಸ್ತ್ರವೊಂದು ಬೀದರ್‌ನ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಕಂಡುಬರುತ್ತದೆ.

ಐತಿಹ್ಯಗಳು

ಕೋಟೆಯಲ್ಲಿರುವ ಈ ಗರ್ಭಬುರ್ಜಿಗೆ ಸಂಬಂಧಿಸಿದಂತೆ ಒಂದು ಐತಿಹ್ಯ ಹಾಗೂ ಲಾವಣಿ ಪದವಿದ್ದು, ಅವುಗಳನ್ನು ಪ್ರಸ್ತುತ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ಕೋಟೆಯಲ್ಲಿನ ಈ ತಖ್ತ್ ಮಹಲಿಗೆ ಹೊಂದಿಕೊಂಡಂತೆ ಇರುವ ಬುರ್ಜಿನ ನಿರ್ಮಾಣ ಕುರಿತಂತೆ ವಕ್ತøರು ಯಾವ ರೀತಿ ತಿಳಿದುಕೊಂಡಿದ್ದಾರೆ. ಅದು ಯಾವ ರೀತಿ ಇತಿಹಾಸ ರಚನೆಗೆ ಸಹಾಯಕಾರಿಯಾಗಿದೆ ಎಂಬುದನ್ನು ತಿಳಿಯುವುದು ಅತ್ಯಂತ ಅವಶ್ಯಕವಾಗಿದೆ. ಜನಪದರು ಈ ಬುರ್ಜಿನ ನಿರ್ಮಾಣ ಕುರಿತಂತೆ ಬಲಿಯ ಹಿನ್ನಲೆಯಲ್ಲಿ ಐತಿಹ್ಯಗಳು ಹೇಳಿರುವುದು ಕಂಡುಬರುತ್ತದೆ.

ಅರಸನು ರಕ್ಷಣೆಗಾಗಿ ಕೋಟೆಯನ್ನು ಕಟ್ಟಿಸುವುದು, ಆ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಬಿದ್ದು ಹೋಗುತ್ತಿರುವ ಗೋಡೆ ನಿಲ್ಲುವುದಕ್ಕಾಗಿ ಊರ ಸಾಹುಕಾರನ ಸೊಸೆಯನ್ನು ಬಲಿಕೊಟ್ಟು ಕೋಟೆಯ ಗೋಡೆಯನ್ನು ಕಟ್ಟುವುದು. ಈ ರೀತಿಯ ಐತಿಹ್ಯವು ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಕಂಡುಬರುತ್ತದೆ.

ಮೊದಲನೆಯ ಐತಿಹ್ಯ

ಈ ಐತಿಹ್ಯವನ್ನು ಕಥೆಯರೂಪದಲ್ಲಿ ವಿಶ್ವನಾಥ[1] ಎನ್ನುವ ವಕ್ತøರು ಹೇಳಿರುವುದನ್ನು ದಾಖಲಿಸಲಾಗಿದೆ. ಅದರ ಪಠ್ಯವು ಹೀಗಿದೆ :

ಒಂದು ಊರಿನಲ್ಲಿ ಒಬ್ಬ ಅರಸನಿದ್ದು, ಅವನು ತುಂಬಾ ಬುದ್ಧಿವಂತನಾಗಿದ್ದನು. ಅವನು ಅನೇಕ ಯುದ್ಧಗಳನ್ನು ಮಾಡಿ ತನ್ನ ರಾಜ್ಯವನ್ನು ಬಲುವಿಸ್ತಾರ ಮಾಡಿದನು. ಅವನು ಇದ್ದ ಊರಿನಲ್ಲೇ ಅವನ ಸಾಮ್ರಾಜ್ಯ ತುಂಬಾ ದೊಡ್ಡದಾಗಿತ್ತು. ಆದ್ದರಿಂದ ಅವನಿಗೆ



ಒಳಕೋಟೆಯಲ್ಲಿರುವ ಗರ್ಭಬುರುಜು

ತನ್ನ ಊರನ್ನು ಶತ್ರುಗಳಿಂದ ಕಾಪಾಡಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಅರಸನು ಒಂದು ದೊಡ್ಡದಾದ ಖಿಲ್ಲೆ ಅಥವಾ ಕೋಟೆಯನ್ನು ಕಟ್ಟುತ್ತಿದ್ದನು. ಕೋಟೆಯನ್ನು ನಿರ್ಮಿಸಿದ ನಂತರ ಒಳಗಿರುವ ಸ್ಮಾರಕಗಳನ್ನು ನಿರ್ಮಿಸಬೇಕಾಗಿತ್ತು. ಆ ಸ್ಮಾರಕವನ್ನು ಕಟ್ಟಿದ ಬಳಿಕ ಕೊನೆಯಲ್ಲಿ ಒಂದು ಮೂಲೆಯಲ್ಲಿ ಬುರ್ಜಿನ ಗೋಡೆಯನ್ನು ಕಟ್ಟುವುದು ಉಳಿದಿತ್ತು. ಯಥಾಪ್ರಕಾರ ಸ್ಮಾರಕವೆಲ್ಲ ಕಟ್ಟಿದರೇ ಆ ಬುರ್ಜನ್ನು ಕೂಡ ಕಟ್ಟಿದವರು. ಕಟ್ಟಿದ ಬಳಿಕ ಎಲ್ಲರೂ ಮನೆಗೆ ಹೋದರು. ಮರುದಿನ ಅರಸ ಬಂದು ಆ ಕಟ್ಟಡ ನೋಡುತ್ತಾನೆ. ಆದರೆ ಕಟ್ಟಿದ ಕೋಟೆಯ ಗೋಡೆ ಬಿದ್ದು ಹೋಗಿರುತ್ತದೆ. ಇದನ್ನು ನೋಡಿ ಅವನಿಗೆ ಆಶ್ಚರ್ಯವೆನಿಸಿತ್ತು. ಏಕೆಂದರೆ ಈ ಬುರ್ಜನ್ನು ನಿನ್ನೆ ಕೂಲಿಕಾರ್ಮಿಕರು ಕಟ್ಟಿರುವುದನ್ನು ನಾನೇ ನನ್ನ ಕಣ್ಣಾರೆ ನೋಡಿದ್ದೇನೆ. ಆದರೆ ಈ ಬುರ್ಜು ಹೇಗೆ ಬಿತ್ತು ಎಂದು ಯೋಚಿಸುತ್ತಾ ನಂತರ ನಿನ್ನೆ ಕಟ್ಟಿದ ಕಾರ್ಮಿಕರನ್ನು ಬರಹೇಳಿದನು. 'ನಿನ್ನೆ ಕಟ್ಟಿದ ಕೋಟೆಯ ಗೋಡೆ ಬಿದ್ದು ಹೋಗಿದೆ. ಊಟ ಮಾಡಿ ಕಟ್ಟಿದ್ದಿರೋ ಅಥವಾ ಹಾಗೆ ಕಟ್ಟಿದ್ದಿರೋ ಎಂದು ಆ ಉಪ್ಪಾರ (ಗೌಂಡಿ) ರಿಗೆ ಮತ್ತೆ ಆ ಗೋಡೆಯನ್ನು ಕಟ್ಟಲು ಹೇಳಿದನು. ಮತ್ತೆ ಉಪ್ಪಾರರು ಹೋಗಿ ಆ ಗೋಡೆಯನ್ನು ಕಟ್ಟುತ್ತಾರೆ. ಕಟ್ಟಿದ ಬಳಿಕ ಎಲ್ಲ ಕೆಲಸಗಾರರು ತಮ್ಮ ತಮ್ಮ ಕೆಲಸದ ಸಾಮಾನುಗಳನ್ನೆಲ್ಲ ಅಂದರೆ ಬುಟ್ಟಿ, ಸಲುಕಿ, ಗುದ್ದಲಿ ಎಲ್ಲ ತೆಗೆದುಕೊಂಡು ಮನೆಗೆ ಹೋಗುತ್ತಾರೆ. ಮರುದಿನ ಬೆಳಿಗ್ಗೆ ಅರಸನು ವಿಹಾರಕ್ಕಾಗಿ ಹೊರಡುತ್ತಾನೆ. ವಿಹಾರಕ್ಕೆಂದು ಹೋದಾಗ ಮತ್ತೆ ಆ ಕೋಟೆಯ ಗೋಡೆ ಕಡೆಗೆ ಹೋಗುತ್ತಾನೆ. ಅರಸನು ಹೋಗಿ ನೋಡುವಷ್ಟರಲ್ಲಿ ಆ ಗೋಡೆಯು ಮತ್ತೆ



ಬಿದ್ದು ಹೋಗುತ್ತದೆ. ಇದನ್ನು ನೋಡಿದ ಅರಸನಿಗೆ ತುಂಬಾ ವಿಚಿತ್ರ ಅನಿಸುತ್ತದೆ. ನಾನು ನಿನ್ನೆಯೇ ಈ ಗೋಡೆಯನ್ನು ಕಟ್ಟಿಸಿದ್ದೇನೆ ಮತ್ತೆ ಇವತ್ತು ಬಿದ್ದು ಹೋಗಿದೆ. ಇದಕ್ಕೆ ಏನು ಕೊರತೆಯಿದೆ ಅಥವಾ ಕಾರ್ಮಿಕರೆ ಇದನ್ನು ಭದ್ರವಾಗಿ ಕಟ್ಟುತ್ತಿಲ್ಲವೆ? ಎಂದು ಯೋಚಿಸಿ ಮತ್ತೆ ತನ್ನ ಅರಮನೆಗೆ ಬರುತ್ತಾನೆ. ಬಂದ ಬಳಿಕ ನಿನ್ನೆ ಕೋಟೆ ಕಟ್ಟಿ ಹೋಗಿರುವ ಕಾರ್ಮಿಕರನ್ನು ಕರೆತರುವಂತೆ ಸೇವಕರಿಗೆ ಹೇಳುತ್ತಾನೆ. ಅದರಂತೆ ಸೇವಕರು ಹೋಗಿ ಆ ಗೋಡೆ ಕಟ್ಟಿದವರನ್ನು ಕರೆದುಕೊಂಡು ಬರುತ್ತಾರೆ. ಬಂದ ಬಳಿಕ ಅರಸನು ಆ ಗೋಡೆ ಕಟ್ಟಿದವರಿಗೆ ಬಯ್ಯುತ್ತಾನೆ. ನಿಮ್ಮ ಕೈಯಲ್ಲಿ ಶಕ್ತಿ ಇದೆಯೋ ಇಲ್ಲವೋ "ಉಂಡಿ ಕಟ್ಟಿದಿರೊ ಉಪವಾಸ ಕಟ್ಟಿದಿರೋ" ನೋಡಿ ನಿನ್ನೆ ಕಟ್ಟಿದ ಕೋಟೆಯ ಗೋಡೆ ಮತ್ತೆ ಇವತ್ತು ಬಿದ್ದು ಹೋಗಿದೆ. ಈ ದಿನ ನಾನು ಎದುರೆ ನಿಂತಿರುತ್ತೇನೆ ನಡೆಯಿರಿ ಗೋಡೆಯನ್ನು ಕಟ್ಟಿ ಎನ್ನುತ್ತಾನೆ. ಬಳಿಕ ಎಲ್ಲರೂ ಗೋಡೆಯ ಕಟ್ಟುವ ಸ್ಥಳಕ್ಕೆ ಬಂದು ಅರಸನೇ ಎದುರೆ ನಿಂತು ಕೋಟೆಯ ಗೋಡೆಯನ್ನು ಕಟ್ಟಿಸುತ್ತಾನೆ. ಕಟ್ಟಿದ ಬಳಿಕ ಎಲ್ಲರೂ ಮನೆ ಕಡೆಗೆ ಹೋಗುತ್ತಾರೆ. ಮರುದಿನ ಅರಸನು ಯಥಾ ಪ್ರಕಾರ ವಿಹಾರಕ್ಕೆ ಹೊರಡುತ್ತಾನೆ. ಮತ್ತೆ ಬಂದು ಕೋಟೆಯ ಗೋಡೆಯನ್ನು ನೋಡುತ್ತಾನೆ. ಅದು ಬಿದ್ದು ಹೋಗಿರುತ್ತದೆ. ಇದನ್ನು ನೋಡಿದ ಅರಸನಿಗೆ ತುಂಬಾ ಅಸಮಾಧಾನವಾಗುತ್ತದೆ. ಅಲ್ಲದೆ ಅರಸನು ತುಂಬಾ ಹತಾಶನಾಗುತ್ತಾನೆ. ಹೀಗೆ ದಿನವೆಲ್ಲ ಕಟ್ಟಬೇಕು ಮರುದಿನ ಅದು ಬಿದ್ದು ಹೋಗಬೇಕು ಇದರಿಂದಾಗಿ ಅರಸನಿಗೆ ತುಂಬಾ ಬೇಸರವಾಗುತ್ತದೆ. ಯಾಕೆ ಗೋಡೆ ನಿಲ್ಲುತ್ತಿಲ್ಲವೆಂದು ಅದರ ಚಿಂತೆಯಲ್ಲಿಯೇ ಕುಳಿತಿರುತ್ತಾನೆ. ಕೊನೆಗೆ ಒಂದು ದಿನ ಅರಸನು ಊರ ಜೋಯಿಸರನ್ನು ಕರೆಯಿಸುತ್ತಾನೆ. ಅವರಿಗೆ ನಡೆದ ವಿಷಯವನ್ನೆಲ್ಲ ಹೇಳುತ್ತಾನೆ. ಇದರಿಂದ ಒಂದು ಪರಿಹಾರದ ಮಾರ್ಗವನ್ನು ಜೋಯಿಸರು ಅರಸನಿಗೆ ಹೇಳುತ್ತಾರೆ. ಅದು ೧೦೭ ಜನ ಗರ್ಭ ಸ್ತ್ರೀಯರನ್ನು ಬಲಿಕೊಟ್ಟರೆ ಮಾತ್ರ ಈ ಗೋಡೆ ನಿಲ್ಲುತ್ತದೆ ಎಂದು ಹೇಳುತ್ತಾನೆ. ಅದಕ್ಕೆ ಅರಸನು ಅನೇಕ ಗರ್ಭಿಣಿ ಸ್ತ್ರೀಯರನ್ನು ಇದಕ್ಕೆ ಬಲಿಕೊಟ್ಟು ಈ ಗೋಡೆಯನ್ನು ನಿಲ್ಲುವಂತೆ ಮಾಡಿದ್ದಾನೆ"

ಈ ಬಗೆಯಲ್ಲಿ ವಕ್ತೃರು ವಿವರಿಸುತ್ತಾ ಇದಕ್ಕೆ ಗರ್ಭಿಣಿ ಸ್ತ್ರೀಯರನ್ನು ಬಲಿ ನೀಡಿರುವ ಕಾರಣಕ್ಕಾಗಿ ಗರ್ಭ ಬುರುಜು ಎಂತಲೇ ಕರೆಯುತ್ತಾರೆ. ಇಂತಹ ಬಲಿ ಕೊಡುವ ಪದ್ಧತಿ ಪ್ರಾಚೀನ ಕಾಲದಿಂದಲೂ ಇದ್ದು, ಅದು ಬೀದರ್ ಕೋಟೆಯ ನಿರ್ಮಾಣದ ಸಂದರ್ಭದಲ್ಲಿಯೂ ಬಲಿಯನ್ನು ಕೊಡಲಾಗಿತ್ತೆಂದು ಐತಿಹ್ಯದ ಮೂಲಕ ತಿಳಿದುಬರುತ್ತದೆ.

"ಸಿಂಧೂ ನಾಗರಿಕತೆಯಲ್ಲೂ ಅರಣ್ಯವಾಸಿಗಳು ಉತ್ಪಾದಿಸುತ್ತಿದ್ದ ಹೆಚ್ಚುವರಿ ಆಹಾರವನ್ನು ಬಲಿಯ ನೆಪದಲ್ಲಿ ದೇವಾಲಯಕ್ಕೆ ಕಾಣಿಕೆಯಾಗಿ ಸಲ್ಲಿಸಲ್ಪಡುತ್ತಿತ್ತು ಎಂಬುದಾಗಿ ಕೊಸಾಂಬಿಯವರು ಅಭಿಪ್ರಾಯ ಪಟ್ಟಿದ್ದಾರೆ. ಇಂತಹುದು ಭಾರತ ದೇಶದ ಚರಿತ್ರೆಯಲ್ಲಿ ಪದೇ ಪದೇ ಜರುಗುತಿತ್ತು ಎಂಬ ಅಭಿಪ್ರಾಯ ಅವರದು"[೨]. ಹೀಗೆ ಕೋಟೆಗೆ ನೀಡಿದ ಬಲಿಯಿಂದ ವ್ಯಕ್ತವಾಗುವ ಅಂದಿನ ಚರಿತ್ರೆ ಪುರುಷ

ಪ್ರಧಾನ ಸಮಾಜಕ್ಕೆ ಹಾಕಿದ ಸವಾಲು, ಸಮಾಜದೊಂದಿಗೆ ತನ್ನ ನಿಲುವು ತಿಳಿಸಿದ ಹೆಣ್ಣು ಮಕ್ಕಳು ಇಂಥ ಕೋಟೆಗಳಿಗೋ, ಕೆರೆಗಳಿಗೋ ಇತರೆ ಯಾವುದೋ ಧಾರ್ಮಿಕ, ಸಾಮಾಜಿಕ ಕಾರ್ಯಗಳಿಗಾಗಿ ಬಲಿಯಾಗಿರುವುದನ್ನು ಕೇಳುತ್ತೇವೆ. ಪುಸ್ತಕಗಳಲ್ಲಿ ಓದುತ್ತೇವೆ. ಕೆರೆ ಏರಿ ನಿಲ್ಲಲು ಬಲಿ ಅರ್ಪಿಸಿದ ಕಥೆಯೊಂದು ನಾಗಮಂಗಲದ ಸಮೀಪದ "ಸೂಳೆಕೆರೆ" ಬಗ್ಗೆ ಪ್ರಚಲಿತವಾಗಿದೆ. ರಾಜನ ಸೂಳೆಯೊಬ್ಬಳು ಕಟ್ಟಿಸುತ್ತಿದ್ದ ಕೆರೆ ಏರಿ ನಿಲ್ಲದಿದ್ದಾಗ ಅದಕ್ಕೆ ತಾನೇ ಬಲಿಯಾದ ಪ್ರಸಂಗವನ್ನು"[೩] ಲಕ್ಷ್ಮಣ್ ತೆಲಗಾವಿ ಅವರು ದಾಖಲಿಸಿದ್ದಾರೆ (ತೆಲಗಾವಿ, ೨೦೦೩: ೬೪). ಊರ ರಕ್ಷಣೆಗಾಗಿ ಕಟ್ಟುತಿದ್ದ ಕೋಟೆಯ ಗೋಡೆ ಕಟ್ಟಿದ ಮರುದಿನವೇ ಬೀಳುತ್ತಿದ್ದಾಗ ಜೋಯಿಸರ ಅಪ್ಪಣೆಯ ಮೇರೆಗೆ ಕುಂಟೋಜಿ ಗ್ರಾಮದ ಗೌಡನ ಮನೆಯ ಹೆಣ್ಣುಮಗಳೊಬ್ಬಳು ಆಹುತಿಯಾದದ್ದು ಈಗ ಹುಡೆದ ಲಕ್ಷ್ಮಿ ಐತಿಹ್ಯವಾಗಿ ಉಳಿದಿದ್ದಾಳೆ. ಊರಿನ ಹಿತಕ್ಕಾಗಿ ಬಲಿಯಾದ ಅಣಬೆ ಹೊನ್ನಮ್ಮ ಮತ್ತು ಹುಳಿಯಾರ ಕೆಂಚಮ್ಮ ಇಂದು ಆದರ್ಶ ಸ್ತ್ರೀಯರಾಗಿದ್ದಾರೆ. ಜನರು ಅವರನ್ನು ಇಂದು ದೇವತೆಗಳಂತಲೂ ಪೂಜಿಸುತ್ತಿದ್ದಾರೆ ಎಂದು ಚಿನ್ನಸ್ವಾಮಿ ಸೋಸಲೆ ಅವರು ಉಲ್ಲೇಖಿಸಿರುವುದು ಗಮನಾರ್ಹವಾಗಿದೆ (ಸೋಸಲೆ, ೨೦೦೩: ೬೪). ಅದರಂತೆ 'ಬಿಜಾಪುರದ ಆದಿಲ್ ಷಾಹಿ ಆಳ್ವಿಕೆಯ ಕಾಲದಲ್ಲಿ ಹರಸಂಗಿ ಕೋಟೆ ಕಟ್ಟುವಾಗ ಕೋಟೆ ನಿಲ್ಲಬೇಕಾದರೆ, ಗರ್ಭಸ್ತ್ರೀಯನ್ನು ಬಲಿಕೊಟ್ಟ ಐತಿಹ್ಯದ ಉಲ್ಲೇಖವಿದೆ (ಪಾಟೀಲ್, ೧೯೯೬: ೫).

ಈ ಬಲಿಯ ಐತಿಹ್ಯವು ಲಾವಣಿ ಪದದ ರೂಪದಲ್ಲಿ ವಕ್ತರಿಂದ ಹೊರಹೊಮ್ಮಿದೆ. ಈ ರೀತಿಯಾದಂತ ಐತಿಹ್ಯಗಳು ನಮಗೆ ಇಂದು ಕೇಳಲು ಸಿಗುತ್ತವೆ. ಅನಾದಿ ಕಾಲದಿಂದಲೂ ಮೂಢನಂಬಿಕೆ, ಸಂಪ್ರದಾಯ, ಆಚರಣೆಗಳು, ಪದ್ಧತಿಗಳು ಹಾಗೆ ಬೆಳೆದುಕೊಂಡು ಬಂದಿವೆ. ಐತಿಹ್ಯಗಳ ಮೂಲಕ ಈ ಪದ್ಧತಿಗಳನ್ನು ಆಚರಿಸುತ್ತಿದ್ದ ಸಮಯದಲ್ಲಿ ಜನರ ಸಾಮಾಜಿಕ ಬದುಕು, ಅವರ ಸಾಂಸ್ಕೃತಿಕ ಜೀವನದ ವಿಧಾನಗಳು ಹೇಗಿದ್ದವು ಎಂಬುವುದನ್ನೆಲ್ಲ ಐತಿಹ್ಯಗಳ ಮೂಲಕ ಕಂಡುಕೊಳ್ಳಬಹುದು.

ಈ ಪ್ರದೇಶದ ಜನಾಂಗಿಕ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಈ ವ್ಯವಸ್ಥೆಯೊಳಗೆ ನಡೆದಿರಬಹುದಾದ ಕೆಲವು ಸಮುದಾಯಗಳ ಆಕ್ರಮಣಶೀಲ ಪ್ರವೃತ್ತಿಯನ್ನು ಬಿಂಬಿಸಲು ಐತಿಹ್ಯಗಳು ಕೂಡ ಇವೆ. ಬಲಿಯನ್ನು ಅರ್ಪಿಸುವುದರಿಂದ ದುಷ್ಟ ಪಿಶಾಚಿ, ರಾಕ್ಷಸ ಶಕ್ತಿಗಳಿಂದ ಊರಿಗೆ, ಮನೆಗೆ, ಕುಟುಂಬಕ್ಕೆ ಬಂದಂಥ ಆಪತ್ತು ದೂರವಾಗುವುದರ ಜೊತೆಗೆ ಪಿಶಾಚಿ, ರಾಕ್ಷಸ ಇಂಥವುಗಳಿಗೆ ಸಂತಸವಾಗುತ್ತದೆ ಎಂಬ ನಂಬಿಕೆ. ಅದಲ್ಲದೆ ತಾವು ಕಟ್ಟಿಸುತ್ತಿರುವ ಕೋಟೆ, ಮನೆ, ಗೋಡೆ, ಕೆರೆ, ಬಾವಿ ಮುಂತಾದವುಗಳ ಭದ್ರತೆಗಾಗಿ ಬಲಿ ಕೊಡುತ್ತಿದ್ದರು. ಹೀಗೆ ಬಲಿಕೊಟ್ಟ ಸ್ತ್ರೀಯೊಬ್ಬಳ ಬದುಕಿನ ಚಿತ್ರಣವನ್ನು ಈ ಗರ್ಭ ಬುರ್ಜು ತನ್ನ ಸುತ್ತಲೂ ಐತಿಹ್ಯದ ರೂಪದಲ್ಲಿ ಸುತ್ತಿಕೊಂಡಿದೆ.

ಬಲಿಗೆ ಸಂಬಂಧಿಸಿದ ಐತಿಹ್ಯಗಳು ಪದ್ಯ ರೂಪದಲ್ಲಿ, ಗದ್ಯರೂಪದಲ್ಲಿ, ಕಥೆ ರೂಪದಲ್ಲಿ, ಒಗಟು, ಗಾದೆ ಮುಂತಾದವುಗಳ ರೂಪದಲ್ಲಿ ನಮಗೆ ದೊರೆಯುತ್ತವೆ. ಇಂಥ ಲಾವಣಿ ಪದವು ನಮಗೆ ಬೀದರ್ ಕೋಟೆಯ ಬಲಿಗೆ ಸಂಬಂಧಿಸಿದಂತೆ ಸಿಗುತ್ತವೆ. ಅಂಥ ಲಾವಣಿಯ ಪದವು ಬುಲಾಯಿ ಹಾಡಾಗಿ

ಹೊರಹೊಮ್ಮಿದೆ. ಈ ಜನಪದ ಲಾವಣಿಯನ್ನು ಬಳಸುವುದಕ್ಕಿಂತ ಮೊದಲು ಲಾವಣಿ ಪದದ ನಿಷ್ಪತ್ತಿಯನ್ನು ಅರಿಯುವುದು ಸೂಕ್ತ.

ಸಂಸ್ಕೃತದಲ್ಲಿ ಲಾವಣಿ ಎಂದರೆ ಅದರ ಅರ್ಥ cutting plucking gathering ಎಂದು ಲಾವಣಿಗೆ A mass, a collect in or connection join together ಎಂದು ಕಿಟೆಲ್ ತಿಳಿಸುತ್ತಾರೆ. ಲಾವಣಿ ಎನ್ನುವ ಪದ ಬಳಕೆಯಲ್ಲಿದ್ದು ಅದಕ್ಕೆ ಯುದ್ಧದ ಕುಣಿತ, ಸೌಂದರ್ಯ, ಕೌಶಲ್ಯ, ಪ್ರಯೋಗ, ಚಾತುರ್ಯ ಎಂಬ ಅರ್ಥವಿದ್ದಂತೆ ತೋರುತ್ತದೆ. ಲಾವಣಿ ಎಂದರೆ ಸೈನ್ಯ ವಾಟಿಕೆಯಲ್ಲಿ ಉತ್ಸಾಹ ವಿಜೃಂಭಣೆಗಾಗಿ, ವಿಜಯಾನಂದಕ್ಕಾಗಿ ಕುಣಿಯುತ್ತ ಹಾಡುತಿದ್ದ ಲಯ ಪ್ರಧಾನವಾದ ಗೀತೆಗಳು ಎನ್ನುತ್ತೇವೆ. ಐತಿಹ್ಯಗಳು, ಪೌರಾಣಿಕ ಕಥೆಗಳು, ವೀರ ಸಾಹಸಗಳು, ಮಹಾಸತಿಯರ ದಾನವೀರರ ಕೊಡು, ಪ್ರಣಯ ಸಂಗತಿಗಳು ಮತ್ತು ಪ್ರಾಣಾರ್ಪಣೆ ಮುಂತಾದವುಗಳು ಲಾವಣಿಯ ಸಾಮಗ್ರಿಗಳಾಗಿವೆ. ಲಾವಳಿ>ಲಾವಣಿ=ಲಾವಣಿಯನ್ನು ಛಂದಃಶಿಲ್ಪ, ಸಂಗೀತ ಶಿಲ್ಪ ಎಂಬ ಎರಡು ಮಗ್ಗುಲಗಳಿಂದ ಲಕ್ಷಣಿಸಬಹುದುದಾಗಿದೆ. ಲಾವಣಿ ಎನ್ನುವುದು ಛಂದಸ್ಸು ಮತ್ತು ಸಂಗೀತ ವಿಶಿಷ್ಟವಾದ ಪ್ರಕಾರವೇ ಹೊರತು ವಸ್ತು ವಿಶಿಷ್ಟ ಪ್ರಕಾರವಲ್ಲ ಎಂದು ರಾಮಚಂದ್ರಗೌಡ ಹೇಳಿದ್ದಾರೆ (ರಾಮಚಂದ್ರೇಗೌಡ, ೨೦೦೧ : ೧೫೨). ಇಂಥ ಲಾವಣಿಗಳಲ್ಲೊಂದು ಬೀದರ್ ಕೋಟೆಯ ಐತಿಹ್ಯದಲ್ಲಿ ಕಂಡುಬರುತ್ತದೆ.

ಕೆರೆಗೆ ಹಾರವಾದ ಹೆಣ್ಣುಮಗಳ ಬಲಿದಾನಕ್ಕಿಂತಲೂ ಸಂಪೂರ್ಣ ಭಿನ್ನವಾದ ಬಲಿದಾನದ ಕಥೆಯನ್ನು ತನ್ನ ಮಡಿಲಿನಲ್ಲಿಟ್ಟುಕೊಂಡಿರುವಂತದ್ದು. ಕೋಟೆಗೆ ಬಲಿಯಾದವರ ಕಥನ ಗೀತೆಗಳಲ್ಲಿ ಸಿಗುವುದು ಅಪರೂಪ. ಕೋಟೆಗೆ ಬಲಿಯಾದ ಸಂಗಮ್ಮಳ ದುರಂತದ ಕಥಾನಕವಿದು. ಕೋಟೆಯಾಳಿದ ಪ್ರಭುಗಳು ನಾಶವಾಗಿ ಹೋಗಬಹುದು, ಗೋಡೆಗಳು ಶಿಥಿಲವಾಗಿ ಹೋಗಿರಬಹುದು. ಆದರೆ ಬಲಿದಾನದ ದುರಂತ ಹಾಗೂ ದಾರುಣತೆಗಳು ನಾಶವಾಗದೆ ಜನಪದ ಸಮುದಾಯದ ನೆನಪಲ್ಲಿ ಚಿರಂತನವಾಗಿ ಉಳಿದಿರುವುದು ಯಾವುದು ನಿಜವಾದ ಮೌಲ್ಯ ಎಂಬುದು ಸೂಚಿಸುತ್ತದೆ.

ಲಾವಣಿ ಪದ

ಬೀದರ್ ಕೋಟೆಯಲ್ಲಿರುವ ಗರ್ಭಬುರ್ಜಿಗೆ ಸಂಬಂಧಿಸಿದಂತೆ ಐತಿಹ್ಯಗಳಲ್ಲದೆ ಲಾವಣಿ ಪದಗಳು ಕಂಡುಬರುತ್ತದೆ. ಈ ಲಾವಣಿ ಪದಗಳು ಗರ್ಭಬುರ್ಜಿಗೆ ಬಲಿ ನೀಡಿರುವುದನ್ನು ಬುಲಾಯಿ' ಹಾಡಿನ ರೂಪದಲ್ಲಿ ವಕ್ತರಾದ ಗೋದಾವರಿ ಗಂಡ ಸದಾಶಿವ ಇವರು ಹೇಳಿರುವುದನ್ನು ಇಲ್ಲಿ ದಾಖಲಿಸಲಾಗಿದೆ.

ಬೀದರ ಕ್ವಾಟಿ ಊರಾಗ ಕಿಲ್ಲೆನಾದರ ಕಟ್ಟುತಾರಂತ
ಒಂದೊಂದು ಕಲ್ಲೀಗಿ ಮುಗಿಯಣಿಲ್ರಿ ಕೋಟೆಯ ತಳಪಾಯ||ಕೋಲೆಣ್ಣಾ ಕೋಲೆ||
ಬೀದರ ಕೋಟಿ ಪಟ್ಟಣದಲ್ಲಿ ಮಲಶೆಟ್ಟಿ ಸಾವುಕಾರ

ಮಲಶೆಟ್ಟಿ ಸಾವುಕಾರಗ ಐದ್ ಮಂದಿ ಗಂಡಸ ಮಕ್ಕಳು||ಕೋಲೆಣ್ಣಾ ಕೋಲೆ||

ಮಲಶೆಟ್ಟಿ ಸಾವುಕಾರಗ ಐದ್ ಮಂದಿ ಗಂಡಸ ಮಕ್ಕಳು
ಅವರೀಗಿ ಐದ್ ಮಂದಿ ಸೊಸೀದೇರು ||ಕೋಲೆಣ್ಣಾ ಕೋಲೆ||

ಮಲಶೆಟ್ಟಿ ಸಾವುಕಾರಗ ಸರಕಾರ ಕರಸ್ಯಾರ
ಐದು ತಿಂಗಳ ಗರ್ಭಕ ನೋಡಿ ಕೋಟೆಯ ಥರಾ ಬೇಡಾದರಿ||ಕೋಲೆಣ್ಣಾ ಕೋಲೆ||

ಪರಹೆಣ್ಣು ಮಗಳಿಗಿ ನಾ ಹ್ಯಾಂಗ ಕೊಡಲಿ ಸರಕಾರ
ಮುತಿನಂಥ ಮಗನಿಗಿ ಕೊಡತಿನಿರಿ ಸರಕಾರ||ಕೋಲೆಣ್ಣಾ ಕೋಲೆ||

ಮುತಿನಂಥ ಮಗನಿಗಿ ಮುಗಿಯಣಿಲ್ಲ ತಳಪಾಯ
ಎಂದು ಹೇಳ್ಯಾರ ಸರಕಾರ||ಕೋಲೆಣ್ಣಾ ಕೋಲೆ||

ಅಲಿಂದ ಸಾವುಕಾರ ಮನಿಗಾರ ಬಂದಾರ
ಒಳಗಿಂದ ಸಂಗಮ್ಮ ಹೊರಕ್ಕರ ಬಂದಾಳಿ||ಕೋಲೆಣ್ಣಾ ಕೋಲೆ||

ಯಾಕರಿ ಮಾಮಾಜಿ ದಿಗಿಲಾಗಿ ಕುಂತೀರಿ
ಬೀದರ ಕ್ಯಾಟಿ ಊರಾಗ||ಕೋಲೆಣ್ಣಾ ಕೋಲೆ||

ಬೀದರ ಕ್ಯಾಟಿ ಊರಾಗ ಕಿಲ್ಲೆನಾದರ ಕಟ್ಟತಾರಂತ
ಅದು ನಿನಗೆ ಬೇಡ್ಯಾದಂತ ಸಂಗಮ್ಮ||ಕೋಲೆಣ್ಣಾ ಕೋಲೆ||

ಅಷ್ಟೆಂಬ ಶಬ್ದಾರ ಕೇಳ್ಯಾರೆ ಸಂಗಮ್ಮ
ಒಳಕಾರ ಬಂದಾಳೆ, ಝಳಕಾಕ ನೀರು ಹಿಡಿದಾಳೆ||ಕೋಲೆಣ್ಣಾ ಕೋಲೆ||

ಝಳಕಾಕ ನೀರು ಹಿಡಿದಾಳೆ
ಮಾವರೊಚನಕಾ ನಡದಾಳಿ||ಕೋಲೆಣ್ಣಾ ಕೋಲೆ||

ಝಳಕಾರೆ ಮಾಡ್ಯಾಳೆ ಪೂಜಾಕ ಕುಂತಾಳೆ
ಪೂಜಾರ ಮಾಡ್ಯಾಳೆ ಊಟಕ್ಕೆ ಕುಂತಾಳೆ||ಕೋಲೆಣ್ಣಾ ಕೋಲೆ||

ಒಂದ ತುತ್ತು ಉಂಬಳಿಗೆ ಒಬ್ಬ ಜವಾನ
ಎರಡ ತುತ್ತು ಉಂಬಳಗೆ ಇಬ್ಬರು ಜವಾನ ಬಂದಾರೆ||ಕೋಲೆಣ್ಣಾ ಕೋಲೆ||

ಸಂಗಮ್ಮಗ ಒಪ್ಪಂತ ಸೀರಿ ಅವರು ತಂದಾರೆ
ಸಂಗಮ್ಮಗ ಒಪ್ಪಂತ ದಂಡಿ ಅವರು ತಂದಾರೆ||ಕೋಲೆಣ್ಣಾ ಕೋಲೆ||

ಅಳುಬ್ಯಾಡ್ರಿ ಮಾಮಾಜಿ ಕರೀಬ್ಯಾಡ್ರಿ ಮಾಮಾಜಿ
ಕೋಟೆಯ ಥರಕನಂತೆ ಹಡೆದೆ ಇಟ್ಟಾಳೆ ಹಡೆದಮ್ಮ||ಕೋಲೆಣ್ಣಾ ಕೋಲೆ||

ಒಂದ ಸುತ್ತು ತಿರಗ್ಯಾಳೆ
ಎರಡ ಸುತ್ತು ತಿರಗ್ಯಾಳೇ||ಕೋಲೆಣ್ಣಾ ಕೋಲೆ||

ಮೂರ ಸುತ್ತು ತಿರುಗ್ಯಾಳೆ
ನಾಕ ಸುತ್ತು ತಿರುಗ್ಯಾಳೆ
ಐದೆಂಬ ಸುತ್ತೀಗಿ ಕೋಟೆಯ ಥರಾದಾಗ ಹಾಕ್ಯಾರೆ||ಕೋಲೆಣ್ಣಾ ಕೋಲೆ||

ಜನಸಮುದಾಯದ ಮನೋಧರ್ಮದ ಮುದ್ರೆಯನ್ನೊತ್ತಿಕೊಂಡು ಹುಟ್ಟಿದ ಐತಿಹ್ಯಗಳು ಜನರ ಸಾಂಸ್ಕೃತಿಕ ಬದುಕಿನ ಮೇಲೆ ಮಹತ್ತರವಾದ ಪರಿಣಾಮ ಬಿರುತ್ತವೆ. ಯಾವುದೇ ಒಂದು ಸಣ್ಣ ಚಾರಿತ್ರಿಕ

ಘಟನೆಯ ಸುತ್ತ ಅದ್ಭುತವಾದ ಸನ್ನಿವೇಶಗಳು ಬೆಳೆದು ತಲೆಮಾರುಗಳ ಮೂಲಕ ಹರಿಯುವ ಕಥೆಯಾಗಿ ರೂಪುಗೊಂಡಿರುತ್ತದೆ ಅವುಗಳೇ ಐತಿಹ್ಯಗಳಾಗುತ್ತವೆ ಎಂದು ಚಿದಾನಂದಮೂರ್ತಿ ಅಭಿಪ್ರಾಯ ಪಟ್ಟಿರುವುದು ಈ ಸಂದರ್ಭದಲ್ಲಿ ಸಮಯೋಜನೆಯಾಗಿದೆ ಎನ್ನಬಹುದು (ಚಿದಾನಂದಮೂರ್ತಿ, ೧೯೭೯: ೧೦೮).

ಮೌಖಿಕ ಪರಂಪರೆಯಲ್ಲಿರುವ ಜನಪದ ಕಥನ ಗೀತೆಗಳು, ಗಾದೆಗಳು, ಕಥೆಗಳು, ನಂಬಿಕೆಗಳು ಹಾಗೂ ಇನ್ನಿತರ ಜನಪದ ಪ್ರಕಾರಗಳು ಇಲ್ಲಿ ಮುಖ್ಯವಾಗುತ್ತವೆ. ಜನಪದ ಕಥನ ಗೀತೆಗಳು ಹೆಚ್ಚಾಗಿ ವೀರ ಪೌರುಷ ಆಶಯಗಳನ್ನು ಹೊಂದಿರುವಂತಾಗಿವೆ. ಬಹುಬೇಗ ಜನರನ್ನು ಆಕರ್ಷಿಸುವ ಪ್ರಕಾರವಾಗಿದೆ. ಇಂಥ ಕಥನ ಗೀತೆಗಳು ರಾಜರ ವೈಭವವನ್ನು ಅಭಿವ್ಯಕ್ತ ಜನಸಾಮಾನ್ಯರ ಜೀವನದ ಬದುಕನ್ನು ಚಿತ್ರಿಸುತ್ತೇವೆ ಎಂದು ಸುಬ್ಬಣ್ಣರೈ ಅವರ ಉಲ್ಲೇಖವು ಗಮನಾರ್ಹವಾಗಿದೆ (ರೈ, ೧೯೯೪: ೪೯).

ಈಗಾಗಲೇ ಉಲ್ಲೇಖಿಸಲಾಗಿರುವ ಲಾವಣಿಗಳು ಬೀದರ್‌ನ ಕೋಟೆ ಕಟ್ಟುವ ಸಂದರ್ಭದಲ್ಲಿ ಗರ್ಭಸ್ತ್ರೀ ಸಂಗಮ್ಮಳನ್ನು ಬಲಿಕೊಟ್ಟಿರುವುದನ್ನು ವಿವರಿಸಿವೆ. ಈ ಕೋಟೆಯ ಬಗೆಗೆ ಈಗಾಗಲೆ ನೀಡಿರುವ ಲಾವಣಿಯನ್ನು ಬಿಡಿಸಿ ನೋಡಿದರೆ ಎರಡು ಸಮಾನ ರೀತಿಯ ಅಂಶಗಳು ಕಂಡುಬರುತ್ತವೆ.

ನಂಬುಗೆ - ಜೋತಿಷ್ಯ : ಅರಸನು ಜೋತಿಷ್ಯದಲ್ಲಿ ಬಲವಾದ ನಂಬಿಕೆ ಇಟ್ಟಿರುತ್ತಾನೆ.

ಅನಿಷ್ಟ ಪದ್ಧತಿ - ಬಲಿ : ಬಲಿ ಸಮಾಜದ ಒಂದು ಅನಿಷ್ಟಪದ್ಧತಿಯೇ ಆಗಿದೆ.

ಜೀವಹಾನಿ - ಸಂಗಮ್ಮ : ಇಲ್ಲಿ ಬಲಿಯಿಂದ ಒಂದು ಜೀವ ಹಾನಿಯಾಗಿರುವುದು ಸಂಗಮ್ಮ ಎಂದು ತಿಳಿಯುತ್ತದೆ.

ಸಾವಿನ ಸ್ಥಳ - ಕೋಟೆ : ಸಂಗಮ್ಮಳು ತನ್ನ ಕೊನೆ ಉಸಿರೆಳೆದಿರುವುದು ಕೋಟೆ ಎಂಬ ಸ್ಥಳದಲ್ಲಿ

ಸಾವಿಗೆ ನಿರ್ಧಾರ - ಅತ್ತೆಯ : ಮನೆ ಸಂಗಮ್ಮನ ಸಾವಿನ ನಿರ್ಧಾರ ಆಕೆಯ ಅತ್ತೇ ಮಾವನ ಮನೆಯಲ್ಲಿ ಎಂದು ತಿಳಿದುಬರುತ್ತದೆ.

ಸಾವಿಗೆ ಪ್ರಯಾಣ - ಸಾವಿನ ನಿರ್ಧಾರದ ನಂತರ ತವರಿಗೆ ಹೋಗಲೇ ಇಲ್ಲ.

ಬೀದರ್ ಕೋಟೆಯ ನಿರ್ಮಾಣಕ್ಕೆ ಬಲಿ ಕೊಟ್ಟಿದ್ದರ ಬಗ್ಗೆ ಜನಪದರಿಂದ ಮೌಖಿಕವಾಗಿ ಸಂಗ್ರಹಿಸಲಾದ ಹಾಡನ್ನು ಈ ರೀತಿ ವಿವೇಚಿಸಲಾಗಿದೆ. ಲಾವಣಿ ಪದದ ಮೊದಲೆರಡು ಸಾಲುಗಳು ಈ ರೀತಿಯಾಗಿವೆ.

'ಬೀದರ ಕ್ಯಾಟಿ ಊರಾಗ ಕಿಲ್ಲೆನಾದರ ಕಟ್ಟಿತಾರಂತೆ
ಒಂದೊಂದು ಕಲ್ಲಗಿ ಮುಗೆನಲ್ರಿ ಕೋಟೆಯ ತಳಪಾಯ'

ಈ ಕೋಟೆಯನ್ನು ಕಟ್ಟುವಲ್ಲಿ ಹಾಗಾದಾಗ ಉಂಟಾಗಿರುವ ಸಮಸ್ಯೆ ಒಂದು ಕಲ್ಲು ಸಡಿಲವಾದರೂ ಅಥವಾ ಖಾಲಿಯಿದ್ದರೂ ಕೋಟೆ ಭದ್ರವಲ್ಲ, ಶಕ್ತಿಯಿಂದ ನಿಲ್ಲುವುದಿಲ್ಲ. ಅದಕ್ಕಾಗಿ ಕೋಟೆಗೆ ಶಕ್ತಿ ಸತ್ವ ತುಂಬಲು ಕೇವಲ ಕಲ್ಲೊಂದೆ ಸಾಕಾಗುತ್ತಿಲ್ಲ ಅಲ್ಲಿ ಅಗತ್ಯವಾಗಿರುವ ಶಕ್ತಿ-ಸತ್ವ ತುಂಬಬೇಕು

ಅದಕ್ಕೆಂದೇ ಹೆಣ್ಣಿನ ಬಲಿಯಾಗಬೇಕು. ಹಾಗಾದಾಗ ಮಾತ್ರ ಕೋಟೆಯ ತಳಪಾಯ ಮುಗಿಯುತ್ತದೆ. ಭದ್ರವಾಗಿ ನಿಲ್ಲುತ್ತದೆ.

'ಬೀದರ ಕೋಟಿ ಪಟ್ಟಣದಲ್ಲಿ ಮಲಶೆಟ್ಟಿ ಸಾಹುಕಾರ
ಮಲಶೆಟ್ಟಿ ಸಾಹುಕಾರಗ ಮಂದಿ ಗಂಡಸ ಮಕ್ಕಳು'

ಮಲಶೆಟ್ಟಿ ಎಂಬ ಸಾಹುಕಾರ ಅರಸನ ಸಾಮ್ರಾಜ್ಯದಲ್ಲಿ ಇದ್ದು ತುಂಬಾ ಸಜ್ಜನ ಪರೋಪಕಾರಿಯಾಗಿರುವಂತೆ ನಮಗೆ ಈ ಕಥನ ಗೀತೆಯಲ್ಲಿ ಕಂಡುಬರುತ್ತಾನೆ. ಇವನಿಗೆ ಐದು ಜನ ಗಂಡು ಮಕ್ಕಳಿದ್ದು ಅವರೆಲ್ಲರಿಗೂ ಮದುವೆಯಾಗಿರುತ್ತದೆ. ಅದರೆ ಈ ಗೀತೆಯಲ್ಲಿ ಐದು ಮಕ್ಕಳು ಮತ್ತು ಅವರ ಐದು ಜನ ಸೊಸೆಯರ ಹೆಸರು ಹಾಡಿನಲ್ಲಿ ಎಲ್ಲೂ ಉಲ್ಲೇಖವಾಗಿಲ್ಲ. ಆದರೆ ಕಿರಿಯ ಸೊಸೆ ಸಂಗಮ್ಮ ಎಂದು ಮಾತ್ರ ಉಲ್ಲೇಖವಾಗಿದ್ದು. ಅತ್ತೆಯ ಹೆಸರಾಗಲಿ ಅಥವಾ ಪಾತ್ರವಾಗಲಿ ನಮಗೆ ಸಿಗುವುದಿಲ್ಲ. ಇಲ್ಲಿ ಸಂಗಮ್ಮ ಮತ್ತು ಮಾವ ಮಲಶೆಟ್ಟಿ ಸಾವುಕಾರ ಪ್ರಮುಖ ಪಾತ್ರಧಾರಿಗಳಾಗಿ ಈ ಹಾಡಿನಲ್ಲಿ ಕಂಡುಬರುತ್ತಾರೆ.

'ಮಲಶೆಟ್ಟಿ ಸಾಹುಕಾರಗ ಸರಕಾರ ಕರಸ್ಯಾರೆ
ಐದು ತಿಂಗಳ ಗರ್ಭಕ ನೋಡಿ ಕೋಟೆಯ ಥರಾ ಬೇಡ್ಯಾದರಿ'

ಮಲಶೆಟ್ಟಿ ಸಾಹುಕಾರನಿಗೆ ಅರಸನು ಕರೆಸುತ್ತಾನೆ. ತನ್ನ ಅರಮನೆಗೆ ಮಲಶೆಟ್ಟಿ ಸಾಹುಕಾರನನ್ನು ಕರೆಸಲು ಒಂದು ಬಲವಾದ ಕಾರಣವು ಇದೆ. ಮಲಶೆಟ್ಟಿ ಸಾಹುಕಾರನ ಕಿರಿಯ ಸೊಸೆ ಸಂಗಮ್ಮಳು ಗರ್ಭಿಣಿಯಾಗಿರುತ್ತಾಳೆ. ಆಕೆಗೆ ಐದು ತಿಂಗಳು ತುಂಬಿರುತ್ತದೆ. ಇದರ ಹಿನ್ನೆಲೆ ಈ ರೀತಿಯಾಗಿ ಗೀತೆಯಲ್ಲಿ ವ್ಯಕ್ತಗೊಳ್ಳುತ್ತದೆ. ಅರಸನು ಕೋಟೆಯನ್ನೆಲ್ಲ ಕಟ್ಟುತ್ತಾನೆ. ಕೊನೆಗೆ ಒಂದು ಬುರ್ಜನ್ನು ಕಟ್ಟಬೇಕಾಗಿರುತ್ತದೆ. ಆ ಬುರ್ಜನ್ನು ದಿನಾ ಕಟ್ಟುತ್ತಾರೆ. ಮರುದಿನ ಬಂದು ನೋಡುವಷ್ಟರಲ್ಲಿ ಅದು ಬಿದ್ದು ಹೋಗಿರುತ್ತದೆ. ಹೀಗೆ ಕಟ್ಟುವುದು ಬೀಳುವುದು, ಕಟ್ಟುವುದು ಬೀಳುವುದು ಹಲವು ದಿನಗಳವರೆಗೆ ನಡೆಯುತ್ತದೆ. ಇದನ್ನು ಕಟ್ಟಿಸುವುದರಲ್ಲಿ ಅರಸನು ತುಂಬಾ ಹತಾಶನಾಗಿ ಹೋಗುತ್ತಾನೆ. ಕಟ್ಟಿದ ಕೋಟೆಯ ಗೋಡೆಯನ್ನು ನಿಲ್ಲಿಸಲು ಏನು ಮಾಡಬೇಕೆಂದು ತುಂಬಾ ಚಿಂತೆಯಲ್ಲಿರುತ್ತಾನೆ. ಒಂದು ದಿನ ಊರಿನ ಜೋಯಿಸರನ್ನು ಕರೆಯಿಸಿ ನಡೆದ ವಿಷಯವನ್ನೆಲ್ಲ ಜೋಯಿಸರ ಮುಂದೆ ಹೇಳುತ್ತಾನೆ. ಇದರಿಂದ ಜೋಯಿಸರು ಒಂದು ಪರಿಹಾರದ ಮಾರ್ಗವನ್ನು ಹೇಳುತ್ತಾರೆ. ಅದೇನೆಂದರೆ ಕೋಟೆಯ ಗೋಡೆಯು ನಿಲ್ಲಬೇಕಾದರೆ ಗರ್ಭಿಣಿ ಮಹಿಳೆಯನ್ನು ಬಲಿಕೊಡಬೇಕು ಎಂದು ಹೇಳುತ್ತಾನೆ. ಇಲ್ಲಿ ಅರಸನಿಗೆ ಕೋಟೆ ಕಟ್ಟುವುದು ಮುಖ್ಯವಾಗಿರುತ್ತದೆ. ಅದಕ್ಕಾಗಿ ಅರಸನು ಆ ಸಮಯದಲ್ಲಿ ತನ್ನ ಆದರ್ಶ, ಮಾನವೀಯತೆಯನ್ನು ಮರೆತು ನರಬಲಿಯನ್ನು ಕೊಡಲು ಸಿದ್ಧನಾಗಿಯೇ ಬಿಡುತ್ತಾನೆ. ತನ್ನ ಸೇವಕರ ಮೂಲಕ ಊರಲ್ಲೆಲ್ಲ ಡಂಗೂರ ಸಾರುತ್ತಾನೆ. ಆಗ ಊರೆಲ್ಲ ಹುಡುಕಿದರು ಗರ್ಭಿಣಿ ಸ್ತ್ರೀಯು ಇರುವುದು ಕಂಡುಬರುವುದಿಲ್ಲ. ಕೊನೆಯದಾಗಿ ಊರಿನ ಮಲಶೆಟ್ಟಿ ಸಾಹುಕಾರನ ಮನೆಗೆ ಬರುತ್ತಾರೆ.

ಆ ಸಾಹುಕಾರನ ಕಿರಿಯ ಸೊಸೆಯಾಗಿರುವ ಸಂಗಮ್ಮ ಗರ್ಭಿಣಿಯಾಗಿರುತ್ತಾಳೆ. ಗರ್ಭಿಣಿ ಇರುವುದನ್ನು ಪತ್ತೆ ಹಚ್ಚಿದ ಸೇವಕರು ಹೋಗಿ ಅರಸನಿಗೆ ವಿಷಯ ತಿಳಿಸುತ್ತಾರೆ. ಅರಸನು ತನ್ನ ಸೇವಕರನ್ನು ಕಳುಹಿಸಿ ಮಲಶೆಟ್ಟಿ ಸಾಹುಕಾರನನ್ನು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸುತ್ತಾನೆ.

ಅರಸನು ಮಲಶೆಟ್ಟಿಯನ್ನು ಕರೆಯಿಸುತ್ತಾನೆ. ಕರೆಯಿಸಿ ಕಟ್ಟುತ್ತಿರುವ ಕೋಟೆಯ ಗೋಡೆ ಬಿದ್ದು ಹೋಗುತ್ತಿದೆ. ಅದಕ್ಕೆ ಹೊತ್ತಿಗೆಯನ್ನು(ಪಂಚಾಂಗ) ತೆಗೆಯಿಸಿ ನೋಡಿದರೆ ಗರ್ಭಿಣಿ ಸ್ತ್ರೀಯನ್ನು ಬಲಿಕೊಡಬೇಕೆಂಬ ಸೂಚನೆ ಬಂದಿದೆ. ನಿನ್ನ ಕಿರಿಯ ಸೊಸೆ ಸಂಗಮ್ಮ ಗರ್ಭಿಣಿಯಾಗಿರುವ ವಿಷಯ ನಮಗೆ ತಿಳಿದಿದೆ. ಅದಕ್ಕಾಗಿ ನಿನ್ನನ್ನು ಕರೆಯಿಸಿದ್ದೇನೆ ಎಂದು ಅರಸನು ವಿಷಯವನ್ನು ಸಾಹುಕಾರನ ಮುಂದೆ ಪ್ರಸ್ತಾಪಿಸುತ್ತಾನೆ. ಇದಕ್ಕೆ ಮಲಶೆಟ್ಟಿ ಸಾಹುಕರ ಈ ರೀತಿಯಾಗಿ ಹೇಳುತ್ತಾನೆ.

'ಪರಹೆಣ್ಣ ಮಗಳಿಗಿ ನಾ ಹೆಂಗ ಕೊಡಲಿ ಸರಕಾರ
ಮುತ್ತಿನಂತ ಮಗನಿಗಿ ಕೊಡುತ್ತೀನಿರ್ರಿ ಸರಕಾರ
ಮುತ್ತಿನಂತ ಮಗನಿಗೆ ಮುಗಿಯಣಿಲ್ಲ ತಳಪಾಯ||'

ಇಲ್ಲಿ ಸಾಹುಕಾರ ಮಲಶೆಟ್ಟಿಯ ವ್ಯಕ್ತಿತ್ವ, ಆಲೋಚನೆ, ವಿಚಾರ ಇವೆಲ್ಲವೂ ಒಂದು ಆದರ್ಶವಾಗಿ ನಮಗೆ ಕಂಡುಬರುತ್ತವೆ. ಅಲ್ಲದೇ ಕೋಟೆಯು ಬಲಿ ಬೇಡಿರುವುದು ಹೆಣ್ಣು ಮಗಳನ್ನು ಇಲ್ಲಿ ಸಾಹುಕಾರ ತನ್ನ ಮಗನನ್ನು ಬಲಿಕೊಡುತ್ತೇನೆ. ಆದರೆ ನನ್ನ ಸೊಸೆಯನ್ನು ಬಲಿ ಕೊಡುವುದಿಲ್ಲ ಎನ್ನುವ ಹೇಳಿದ ಮಾತುಗಳು ಬರುತ್ತವೆ. ಏಕೆಂದರೆ ಸೊಸೆ ಪರಹೆಣ್ಣು, ಪರ ಊರಿನವಳು. ಅವಳನ್ನು ನಾನು ಹೇಗೆ ಬಲಿಕೊಡುತ್ತೇನೆ ಎಂದು ಒಪ್ಪಿಕೊಳ್ಳಲಿ, ಆಕೆಯ ತವರು ಮನೆಯವರು ಏನು ಅನ್ನುವರು. ಸಂಗಮ್ಮಳ ಗಂಡನು ಏನು ಅನ್ನುವನು ಎನ್ನುವ ಹಲವಾರು ಯೋಚನೆಗಳನ್ನು ಮಾಡಿದ ಬಳಿಕವೇ ಸಾಹುಕಾರ ತನ್ನ ಮಗನನ್ನು ಬಲಿಯಾಗಿ ನೀಡಲು ಮುಂದೆ ಬರುತ್ತಾನೆ. ಆದರೆ ಅಲ್ಲಿ ಬಲಿಯಾಗಬೇಕಾಗಿರುವುದು ಗಂಡು ಅಲ್ಲ ಹೆಣ್ಣು ಎಂದು ತಿಳಿಯುತ್ತದೆ.

"ಅಲ್ಲಿಂದ ಸಾಹುಕಾರ ಮನಿಗಾರ ಬಂದಾರೆ
ಒಳಗಿಂದ ಸಂಗಮ್ಮ ಹೊರಕ್ಕೆ ಬಂದಾಳೆ
ಯಾಕೇರಿ ಮಾವಯ್ಯ ದಿಗಿಲಾಗಿ ಕುಂತಿರಿ
ಬೀದರ ಕ್ಯಾಟಿ ಊರಾಗ ಕಿಲ್ಲೆನಾದರ ಕಟ್ಟಿತಾರಂತ
ಅದು ನಿನಗೆ ಬೇಡ್ಯಾದಂತ"

ಮಲಶೆಟ್ಟಿ ಸಾಹುಕಾರನು ಅರಸನ ಮನೆಯಿಂದ ನೆಟ್ಟಗೆ ತನ್ನ ಮನೆಗೆ ಬರುತ್ತಾನೆ. ಬಂದು ತುಂಬಾ ಚಿಂತೆಯಲ್ಲಿ ತಲೆಯ ಮೇಲೆ ಕೈಯಿಟ್ಟುಕೊಂಡು ಕುಂತಿರುತ್ತಾನೆ. 'ಪರ ಹೆಣ್ಣು ಮಗಳಿಗಿ ನಾ ಹ್ಯಾಂಗ ಬಲಿಕೊಡಲಿ. ಅವಳ ತವರು ಮನೆಯವರು ಏನು ಅನ್ನುವರು' ಬಲಿಕೊಟ್ಟ ಬಳಿಕ ಸಂಗಮ್ಮಳ ತಾಯಿಯ ಪ್ರತಿಕ್ರಿಯೆ ಯಾವ ರೀತಿಯಾಗಿರಬಹುದೆಂದು ಯೋಚಿಸುತ್ತ ಕುಳಿತಿರುತ್ತಾನೆ. ಅಂಥ

ಸಮಯದಲ್ಲಿ ಒಳ ಮನೆಯಲ್ಲಿದ್ದ ಸಂಗಮ್ಮ ಹೊರ ಬಂದು ಮಾವನ ಸ್ಥಿತಿ ನೋಡಿ ಮಾವನನ್ನು ವಿಚಾರಿಸುತ್ತಾಳೆ. ಯಾಕೆ ಮಾವಯ್ಯ ತುಂಬಾ ಯೋಚನೆಯಲ್ಲಿ, ಚಿಂತೆಯಲ್ಲಿ ಕುಳಿತಿರುವ ಹಾಗೆ ಕಂಡುಬರುತ್ತಿದೆ ಎನ್ನುತ್ತಾಳೆ. ಅದಕ್ಕೆ ಮಲಶೆಟ್ಟಿ ಸಾಹುಕಾರ ಎನ್ನುತ್ತಾನೆ. 'ಬೀದರ ಕ್ಯಾಟಿ ಊರಾಗ ಕಿಲ್ಲೆನಾದರ (ಕೋಟೆ) ಕಟ್ಟುತ್ತಾರಂತೆ' ಅದು ನಿನಗೆ ಬಲಿಯಾಗಿ ಬೇಡಿದೆಯಂತೆ ಎಂದು ಸಾಹುಕಾರನು ಸಂಗಮ್ಮಳಿಗೆ ಅರಸನ ಹತ್ತಿರ ಹೇಳಿದ ಮತ್ತು ಮಾತನಾಡಿದ ಎಲ್ಲ ವಿಷಯವನ್ನು ಹೇಳಿದನು.

ಅಷ್ಟೆಂಬ ಶಬ್ದರ ಕೇಳ್ಯಾಳೆ ಸಂಗಮ್ಮ
ಒಳಕಾರ ಬಂದಾಳ, ಝಳಕಾಕ ನೀರು ಹಿಡಿದಾಳೆ
ಮಾವರೂಚನಾಕ ನಡೆದಾಳೆ

ಮಲಶೆಟ್ಟಿ ಸಾಹುಕಾರನು ಅರಮನೆಯಲ್ಲಿ ನಡೆದ ವಿಷಯವನ್ನೆಲ್ಲ ಯಾವುದೇ ಮುಚ್ಚು ಮರೆ ಇಲ್ಲದೆ ಎಲ್ಲ ವಿಷಯಗಳನ್ನು ಸಂಗಮ್ಮಳ ಮುಂದೆ ಹೇಳುತ್ತಾನೆ. ಈ ಹಾಡಿನ ಸಾಲುಗಳಲ್ಲಿ ತನ್ನ ತಪ್ಪಿಲ್ಲ ಎಂಬ ಅಂಶವನ್ನು ಕೂಡ ಸಾಹುಕಾರ ಪ್ರತಿಬಿಂಬಿಸಲು ಪ್ರಯತ್ನಿಸಿದ್ದಾನೆ. ತನ್ನ ಅಸಹಾಯಕತೆಯನ್ನು ಎಲೆ ಮರೆಯ ಕಾಯಿಯಂತೆ ಸಂಗಮ್ಮಳ ಎದುರಿಗೆ ವ್ಯಕ್ತಪಡಿಸಿರುವುದು ಕಂಡುಬರುತ್ತದೆ. ಇಷ್ಟು ಮಾತನ್ನು ಕೇಳಿದ ಸಂಗಮ್ಮ, ಮಾವನ ಎದುರಿಗೆ ತುಟಿ ಪಿಟಕ್ಕೆನ್ನದೆ ಒಳಮನೆಗೆ ಹೋಗಿ ನೀರು ಹಿಡಿದು ಸ್ನಾನ ಮಾಡಿ ಬಲಿಗೆ ಸಿದ್ಧಳಾಗಲು ತೊಡಗುತ್ತಾಳೆ. ಇಲ್ಲಿ ಸಂಗಮ್ಮಳ ಮುಗ್ಧತೆ, ಹಿರಿಯರ ವಚನಕ್ಕೆ ಬದ್ಧವಾಗಿರುವುದು ಮುಖ್ಯವಾಗಿ ಎದ್ದು ಕಾಣುತ್ತದೆ.

'ಸಂಗಮ್ಮ ಝಳಕಾ ಮಾಡ್ಯಾಳೆ ಪೂಜ್ಯಾಕ ಕುಂತಾಳೆ
ಪೂಜಾ ಮಾಡ್ಯಾಳ ಊಟಕ್ಕೆ ಕುಂತಾಳೆ
ಒಂದು ತುತ್ತ್ ಉಂಬಳಿಗೆ ಒಬ್ಬ ಜವಾನ
ಎರಡ ತುತ್ತು ಉಂಬಳಿಗೆ ಇಬ್ಬರು ಜವಾನ ಬಂದಾರ'

ಸಂಗಮ್ಮಳು ಮಾವನ ಮಾತನ್ನು ಕೇಳಿ ಒಳಮನೆಗೆ ಹೋಗಿ ನೀರು ಹಿಡಿದು ಸ್ನಾನ ಮಾಡುತ್ತಾಳೆ. ನಂತರ ಪೂಜೆ ಮಾಡಿಕೊಂಡು ಎಲ್ಲರೂ ಸೇರಿ ಊಟಕ್ಕೆ ಕುಳಿತಿರುತ್ತಾರೆ. ಅಂದರೆ ಸಂಗಮ್ಮಳ ಅತ್ತೆ, ಮಾವ, ನೆಗೆಣೆದೇರು ಎಲ್ಲರೂ ಸೇರಿ ಊಟಕ್ಕೆ ಕುಳಿತಿರುತ್ತಾರೆ. ಸಂಗಮ್ಮಳನ್ನು ಒಂದು ತುತ್ತನ್ನು ತನ್ನ ಬಾಯಿಯಲ್ಲಿ ಇಡಬೇಕು ಎನ್ನುವಷ್ಟರಲ್ಲಿ ಅರಸನ ಜವಾನರು (ಸೇವಕರು) ಸಂಗಮ್ಮಳಿಗೆ ಕರೆಯುವುದಕ್ಕೆ ಬರುತ್ತಾರೆ. ಮತ್ತೆ ಸಂಗಮ್ಮ ತನ್ನ ತಟ್ಟೆಯಲ್ಲಿರುವ ಅನ್ನದ ಎರಡನೆ ತುತ್ತನ್ನು ಬಾಯಿಗೆ ಇಟ್ಟುಕೊಳ್ಳಬೇಕು ಎನ್ನುವಷ್ಟರಲ್ಲಿ ಇಬ್ಬರು ಜವಾನರು ಸಂಗಮ್ಮನನ್ನು ಕರೆಯಲು ಬರುತ್ತಾರೆ. ಬಹುಶಃ ಸಂಗಮ್ಮಳಿಗೆ ಅತ್ತೆ ಮಾವನ ಮನೆಯ ಋಣ ಎರಡೇ ತುತ್ತಿಗೆ ತೀರಿರಬಹುದು. ಕೊನೆಗೆ ಕೋಟೆಗೆ ಬಲಿಯಾಗುವ ಸಮಯಕ್ಕೆ ಆಕೆಗೆ ಅತ್ತೆ-ಮಾವನ ಮನೆಯ ಅನ್ನದ ಬಾಕಿ ತೀರಿ ಆ ಎರಡೇ ತುತ್ತುಗಳೇ ಸಂಗಮ್ಮಳಿಗೆ ಸಾವಿನ ಮುಂಚಿನ ಕೊನೆಯ ತುತ್ತು ಆಗಿರಬಹುದು.

'ಸಂಗಮ್ಮಗ ಒಪ್ಪಂತ ಸೀರಿ ಅವರು ತಂದಾರೆ
ಸಂಗಮ್ಮಗ ಒಪ್ಪಂತ ದಂಡಿ ಅವರು ತಂದಾರೆ
ಅಳುಬ್ಯಾಡ್ರಿ ಮಾಮಾಜಿ ಕರೀಬ್ಯಾಡ್ರಿ ಮಾಮಾಜಿ
ಕೋಟೆಯ ಥರಕನಂತ ಹಡದೆ ಇಟ್ಟಾಳೆ ಹಡೆದಮ್ಮ'

ಈ ಗೀತೆಯ ಹಾಡಿನ ಸಾಲಿನಲ್ಲಿ ಭಾರತೀಯ ಸಂಪ್ರದಾಯದಂತೆ ಯಾವುದೇ ಬಲಿಯ ಕಾರ್ಯಕ್ಕೆ ಕರೆದೊಯ್ಯುವಾಗ ಪ್ರಾಣಿಯೇ ಆಗಿರಲಿ, ಮನುಷ್ಯರೇ ಆಗಿರಲಿ, ಅವರಿಗೆ ಜೀವನದ ಕೊನೆಯ ಸಿಂಗಾರ ಮಾಡುವ ಪದ್ಧತಿ ಇದೆ. ಆ ಪದ್ಧತಿಯಂತೆ ಸಂಗಮ್ಮಳನ್ನು ಕೋಟೆಗೆ ಬಲಿಕೊಡಲು ಕರೆದೊಯ್ಯುತ್ತಾರೆ. ಕರೆದೊಯ್ಯುವಾಗ ಸಂಗಮ್ಮಳನ್ನು ಸಿಂಗರಿಸಲು ಸೀರೆ ಮತ್ತು ದಂಡೆ (ಹೂವಿನಿಂದ ಮಾಡಿದ ತಲೆಗೆ ಕಟ್ಟಿಕೊಳ್ಳುವ ಹಾರ) ಇವುಗಳನ್ನೆಲ್ಲ ಉಟ್ಟು ಅರಸನ ಸೇವಕರು ಸಂಗಮ್ಮಳನ್ನು ಬಲಿಗೆ ಸಿದ್ಧಳಾಗುವಂತೆ ಹೇಳುತ್ತಾರೆ. ಆಗ ಸಂಗಮ್ಮ ಸೀರೆಯನ್ನು ಉಟ್ಟು, ಹಣೆಗೆ ಕುಂಕುಮ, ಕೈಗೆ ಬಳೆ, ತಲೆಗೆ ದಂಡೆ ಕಟ್ಟಿಕೊಂಡು ಸಿದ್ಧಳಾಗಿ ಹೊರಡುತ್ತಾಳೆ. ಸಂಗಮ್ಮ ಬಲಿಗೆ ಸಿದ್ಧಳಾಗಿ ಹೋಗುವಾಗ ಅತ್ತೆ ಮಾವನ ಕಾಲಿಗೆ ನಮಸ್ಕರಿಸುತ್ತಾಳೆ. ಅಂಥ ಸಮಯದಲ್ಲಿ ಮಾವನ ಕಣ್ಣಲ್ಲಿ ನೀರು ತುಂಬಿ ಬರುತ್ತದೆ. ಇದಕ್ಕೆ ಸಂಗಮ್ಮ ಎನ್ನುತ್ತಾಳೆ 'ಅಳುಬೇಡಿ ಮಾವಯ್ಯ ಕೋಟೆಯ ಥರಾಕನಂತೆ ಹಡದೆ ಇಟ್ಟಾಳೆ ಹಡದಮ್ಮ' ಕೊನೆಯದಾಗಿ ಇಲ್ಲಿ ಸಂಗಮ್ಮ ತನ್ನ ತಾಯಿಯನ್ನು ಕೂಡ ಸ್ಮರಿಸುವುದು ಕಂಡುಬರುತ್ತದೆ. ಸಂಗಮ್ಮಳ ನೊಂದ ಮನ ಈ ರೀತಿಯ ಪ್ರತಿಕ್ರಿಯೆ ಹೊರಹೊಮ್ಮಿಸಿದೆ ಎಂದು ಹೇಳಬಹುದು.

'ಒಂದು ಸುತ್ತು ತಿರಗ್ಯಾರೆ ಎರಡ ಸುತ್ತು ತಿರಗ್ಯಾರೆ
ಮೂರ ಸುತ್ತು ತಿರಗ್ಯಾರೆ ನಾಕ ಸುತ್ತು ತಿರುಗ್ಯಾರೆ
ಐದೆಂಬ ಸುತ್ತೀಗಿ ಕೋಟೆಯ ಥರಾದಾಗ ಹಾಕ್ಯಾರೆ'

ಬಲಿಗೆ ಸಿಂಗಾರವಾಗಿ ಹೊರಡುವ ಸಂಗಮ್ಮ ಅತ್ತೆ ಮಾವನ ಮನೆಯಲ್ಲಿರುವ ಭಾವ, ನೆಗೆಣಿದೇರಿಗೆಲ್ಲ ಕಾಲಿಗೆ ನಮಸ್ಕರಿಸಿ ಊರಿನ ಹಿರಿಯರಿಗೆಲ್ಲ ಕೈಮುಗಿದು ಹೊರಡುತ್ತಾಳೆ. ಕೋಟೆಗೆ ಬರುತ್ತಿರುವಾಗ ದಾರಿಯಲ್ಲಿ ಊರಿನ ಪುರುಷರ ಪಾದಕ್ಕೆ ನಮಸ್ಕರಿಸುತ್ತಾಳೆ. ನೀವೆಲ್ಲ ಅಳಬೇಡಿ ಸಂತೋಷದಿಂದ ನನಗೆ ಬಲಿಗೆ ಕಳುಹಿಸಿಕೊಡಿ ನಾನು ಮಾವರೂಚನಕ (ಮಾವನ ವಚನಕ್ಕೆ) ನಡೆದಿದ್ದೇನೆ. ಎಂದು ಸಂಗಮ್ಮ ಎಲ್ಲರಿಗೂ ಹೇಳುತ್ತ, ಕೇಳುತ್ತ ಕೋಟೆಯ ತಳಪಾಯಕ್ಕೆ ಬರುತ್ತಾಳೆ. ಬಂದು ಮತ್ತೊಮ್ಮೆ ಊರಿನ ಜನಕ್ಕೆಲ್ಲ ಕೈಮುಗಿದು, ಕೋಟೆಯ ಥರಾಕ್ಕೆ ಒಂದು ಸುತ್ತು ತಿರುಗುತ್ತಾಳೆ. ಎರಡು ಸುತ್ತು ತಿರುಗುತ್ತಾಳೆ. ಮೂರು ಸುತ್ತು ತಿರುಗುತ್ತಾಳೆ, ನಾಲ್ಕು ಸುತ್ತು ತಿರುಗುತ್ತಾಳೆ, ಐದೆಂಬ ಸುತ್ತಿಗೆ ಕೋಟೆಯ ಥರಾದಾಗ ಹಾಕಿ ಮೇಲೆ ಕೋಟೆಯನ್ನು ಕಟ್ಟುತ್ತಾರೆ.

ಬೀದರ್‌ನ ಕೋಟೆಗೆ ಬಲಿಕೊಟ್ಟ ಹೆಣ್ಣಿನ ಜೀವನವು ಇತರ ಬಲಿಗಿಂತಲೂ ಭಿನ್ನವಾದ ಬಲಿದಾನವಾಗಿ ಕಂಡುಬರುತ್ತದೆ. ಕೆರೆಗೆ ಹಾರವಾದವರ ಮತ್ತು ಕೋಟೆಗೆ ಬಲಿಯಾದವರ ಸಂಖ್ಯೆ

ಕಡಿಮೆಯೇ ಎಂದು ಹೇಳಬಹುದು. ಇಂಥ ಕೋಟೆಗೆ ಬಲಿಯಾದವರ ಕಥನ ಗೀತೆಗಳು ಸಿಗುವುದು ತುಂಬಾ ವಿರಳ. ಇಲ್ಲಿ ಬಲಿದಾನಕ್ಕೆ ಸಂಬಂಧಿಸಿದಂತೆ ಯಾವುದೇ ಕುರುಹುಗಳಾಗಲಿ, ಅವಶೇಷಗಳಾಗಲಿ ನಮಗೆ ಲಭ್ಯವಿಲ್ಲ. ಇಲ್ಲಿ ಕಥೆಯ ಹೆಜ್ಜೆ ಜಾಡು ಹಿಡಿಯುವುದೇ ಒಂದು ದೊಡ್ಡ ಸಂಶೋಧನಾ ಕ್ಷೇತ್ರ ಕಾರ್ಯಕ್ಕೆ ಸಮನಾದ ಕೆಲಸವಾಗಬಲ್ಲದು.

ಬೀದರ್‌ನ ಕೋಟೆಗೆ ಇರುವ ಬಲಿಯ ಹಾಡಿನಲ್ಲಿ ಜನಪದರು ಪ್ರಾರಂಭದಿಂದ ಕೊನೆಯವರೆಗೂ ಸರಳ ಮತ್ತು ಸಹಜವಾಗಿ ಪ್ರಾರಂಭಿಸಿ ಅದರ ಮುಖ್ಯ ಆಶಯದ ಕಡೆಗೆ (ಬಲಿ) ಹೆಚ್ಚು ಗಮನವನ್ನು ಹರಿಸಿರುವುದು ನಮ್ಮ ಗಮನಕ್ಕೆ ಬಾರದೆ ಇರದು. ಈ ಗೀತೆಯಲ್ಲಿ ಮಲಶೆಟ್ಟಿ ಸಾಹುಕಾರನು ಒಬ್ಬ ಪರೋಪಕಾರಿ ಮತ್ತು ತನ್ನ ಜವಾಬ್ದಾರಿಯನ್ನು ಅತ್ಯಂತ ಕಾಳಜಿಯಿಂದ ನಿಭಾಯಿಸಬಲ್ಲ ಹಿರಿಯನಾಗಿ ತೋರುತ್ತಾನೆ. ಇದರಲ್ಲಿ ಸಾಹುಕಾರನ ವ್ಯಕ್ತಿತ್ವದಲ್ಲಿ ಒಂದು ದೌರ್ಬಲ್ಯವು ಅಡಗಿದೆ. ಈ ದೌರ್ಬಲ್ಯದ ಕಾರಣದಿಂದ ಮಲಶೆಟ್ಟಿ ಸಾಹುಕಾರನೊಬ್ಬ ನಮಗೆ ಅಪರಾಧಿಯಾಗಿ ಕಾಣುತ್ತಾನೆ. ಇಲ್ಲಿ ಸಾಹುಕಾರನ ಜೊತೆ ಅರಸನು ಕೂಡ ಅಪರಾಧಿಯ ಸ್ಥಾನದಲ್ಲಿ ನಿಂತಿರುತ್ತಾನೆ. ಇಲ್ಲಿ ಅರಸನಿಗೆ ಪ್ರಜೆಗಳ ಹಿತಕ್ಕಿಂತ ತನ್ನ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುವುದು ಮುಖ್ಯವಾಗಿತ್ತು. ಅದಕ್ಕಾಗಿ ಅರಸನು ಕೋಟೆ ಕಟ್ಟಲೇ ಬೇಕಾಗಿತ್ತು. ಇಲ್ಲಿ ಮಲಶೆಟ್ಟಿ ಸಾಹುಕಾರನ ಪರಿಸ್ಥಿತಿಯು ಅರಸನ ಆಜ್ಞೆಯನ್ನು ಮೀರುವಂಥ ಪರಿಸ್ಥಿತಿಯಲ್ಲಿ ಇರಲಿಲ್ಲ. ಪರೋಪಕಾರಕ್ಕಾಗಿ ತನ್ನ ಮನೆಯ ಜೀವವನ್ನು ಬಯಸಿದ ಜೋತಿಷ್ಯವನ್ನು ಮತ್ತು ರಾಜನ ಆಜ್ಞೆಯನ್ನು ಧಿಕ್ಕರಿಸಿ ಕಡೆಗಾಗಬಹುದಾಗಿತ್ತು. ಮಲಶೆಟ್ಟಿ ಸಾಹುಕಾರನು ಆ ಸಮಯದಲ್ಲಿ ಯಾವುದೇ ಪ್ರಯತ್ನ ಅಥವಾ ಯೋಚನೆಯನ್ನು ಕೂಡ ಮಾಡಲಿಲ್ಲ. ಇದಕ್ಕೆ ಕಾರಣ ಬಲಿಯನ್ನು ಆಗಿನ ಸಮಾಜ ಒಪ್ಪಿಕೊಂಡ ರೀತಿಯೇ ಆಗಿದೆ. ಇಲ್ಲಿ ಹಿರಿಯ ಸೊಸೆಯನ್ನು ಬಿಟ್ಟು ಕಿರಿಯ ಸೊಸೆ ಸಂಗಮ್ಮಳನ್ನು ಬಲಿಗಾಗಿ ಆಯ್ಕೆ ಮಾಡಿರುವುದು ಮತ್ತು ಮಲ್ಲಿನಗೌಡ ಸಾಹುಕಾರ 'ಕೆರೆಗೆ ಹಾರ'ವಾಗಿ ಭಾಗೀರಥಿಯನ್ನು ಕೊಟ್ಟಿರುತ್ತಾನೆ. ಅಲ್ಲಿ ಭಾಗೀರಥಿಯು ಕೂಡ ಮಲನಗೌಡ ಸಾಹುಕಾರನ ಕಿರಿಯ ಸೊಸೆಯೇ ಆಗಿರುತ್ತಾಳೆ. ಏಕೆಂದರೆ ಅಲ್ಲಿ ಹಿರಿಯ ಸೊಸೆಯನ್ನು ಹಾರವಾಗಿ ಕೊಟ್ಟರೆ ಮನೆಯ ಹಿರಿತನ ಹೋಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವುದು ಆ 'ಕೆರೆಗೆ ಹಾರ' ಗೀತೆಯಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಅದೇ ರೀತಿಯಾಗಿ ಬೀದರ ಕೋಟೆಗೆ ಬಲಿಯನ್ನು ಕೊಟ್ಟಿರುವ ಮಲಶೆಟ್ಟಿ ಸಾಹುಕಾರ ತನ್ನ ಇನ್ನುಳಿದ ನಾಲ್ಕು ಜನ ಸೊಸೆಯಂದಿರನ್ನು ಯಾಕೆ ಬಲಿ ಕೊಡಲಿಲ್ಲ? ಎಂಬ ಯೋಚನೆ ಬರುವುದು ಸಹಜ. ಆದರೆ ಇಲ್ಲಿ ಒಂದು ಅಂಶ ನಮಗೆ ಸ್ಪಷ್ಟವಾಗಿ ಗೋಚರಿಸುತ್ತದೆ. ಅದು ಕಿರಿಯ ಸೊಸೆಯಾದ ಸಂಗಮ್ಮ ಗರ್ಭಿಣಿಯಾಗಿರುವುದು. ಇಲ್ಲಿ ಅರಸನಿಗೆ ಜೋತಿಷ್ಯ ಹೇಳಿರುವುದು ಕೇವಲ ಗರ್ಭಿಣಿ ಸ್ತ್ರೀಯನ್ನು ಬಲಿಕೊಡಲು. ಆದರೆ ಜೋತಿಷ್ಯದಲ್ಲಿ ಹಿರಿಯ ಸೊಸೆ ಮತ್ತು ಕಿರಿಯ ಸೊಸೆ ಎಂಬುದು ಪ್ರತ್ಯೇಕವಾಗಿ ನಮಗೆ ಎಲ್ಲೂ ಕಂಡುಬರುವುದಿಲ್ಲ. ಆದರೆ ಬಲಿ ಅರ್ಪಿಸುವಂಥ ಗಂಭೀರ ನಂಬುಗೆಯು ಅನುಕೂಲಕರ ಬದಲಾವಣೆಗೆ ಆಸ್ಪದ ಕೊಡುತ್ತಿತ್ತು ಎಂಬ

ಅಂಶವು ಇಲ್ಲಿ ಗಮನಾರ್ಹವಾಗಿ ನಿಲ್ಲುತ್ತದೆ. ಸಂಗಮ್ಮ ಮಾವನ ಮಾತನ್ನು ಮೀರದಂತೆ ಗುರು ಹಿರಿಯರ ಮಾತಿಗೆ ಬೆಲೆ ಕೊಡುವಂತೆ ಹಿರಿಯರ ಮಾತನ್ನು ಮೀರಿ ನಡೆಯದಂತೆ ಇಲ್ಲಿ ನಮಗೆ ಸ್ಪಷ್ಟವಾಗಿ ಬಿಂಬಿತವಾಗುತ್ತಾಳೆ. ಆದರೆ ಸಂಗಮ್ಮಳ ಮನದ ಅಂತರಾಳದಲ್ಲಿ ಯಾವ ನೋವು, ದುಃಖ ಇದ್ದಿರಬಹುದು. ಅರಸನು ಮಲಶೆಟ್ಟಿ ಸಾವುಕಾರನನ್ನು ಅರಮನೆಗೆ ಕರೆದು ನಿನ್ನ ಕಿರಿಸೊಸೆ ಸಂಗಮ್ಮಳನ್ನು ಬಲಿಕೊಡಬೇಕು ಎಂದು ಹೇಳಿದಾಗ ಸಂಗಮ್ಮಳ ಮಾವ ಮಲಶೆಟ್ಟಿ ಸಾಹುಕಾರ ಮನೆಯಲ್ಲಿ ತುಂಬಾ ಚಿಂತೆಯಲ್ಲಿ ಕುಳಿತಿರುತ್ತಾನೆ. ಆಗ ಸಂಗಮ್ಮ, ''ಯಾಕೆ ಮಾವಯ್ಯ ಏನಾಗಿದೆ? ಏನು ವಿಷಯವೆಂದು'' ಕೇಳುತ್ತಾಳೆ. ಆಗ ಮಲಶೆಟ್ಟಿ ಸಾಹುಕಾರ, ''ಬೀದರ್‌ನಲ್ಲಿ ಅರಸನು ಒಂದು ಕೋಟೆ ಕಟ್ಟುತಿದ್ದಾನೆ. ಆ ಕೋಟೆಯು ನಿನ್ನನ್ನು ಹಾರವಾಗಿ ಬೇಡಿದೆ'' ಎಂದು ಸಾಹುಕಾರ ಹೇಳುವ ಮಾತನ್ನು ಕೇಳಿ ಸಂಗಮ್ಮಳ ಹೃದಯದ ಬಡಿತ ಆ ಕ್ಷಣದಲ್ಲಿ ನಿಂತಂತೆಯಾದರೂ ಸಂಗಮ್ಮ ಅಲ್ಲಿ ಪ್ರತಿಕ್ರಿಯಿಸುವ ಸಂದರ್ಭ ಇರಲಿಲ್ಲ, ತನ್ನ ಅಂತರಾಳದ ನೋವು ಹೇಳಿಕೊಳ್ಳುವಂತೆ ಇರಲಿಲ್ಲ. ನಾನು ಕೋಟೆಗೆ ಬಲಿಯಾಗುವುದಿಲ್ಲ ಎಂದು ಮಾವನಿಗೆ ಎದುರು ಉತ್ತರ ಕೊಡುವಂಥ ಪರಿಸ್ಥಿಯೂ ಇರಲಿಲ್ಲ. ಇಲ್ಲಿ ಸಂಗಮ್ಮ ಹೇಳಿರುವ ಇನ್ನೊಂದು ಮಾತು ''ಕೋಟೆಯ ಥರಕನಂತೆ ಹಡದೆ ಇಟ್ಯಾಳೆ ಹಡೆದಮ್ಮ'' ಎನ್ನುವುದು ಮುಖ್ಯವಾಗಿದೆ. ಈ ಗೀತೆಯಲ್ಲಿ ಸಂಗಮ್ಮಳ ಮನದಾಳದ ತುಡಿತ ಸ್ಪಷ್ಟವಾಗಿ ಗೋಚರಿಸುತ್ತದೆ. ಇಲ್ಲಿ ಸಂಗಮ್ಮಳ ಮನಸ್ಸಿನ ನೋವು ತಡೆದುಕೊಳ್ಳಲಾಗದೆ, ತಾಯಿಯನ್ನು ದೂರುವಂತೆ ಆಡಿದ ಮಾತುಗಳಾಗಿವೆ. ತನ್ನ ಹಣೆಯ ಬರಹದಲ್ಲಿ ಇದ್ದುದ್ದು ನಡೆದು ಹೋಗಲೇಬೇಕು. ಅದನ್ನು ತಪ್ಪಿಸಲು ಯಾರಿಂದ ಕೂಡ ಸಾಧ್ಯವಿಲ್ಲ. ಏಕೆಂದರೆ ನನ್ನ ತಾಯಿ ನನ್ನನ್ನು ಹೊತ್ತು-ಹೆತ್ತು ಸಾಕಿ-ಸಲುಹಿ ಸುಸಂಸ್ಕೃತ ಮನೆತನ ನೋಡಿ ಮದುವೆ ಮಾಡಿಕೊಟ್ಟಳು. ಆದರೆ ಗಂಡನ ಮನೆಯಲ್ಲಿ ನನಗೆ ಸಾಯುವ ತನಕ ಇರುವಂಥ ಹಣೆಬರಹ ದೇವರು ಬರೆಯಲಿಲ್ಲವೆನಿಸುತ್ತದೆ. ನನ್ನ ಸಾವು ಕೋಟೆಗೆ ಬಲಿಕೊಡುವುದರ ಮೂಲಕ ಬರುವುದೆಂದು ಆ ದೇವರು ನನ್ನ ಹಣೆಯ ಬರಹದಲ್ಲಿ ಬರೆದಿರಬಹುದು. ಅಥವಾ ನನ್ನ ತಾಯಿಯೇ ಕೋಟೆಯ ಬಲಿಗಾಗಿ ಮೀಸಲು ಎಂದು ನನ್ನನ್ನು ಹೆತ್ತಿರಬೇಕು ಎಂದು ತನ್ನ ಮನಸ್ಸಿನಲ್ಲಿಯೇ ದುಃಖಿಸುತ್ತಾಳೆ. ಆದರೆ ಆ ನೋವನ್ನು, ದುಃಖದ ಮಾತುಗಳನ್ನು ಹೊರಹಾಕಲಾಗ ದಂತೆ ಸಂಗಮ್ಮ ಸಮಾಜದ ಸಂಕೋಲೆಗಳು ಭದ್ರವಾಗಿ ಬಂಧಿಸಿಟ್ಟಿರುತ್ತವೆ. ಆದ್ದರಿಂದ ತನ್ನ ಪೂರ್ತಿ ದುಃಖವನ್ನು ಕೇವಲ 'ಕೋಟೆಯ ಥರಕನಂತೆ ಹಡೆದೆ ಇಟ್ಯಾಳೆ ಹಡೆದಮ್ಮ' ಎಂಬ ಎರಡೇ ಮಾತಿನಲ್ಲಿ ವ್ಯಕ್ತಪಡಿಸುತ್ತಾಳೆ.

ಇಲ್ಲಿ ಮಲಶೆಟ್ಟಿ ಸಾಹುಕಾರ ''ಪರಹೆಣ್ಣು ಮಗಳಿಗಿ ನಾ ಹೆಂಗ್ ಕೊಡಲೇ ಸರಕಾರ (ಬೀದರ್ ಜನ ಅರಸನನ್ನು ಸರಕಾರ ಎಂದು ಕರೆಯುವ ವಾಡಿಕೆ ಇದೆ. ಆದ್ದರಿಂದ ಈ ಲಾವಣಿ ಪದದಲ್ಲಿ ವಕ್ತೃರು ಸರಕಾರ ಎಂದು ಬಳಸಿರುವುದು ಗಮನಾರ್ಹವಾಗಿದೆ.) ಮುತಿನಂತ ಮಗನಿಗೆ ಕೊಡುತ್ತೀನಿ'' ಎಂಬ ಮಾತು ಗೀತೆಯಲ್ಲಿ ಕಂಡುಬರುತ್ತಿದೆ. ಇದನ್ನು ನೋಡಿದರೆ ಮಲಶೆಟ್ಟಿ ಸಾಹುಕಾರನಿಗೆ ಸೊಸೆಯನ್ನು

ಬಲಿಕೊಡಲು ಮನಸ್ಸಿರಲಿಲ್ಲವೆನಿಸುತ್ತದೆ. ಅದಕ್ಕಾಗಿಯೇ ಮಲಶೆಟ್ಟಿ ಸಾಹುಕಾರ ತನ್ನ ಮಗನನ್ನು ಬಲಿಕೊಡುವುದಾಗಿ ಅರಸನ ಮುಂದೆ ಪ್ರಸ್ತಾಪಿಸಿರಬೇಕು. ಇಲ್ಲಿ ಅರಸನ ಆಜ್ಞೆಯನ್ನು ಹಾರದ (ಬಲಿ) ನಿರ್ಧಾರದಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲವೆಂಬ ಕ್ರೂರ ಸತ್ಯವನ್ನು ಕಾಣುತ್ತೇವೆ. ಬಲಿಯ ಭಯಾನಕತೆಯಿಂದಲೇ, ಮಲಶೆಟ್ಟಿ ಸಾಹುಕಾರ ಅರಸನ ಆಜ್ಞೆ ಒಪ್ಪಿಕೊಂಡಿರಬೇಕು. ಆದರೆ ಬಲಿಯನ್ನು, ಸಮಾಜವನ್ನು ಕಲ್ಪಿಸಿಕೊಳ್ಳುವುದೇ ಭಯಾನಕವೆನಿಸುತ್ತದೆ. ಇಲ್ಲಿ ಸಾಹುಕಾರಮಲಶೆಟ್ಟಿ ಅರಸನ ಆಜ್ಞೆಯಂತೆ ಸೊಸೆಯನ್ನು ಬಲಿಕೊಡಲು ಸಿದ್ಧನಾಗಿರುವಾಗ ಸಂಗಮ್ಮಳ ಗಂಡ ಏನು ಮಾಡುತ್ತಿದ್ದ? ಅವನ ಹೆಸರೇನು? ಅವನು ಯಾಕೆ ಹೆಂಡತಿ ಸಂಗಮ್ಮಳನ್ನು ಬಲಿಕೊಡುವಾಗ ತಡೆಯಲಿಲ್ಲ? ಅವನು ಎಲ್ಲಿ ಇದ್ದನು? ಎಂಬ ಎಲ್ಲ ವಿಷಯಗಳು ಗೌಣವಾಗಿಯೇ ಉಳಿದಿವೆ. ಇಲ್ಲಿ ಸಂಗಮ್ಮ ಪ್ರತಿಭಟನೆಯನ್ನು, ಪರ್ಯಾಯವಾಗಿ ಅಸಹಾಯಕತೆಯನ್ನು ಆಕ್ರೋಶವನ್ನು ಗುಪ್ತಗಾಮಿನಿಯ ರೀತಿಯಲ್ಲಿ ತನ್ನ ಅಂತರಂಗದಲ್ಲೇ ಹೊತ್ತುಕೊಂಡು ಬಂದಿರುವುದನ್ನ ಗುರುತಿಸಬಹುದಾಗಿದೆ.

ಇಲ್ಲಿ ಸಮಾಜ ಒಪ್ಪಿಕೊಂಡಿರುವಂಥ ಭಯಾನಕ ನಂಬುಗೆ ಇಂಥ ಅನರ್ಥಕಾರಿ ಮೌಲ್ಯವನ್ನು ದೃಢಗೊಳಿಸಲು, ಅರ್ಥಹೀನ ಜೋತಿಷ್ಯವನ್ನು ನಂಬಿಸಲು ಮತ್ತು ಸಾರ್ವಜನಿಕ ಹಿತಗ್ಯೆಯಲು ರಾಜನ ಆಜ್ಞೆಯನ್ನು ಶಿರಸಾವಹಿಸಿ ಸಂಗಮ್ಮಳು ಕೋಟೆಯ ಥರಕ್ಕೆ ಇಳಿಯುತ್ತಾಳೆ. ಇಲ್ಲಿ ಸಂಗಮ್ಮಳ ಬಲಿ ಉದ್ದೇಶಪೂರ್ವಕವಾಗಿ ನಡೆದಿದೆ ಎಂದು ಭಾವಿಸಿದ. ನಂತರ ನಮ್ಮ ನಿರ್ಧಾರವು ಮೊದಲು ರಾಜನನ್ನು ನಂತರ ಮಲಶೆಟ್ಟಿ ಸಾಹುಕಾರನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತದೆ.

ಈ ರೀತಿ ಬಲಿ ನೀಡಿರುವ ಉದಾಹರಣೆಗಳು ನಮಗೆ ಅನೇಕ ಸಿಗುತ್ತವೆ. ಕಂಚಿ ಕಾಳಿಯ ಹೂತ ತೇರನ್ನು ಮೇಲೆತ್ತಿ ನಿಲ್ಲಿಸಲು ಜಾಂಬುಕುಲದ ವೀರನೊಬ್ಬ ತನ್ನ ಗರ್ಭಿಣಿ ಹೆಂಡತಿಯನ್ನು ಬಲಿಕೊಟ್ಟ ಉದಾಹರಣೆಗಳಿವೆ. ವಿವರಣೆಗಳಿಗೆ ನೋಡಿ (ಸುಧಾ, ೨೦೦೫: ೫).

“ಅಲ್ಲದೆ ‘ಕರಾಕೃ’ ಅವರ ‘ಚಿತ್ರಕಲ್ಲು ಮದಕರಿ’ ಜನಪದ ಗೀತೆಗಳ ಸಂಕಲನದ ಒಂದು ಗೀತೆಯಲ್ಲಿ ಮದಕರಿ ಮನೆತನದ ಕೊನೆಯ ರಾಜ ವೀರ ಮದಕರಿನಾಯಕ ತೀರಿಕೊಳ್ಳಲು ಆತನ ರಾಣಿಯರು ಬಣ್ಣದ ಸೂಳೆಯರು ಹಣತೆ ಹೊಗೆ ಹಿಡಿದುಕೊಂಡು ಮನದ ಹೊಂಡಕ್ಕೆ ಬಿದ್ದ ಪ್ರಸಂಗವನ್ನು ಸುತ್ತಮುತ್ತಲ ಗ್ರಾಮದ ಜನಪದರು ಕೋಲು ಹಾಡಿನ ಮೂಲಕ ಐತಿಹ್ಯವನ್ನು ವ್ಯಕ್ತಪಡಿಸುತ್ತಾರೆ”(ಕೃಷ್ಣಸ್ವಾಮಿ, ೧೯೭೫: ೩). “ದುರ್ಗದ ನಾಯಕರ ನಾಯಕಿಯರ ಬಲಿದಾನದ ಪ್ರಸಂಗಗಳನ್ನು ಜನಪದರು ವಿವರವಾಗಿ ನಿರೂಪಿಸುತ್ತಿದ್ದರೂ ತಮ್ಮ ಗ್ರಾಮದ ಆಜುಬಾಜುವಿನಲ್ಲಿ ಜರುಗಿದ ಆತ್ಮಾಹುತಿಯ ಘಟನೆಗಳನ್ನು ಮಾತ್ರ ದೀರ್ಘ ಕಥಾನಕಗಳ ರೂಪಕ್ಕೆ ತಂದು ಬೆಳೆಸಿಕೊಂಡಿದ್ದಾರೆ ಎಂದು ಹೇಳಿದ್ದಾರೆ”(ರಾಮಚಂದ್ರೇಗೌಡ,೨೦೦೩: ೮೩).

ಕೋಟೆಗೆ ಆಹುತಿಯಾದ ಸಂಗಮ್ಮಳ ಬದುಕು ಸಾಮಾಜಿಕವಾಗಿ ಯಾವ ರೀತಿ ಕಂಡುಬರುತ್ತದೆ ಮತ್ತು ಸಮಾಜದಲ್ಲಿ ಅವಳ ಸ್ಥಾನವೇನು, ಸಮಾಜಕ್ಕೆ ಅವಳು ನೀಡಿದ ಕೊಡುಗೆ ಏನು ಎಂಬುದರ ಬಗ್ಗೆ ಚರ್ಚಿಸಲು ಪ್ರಯತ್ನಿಸಲಾಗಿದೆ.

“ಬಲಿದಾನವು ಸಾರ್ವಜನಿಕ ಒಪ್ಪಿಗೆಯಿಂದ ಪೂರ್ವ ನಿಯೋಜಿತವಾಗಿರುತ್ತದೆ. ತನ್ನನ್ನು ತಾನು ಕೊಂದುಕೊಳ್ಳುವ ಅಥವಾ ಬಲಿ ಕೊಟ್ಟುಕೊಳ್ಳುವ ವ್ಯಕ್ತಿಯ ಮುಂದೆ ಒಂದು ಘನ ಉದ್ದೇಶವಿರುತ್ತದೆ. ಆ ಘನ ಉದ್ದೇಶ ಕಾಲದಿಂದ ಕಾಲಕ್ಕೆ ಬೇರೆಯಾಗಬಹುದು. ಆದರೆ ಆ ಆದರ್ಶದ ಹಿಂದೆ ವ್ಯಕ್ತಿಯ ದೃಢ ನಿರ್ಧಾರವಿರುತ್ತದೆ. ಇದಕ್ಕೆ ಧಾರ್ಮಿಕ ನೆಲೆಗಟ್ಟು ಸಹ ಇರುತ್ತದೆ. ಆತ್ಮಬಲಿಯ ಘಟನೆಗಳು ಅಲೌಕಿಕ ಧಾರ್ಮಿಕ ನಂಬುಗೆಗಳಿಂದ ಪ್ರೇರಿತವಾದವುಗಳು” ಎಂದು ಎಂ.ಚಿದಾನಂದಮೂರ್ತಿ ಅಭಿಪ್ರಾಯ ಪಟ್ಟಿರುವುದು ಗಮನಾರ್ಹವಾಗಿದೆ (ಚಿದಾನಂದಮೂರ್ತಿ, ೨೦೦೨: ೪೪೭). “ಆತ್ಮಬಲಿಯಲ್ಲಿ ಬಲಿಯಾಗುವ ಹೆಣ್ಣು/ಗಂಡು ತಾನೆ ತಾನಾಗಿ ಮುಂದೆ ಬಂದು ಯಾವ ಬಗೆಯ ಹಿಂಜರಿಕೆ, ದ್ವಂದ್ವಗಳು ಇಲ್ಲವೇನೋ ಎಂಬಂತೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿದ್ದಾರೆ ಎಂದು ಭಾವಿಸಲಾಗುತ್ತದೆ. ಈ ಬಗೆಯ ಬಲಿಯಲ್ಲಿ ಸಮಷ್ಟಿಯ ಶ್ರೇಯಸ್ಸಿಗಾಗಿ ತಾನು ತ್ಯಾಗ ಮಾಡುತ್ತಿದ್ದೇನೆ ಎಂಬ ನಂಬಿಕೆಯೂ ಮತ್ತು ಒಂದು ಬಗೆಯ ಮಾನಸಿಕ ತೃಪ್ತಿಯೂ ಅವರಲ್ಲಿರುತ್ತದೆ ಎಂದು ಹೇಳಲಾಗುತ್ತದೆ. ಇದನ್ನು ಸಮಕಾಲೀನ ಸಮಾಜ ಒಪ್ಪಿ ಅವರ ಬಲಿಯನ್ನು ವೈಭವೀಕರಿಸಿ ನೋಡುತ್ತಿದ್ದುದು ಕಾಣುತ್ತದೆ.”(ಸತ್ಯನಾಥ, ೧೯೭೯: ೨೭).

ಹೆಣ್ಣಾಗಲಿ ಗಂಡಾಗಲಿ ಬಲಿಗೆ ಶೃಂಗಾರವಾಗಿ ಹೋಗುವುದನ್ನು ಕೇಳಿದರೆ ನಿಜಕ್ಕೂ ಅವರ ಇಚ್ಛೆಯ ಮೇರೆಗೆ ಹೋಗುತ್ತಿದ್ದಂತೆ ಕಂಡುಬರುತ್ತದೆ. ಆದರೆ ಅವರ ಹಿಂದೆ ಸಾಮಾಜಿಕ ಒತ್ತಡವಿರುವುದನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡುಬರುತ್ತದೆ. ಮುಂದೆ ಅವರು ತಮ್ಮ ಪ್ರಾಣವನ್ನು ತ್ಯಾಗ ಮಾಡುವುದರ ಮೂಲಕ ತ್ಯಾಗಜೀವಿಗಳೇ ಎನಿಸಿಕೊಳ್ಳುತ್ತಾರೆ.

ನರಬಲಿಯನ್ನು ಖಚಿತವಾದ ಧಾರ್ಮಿಕ ಪ್ರಕ್ರಿಯೆಯನ್ನು ಗಮನದಲ್ಲಿಟ್ಟುಕೊಂಡು ಅದನ್ನು ಅಭ್ಯಸಿಸಬೇಕಾಗುತ್ತದೆ. ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಯಾವುದಾದರೊಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ತಾನೇ ತಾನಾಗಿ ಅಥವಾ ಪರರಿಂದ ಬಲಿಯಾಗುವ ವ್ಯಕ್ತಿಯ ಸಹಜ ಸಾವಿಗೆ ಮೊದಲೇ ಮಾಡುವ ಉದ್ದೇಶಿತ ಪ್ರಾಣಹರಣ ಒಂದು ಧಾರ್ಮಿಕ ವಿಧಿಯೊಂದಿಗೆ ನಡೆದಾಗ ಅದು ನರಬಲಿಯಾಗುತ್ತದೆ.

೧. ನರಬಲಿಗೆ ಕನಿಷ್ಟ ಒಬ್ಬರಾದರೂ ಇರಬಹುದು ಅಥವಾ ಅದಕ್ಕಿಂತಲೂ ಹೆಚ್ಚಿನ ಸಮುದಾಯವೇ ಇರಬಹುದು.

೨. ನರಬಲಿಗೆ ಒಂದು ನಿರ್ದಿಷ್ಟ ಉದ್ದೇಶ ಇದ್ದೇ ಇರಬೇಕಾಗುತ್ತದೆ. ನಿರುದ್ದೇಶಕ್ಕೆ ನರಬಲಿ ನಡೆಯಲು ಸಾಧ್ಯವಿಲ್ಲ.

೩. ಬಲಿಪಶುವಾದವ ತನ್ನನ್ನು ತಾನೆ ಕೊಂದುಕೊಳ್ಳಬಹುದು ಅಥವಾ ಬೇರೊಬ್ಬರಿಂದ ಹತ್ಯೆಯಾಗಬಹುದು.

೪. ಬಲಿ ಪಶುವಿನ ಸಹಜ ಸಾವಿಗಿಂತ ಮೊದಲೇ ನಡೆಯುವ ಪ್ರಾಣಹರಣ ಬಲಿಪಶುವಾಗುತ್ತದೆ.

೫. ನರಬಲಿಯು ಯಾವಾಗಲೂ ಧಾರ್ಮಿಕ ಆಚರಣೆಯ ಒಂದು ಅಂಗವಾಗಿಯೇ ಇರುತ್ತದೆ (ಮುದ್ದವೀರಪ್ಪ, ೨೦೦೪ : ೨೨೯).

ಕೋಟೆಗೆ ಬಲಿಕೊಡುವುದು ಅಧಿಕವಾಗಿ ಹೆಣ್ಣನ್ನು. ಅದರಲ್ಲೂ ಗರ್ಭಿಣಿ ಹೆಣ್ಣನ್ನು. ಉದಾಹರಣೆಗೆ ಪಾವಗಡದ ಕೋಟೆಯ ನಿರ್ಮಾಣದ ಸಂದರ್ಭದಲ್ಲಿ ಬಲಿಯಾದ ಮೂವರು ಗರ್ಭಿಣಿ ಸ್ತ್ರೀಯರು. ಅದರಲ್ಲೂ ಇಬ್ಬರು ಕೆಳವರ್ಗದವರು (ವಡ್ಡರು, ಕೊಂಚರು). ಇನ್ನೋರ್ವ ಗರ್ಭಿಣಿ ಸ್ತ್ರೀಯು ಬ್ರಾಹ್ಮಣಳಾಗಿದ್ದಾಳೆ. ಎಲ್ಲ ಬಲಿಯಲ್ಲೂ ಸ್ತ್ರೀ ಎಂದು, ಅದರಲ್ಲೂ ಗರ್ಭಿಣಿ ಸ್ತ್ರೀ ಎಂಬುದು ವಿಶೇಷವಾಗಿದೆ (ಮುದ್ದವೀರಪ್ಪ, ೨೦೦೪: ೨೨೯).

ಹೆಚ್ಚಾಗಿ ಗರ್ಭಿಣಿ ಸ್ತ್ರೀಯನ್ನು ಬಲಿಕೊಟ್ಟಿರುವುದನ್ನು ನೋಡಿದರೆ ಇದು ಪುರುಷ ಪ್ರಧಾನ ಸಮಾಜದ ತಂತ್ರವಲ್ಲದೇ ಬೇರೆನೂ ಅಲ್ಲ. ಕೋಟೆಯ ನಿರ್ಮಾಣದ ಎಲ್ಲ ಗೌರವವನ್ನು ತಾನೇ ಪಡೆಯುವ ಪುರುಷ ಪ್ರಾಣತ್ಯಾಗದ ಸಂದರ್ಭದಲ್ಲಿ ಮಾತ್ರ ಸ್ತ್ರೀಯರನ್ನು ಗೌರವವಾಗಿ ಕಾಣುವ ಮೂಲಕ ಅವಳನ್ನು ಶೋಷಣೆಗೆ ಒಳಪಡಿಸುತ್ತಾನೆ. ಹಾಗಾಗಿ ಬಲಿ ನೀಡುವ ಸಂದರ್ಭದಲ್ಲಿ ಮಾತ್ರ ಅದು ಉನ್ನತ ವರ್ಗವಿರಲಿ ಅಥವಾ ಕೆಳವರ್ಗವಿರಲಿ ಸ್ತ್ರೀಯರೆಲ್ಲ ಶೋಷಣೆಗೆ ಒಳಗಾಗಿರುವುದು ಈ ಐತಿಹ್ಯದಿಂದ ತಿಳಿದುಬರುತ್ತದೆ. ಅಲ್ಲದೆ ಅನೇಕ ಕಡೆ ಸ್ತ್ರೀಯನು ಕೀಳೆಂದು ಭಾವಿಸಲಾಗುತ್ತದೆ. ಬಲಿಯಾಗುವ ಸಂದರ್ಭದಲ್ಲಿ ಪವಿತ್ರಳಾಗಿ, ದೇವತೆಯಾಗಿ ಯಾಕೆ ಪೂಜಿತಳಾಗುತ್ತಾಳೆ? ಗರ್ಭಿಣಿ ಸ್ತ್ರೀಯರನ್ನು ಬಲಿ ಕೊಡಲು ಮುಖ್ಯವಾಗಿ ಅವರನ್ನು ಫಲವತ್ತತೆಯ, ಸೃಷ್ಟಿಯ ಸಂಕೇತವೆಂದು ಭಾವಿಸಿರುವುದೇ ಕಾರಣವಾಗಿದೆ. ಹೀಗೆ ಬಲಿಯಾಗುವುದನ್ನು ಒಂದು ಮೌಲ್ಯವೆಂದು ಸಮುದಾಯಗಳು ನಂಬಿವೆ.

ಬಲಿ ಪ್ರಾಚೀನ ಕಾಲದಿಂದಲೂ ವಾಸ್ತು ರಚನೆಯಲ್ಲಿ ನಿರ್ಮಿಸುವ ಕೋಟೆ, ಕೆರೆ, ಅಣೆಕಟ್ಟು ಹಾಗೂ ಇನ್ನಿತರ ಕಟ್ಟಡಗಳಿಗೆ ನರಬಲಿಯನ್ನು ಕೊಟ್ಟು ಅವು ನಿರ್ಮಾಣವಾದ ಮೇಲೆ ಭದ್ರವಾಗಿ ನಿಲ್ಲಲೆಂದು ಆಶಿಸುವುದು ಕಂಡುಬರುತ್ತದೆ. ಇಂಥ ನರಬಲಿಯು ಕಾಲದಿಂದ ಕಾಲಕ್ಕೆ ಬದಲಾವಣೆ ಹೊಂದುತ್ತಾ ಬಂದಿದೆ. ಹಿಂದೆ ಇದ್ದ ನರಬಲಿಯು ನಾಗರಿಕತೆಯ ವೇಳೆಗಾಗಲೇ ಸಾಕಷ್ಟು ಕಣ್ಮರೆಯಾಗಿ ಬಲಿಗೆ ಬದಲಿ ವ್ಯವಸ್ಥೆಯನ್ನು ಮಾಡಿಕೊಂಡಿರುವುದು ಕಾಣಬಹುದು. ನರಬಲಿಯು ಧಾರ್ಮಿಕ ವಿಧಿಯ ಒಂದು ಅಂಗವಾಗಿದ್ದರಿಂದ ಅದನ್ನು ಯಾವುದಾದರೂ ಸಾಂಕೇತಿಕ ಅಥವಾ ಬದಲಿ ರೂಪದಲ್ಲಿ ಆಚರಿಸುವುದು ಅನಿವಾರ್ಯವಾಗಿದೆ. ಇದರಿಂದ ನರಬಲಿಯ ಬದಲು ಒಂದೆರಡು ರಕ್ತದ ಹನಿಯನ್ನು ಹೆಚ್ಚುವಂತೆ ಮಾಡುವುದು, ಮನುಷ್ಯ ಬಲಿಯ ಬದಲಾಗಿ ಒಂದು ಪ್ರಾಣಿಯನ್ನು ಬಲಿ ಕೊಡುವುದು, ಅಲ್ಲದೆ ನರಬಲಿಯಂತೆ ಬೂದುಗುಂಬಳಕ್ಕೆ ಕುಂಕುಮ ಹಚ್ಚುವುದು, ಲಿಂಬೆಹಣ್ಣನ್ನು ಎರಡು ಹೋಳು ಮಾಡುವುದು, ಬಾಳೆ ಹಣ್ಣಿನ ಕತ್ತು ಮುರಿಯುವುದು, ತೆಂಗಿನ ಕಾಯಿ ಒಡೆಯುವುದು ಇವೆಲ್ಲವೂ ಮನುಷ್ಯನ ತಲೆಯ ಬದಲಿ ರೂಪಗಳಾಗಿ ಸಾಂಕೇತಿಕ ರೂಪವನ್ನು ಪಡೆದಿವೆ ಎನ್ನಬಹುದಾಗಿದೆ. ಆದರೂ ಇವೆಲ್ಲವನ್ನು ಬಲಿಗಳೆಂದೇ ಸಮಾಜವು ಅಂಗೀಕರಿಸಿದೆ. ಈ ರೀತಿ ಬದಲಾವಣೆಯಾದರೂ ಹಿಂದಿನ

ಸಂಸ್ಕೃತ ನೆನಪುಗಳು ಒಂದು ಸಮಾಜದೊಳಗೆ ಬಂದು ರೂಪಿತವಾಗಿರುತ್ತವೆ. ಅವುಗಳನ್ನು (ನರಬಲಿ) ಗಟ್ಟಿಗೊಳಿಸುವುದಕ್ಕಾಗಿ ಬಲಿಯ ಸಂಕೇತವೆಂಬಂತೆ ಈ ರೀತಿಯ ಬದಲಾದ ವ್ಯವಸ್ಥೆಯನ್ನು ಮನುಷ್ಯ ಮತ್ತೆ ಮತ್ತೆ ರೂಢಿಸಿಕೊಳ್ಳುತ್ತಾನೆ.

ಬೀದರ್ ಕೋಟೆಗೆ ಬಲಿ ಕೊಟ್ಟಿರುವುದನ್ನು ಸ್ತ್ರೀವಾದಿ ನೆಲೆಯಿಂದ ಪರಿಶೀಲಿಸಿದಾಗ ಕೋಟೆಗೆ ಬಲಿಯ ಬಲಿದಾನಕ್ಕಿಂತ ಬಲಿಯೇ ಎಂಬ ಸೂಕ್ಷ್ಮ ಅಂಶ ಹೊರಬೀಳುತ್ತದೆ. "ಕೋಟೆಗೆ ಬಲಿ ವಾಸ್ತವದಲ್ಲಿ ಹೆಣ್ಣೊಬ್ಬಳು ಸಮಷ್ಟಿ ಹಿತಕ್ಕಾಗಿ ಆತ್ಮ ಬಲಿದಾನವಾದದ್ದೇ? ಅಥವಾ ಸಮಷ್ಟಿ ಹಿತ ಹೆಣ್ಣನ್ನು ಬಲಿಯಾಗಿಸಿದ್ದೆ? ಹೀಗೆ ಹೆಣ್ಣು ಸ್ವ ಇಚ್ಛೆಯಿಂದ ಆತ್ಮ ಬಲಿದಾನಗೈದದ್ದೇ ನಿಜವಾದರೆ ಖಂಡಿತ ಬಲಿದಾನ ಕಥೆ ಹೇಳುವ ಇಷ್ಟೊಂದು ಉದಾಹರಣೆಗಳು ಸಿಗುತ್ತಿರಲಿಲ್ಲ" (ಗಾಯತ್ರಿ, ೨೦೦೦: ೨೦). ಬಲಿ ಯಾದವರು ಎಲ್ಲರೂ ಹೆಣ್ಣುಗಳೇ ಆಗುತ್ತಿರಲಿಲ್ಲ, ಅದರಲ್ಲೂ ಅವರಲ್ಲಿ ಕುಟುಂಬದ ಸೊಸೆಯರೇ ಆಗುತ್ತಿರಲಿಲ್ಲ. ಸಮಷ್ಟಿ ಹಿತದ ಮಾತನ್ನು ಮಲಶೆಟ್ಟಿ ಸಾಹುಕಾರನ ವ್ಯಕ್ತಿತ್ವಕ್ಕೆ ಆರೋಪಿಸಿ ಒಪ್ಪಿಕೊಂಡರೂ, ಸಮಷ್ಟಿ ಹಿತ ಕಾಯ್ದುಕೊಳ್ಳುವಿಕೆಗೆ ಸಾವುಕಾರ ಸ್ವತಃ ತನ್ನನ್ನು, ತನ್ನ ಹೆಂಡತಿಯನ್ನು, ಮಗನನ್ನು ಅಥವಾ ಮಗಳನ್ನು ಬಲಿಕೊಡಲಿಲ್ಲ ಏಕೆ? ಈ ಎಲ್ಲರ ಸಾವನ್ನು ಒಪ್ಪಿಕೊಳ್ಳುವ ಸ್ವಾರ್ಥ ಮಲಶೆಟ್ಟಿ ಸಾಹುಕಾರನೊಳಗಿರುವುದು ಪರರ ಮನೆಯ ಹೆಣ್ಣಾದ ಸೊಸೆ ಸಂಗಮ್ಮ ಸತ್ತರೆ, ಮತ್ತೆ ತನ್ನ ಮಗನಿಗೆ ಇನ್ನೊಬ್ಬ ಸಂಗಮ್ಮಳನ್ನು ತರಬಹುದು. "ಸೊಸೆ ಸತ್ರೆ ಸೋಬಾಸ-ಮಗ ಸತ್ರೆ ಮನೆಯಾಳು" ಎಂಬ ಕಾರ್ಯವನ್ನು ಯಾವ ಔದಾರ್ಯವು ಮುಚ್ಚಿಟ್ಟುಕೊಳ್ಳಲಾರದು.

ಕೆರೆಯಂ ಕಟ್ಟಿಸು ಬಾವಿಯಂ ಸವೆಸು ದೇವಾಗಾರಮಂ ಮಾಡಿಸ
ಜ್ಜ್ರಯೋಳ್ ಸಿಲುಕಿದೆಸಾಥರಂ ಬಿಡಿಸು ಮಿತ್ರಂರ್ಗಿಂಬುಕೆಯ್ ನಂಬಿದ|
ರ್ಗೆವೆಟ್ಟಾಗಿರು ಶಿಷ್ಟರಂ ಪೊರೆಯನುತ್ತಿಂತೆಲ್ಲವಂ ಪಿಂದೆ ತಾ
ಯೆರದಲ್ಪಾಲೆಯೆಂದು ತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನ|| (ಅಣ್ಣಿಗೇರಿ, ೧೯೭೫: ೨೬).

ಎಂಬ ಹಂಪಿಯ ಶಾಸನೋಕ್ತ ಹೇಳಿಕೆ ಮನುಷ್ಯನಾಗಿ ಹುಟ್ಟಿದ ಮೇಲೆ ಮಾಡಬೇಕಾದ ಬಹುಮುಖ್ಯ ಸಾಮಾಜಿಕ ಕಾರ್ಯಗಳತ್ತ ಬೆರಳು ಮಾಡಿ ತೋರಿಸುತ್ತದೆ

ಈ ಬಗೆಯ ನಂಬಿಕೆಗಳು ಪ್ರಾಚೀನ ಕಾಲದಿಂದಲೂ ಮುಂದುವರೆದುಕೊಂಡು ಬಂದಿವೆಯೆಂದು ತಿಳಿದುಬರುತ್ತದೆ. ಬಲಿಗಳು ಈಗಲೂ ನಡೆಯುತ್ತಿರುವುದು ಗಮನಾರ್ಹವಾಗಿದೆ. ಬಲಿಗಳು ನೀಡುವುದರಿಂದ ಸುಖದಿಂದ ಬಾಳುತ್ತೇವೆ ಎಂಬ ನಂಬಿಕೆ ಬಲವಾಗಿತ್ತು.

ಟಿಪ್ಪಣಿಗಳು

೧. ವಿಶ್ವನಾಥ ಇವರು ಮಾಜಿ ಸುಭೇದಾರರಾಗಿದ್ದು, ಈಗ ಬೀದರ್ ಪಟ್ಟಣದ ವಿದ್ಯಾನಗರ ಕಾಲೋನಿಯಲ್ಲಿ ವಾಸವಾಗಿದ್ದಾರೆ. ಇವರು ಮೂಲತಃ ಬೀದರಿನವರಾಗಿದ್ದಾರೆ. ಇವರು ತಮ್ಮ ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜಿನ ಶಿಕ್ಷಣವನ್ನು ಬೀದರಿನಲ್ಲಿಯೇ ಮುಗಿಸಿದ್ದಾರೆ. ಇವರು ಬೀದರಿನ ಇತಿಹಾಸದ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿದ್ದಾರೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಸ್ವತಃ ಮನೆಗೆ ಬಂದು ಐತಿಹ್ಯಗಳನ್ನು ಹೇಳಿದ್ದಾರೆ. ಅಲ್ಲದೆ ಕೋಟೆಯ ಪ್ರತಿಯೊಂದು ಸ್ಮಾರಕದ ಬಗ್ಗೆ ಹೆಚ್ಚಿನ ಮಾಹಿತಿ ಹೊಂದಿದ್ದಾರೆ. ತಾವು ತಮಗೆ ತಿಳಿದುದನ್ನೆಲ್ಲ ಹೇಳುವುದಲ್ಲದೆ ಮತ್ತೆ ಕೋಟೆಯ ಬಗ್ಗೆ ಇನ್ನು ಯಾರೂ ಹೆಚ್ಚಾಗಿ ತಿಳಿದುಕೊಂಡಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ ಅವರನ್ನು ಮನೆಗೆ ಕರೆದುಕೊಂಡು ಬರುತ್ತಿದ್ದರು. ಇವರು ಅತ್ಯಂತ ಸರಳ ಮತ್ತು ಸಜ್ಜನಿಕೆಯ ವ್ಯಕ್ತಿಯಾಗಿದ್ದರು.

೨. ಶ್ರೇಷ್ಠ ಮಾನವಶಾಸ್ತ್ರಜ್ಞರಾದ ಡಿ.ಡಿ.ಕೊಸಾಂಬಿಯವರ "ಪ್ರಾಚೀನ ಭಾರತದ ಚರಿತ್ರೆ" ಎಂಬ ಪುಸ್ತಕವನ್ನು ಕೆ.ಬಾಲಗೋಪಾಲ್ ಅವರು ಬರೆದಿದ್ದು ಅದನ್ನು ಎಚ್.ಎಸ್.ಶ್ರೀಮತಿ ಅನುವಾದಿಸಿದ್ದಾರೆ. ಅದರಲ್ಲಿ ಈ ರೀತಿ ಉಲ್ಲೇಖಿಸಿದ್ದಾರೆ : "ಅಭಿಪ್ರಾಯ ಆರ್ಯರ ಪೂರ್ವದ ಹರಪ್ಪ ನಾಗರಿಕತೆಯಲ್ಲಿನ ಬಲಿ ಆಚರಣೆಯ ಸ್ವರೂಪವನ್ನು ವಿವರಿಸುವಂತಿದ್ದರೂ, ಋಗ್ವೇದ ಕಾಲದ ಆಚರಣೆಯ ನಂತರದ ಬೆಳವಣಿಗೆಯ ಹಂತವನ್ನಿದು ಸೂಚಿಸುವಂತಿರುವುದು ವಿಶೇಷ. ಸಿಂಧೂ ನಾಗರಿಕತೆಯಲ್ಲಿ ಅದಾಗಲೇ ದೇವಾಲಯಗಳ ಪರಿಕಲ್ಪನೆ ಇದ್ದಿರಬಹುದೆಂಬುದಾದರೂ, ಆರ್ಯರಲ್ಲಿ ದೇವಾಲಯಗಳ ಕಲ್ಪನೆಯೇ ಇರಲಿಲ್ಲವೆಂಬುದು ಇದಕ್ಕೆ ಕಾರಣವಾಗಿರಬಹುದು" (ಶ್ರೀಮತಿ, ೧೯೯೮: ೬೦). ಆರ್ಯೇತರ ಹರಪ್ಪ ನಾಗರಿಕತೆಯ ಸಮಾಜದಲ್ಲಿ ಬಲಿಯ ಸ್ವರೂಪ ಆರ್ಥಿಕತೆಯಲ್ಲೋ ಅಥವಾ ಆಹಾರ ಪದ್ಧತಿಯಲ್ಲೋ ತನ್ನ ಮೂಲ ಬೇರುಗಳನ್ನು ಹೊಂದಿತ್ತು.

೩. ಮಂಡ್ಯ ಜಿಲ್ಲೆಯಲ್ಲಿ ಬರುವ ಈ ಕೆರೆಯ ನಿರ್ಮಾಣದ ಹಿಂದೆ ಒಬ್ಬ ಸೂಳೆಯ ಪಾತ್ರ ಬಹಳ ಮುಖ್ಯವಾದುದಾಗಿದೆ. ಕೆರೆಯ ಬಗ್ಗೆ ಜನಪದರು ಈ ರೀತಿಯಾಗಿ ಹೇಳುತ್ತಾರೆ. ಊರಿನ ಹಿತಕ್ಕಾಗಿ ನಾಗಮಂಗಲದ ಅರಸನೊಬ್ಬನು ಕೆರೆಯನ್ನು ಕಟ್ಟಿಸಿದನು. ಆದರೆ ಕೆರೆಯನ್ನು ಕಟ್ಟಿಸುತ್ತಿದ್ದರೂ ಅದು ಬಿದ್ದು ಹೋಗುತ್ತಿತ್ತು. ಅಂತಹ ಸಮಯದಲ್ಲಿ ಕೆರೆಯ ಏರಿ ನಿಲ್ಲುತ್ತಿಲ್ಲವೆಂದು ರಾಜನು ಊರಿನ ಜೋಯಿಸರಿಗೆ ಕರೆಯಿಸಿ ಕಟ್ಟಿಸುತ್ತಿರುವ ಕೆರೆಯು ನಿಲ್ಲುತ್ತಿಲ್ಲವೆಂದು ಹೇಳುತ್ತಾರೆ. ಅದಕ್ಕೆ ಜೋಯಿಸರು ಕೆರೆಗೆ ಬಲಿ ಕೊಡಬೇಕು ಎಂದು ಹೇಳುತ್ತಾರೆ. ಅದಕ್ಕೆ ರಾಜನು ತುಂಬಾ ಚಿಂತೆಯಲ್ಲಿರುತ್ತಾನೆ. ಯಾರನ್ನು ಬಲಿಕೊಡಬೇಕು. ಊರಿನಲ್ಲಿರುವರೆಲ್ಲರೂ ನನ್ನ ಪ್ರಜೆಗಳೇ, ಯಾರನ್ನು ಬಲಿ ಕೊಡಲಿ ಎಂದು ಚಿಂತನೆಯಲ್ಲಿ ಕುಳಿತಿದ್ದರು. ಈ ಕೆರೆಯಿಂದ ಸಾಮ್ರಾಜ್ಯದ ಜನತೆಗೆಲ್ಲ ಅನುಕೂಲವಾಗುತ್ತದೆ. ಸಮಾಜಕ್ಕೆ ಒಳ್ಳೆಯದಾಗುತ್ತದೆ, ಅಂದರೆ ನಾನೇ ಯಾಕೆ ಈ ಕೆರೆಗೆ ಬಲಿಯಾಗಬಾರದೆಂದುಕೊಳ್ಳುತ್ತಾಳೆ ರಾಜನ ಸೂಳೆಯೊಬ್ಬಳು. ಸಮಾಜದ ಹಿತಕ್ಕಾಗಿ, ಸಮಾಜೋದ್ಧಾರಕ್ಕಾಗಿ ತನ್ನನ್ನೇ ಕೆರೆಗೆ ಬಲಿಯಾಗಿ ಅರ್ಪಿಸಿಕೊಳ್ಳುತ್ತಾಳೆ. ಅದಕ್ಕಾಗಿ ಇದನ್ನು ಸೂಳೆಕೆರೆ ಎಂದು ಕರೆಯುತ್ತಾರೆ. ಈಗ ಇದು ಇಡೀ ಮಂಡ್ಯ ಜಿಲ್ಲೆಯ ರೈತರಿಗೆ ಜೀವಾಳವಾಗಿದೆ.

೪. ಬುಲಾಯಿ ಎಂದರೆ 'ಮಹಿಳೆಯರು ಕೈ ಕೈ ಜೋಡಿಸುವುದು' ಎಂದರ್ಥ. ಬುಲಾಯಿ ಹಾಡು ಎಂದರೆ ಮಹಿಳೆಯರು ಕೈಕೈ ಜೋಡಿಸಿ ಹಾಡುವ ಹಾಡಿಗೆ ಬುಲಾಯಿ ಹಾಡು ಎಂದು ಕರೆಯುತ್ತಾರೆ. ಸಾಮಾನ್ಯವಾಗಿ

ಈ ಹಾಡನ್ನು ನಾಗರಪಂಚಮಿಯ ಸಮಯದಲ್ಲಿ ಹಾಡುತ್ತಾರೆ. ನಾಗರಪಂಚಮಿಯನ್ನು ಮಹಿಳೆಯರ ಹಬ್ಬವೆಂತಲೇ ಕರೆಯುತ್ತಾರೆ. ಈ ಹಬ್ಬವನ್ನು ಐದು ದಿವಸಗಳ ಕಾಲ ಆಚರಿಸುತ್ತಾರೆ. ಮಹಿಳೆಯರು ವಿಶೇಷವಾಗಿ ಈ ಹಬ್ಬಕ್ಕೆ ಗಂಡನ ಮನೆಯಿಂದ ತವರು ಮನೆಗೆ ಬರುತ್ತಾರೆ. ಐದು ದಿವಸದ ಈ ಹಬ್ಬದಲ್ಲಿ ಪ್ರತಿದಿನ ಸಾಯಂಕಾಲ ಎಲ್ಲಾ ಮಹಿಳೆಯರು ಒಂದೆಡೆ ಸೇರಿ ಬುಲಾಯಿ ಹಾಡನ್ನು ಹಾಡುತ್ತಾರೆ. ಈ ಹಾಡನ್ನು ಹಾಡುತ್ತಾ ಕೈ ಕೈ ಹಿಡಿದು ನಿಧಾನವಾಗಿ ಸುತ್ತುತ್ತಾರೆ.

ಅಧ್ಯಾಯ ೪

ಪಾಂಡುರಂಗನ ಪಾದುಕೆ ಬಗೆಗಿರುವ ಐತಿಹ್ಯಗಳು


ನಾಲ್ಕನೆಯ ಅಧ್ಯಾಯದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಲಿಖಿತ ಆಕರಗಳ ಮೂಲಕ ಗುಂಬಜ್ ದರವಾಜಾ ಹಾಗೂ ಅದರ ಸುತ್ತಳತೆಗಳ ಬಗ್ಗೆ ಉಲ್ಲೇಖಿಸಲಾಗಿದೆ. ಪಾಂಡುರಂಗನ ಪಾದುಕೆಗೆ ಸಂಬಂಧಿಸಿದಂತೆ ಐತಿಹ್ಯಗಳು ಕಂಡುಬಂದಿದ್ದು ಇದನ್ನು ಉಲ್ಲೇಖಿಸಲಾಗಿದೆ. ಎರಡನೆಯ ಭಾಗ ಪಾಂಡುರಂಗನ ಪಾದುಕೆಗೆ ಸಂಬಂಧಿಸಿದ ಐತಿಹ್ಯಗಳಲ್ಲಿ ಮೊದಲನೆಯ ಐತಿಹ್ಯವನ್ನು ಎಂ.ಎ.ಗಫರ್ ಮತ್ತು ಎರಡನೆಯ ಐತಿಹ್ಯವನ್ನು ವಿಶ್ವನಾಥ ಇವರಿಂದ ಸಂಗ್ರಹಿಸಿ ಉಲ್ಲೇಖಿಸಲು ಪ್ರಯತ್ನಿಸಲಾಗಿದೆ.

ಬೀದರ್ ಒಳಕೋಟೆ ಪ್ರಮುಖವಾಗಿ ೭ ದ್ವಾರಗಳನ್ನು ಹೊಂದಿದೆ. ಇವು ೧. ಶಾರ್ಜಾ ದ್ವಾರ, ೨. ಗುಂಬಜ್ ದ್ವಾರ, ೩. ಕಾರನಾಟಿಕ್ ದ್ವಾರ, ೪. ಕಲ್ಯಾಣ ದ್ವಾರ, ೫. ದೆಹಲಿ ದ್ವಾರ, ೬. ಕಲಮಡಗಿ ದ್ವಾರ, ೭. ಮುಂಡಾ ದ್ವಾರ. ಈ ದ್ವಾರಗಳಲ್ಲಿ ಗುಂಬಜ್ ದ್ವಾರವು ಒಂದಾಗಿದೆ. ಈ ದ್ವಾರವು ಕೋಟೆಯ ಮೊದಲ ದ್ವಾರವನ್ನು ದಾಟಿ ಎರಡನೆಯ ದ್ವಾರಕ್ಕೆ ಬಂದಾಗ ನಮಗೆ ಕಾಣಿಸುತ್ತದೆ. ಮೊದಲನೆ ದ್ವಾರವು ಶಾರ್ಜಾ ದ್ವಾರವಾಗಿದ್ದು, ಈ ದ್ವಾರವೇ ಕೋಟೆಯ ಮುಖ್ಯ ದ್ವಾರವಾಗಿದೆ. ಗುಂಬಜ್ ದ್ವಾರವು ಎರಡು ವೃತ್ತಾಕಾರದ ಬುರುಜುಗಳ ಮಧ್ಯದಲ್ಲಿರುವ ಬಾಗಿಲು ಮತ್ತು ವಿನ್ಯಾಸದ ದೃಷ್ಟಿಯಿಂದ ಬಹಳ ಪ್ರಮುಖವಾಗಿದೆ. ಮೇಲೆ ದಪ್ಪ ಕಡಿಮೆಯಾಗುವ ಇದರ ಗೋಡೆಗಳು ಕಡಿಮೆ ಎತ್ತರದ ವೃತ್ತಾಕಾರದ ಮೇಲ್ಭಾಗವುಳ್ಳ ತೆನೆಗಳ ಕೈಪಿಡಿ ಗೋಡೆ, ಅನೇಕ ವಲಯಗಳ ಗುಲ್ ಹಸ್ತ ಗೋಪುರಗಳು ಮತ್ತು ಗೋಲಾಕಾರದ ಗುಮ್ಮಟ, ಸಮಕಾಲೀನ ೧೪ - ೧೫ನೆಯ ಶತಮಾನಗಳ ವಾಸ್ತು ವಿನ್ಯಾಸದ ಅಂಶಗಳನ್ನು ಸೂಚಿಸುತ್ತವೆ. ಆದರೆ ಮುಂದಿನ ಕಮಾನಿನ ಅಳತೆ ಆಕಾರ ಪರ್ಶಿಯಾದ ಪ್ರಭಾವವನ್ನು ತೋರಿಸುತ್ತವೆ. ದ್ವಾರದ ಪ್ರವೇಶವು ಅಷ್ಟಭುಜಾಕೃತಿಯಲ್ಲಿದೆ. ಪಾರ್ಶ್ವಗಳಲ್ಲಿ ಕಾವಲುಗಾರರ ಕೊಠಡಿಗಳು ನಿರ್ಮಿತವಾಗಿವೆ. ಈ ಬಾಗಿಲನ್ನು ಕೋಟೆ ಕಟ್ಟಲು ಪ್ರಾರಂಭಿಸಿದಾಗ ಕ್ರಿ.ಶ.೧೪೨೯ರಲ್ಲಿ ಕಟ್ಟಿದಂತೆ ತೋರುತ್ತದೆ (ಪಾಟೀಲ, ೧೯೯೯: ೧೨೪).

ಬೀದರ್ ಕೋಟೆಯಲ್ಲಿರುವ ಸ್ಮಾರಕಗಳಲ್ಲಿ ಈ ಗುಂಬಜ್ ದ್ವಾರವು ತನ್ನದೇ ಆದ ಮಹತ್ವವನ್ನು ತಳೆದಿದೆ. ಈ ದ್ವಾರದ ಮೇಲೆ ಗುಂಬಜ್‌ಗಳಿರುವುದರಿಂದ ಇದಕ್ಕೆ ಗುಂಬಜ್ ದ್ವಾರವೆಂದು ಕರೆಯಲಾಗಿದೆ. ಈ ದ್ವಾರದ ಕಮಾನಿನ ಎತ್ತರ ೨೮ ಅಡಿ. ಗುಂಬಜ್‌ನ ಒಟ್ಟಾರೆ ಎತ್ತರವು ೩೮ ಅಡಿ ೮ ಇಂಚುಗಳಾಗಿವೆ. ಈ ದ್ವಾರವು ೧೪೨೯ರಲ್ಲಿ ೧ನೇ ಅಹಮದ್ ಶಹನ ಆಳ್ವಿಕೆ ಕಾಲದಲ್ಲಿ ನಿರ್ಮಿತವಾಗಿದೆ. ಎಂದು ಜಿ.ಯಾಜ್ದಾನಿಯವರು ಹೇಳುತ್ತಾರೆ (ಯಾಜ್ದಾನಿ, ೧೯೪೭: ೨೪).

ಗುಂಬಜ್‌ನ ಹೊರಗಿನ ದ್ವಾರಕ್ಕೂ ಒಳಗಿನ ದ್ವಾರಕ್ಕೂ ಮಧ್ಯದಲ್ಲಿ ಅಂತರವಿದೆ. ಈ ಅಂತರದ ಮೇಲ್‌ಭಾವಣಿಯಲ್ಲಿ ಗುಂಬಜ್ ಇರುವುದರಿಂದ ಒಳ ಭಾವಣಿಯು ವೃತ್ತಾಕಾರವಾಗಿದೆ. ಈ ಗುಂಬಜ್‌ನ

ದ್ವಾರವು ಪೂರ್ವಕ್ಕೆ ಮುಖ ಮಾಡಿದ್ದು, ಈ ದ್ವಾರದ ಒಳಭಾಗದಲ್ಲಿ ಅಂದರೆ ದಕ್ಷಿಣ ಮತ್ತು ಉತ್ತರ ಗೋಡೆಗಳ ಮಧ್ಯ ತುಂಬಾ ಅಂತರವಿದೆ. ಈ ದ್ವಾರವನ್ನು ದಾಟಿ ಕೋಟೆಯೊಳಗೆ ಹೋದಾಗ ನಮಗೆ ಮೊದಲು ಎಡಗಡೆಯ ದಿಕ್ಕಿಗೆ ಎತ್ತರದ ಕಟ್ಟೆಯ ಮೇಲೆ ಕಾಣಿಸುವ ಸ್ಮಾರಕವೇ ರಂಗೀನ ಮಹಲ್ ಆಗಿದೆ. ಈ ಗುಂಬಜ್‌ನ ಹೊರಭಾಗದಲ್ಲಿ ಮತ್ತು ಒಳಭಾಗದಲ್ಲಿ ಅನೇಕ ಕಾವಲುಗಾರರು ಇರುತ್ತಿದ್ದರೆಂದು ಇತಿಹಾಸದಿಂದ ತಿಳಿದುಬರುತ್ತದೆ. ಈ ಗುಂಬಜ್‌ನ ದ್ವಾರದ ಎರಡು ಬದಿಗಳಲ್ಲಿ ಎರಡು ಜಗುಲಿಗಳಿವೆ. ಬಹುಶಃ ಇವು ಕಾವಲುಗಾರರು ನಿಲ್ಲುವ ಜಗುಲಿಗಳಾಗಿರಬಹುದು. ಈ ಗುಂಬಜ್‌ನ ಹೊರಬಾಗಿಲು ಕಮಾನು ಆಕಾರದಲ್ಲಿ ಇದ್ದು ಅದರ ಮೇಲೊಂದು ಕಮಾನು ಇದೆ. ಈ ಕಮಾನಿನ ಮೇಲೆ ಮಧ್ಯದಲ್ಲಿ ಮತ್ತೆ ಒಂದು ಚಿಕ್ಕದಾದ ಕಮಾನು ಇದ್ದು, ಇದರ ಮೇಲೆ ಐದು ಕೋನಾಕೃತಿಯುಳ್ಳ ಕಲ್ಲಿನ ಸಾಲುಗಳಿವೆ. ಆ ಕಲ್ಲುಗಳ ಸಾಲಿನ ಎರಡು ಕಡೆಗಳಲ್ಲಿ ದ್ವಾರದ ಗೋಡೆಯ ಮೂಲೆಗಳಿದ್ದು, ಅದರ ಮೇಲೆ ಉದ್ದವಾದ ಎರಡು ಕಡೆಗೆ ಸಣ್ಣದಾದ ಗುಮ್ಮಟಗಳಿದ್ದಂತೆ ತೋರುತ್ತವೆ. ಈ ಗುಮ್ಮಟಗಳು



ಗುಂಬಜ್ ದರವಾಜಾ

ನೋಡಿದರೆ ಮುಸ್ಲಿಮರ ಮಸೀದಿಗಳಿಗೆ ಎರಡು ಕಡೆ ಇರುವಂತೆ ಚಿಕ್ಕ ಗುಂಬಜ್‌ಗಳಿವೆ. ಮುಖ್ಯವಾಗಿ ಹೇಳಬೇಕೆಂದರೆ ಗುಂಬಜ್‌ನ ದ್ವಾರಕ್ಕೆ ಮುಚ್ಚಲು ತೆಗೆಯಲು ಬಾಗಿಲುಗಳಿಲ್ಲ. ಈ ಗುಂಬಜ್‌ನ ಪ್ರವೇಶದ ಹೊರಭಾಗದ ಮಧ್ಯದಲ್ಲಿ ಒಂದು ಪಾಂಡುರಂಗನ ಪಾದವಿದ್ದು, ಈ ಪಾದವು ಐತಿಹಾಸಿಕವಾಗಿ ತನ್ನದೇ ಆದ ಐತಿಹ್ಯವನ್ನು ಹೊಂದಿದೆ. ಈ ಪಾಂಡುರಂಗನ ಪಾದ ಇಲ್ಲೇಕೆ ಇದೆ? ಯಾವ ಕಾರಣಕ್ಕಾಗಿ ಇದನ್ನು ಇಲ್ಲಿ ಸ್ಥಾಪಿಸಲಾಗಿದೆ? ಬಹಮನಿ ಅರಸರಿಗೂ ಈ ಪಾದಕ್ಕೂ ಯಾವ ಸಂಬಂಧವಿದೆ? ಬಹಮನಿ ಅರಸರ ಆಳ್ವಿಕೆಗಿಂತ ಪೂರ್ವದಲ್ಲಿ ಈ ಪಾದವು ಏನಾಗಿತ್ತು? ಮುಸ್ಲಿಂ ಅರಸರ ಆಳ್ವಿಕೆಯ ಕಾಲದಲ್ಲಿ ಈ ಪಾಂಡುರಂಗನ ಪಾದವೆಂದು ಹೇಳಲಾಗುವ ಈ ಪಾದುಕೆಯನ್ನು ಯಾಕೆ ತೆಗೆಯಲಿಲ್ಲ? ಎನ್ನುವಂತಹ ಹಲವಾರು ಪ್ರಶ್ನೆಗಳು ಹುಟ್ಟಿಕೊಳ್ಳದೇ ಇರಲಾರವು. ಈ ಪ್ರಶ್ನೆಗಳಿಗೆ ಜನಪದರಿಂದ ಮೌಖಿಕವಾಗಿ



ಬರುವ ಐತಿಹ್ಯಗಳಲ್ಲಿ ಉತ್ತರ ಅಡಗಿದೆ. ಆ ಉತ್ತರಗಳನ್ನೆಲ್ಲ ಹೊರತರುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಕೋಟೆಯ ಸುತ್ತಮುತ್ತಲಿನ ಜನರು ಈ ಪಾದಗಳನ್ನು ಪಂಢರಪುರದ ಪಾಂಡುರಂಗನ ಪಾದಗಳಾಗಿವೆ ಎಂದು ಹೇಳುತ್ತಾರೆ. ಇದೇ ತೆರನಾದ ಇನ್ನೊಂದು ಪಾದವನ್ನು ಶಾಹಗಂಜ್ ದ್ವಾರದಲ್ಲಿ ಕಾಣಬಹುದಾಗಿದೆ. ಈ ಪಂಢರಪುರದ ಪಾಂಡುರಂಗನ ಪಾದುಕೆಗಳು ಇಲ್ಲಿಗೆ ಏಕೆ ಬಂದಿವೆ? ಆ ಪಾದಗಳು ತಾನಾಗಿಯೇ ಬಂದವೋ? ಯಾರಾದರೂ ತಂದರೋ ಅಥವಾ ಪಾಂಡುರಂಗನೇ ಈ ಪಾದಗಳನ್ನು ತಾನೇ ಸ್ವತಃ ತಂದನೋ? ಬಹಮನಿಯ ಮನೆತನಕ್ಕೂ ಇವನಿಗೂ ಏನು ಸಂಬಂಧವಿದೆ, ಸಂಬಂಧವಿದ್ದರೆ ಯಾವ ಅರಸನ ಆಳ್ವಿಕೆ ಕಾಲದಲ್ಲಿ ಸಂಬಂಧವಿತ್ತು? ಎಂಬ ಎಲ್ಲಾ ರೀತಿಯ ಪ್ರಶ್ನೆಗಳಿಗೆ ಮೌಖಿಕವಾದ ಆಕರಗಳಿಂದಲೇ ಉತ್ತರ ಊಹಿಸಬೇಕಾಗಿದೆ. ಏಕೆಂದರೆ ಈ ಪಾದಗಳ ಬಗ್ಗೆ ಯಾವುದೇ ಲಿಖಿತವಾದ ಆಕರಗಳು ಅಷ್ಟೊಂದು ಲಭ್ಯವಿಲ್ಲದ ಕಾರಣ ನಾವು ಮೌಖಿಕ ಆಧಾರಗಳನ್ನೇ ಇಲ್ಲಿ ಮೂಲ ಆಧಾರಗಳನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಈ ಸಂದರ್ಭದಲ್ಲಿ ಜನರ ಬಾಯಿಂದ ಮೌಖಿಕವಾಗಿ ಏನು ಹೊರಬರುತ್ತಿದೆ ಎಂಬುದರ ಮೂಲಕ ಐತಿಹ್ಯಗಳನ್ನು ಗುರುತಿಸಿ ಇಲ್ಲಿ ಕಲೆ ಹಾಕಲಾಗಿದೆ.

ಪಾಂಡುರಂಗನು ಪಂಢರಪುರದಿಂದ ಒಬ್ಬ ವಜೀರನ ಸಾಲವನ್ನು ತೀರಿಸುವುದಕ್ಕಾಗಿ ಬಹಮನಿಯರ ಸಾಮ್ರಾಜ್ಯಕ್ಕೆ ಬಂದಿದ್ದನು. ಸಾಲವನ್ನು ತೀರಿಸಿ ಹೋಗುವಾಗ ತನ್ನ ಒಂದು ಕಾಲನ್ನು ಗುಂಬಜ್ ದ್ವಾರದಲ್ಲೂ ಮತ್ತೊಂದು ಕಾಲನ್ನು ಶಹಗಂಜ್ ದ್ವಾರದಲ್ಲೂ ಇಟ್ಟು ಹೋಗುತ್ತಾನೆ ಎಂದು ವಕ್ತೃ ಮೌಖಿಕವಾಗಿ ಐತಿಹ್ಯವನ್ನು ಹೇಳುತ್ತಾರೆ. ಆ ಪಾಂಡುರಂಗನು ಇಟ್ಟ ಹೆಜ್ಜೆಗಳೇ ಈ ಪಾದದ ಗುರುತು ಗಳಾಗಿವೆ ಎಂಬುದು ಜನಪದರ ನಂಬಿಕೆ. ಹಾಗಾದರೆ ಪಂಥನು ಯಾರು? ಪಂಥನಿಗೂ ಪಂಢರಪುರದ ಪಾಂಡುರಂಗನಿಗೂ ಏನು ಸಂಬಂಧ? ಸಾಲ ತೀರಿಸಲು ಪಾಂಡುರಂಗ ಬಹಮನಿ ಸಾಮ್ರಾಜ್ಯಕ್ಕೆ ಬಂದಿದ್ದನೇನೊ ಸರಿ. ಆದರೆ ಸಾಲ ಮಾಡಿದವರು ಯಾರು? ಯಾವ ಕಾರಣಕ್ಕಾಗಿ ಸಾಲ ಮಾಡಲಾಯಿತು? ಅದನ್ನು ಪಾಂಡುರಂಗನೇ ಯಾಕೆ ತೀರಿಸಬೇಕು? ಎನ್ನುವ ಪ್ರಶ್ನೆಗಳು ಉದ್ಭವಿಸುತ್ತವೆ. ದಾಮಾಜಿ ಪಂಥನ ಸಾಲವನ್ನು ತೀರಿಸಿದ ಬಳಿಕ ದಾಮಾಜಿ ಪಂಥನು ಎಲ್ಲಿಗೆ ಹೋದನು? ಅರಸನು ಏನಾದ? ಬಹಮನಿಯ ಸಾಮ್ರಾಜ್ಯ ಏನಾಯಿತು? ಇಂದಿಗೂ ಆ ಪಾದಗಳನ್ನು ಪಾಂಡುರಂಗನ ಪಾದಗಳನ್ನಾಗಿಯೇ ಜನ ಏಕೆ ಗುರುತಿಸುತ್ತಿದ್ದಾರೆ? ಹಾಗೆ ಗುರುತಿಸುತ್ತಿದ್ದರೆ ಹೆಚ್ಚಾಗಿ ಯಾವ ಸಮುದಾಯದವರು ಗುರುತಿಸುತ್ತಿದ್ದಾರೆ ಎಂಬ ಪ್ರಶ್ನೆಗಳು ಮುಖ್ಯವಾಗುತ್ತವೆ.

ಅರಸನ ಸಾಲವನ್ನು ತೀರಿಸಲು ಅರಮನೆಯನ್ನು ಪ್ರವೇಶಿಸುವಾಗ ಇಲ್ಲಿ ಪಾದ ಇಟ್ಟನೋ ಅಥವಾ ಸಾಲ ತೀರಿಸಿ ಬರುವಾಗಲೇ ಕಾಲನ್ನು ದ್ವಾರದಲ್ಲಿ ಇಟ್ಟು ಬಂದನೋ ಎಂಬ ಪ್ರಶ್ನೆಗಳಿಗೆ ವಕ್ತೃರಿಂದ ಉತ್ತರ ಕಂಡುಕೊಳ್ಳಬೇಕಾಗುತ್ತದೆ. ಪಾಂಡುರಂಗನ ಪಾದ ಕುರಿತಂತೆ ವಕ್ತೃರು ಈ ರೀತಿಯ ಐತಿಹ್ಯಗಳನ್ನು ಹೇಳುತ್ತಾರೆ.

ಐತಿಹ್ಯಗಳು

ಕೋಟೆಯ ಎರಡನೆಯ ದ್ವಾರದಲ್ಲಿರುವ ಪಾಂಡುರಂಗನ ಪಾದುಕೆ ಕುರಿತು ಹಲವಾರು ಐತಿಹ್ಯಗಳಿವೆ. ಆದರೆ ಸಂಗ್ರಹಣೆಯಲ್ಲಿ ಎರಡು ಐತಿಹ್ಯಗಳು ಮಾತ್ರ ದೊರಕಿವೆ. ಆ ಎರಡು ಐತಿಹ್ಯಗಳನ್ನು ವಕ್ತೃವಿನ ಭಾಷೆಯಲ್ಲಿಯೇ ಸಂಗ್ರಹಿಸಿ ಅವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ. ನಂತರ ಅದನ್ನು ಸರಳಗನ್ನಡದಲ್ಲಿ ಹೇಳುವ ಪ್ರಯತ್ನವನ್ನು ಮಾಡಲಾಗಿದೆ.

ಮೊದಲನೆಯ ಐತಿಹ್ಯ

ಮೊದಲನೆಯ ಐತಿಹ್ಯವನ್ನು ಎಂ.ಎ.ಗಫರ್[೧] ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಅವರ ಆಡು ಭಾಷೆಯಲ್ಲೆ ಅದನ್ನು ವಿವರಿಸಲಾಗಿದೆ. ಅರಸನ ಹತ್ತಿರ ದಾಯಾಜಿ ಪಂಥನೆಂಬ ನೌಕರನಿದ್ದು, ಅವನು ಮಾಡಿದ ತಪ್ಪು ಕೆಲಸಕ್ಕಾಗಿ ಅರಸನು ಅವನನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಾಗ, ಅವನ ಸಹಾಯಕ್ಕಾಗಿ ಪಾಂಡುರಂಗನು ಬರುತ್ತಾನೆ. ಪಾಂಡುರಂಗನು ಬಂದು ಈ ದ್ವಾರದಲ್ಲಿ ನಿಲ್ಲುತ್ತಾನೆ ಎಂದು ಕೋಟೆಯ ಸುತ್ತಮುತ್ತಲಿನ ವಕ್ತೃರಲ್ಲಿ ಪಾಂಡುರಂಗನ ಪಾದುಕೆ ಕುರಿತಂಥ ಐತಿಹ್ಯಗಳು ಪ್ರತೀತಿಯಲ್ಲಿವೆ.

> "ಬಹಮನಿ ರಾಜಾನ್ ಆಳಿಕೆ ಕಾಲದಾಗ್ ದಾಮಾಜಿ ಪಂಥ ಒಬ್ಬವ್ ಅಧಿಕಾರಿ ಇದ್ದುನ್. ಅವಾ ಜ್ವಾಳ, ಬ್ಯಾಳಿ, ತೊಗರಿ ಇಂಥ ಧಾನ್ಯದ ಮ್ಯಾಲೆ ಮಾಲಕ್ ಆಗಿದ್. ಆಗ ಒಮ್ಮೇಳ ರಾಜಾನ ರಾಜೋಟಗಿದಾಗ ಬೊಕ್ಕೊಳ ಭಯಂಕರ ಬರ ಬಂದಿತ್. ಆಗ ರಾಜಾ ಊರಿನಾಗ ಇರಲಿಲ್ಲ ಅವಾ ಬ್ಯಾರೆ ಊರಿಗಿ ಹೋಗಿದ್, ಅದುಕ್ ಬರಗಾಲ ಬಂದಿದಕ್ಕಾಗಿ ಎಲ್ಲಿರಿಗಿ ಭೀ ಕುಡಿಲಾಕ್ ನೀರು, ಉಳ್ಳಾಕ ರೊಟ್ಟಿ ಯಾನ್ ಭೀ ಸಿಗಲ್ದೆ ಹೋಯ್ತು. ರಾಜಾ ಊರಿಗೆ ಹೋಗಿದಾವ್ ಬರಲೇ ಹೋದುನ್. ಇಕಡಿ ಮಂದಿಯಲ್ಲ ಉಳ್ಳಾಕ ಅನ್ನ ಇಲ್ದೆ ಸಾಯಿಲತಿದ್ರ್. ಅದುಕ್ ರಾಜಾನ್ ಬಲ್ಲಿ ನೌಕರಿ ಇದ್ದಿದ್ ಒಬ್ಬವ್ ಅಧಿಕಾರಿ ತನ್ನ ಬಲ್ಲಿ ಖೋಲ್ಯಾಗ ಇದ್ದಿದ್ ಜ್ವಾಳಾ, ಗೋಧಿ ಎಲ್ಲಾ ಬಡೂರಿಗಿ ಹಂಚ್ತಾನ್. ಆಗ ರಾಜಾ ಊರಿಂದ ಬರ್ತಾನ, ಬಂದಿನ ಮ್ಯಾಕ್ ಎಲ್ಲರೂ ರಾಜಾಗ್ ಹೇಳ್ತಾರ. ನಿಂಬಲ್ಲಿ ಇದ್ದಿದ್ದ ಅಧಿಕಾರಿ ಎಲ್ಲರಿಗಿಭೀ ನಿಂಬಲಿಂದ್ ರ‍್ಯಾಶನ್ ಕೊಟ್ಟ್ಯಾನ್, ಖೊಲ್ಲಿನೇ ಖಾಲಿ ಮಾಡ್ಯಾನ ಎಂದ್ ರಾಜಾಗ ಹೇಳ್ದುರ್. ಅದುಕ್ ರಾಜಾ ಅಧಿಕಾರಿಗಿ ತಂದ್ ಜೈಲಾಗ್ ಹಾಕ್ತಾರ್. ಆಗ ಪಾಂಡುರಂಗ ಸ್ವತ ಮಾರುವೇಷದಾಗ ಬಂದ್ ಪಂಥನ ಮುಂದೆ ಕೊಡೊ ರೊಕ್ಕಾ ಎಲ್ಲಾ ಕೊಡ್ತಾನ್. ಕೊಡನ ಪಟ್ಟಿಗ್ ಅಲ್ಲಿಂದ ಹೊರಗೆ ಹೋಯಿತಾನ್. ಹೋಯ್ತಿಲ್ಲಿಕೇ ತನ್ನ ಒಂದ್ ಕಾಲ್ ಈ ಗುಂಬದ್ ಬಾಗಿಲಾಗ್ ಇನ್ನೊಂದು ಕಾಲ್ ಶಾಹಗಂಜ್ ಅಗಸ್ಯಾಗ ಇಟ್ಟ ಮಾಯಾ ಆಯಿತಾನ್. ದಾಮಾಜಿ ಪಂಥುನ್ ಬಲ್ಲಿ ರೊಕ್ಕಾ ತುಂಬಕೋಲಕ್ ಏನ್ ಭೀ ಇರಲ್ ಆಗ್ ತನ್ನ

ಮೈ ಮ್ಯಾಗ ಇದ್ದಿದ್ ಲಂಗೋಟಿದಾಗ ರೊಕ್ಕಾ ತುಂಬ್ಕೊಂಡು ರಾಜಾಗ್ ಹೇಳಲಾಕ್
ಜೈಲಿನಾಗಿಂದ್ ಹೊರುಗ್ ಬರ‍್ತಾನ್"

ಈ ಗುಂಬಜ್ ದ್ವಾರದಲ್ಲಿರುವ ಪಾಂಡುರಂಗನ ಪಾದುಕೆ ಕುರಿತು ಜನಪದರು ಮೌಖಿಕವಾಗಿ ಹೇಳಿರುವ ಐತಿಹ್ಯವನ್ನು ಸರಳಗನ್ನಡದಲ್ಲಿ ಈ ಕೆಳಗಿನಂತೆ ತಿಳಿಸಲು ಪ್ರಯತ್ನಿಸಲಾಗಿದೆ.

ಒಂದಾನೊಂದು ಕಾಲದಲ್ಲಿ ಒಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅರಸನ ಆಡಳಿತವು ವಿವಿಧ ವಿಭಾಗಗಳಲ್ಲಿ ಹಂಚಿ ಹೋಗಿತ್ತು. ಅಂದರೆ ಹಣಕಾಸು ಮಂತ್ರಿ ಬೇರೆ, ವಿದೇಶಾಂಗ ಮಂತ್ರಿ ಬೇರೆ, ಆಹಾರ ಧಾನ್ಯಗಳ ಮಂತ್ರಿ ಬೇರೆ, ತೆರಿಗೆ ವಸೂಲಿ ಅಧಿಕಾರಿ ಬೇರೆ ಹೀಗೆ ಬೇರೆ ಬೇರೆ ಅಧಿಕಾರಿಗಳಲ್ಲಿ ಆಡಳಿತವು ಹಂಚಿಹೋಗಿತ್ತು. ಅಂತಹ ಸಮಯದಲ್ಲಿ ಅರಸನ ಹತ್ತಿರ ದಾಮಾಜಿ ಪಂಥ ಎಂಬ ಹೆಸರಿನ ಒಬ್ಬ ದಕ್ಷ ಮತ್ತು ನಿಷ್ಠಾವಂತ ಅಧಿಕಾರಿಯಿದ್ದನು. ಒಂದು ಸಲ ಅರಸನು ರಾಯಭಾರತ್ವಕ್ಕಾಗಿ ವಿದೇಶಕ್ಕೆ ಹೋಗಿರುತ್ತಾನೆ. ಅಂಥ ಸಮಯದಲ್ಲಿ ಅರಸನ ಸಾಮ್ರಾಜ್ಯದಲ್ಲಿ ಬರಗಾಲ ಉಂಟಾಯಿತು. ಜನ ಅನ್ನ ನೀರಿಲ್ಲದೆ ತತ್ತರಿಸಿ ಹಾಹಾಕಾರವೆದ್ದರು. ಜನರ ಸ್ಥಿತಿ ನೋಡಲಾರದೆ ಅರಸನ ಪರವಾನಗಿ ಇರಲಾರದೆ ದಾಮಾಜಿ ಪಂಥನು ತನ್ನ ಬಳಿ ಶೇಖರಿಸಿಟ್ಟ ಧಾನ್ಯವನ್ನೆಲ್ಲ ತೆಗೆದು ಬಡವರಿಗೆ, ಹಸಿದವರಿಗೆ ಹಂಚಿದನು. ಇದರಿಂದ ಜನರು ತುಂಬಾ ಸಂತೃಪ್ತರಾದರು. ಆದರೆ ಕೆಲವೊಂದು ಹೊಟ್ಟೆಕಿಚ್ಚಿನ ಜನ ಪಂಥನು ಧಾನ್ಯವಲ್ಲ ಹಂಚಿರುವುದನ್ನು ನೋಡಿ ಅರಸನಿಗೆ ವಿಷಯ ಮುಟ್ಟಿಸಿದರು. ಇದರಿಂದ ಅರಸನಿಗೆ ತುಂಬಾ ಕೋಪ ಬಂತು. ಅದಕ್ಕೆ ತಕ್ಷಣವೇ ಪಂಥನನ್ನು ಬಂಧಿಸುವ ಆಜ್ಞೆಯನ್ನು ಹೊರಡಿಸಿದನು. ಪಂಢರಪುರದ ಪಾಂಡುರಂಗನು ಹೊಲೆಯನ ವೇಷ ಧರಿಸಿ ಅರಸನ ದರ್ಬಾರಿಗೆ ಬಂದನು. ಬಂದ ನಂತರ ದಾಮಾಜಿ ಪಂಥನಿಗೆ ಹಣ ಕೊಟ್ಟನು. ಹೊಲೆಯನ ವೇಷದಲ್ಲಿರುವ ಪಾಂಡುರಂಗ ಪಂಥನಿಗೆ ಹಣವನ್ನು ಮುಟ್ಟಿಸಿದ ಬಳಿಕ ತಕ್ಷಣವೇ ಕೋಟೆಯ ದರ್ಬಾರದಿಂದ ಮಾಯವಾಗುತ್ತಾನೆ. ಮಾಯವಾಗಿ ಹೊರಬಂದ ಪಾಂಡುರಂಗನು ತನ್ನ ಒಂದು ಕಾಲನ್ನು ಗುಂಬಜ್ ದ್ವಾರದಲ್ಲಿ ಇನ್ನೊಂದು ಕಾಲನ್ನು ಶಾಹಗಂಜ್ ದ್ವಾರದಲ್ಲಿ ಇಟ್ಟು ಹೊರಹೋಗುತ್ತಾನೆ. ಆ ಪಾಂಡುರಂಗನು ಕಾಲಿಟ್ಟ ಪಾದಗಳೇ ಈ ಪಾದಗಳಾಗಿವೆ ಎಂದು ಬೀದರ್ ಕೋಟೆಯ ಸುತ್ತಮುತ್ತಲಿನ ಜನ ಈ ಪಾದದತ್ತ ಬೆರಳು ತೋರಿಸುತ್ತಾ ಐತಿಹ್ಯವನ್ನು ಹೇಳುತ್ತಾರೆ.

ಎರಡನೆಯ ಐತಿಹ್ಯ

ಎರಡನೆಯ ಐತಿಹ್ಯವನ್ನು ವಿಶ್ವನಾಥ ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಈ ಐತಿಹ್ಯವನ್ನು ಅವರ ಮಾತಿನಲ್ಲೇ ವಿವರಿಸಲಾಗಿದೆ.

ನೌಕರನಾದ ದಾಮಾಜಿ ಪಂಥನು ಸಂಕಷ್ಟದಲ್ಲಿದ್ದಾಗ ಪಾಂಡುರಂಗನು ದಾಮಾಜಿ ಪಂಥನಿಗೆ ಹಣದ ಸಹಾಯವನ್ನು ಮಾಡಲು ಮಾರು ವೇಷವನ್ನು ಧರಿಸಿ, ಅರಸನ ದರ್ಬಾರಿಗೆ ಬರುತ್ತಾನೆ.

ದಾಮಾಜಿ ಪಂಥನಿಗೆ ಹಣದ ಸಹಾಯವನ್ನು ಮಾಡುತ್ತಾನೆ. ದರ್ಬಾರಿಗೆ ಬಂದ ಪಾಂಡುರಂಗನು ದರ್ಬಾರದಿಂದ ಹೋಗುವಾಗ ತನ್ನ ಕಾಲನ್ನು ಗುಂಬಜ್ ದ್ವಾರದಲ್ಲಿ ಇಟ್ಟು ಹೋಗುತ್ತಾನೆ ಎಂದು ಪಾಂಡುರಂಗನ ಪಾದುಕೆ ಕುರಿತ ಐತಿಹ್ಯವು ಪ್ರತೀತಿಯಲ್ಲಿದೆ.


> "ಮಂಗಳವೇಡಾ ಎಂಬ ಊರಿನಲ್ಲಿ ದಾಮಾಜಿ ಪಂಥ ಎಂಬುವನು ಇದ್ದನು. ಅವನು ಬಾದಶಾನ ಆಳ್ವಿಕೆ ಕಾಲದಲ್ಲಿ ಒಂದು ಆಹಾರ ಧಾನ್ಯದ ಮಾಲಿಕನಾಗಿದ್ದ. ಹೀಗೆ ಒಂದಾನೊಂದು ಕಾಲದಲ್ಲಿ ಬರಗಾಲ ಬದ್ದಿತು. ಅಂಥ ಹೊತ್ತಿನಾಗ್ ದಾಮಾಜಿ ಪಂಥ ತನ್ನ ಬಕ್ಕದಾಗ ಇರೊ ರೊಕ್ಕಾ ಎಲ್ಲಾ ಗೋರ್ ಗರೀಬರಿಗೆ ಕೊಟ್ಟನ್. ಆದುರ್ ಜನ ಹೊಟ್ಟೆಕಿಚ್ಚಿನಿಂದ ಹೋಗಿ ಬಹಮನಿಯ ಬಾದಶಾನಿಗೆ ತಿಳಿಸಿದರು. ಆಗ ಬಾದಶಾಹಗೆ ಭಾಳ ಸಿಟ್ಟು ಬಂತು. ಅದುಕ್ ಬಾದಶಾನ ಸೇವಕರು ಪಂಥನಿಗೆ ಬೇಡಿ ಹಾಕಲಾಕ್ ಹೋದುರ್. "ಆಗ ಅವಾ ಕೇಳ್ತಾನ್, ನನಗ್ಯಾಕ ಬೇಡಿ ಹಾಕಲತ್ತೀರಿ, ನಾನ್ ಏನ್ ತಪ್ಪು ಮಾಡಿದೆ ಅಂತ ಕೇಳ್ತಾನೆ". ಮತ ಹೀಗಿನ ಮಾತ್ ಹಿಂಗ್ ನೀನು ಬಾದಶಾಹನ ರೊಕ್ಕಾ ಖಾಲಿ ಮಾಡಿದಿ, ಅದಕ್ಕೆ 'ಬಾದಶಾನ ಹುಕುಂ ಆಗ್ಯಾದ, ನಿನಗೆ ಬಂಧಿಸಬೇಕಂತ ಹೇಳ್ಯಾರ'. ಪಂಥುನ್ ಬಂಧಿಸಿ ಕರಕೊಂಡ್ ಬರ್ತಾ ಬರ್ತಾ ಹಾದ್ಯಾಗ ಪಂಥರಪುರ ಊರ್ ಬಂತು. ಅಲ್ಲಿಂದ ದೇವರ ದರುಶನ ಮಾಡಿ ಮುಂದುಕ ಹೊರಟಾರ್. ಇತ್ ಪಾಂಡುರಂಗ 'ವಿಠೂ ಮಹಾರನ' ವೇಷ ಧರಿಸಿ ದರಬಾರಕ್ ಬರ್ತಾನ. ಯಾಕೆಂದರೆ ದಾಮಾಜಿ ಪಂಥ ಅಪ್ಪಟ ಪಾಂಡುರಂಗನ ಭಕ್ತ ಇರ್ತಾನ. ಬಂದ ಸೇವಕುರಿಗಿ ಅಂತಾನ "ಮರೆಕೋ ರಾಜಾಸೆ ಮಿಲ್ಲನಾ ಹೇ" ಅದುಕ್ ಸೇವಕರು ಅವನಿಗಿ ಒಳಗ್ ಬಿಡ್ತಾರ್. ಬಾದ್ ಶಾನ ಮುಂದೆ ಬಂದ್ ವಿಠೂ ಮಹರ್ ಅಂತಾನ್, ಮತ್ ದಾಮಾಜಿ ಪಂಥ್ ನನ್ ಕೈಲಿಂದ ರೊಕ್ಕಾ ಕಳಿಸ್ಯಾರ, ತೊಗೊರಿ ಅಂತ್ ಹೇಳ್ದ. ವಿಠೂ ಮಹಾರನು ತನ್ನ ಸೊಂಟದಲ್ಲಿರುವ ರೊಕ್ಕಾದ ಚೀಲವನ್ನು ಬಿಚ್ಚಿ ನೆಲಕ್ಕೆ ಸುರಿತಾ ಹೋಯ್ತನ್. ಬಾದಶಹ ತುಂಬಕೊತಾ ಹೋಯಿತಾನ್. ವಿಠೂ ಮಹಾರ ರೊಕ್ಕಾ ಸುರಿಯಾದ ಬಿಡಲ್ಲ ಬಾದಶಾಹ ಎಣಸೊದ್ ಬಿಡಲ್ಲ. ಆಗ್ ಬಾದಶಾಹಗೆ ಸಾಕಾಗಿ 'ನಿಲ್ಲುಸ್ ಮತ ನಿನ್ನ ರೊಕ್ಕಾ ಮುಟ್ಯಾದ ಅಂತಾನ್'. ಆಗ್ ವಿಠೂ ಮಹಾರ್ ಬಾದಶಾನ ದರಬಾರದಿಂದ ಹೊರುಕ್ ಬರ್ತಾನ. ಬಂದ್ ಕ್ಯಾಟಿ ದ್ವಾರದಾಗಿಂದ ಹೊರುಗ್ ಬರಪರಿ ಗುಂಬದ್ ದ್ವಾರದಾಗ ಒಂದ್ ಕಾಲ್ ಶಾಗಂಜ್ ದ್ವಾರದಾಗ ಒಂದ್ ಕಾಲ್ ಇಟ್ ಹೊಯಿತಾನ್"

ಗುಂಬಜ್ ದ್ವಾರದಲ್ಲಿರುವ ಪಾಂಡುರಂಗನ ಪಾದುಕೆ ಕುರಿತು ಜನಪದರು ಮೌಖಿಕವಾಗಿ ಹೇಳಿರುವ ಐತಿಹ್ಯವನ್ನು ಸರಳಗನ್ನಡದಲ್ಲಿ ಈ ಕೆಳಗಿನಂತೆ ತಿಳಿಸಲು ಪ್ರಯತ್ನಿಸಲಾಗಿದೆ.

ಒಂದು ಊರಿನಲ್ಲಿ ಒಬ್ಬ ಅರಸನಿದ್ದನು. ಅವನು ತುಂಬಾ ಬುದ್ಧಿವಂತನಾಗಿದ್ದು, ಅವನ ಆಳ್ವಿಕೆಯ ಕಾಲದಲ್ಲಿ ದಶದಿಕ್ಕುಗಳಿಗೂ ತನ್ನ ರಾಜ್ಯವನ್ನು ವಿಸ್ತರಿಸಿದನು. ಅವನ ಕಾಲದಲ್ಲಿ ಪಾಂಡುರಂಗನ ಭಕ್ತನಾಗಿದ್ದ ದಾಮಾಜಿ ಪಂಥನೆಂಬುವನು ನೌಕರನಾಗಿದ್ದನು. ಈ ದಾಮಾಜಿ ಪಂಥನು ಸದಾ ಪೂಜೆ, ಧ್ಯಾನ ಇವುಗಳಲ್ಲಿಯೇ ಮಗ್ನನಾಗಿ ತನ್ನ ಕರ್ತವ್ಯದಲ್ಲಿ ನಿಯುಕ್ತನಾಗಿರುತ್ತಿದ್ದನು. ಅರಸನಿಗೂ ಮತ್ತು ದಾಮಾಜಿ ಪಂಥನಿಗೂ ಸಂಬಂಧ ಚೆನ್ನಾಗಿಯೇ ಇತ್ತು. ಅರಸನು ದಾಮಾಜಿ ಪಂಥನ ಕರ್ತವ್ಯನಿಷ್ಠೆ ಕಂಡು ಅವನಿಗೆ ಹುದ್ದೆಯಲ್ಲಿ ಬಡ್ತಿಯನ್ನು ನೀಡುತ್ತಾನೆ. ಅಂದರೆ ದಾಮಾಜಿ ಪಂಥನನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿದ ಪ್ರಾಂತವಾದ ಮಂಗಲವೇಡಾದಲ್ಲಿ ಧಾನ್ಯ ಮಳಿಗೆಯ ಅಧಿಕಾರಿಯನ್ನಾಗಿ ನೇಮಕ ಮಾಡುತ್ತಾನೆ. ಪಂಥನು ಮಂಗಲವೇಡಾದಲ್ಲಿ ಅಧಿಕಾರಿಯಾಗಿ ಇರುವ ಕಾಲಕ್ಕೆ ರಾಜ್ಯದಲ್ಲಿ ಭೀಕರವಾದ ಬರಗಾಲ ಬಂದಿತ್ತು. ಈ ಬರದಿಂದಾಗಿ ಮನುಷ್ಯರು, ಮಕ್ಕಳು, ದನಕರುಗಳು, ಪ್ರಾಣಿ ಪಕ್ಷಿಗಳೆಲ್ಲವೂ ಆಹಾರ, ನೀರಿಲ್ಲದೆ ತುಂಬಾ ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದವು. ಆಗ ದಾಮಾಜಿ ಪಂಥನು ಸರಕಾರಿ ಗೋದಾಮಿನಿಂದ ಧಾನ್ಯವನ್ನೆಲ್ಲ ತೆಗೆದು ಬಡವರಿಗೆ ಹಂಚಿದನು. ಇದರಿಂದ ಸರಕಾರಿ ಗೋದಾಮು ಎಲ್ಲ ಬರಿದಾಯಿತು. ಗೋದಾಮು ಬರಿದಾಗಿರುವ ವಿಷಯವನ್ನೆಲ್ಲ ಅರಸನಿಗೆ ಜನರು ತಿಳಿಸಿದರು. ವಿಷಯವನ್ನು ತಿಳಿದ ಅರಸನು ದಾಮಾಜಿ ಪಂಥನನ್ನು ಬಂಧಿಸಿ ಮಂಗಲವೇಡಾದಿಂದ ಕರೆತರಲು ಸೈನಿಕರನ್ನು ಕಳುಹಿಸಿದನು. ಪಂಥನನ್ನು ಬಂಧಿಸಲು ಬಂದ ಸೈನಿಕರಿಗೆ ದಾಮಾಜಿ ಪಂಥನು 'ಯಾಕೆ? ನನ್ನನ್ನು ಬಂಧಿಸುವ ಕಾರಣ ತಿಳಿಯಲಿಲ್ಲ' ಎನ್ನುತ್ತಾನೆ. ಅದಕ್ಕೆ ಸೈನಿಕರು ಬಾದಶಾಹರ ಗೋದಾಮಿನಿಂದ ಹಣ ಮತ್ತು ಧಾನ್ಯವನ್ನೆಲ್ಲ ಲೂಟಿ ಮಾಡಿರುವ ಹಿನ್ನೆಲೆಯಲ್ಲಿ ನಿನ್ನನ್ನು ಬಂಧಿಸಿ ಕರೆತರಲು ಬಾದಶಾಹರ ಅಪ್ಪಣೆಯಾಗಿದೆ ಎನ್ನುತ್ತಾರೆ. ಪಂಥನನ್ನು ಬಂಧಿಸಿ ಕರೆದುಕೊಂಡು ಬರುವಾಗ ದಾರಿಯಲ್ಲಿ ಅನೇಕ ಊರುಗಳು, ಕೇರಿಗಳು ಬರುತ್ತವೆ. ಆ ಊರುಗಳಲ್ಲಿ ಒಂದಾದ ಮಹಾರಾಷ್ಟ್ರದ ಪಂಢರಪುರ ಬರುತ್ತದೆ. ಪಂಢರಪುರದ ಪಾಂಡುರಂಗನ ದರುಶನ ಪಡೆದು ಮುಂದೆ ಸಾಗುತ್ತಾರೆ. ಭಕ್ತರ ಪರಿಸ್ಥಿತಿಯನ್ನು ನೋಡಿದ ಪಾಂಡುರಂಗನು ಭಕ್ತನಿಗೆ ಬಂದ ಆಪತ್ತು, ಸಂಕಷ್ಟವನ್ನು ದೂರ ಮಾಡಲು ಸಹಾಯಕನಾಗಿ ಬರುತ್ತಾನೆ. ಆಗ ಪಾಂಡುರಂಗನು ವಿಠೂ ಮಹಾರ್‌ನ ವೇಷವನ್ನು ಧರಿಸಿ ಸೊಂಟಕ್ಕೆ ಒಂದು ಲಂಗೋಟಿ, ಕೈಯಲ್ಲಿ ಕೋಲು, ಹೆಗಲ ಮೇಲೆ ಕಂಬಳಿ, ತಲೆಯ ಮೇಲೆ ಶಲ್ಯ ಹಿಡಿದುಕೊಂಡು ಕೋಟೆಯ ದರ್ಬಾರಕ್ಕೆ ಬರುತ್ತಾನೆ. ಬಂದು ಕೋಟೆಯ ಬಾಗಿಲಲ್ಲಿ ನಿಂತಿದ್ದ ದ್ವಾರಪಾಲಕರಿಗೆ ಕೇಳುತ್ತಾನೆ.

ನಾನು ಅರಸನನ್ನು ನೋಡಬೇಕಾಗಿದೆ. ದಾಮಾಜಿ ಪಂಥನು ಬಾದಶಾಹರಿಗೆ ಕೊಡಲು ಹಣವನ್ನು ನನ್ನ ಕೈಯಿಂದ ಕೊಟ್ಟು ಕಳುಹಿಸಿದ್ದಾರೆ ಎನ್ನುತ್ತಾನೆ. ಆಗ ದ್ವಾರಪಾಲಕರು ವಿಠೂ ಮಹಾರನನ್ನು ದರ್ಬಾರದ ಒಳಗೆ ಬಿಡುತ್ತಾರೆ. ದರ್ಬಾರಿನ ಒಳಗೆ ಹೋಗಿ ವಿಠು ಮಹಾರನು ಬಾದಾಶಾಹನಿಗೆ

ಹೇಳುತ್ತಾನೆ. ನನಗೆ ದಾಮಾಜಿ ಪಂಥನು ಹಣವನ್ನು ಕೊಟ್ಟು ಕಳುಹಿಸಿದ್ದಾನೆ, ತೆಗೆದುಕೊಳ್ಳಿ ಎನ್ನುತ್ತಾನೆ. ವಿಠೂ ಮಹಾರನು ಅರಸನ ದರ್ಬಾರಿನಲ್ಲಿ ತನ್ನ ಹೆಗಲ ಮೇಲೆ ಇರುವ ಕಂಬಳಿಯನ್ನು ತೆಗೆದು ನೆಲಕ್ಕೆ ಹಾಕಿ ಅದರ ಮೇಲೆ ಹಣ ಸುರಿಯಲು ಪ್ರಾರಂಭಿಸಿದನು. ಒಂದೇ ಸಮನೆ ಹಣ ಸುರಿಯುತ್ತಿದ್ದ ಮಹಾರ್‌ನನ್ನು ರಾಜನು ಇನ್ನು ಸಾಕು ನನ್ನ ಹಣ ತಲುಪಿದೆ ಎಂದು ಹೇಳುತ್ತಾನೆ. ಹಣವನ್ನು ಅರಸನಿಗೆ ಸಲ್ಲಿಸಿದ ಬಳಿಕ ನನಗೆ ರಶೀದಿ ಕೊಡಿ ಎಂದು ಕೇಳಿ ರಶೀದಿಯನ್ನು ಪಡೆದುಕೊಂಡು ಅರಸನ ದರ್ಬಾರದಿಂದ ಕೋಟೆಯ ಬಾಗಿಲಿಗೆ ಬರುತ್ತಾನೆ. ತನ್ನ ಒಂದು ಕಾಲನ್ನು ಗುಂಬಜ್ ದ್ವಾರದಲ್ಲಿ ಇಟ್ಟು ಇನ್ನೊಂದು ಕಾಲನ್ನು ಶಾಹಗಂಜ್ ದ್ವಾರದಲ್ಲಿ ಇಟ್ಟು ಹೋಗುತ್ತಾನೆ. ಈ ಪಾಂಡುರಂಗನ ಪಾದಗಳಿಗೆ ಪ್ರತಿವರ್ಷ ಮಹಾರಾಷ್ಟ್ರದಿಂದ ಬರುವ ಭಕ್ತರು ಪೂಜೆಯನ್ನು ಮಾಡಿ ದುಳಂಡಿ (ಮೊಸರಿನ ಗಡಿಗೆ) ಯನ್ನು



ಪಾಂಡುರಂಗನ ಪಾದುಕೆ

ಪಾಂಡುರಂಗನ ಪಾದದ ಮೇಲೆ ಒಡೆಯುತ್ತಾರೆ. ಆ ಪಾಂಡುರಂಗನು ನಿಂತ ಸ್ಥಳವೇ ಈ ಗುಂಬಜ್ ಮತ್ತು ಶಾಹಗಂಜ್ ದ್ವಾರಗಳಲ್ಲಿ ಇರುವ ಪಾಂಡುರಂಗನ ಪಾದುಕೆಗಳಿಗೆ ಸಾಕ್ಷಿಯಾಗಿವೆ ಎಂದು ಕೋಟೆಯ ಸುತ್ತಮುತ್ತಲಿನ ವಕ್ತೃರು ಪಾಂಡುರಂಗನ ಪಾದುಕೆಗಳನ್ನು ಕುರಿತು ಈ ರೀತಿಯಾದ ಐತಿಹ್ಯಗಳನ್ನು ಹೇಳುತ್ತಾರೆ.

ಕೋಟೆಯ ಗುಂಬಜ್ ದ್ವಾರದಲ್ಲಿ ನೆಲದ ಮೇಲೆ ಇರುವ ಈ ಪಾಂಡುರಂಗನ ಪಾದುಕೆಗಳ ಹಿಂದೆ ಐತಿಹಾಸಿಕವಾದ ಐತಿಹ್ಯಗಳು ಇವೆ ಎಂಬುದನ್ನು ವಕ್ತೃರ ಮೂಲಕ ಮೌಖಿಕವಾಗಿ ಆಕರಗಳನ್ನು ಬಳಸಿಕೊಳ್ಳುವಾಗ ಹೊರಬಂದಿರುವುದನ್ನು ಕಾಣುತ್ತೇವೆ.



ಧ್ವನಿಸುರುಳಿಯಲ್ಲಿನ ಹಾಡು

ಪಾಂಡುರಂಗನ ಪಾದುಕೆ ಕುರಿತಂತೆ ಲಕ್ಷ್ಮಣ್ ಸಾಧು ಎಂಬುವವರ ಶಿಷ್ಯರಾದ ಅರ್ಜುನ್ ಎಂಬುವವರಲ್ಲಿ ಒಂದು ಧ್ವನಿ ಸುರುಳಿ ದೊರಕಿದೆ. ಅದರಲ್ಲಿ ಈ ರೀತಿಯ ಹಾಡೊಂದು ಮೂಡಿ ಬಂದಿದೆ.

೧. ಅನೇಕರು ದೇಶಕ್ಕಾಗಿ ಸಮಾಜಕ್ಕಾಗಿ ರಕ್ತ ಚೆಲ್ಲಿ ಪ್ರಾಣ ನೀಡಿ ಮಹಾತ್ಮರಾಗಿದ್ದಾರೆ. ಅವರು ಸಮಾಜಕ್ಕಾಗಿ, ಜನಕ್ಕಾಗಿ ದುಡಿದವರು, ಮಡಿದವರಾಗಿದ್ದಾರೆ. ಅಂಥವರ ಸಾಲಿನಲ್ಲಿ ಸೇರುವ ದಾಮಾಜಿ ಪಂಥನು ಒಬ್ಬನಾಗಿದ್ದಾನೆ. ಇವನು ಪಂಢರಪುರದ ಪಾಂಡುರಂಗನ ಭಕ್ತನಾಗಿದ್ದನು. "ಹೀನ ಮಾನವರು ಏನು ಮಾಡ್ಯಾರೊ ರಂಗ ನಾನ ನಿನ್ನ ಧ್ಯಾನದಲ್ಲಿರಲು ಸದಾ ಪಾಂಡುರಂಗ."

೨. ಬೀದರ ಬಾದಶಾನ ಆಸ್ಥಾನದಲ್ಲಿ ದಾಮಾಜಿ ಪಂಥನೆಂಬ ಆಹಾರ ಧಾನ್ಯಗಳ ಮೇಲಾಧಿಕಾರಿ ಇದ್ದನು. ಒಮ್ಮೆ ಬಾದಶಾಹನ ಆಳ್ವಿಕೆಯಲ್ಲಿ ಭೀಕರವಾದ ಬರಗಾಲ ಬಂದಿತು. ಆಗ ಜನರು ಅನ್ನ ನೀರಿಲ್ಲದೆ ತತ್ತರಿಸಿ ಹೋಗಿದ್ದರು. ಇಂಥಹ ಸಮಯದಲ್ಲಿ ದಾಮಾಜಿ ಪಂಥನು ತನ್ನಲ್ಲಿರುವ ಎರಡು ಕೋಣೆಯಷ್ಟು ಆಹಾರ ಧಾನ್ಯಗಳನ್ನು ಜನರಿಗೆ ಹಂಚಿದನು. ಈ ವಿಷಯವನ್ನು ತಿಳಿದ ಬಾದಷಾನು ದಾಮಾಜಿಯನ್ನು ಬಂಧಿಸಿ ಕರೆ ತರುವಂತೆ ಆಜ್ಞೆ ಮಾಡಿದನು.

"ಹೀನ ಮಾನವರು ಏನು ಮಾಡ್ಯಾರೊ ರಂಗ, ನಾನ ನಿನ್ನ ಧ್ಯಾನದಲ್ಲಿರಲು ಸದಾ"

೩. ಎರಡು ಕೈಗೆ ಬೇಡಿ ಹಾಕಿಕೊಂಡು ಅವನನ್ನು ತರುತ್ತಿದ್ದರು. ಇದನ್ನು ಅರಿತ ಪಾಂಡುರಂಗನು ದಾಮಾಜಿ ಪಂಥನ ನೌಕರನಾಗಿ ಕೈಯಲ್ಲಿ ಒಡಕ ಕೋಲು, ಮೈಮೇಲೆ ಹರಕ ಬಟ್ಟೆ, ಮೇಲೆ ಒಂದು ಹರಕ ಕಂಬಳಿ ಸುತ್ತಿಕೊಂಡು ವಿಠೂ ಮಹಾರನ ವೇಷದಲ್ಲಿ ಬರುತ್ತಾನೆ.

೪. ವಿಠಲ ಪಾಂಡುರಂಗ ಭಕ್ತವತ್ಸಲನ ವೇಷ ಧರಿಸಿ ಬಾದಶಾನ ದರಬಾಕ್ಕೆ ಬರುತ್ತಾನೆ. ಸೇವಕರು ಕೇಳುತ್ತಾರೆ. ಯಾರು ನೀನು? ನಾನು ದಾಮಾಜಿ ಪಂಥನ ಭಕ್ತನಿದ್ದೇನೆ. ಅದಕ್ಕೆ ಬಾದಶಾಹ ಅಂತಾನೆ; ಮುಚ್ಚು ಬಾಯಿ ನಿನಗೆ ಹೀಗೆ ಹೇಳಲಿಕ್ಕೆ ನಾಚಿಕೆ ಆಗುವುದಿಲ್ಲವೇ ವಿಠೂ ಭೇಡ ಹೇಳ್ತಾನೆ. ದಾಮಾಜಿ ಪಂಥ ಮೂರು ಕೋಠಾರ ದಾನ ಕೊಟ್ಟಿದ್ದಾನಲ್ಲ. ಅದನ್ನು ವಾಪಸ್ ಕೊಡಲು ಬಂದಿದ್ದೇನೆ. ಸೇವಕರು ಅಂತಾರೆ, ನೀನು ಬಡವ, ಹೌದು ನಾನು ಬಡವನೆ ನಾನು ರಖಂ ಕೊಡುತ್ತೇನೆ. ಅದಕ್ಕೆ ಸೇವಕರು ಅನ್ನುತ್ತಾರೆ. ಮೊದಲು ನಿನ್ನ ಮುಖವನ್ನು ಚೆನ್ನಾಗಿ ಕನ್ನಡಿಯಲ್ಲಿ ನೋಡಿಕೋ ನೋಡೋಣ. ಎಷ್ಟು ರಖಂ ಕೊಡುತ್ತಾನೆ ಇವನಿಗೆ ಒಳಗ ಬಿಡ್ರಿ ಅಂತಾರೆ ಸೇವಕರು.

೫. ದಾಮಾಜಿ ಪಂಥನು ಒಳಗೆ ಬರುತ್ತಾನೆ. ಸಿಂಹಾಸನಾರೂಢನಾದ ಬಾದಶಾಹನನ್ನು ನೋಡುತ್ತಾನೆ. ನಾನು ದಾಮಾಜಿ ಪಂಥನ ನೌಕರ ಇದ್ದೀನಿ. ಬಂದ ಕಾರಣವೇನು ಎಂದು ಬಾದಶಾಹ ಕೇಳುತ್ತಾನೆ.

ನನಗೆ ದಾಮಾಜಿ ಪಂಥನು ನಿಮಗೆ ಕೊಡಬೇಕಾದ ಹಣವನ್ನು ಕೊಟ್ಟು ಕಳುಹಿಸಿದ್ದಾನೆ. ತೊಗೊಳ್ಳಿ, ಅಂತ ತನ್ನ ಹರಕ ರುಮಾಲನ್ನು ತೆಗೆದು ಕೆಳಗೆ ಝಾಡಿಸಲಿಕ್ಕೆ ಪ್ರಾರಂಭಿಸಿದ. ಕೆಳಗೆ ಮುಖಮಾಡಿದ ವಿಠೂ ಮೇಲೆ ಮುಖ ಮಾಡಲೇ ಇಲ್ಲ. ಅಷ್ಟೊಂದು ಹಣದ ರಾಶಿ ಹಾಕಿದನು. ರೊಕ್ಕದ ರಾಶಿ ಬಿತ್ತು. ನಿನ್ನ ರೊಕ್ಕ ಮುಟ್ಟಿದೆ, ಮತ್ತ ನನಗೆ ರಶೀದಿ ಕೊಡು ಎಂದು ಅದನ್ನು ತೆಗೆದುಕೊಂಡು ಹೊರಟು ಹೋದನು. ಅವನು ಒಂದು ಕಾಲನ್ನು ಗುಂಬಜ್ ಅಗಸ್ಯಾಗ ಒಂದು ಕಾಲನ್ನು ಶಹಗಂಜ್ ಅಗಸ್ಯಾಗ ಇಟ್ಟು ಹೋಗುತ್ತಾನೆ. ಆ ವಿಠೂ ಮಹಾರ್‌ನು ಕಾಲಿಟ್ಟ ಜಾಗಕ್ಕೆ ಪಾಂಡುರಂಗನ ಪಾದುಕೆಗಳೆಂದು ಕರೆಯುತ್ತಾರೆ.

ಈ ರೀತಿಯ ಐತಿಹ್ಯಗಳು ಕೋಟೆಯ ದ್ವಾರದಲ್ಲಿ ಇರುವ ಪಾಂಡುರಂಗನ ಪಾದುಕೆಗಳ ಸುತ್ತಲೂ ಸುತ್ತಿಕೊಂಡಿವೆ.

ಮೌಖಿಕ ಚರಿತ್ರೆಯು ಪಾಂಡುರಂಗನ ಪಾದುಕೆಗಳ ಬಗ್ಗೆ ಇರುವಂಥ ವಿವರಗಳನ್ನು ಬಹಳ ಸೊಗಸಾಗಿ ಎಳೆ ಎಳೆಯಾಗಿ ಬಿಚ್ಚಿಡುತ್ತದೆ. ಈ ಹಿಂದೆ ಪಾಂಡುರಂಗನ ಪಾದುಕೆಗಳ ಕುರಿತಂತೆ ಕೆಲವೊಂದು ಪ್ರಶ್ನೆಗಳು ಉದ್ಭವವಾಗಿದ್ದವು. ಆ ಪ್ರಶ್ನೆಗಳಿಗೆಲ್ಲ ಜನಪದರು ಹೇಳುವ ಮೌಖಿಕ ಐತಿಹ್ಯಗಳ ಮೂಲಕ ಉತ್ತರವನ್ನು ಕಂಡುಕೊಳ್ಳಲು ತಕ್ಕಮಟ್ಟಿಗೆ ಪ್ರಯತ್ನಿಸಲಾಗಿದೆ.

ಈ ಪಾಂಡುರಂಗನ ಪಾದುಕೆ ಕುರಿತಂತೆ ಇರುವ ಐತಿಹ್ಯಗಳ ಪ್ರಕಾರ ದಾಮಾಜಿ ಪಂಥನೆಂಬುವನು ಬಹಮನಿಯ ಸಾಮ್ರಾಜ್ಯದಲ್ಲಿ ೧ನೇ ಅಹಮ್ಮದ್-ಶಹ-ವಲೀಯ ಆಳ್ವಿಕೆ ಕಾಲದಲ್ಲಿ ಆಹಾರ ಧಾನ್ಯದ ಮುಖ್ಯಸ್ಥನಾಗಿದ್ದನು. ಇವನು ಕರ್ತವ್ಯದಲ್ಲಿ ತುಂಬಾ ನಿಷ್ಠಾವಂತನಾಗಿದ್ದನೆಂದು ತಿಳಿಯುತ್ತದೆ. ಈ ದಾಮಾಜಿ ಪಂಥನು ಅಹಮ್ಮದ್-ಶಹ-ವಲೀಯ ಆಳ್ವಿಕೆಯ ಕಾಲದಲ್ಲಿ(೧೪೨೯-೩೮) ಬಹಮನಿಯ ಸಾಮ್ರಾಜ್ಯಕ್ಕೆ ಸೇರಿದ ಮಹಾರಾಷ್ಟ್ರ ರಾಜ್ಯದ ಸೋಲಾಪುರ ಜಿಲ್ಲೆಯಲ್ಲಿ ಬರುವ ಮಂಗಲವೇಡ ಎಂಬ ತಾಲೂಕಿನಲ್ಲಿ ಆಹಾರ ಧಾನ್ಯದ ಅಧಿಕಾರಿಯಾಗಿದ್ದನೆಂದು ತಿಳಿದುಬರುತ್ತದೆ. ಷೇಕ್‌ಅಲಿಯವರು ಉಲ್ಲೇಖಿಸಿರುವಂತೆ “ಬಹಮನಿಯ ಅರಸರು ವಿವಿಧ ಹುದ್ದೆಗಳಿಗೆ ತಮ್ಮದೇ ಆದ ವಿಶಿಷ್ಟವಾದ ಹೆಸರುಗಳನ್ನು ಇಡುತ್ತಿದ್ದರು”.[೨] ಒಬ್ಬ ಯಶಸ್ವಿ ಚಕ್ರವರ್ತಿಗೆ ಅಗತ್ಯವಾದ ಗುಣಗಳು, ಮಂತ್ರಾಲೋಚನೆಗೆ ತಕ್ಕ ಸ್ಥಳ ನೀಡಲಾಗುತ್ತಿತ್ತು. ಅಂತಹ ಹುದ್ದೆಗಳಲ್ಲಿ ದಾಮಾಜಿ ಪಂಥನ ಹುದ್ದೆಯು ಆಹಾರ ಧಾನ್ಯಗಳ ಒಡೆಯನೆಂದು ತಿಳಿದುಬರುತ್ತದೆ. ಹುದ್ದೆಯಲ್ಲಿರುವಾಗ ದಾಮಾಜಿ ಪಂಥನು ಅತ್ಯಂತ ಕರ್ತವ್ಯ ನಿಷ್ಠೆಯಿಂದ ದುಡಿಯುತ್ತಿದ್ದನು. ಇವನು ಪಾಂಡುರಂಗನಲ್ಲಿ ಅಪಾರವಾದ ಭಕ್ತಿಯನ್ನು ಹೊಂದಿದವ ನಾಗಿದ್ದನು. ಪಂಥನು ಆಹಾರ ಧಾನ್ಯಗಳ ವಜೀರನು ಆಗಿರುವಾಗ ಒಮ್ಮೆ ಭೀಕರವಾದ ಬರಗಾಲ ಬಂದಿತ್ತು. ಅಂಥ ಸಮಯದಲ್ಲಿ ದಾಮಾಜಿ ಪಂಥನು ತನ್ನ ರಾಜ್ಯದಲ್ಲಿ ಇದ್ದ ಎಲ್ಲ ಪ್ರಜೆಗಳಿಗೂ ಆಹಾರ ಧಾನ್ಯವನ್ನು ಹಂಚಿ ಬಿಡುತ್ತಾನೆ. ಅವನು ಧಾನ್ಯ ಹಂಚಿರುವುದು ಬೇರೆ ಯಾರಿಗೋ ಅಲ್ಲ

ಬಹಮನಿ ಸಾಮ್ರಾಜ್ಯದ ಪ್ರಜೆಗಳಿಗೆ. ಇದರಿಂದ ಧಾನ್ಯದ ಮಳಿಗೆಯಲ್ಲಿನ ಧಾನ್ಯ ಮತ್ತು ಎಲ್ಲ ಹಣವು ಬರಿದಾಗಿ ಬಿಡುತ್ತದೆ. ದಾಮಾಜಿ ಪಂಥನು ಅರಸನ ಬೊಕ್ಕಸದ ಹಣವನ್ನೆಲ್ಲ ಮತ್ತು ಇದ್ದ ಆಹಾರದ ಧಾನ್ಯವನ್ನೆಲ್ಲಾ ಖಾಲಿ ಮಾಡಿದ್ದಾನೆ ಎಂದು ಅರಸನಿಗೆ ಪಂಥನ ಆಡಳಿತವನ್ನು ಸಹಿಸದ ಜನರು ಹೋಗಿ ತಿಳಿಸುತ್ತಾರೆ. ಇದರಿಂದ ಅರಸನು ಸತ್ಯ ಏನು, ಯಾಕೆ ಅಷ್ಟೊಂದು ಧಾನ್ಯವನ್ನೆಲ್ಲಾ ಖಾಲಿ ಮಾಡಿದ್ದಾನೆ ಎಂದು ವಿಚಾರಿಸದೆ ದಾಮಾಜಿ ಪಂಥನನ್ನು ಬಂಧಿಸಲು ಆಜ್ಞೆ ಹೊರಡಿಸುತ್ತಾನೆ. ಮುಂದೆ ನಡೆಯುವ ಐತಿಹ್ಯದ ಸಂಗತಿಗಳನ್ನು ಈಗಾಗಲೇ ವಿವರಿಸಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪಾಂಡುರಂಗನ ಪಾದುಕೆ ಇರುವ ಸ್ಥಳಕ್ಕೆ ಭೇಟಿ ನೀಡಲಾಗಿತ್ತು. ಆ ಸಂದರ್ಭದಲ್ಲಿ ಪಾಂಡುರಂಗನ ದಿಂಡಿ ಮಹೋತ್ಸವ ಪ್ರಾರಂಭವಾಗಿತ್ತು.

ಪಾಂಡುರಂಗನ ಪಾದುಕೆಗಳೆಂದು ನಂಬಿರುವ ಪಾದಗಳಿಗೆ ಪ್ರತಿವರ್ಷ ಶುದ್ಧ ಆಷಾಡ ಪೂರ್ಣಿಮೆಯ ಮರುದಿನ ಪಾಂಡುರಂಗನ ದಿಂಡಿ ಮಹೋತ್ಸವಕ್ಕೆ ಮಹಾರಾಷ್ಟ್ರದ ಮಂಗಲವೇಡ, ಉದಗೀರ್, ಲಾತೂರ್ ಮುಂತಾದ ಕಡೆಗಳಿಂದ ಭಕ್ತರು ಬರುತ್ತಾರೆ. ಈ ಭಕ್ತ ಸಮೂಹದಲ್ಲಿ ಮಹಿಳೆಯರು ಮತ್ತು ಮಕ್ಕಳೂ ಸೇರಿರುತ್ತಾರೆ. ಮರಾಠಿಗರು, ಆರ್ಯರು, ಮುಸ್ಲಿಮರು, ರಜಪೂತರು ಎಲ್ಲರೂ ಸೇರಿಯೇ ಈ ಮಹೋತ್ಸವವನ್ನು ಆಚರಿಸುತ್ತಾರೆ. ಅಧಿಕ ಸಂಖ್ಯೆಯಲ್ಲಿ ಮಹಾರಾಷ್ಟ್ರದಿಂದ ಮರಾಠಿಗರು ಇಲ್ಲಿಗೆ ಬರುತ್ತಾರೆ. ಈ ಪಾದುಕೆಗಳಿಗೆ ವಂಶಪಾರಂಪರಿಕವಾಗಿ ಮಹಾರಾಷ್ಟ್ರದ ಒಂದು ಮನೆತನವು ಪೂಜೆಯನ್ನು ಮಾಡುತ್ತ ಬಂದಿದೆ.

ಈ ಪಾದುಕೆಗಳ ರಚನಾತ್ಮಕ ವಿವರಗಳು ಕುತೂಹಲಕಾರಿಯಾಗಿವೆ. ಆ ದಿನ ಪಾದುಕೆಗಳಿಗೆ ಪೂಜೆ ಸಲ್ಲಿಸಿ ಸಾಯಂಕಾಲ ಪಾದುಕೆಯ ಮೇಲೆ ಮೊಸರನ್ನು ತುಂಬಿದ ಗಡಿಗೆಯನ್ನು ಹಗ್ಗದಿಂದ ಕಟ್ಟುತ್ತಾರೆ. ಗಡಿಗೆಗೆ ಕಟ್ಟಿದ ಹಗ್ಗವನ್ನು ಗುಂಬಜ್‌ನ ಹೊರದ್ವಾರದ ಮೇಲೆ ಇರುವ ಒಂದು ಚಿಕ್ಕದಾದ ಕಮಾನಿನಲ್ಲಿ ಕೆಲವು ಜನರು ನಿಂತು ಹಗ್ಗ ಹಿಡಿದಿರುತ್ತಾರೆ. ಕೆಳಗೆ ನೆರೆದಿದ್ದ ಭಕ್ತ ಜನರೆಲ್ಲರೂ ಮೇಲೆ ನೇತಾಡುತ್ತಿರುವ ಮೊಸರಿನ ಗಡಿಗೆಯನ್ನು ಒಡೆಯಲು ಪ್ರಯತ್ನಿಸುತ್ತಾರೆ. ಕೆಳಗೆ ಭಕ್ತರು ಗಡಿಗೆಯನ್ನು ಒಡೆಯಲು ಮೇಲೆ ಜಿಗಿದಂತೆಲ್ಲಾ ಕಮಾನಿನಲ್ಲಿ ನಿಂತು ಹಗ್ಗವನ್ನು ಹಿಡಿದ ಜನರು ಗಡಿಗೆಯನ್ನು ಮೇಲಕ್ಕೆ ಜಗ್ಗಿ ಅದನ್ನು ಒಡೆಯದಂತೆ ಕಾಪಾಡುತ್ತಾರೆ. ಕಡೆಗೆ ಗಡಿಗೆ ಒಡೆದಾಗ ಮೊಸರು ಪಾದುಕೆಗಳ ಮೇಲೆ ಬೀಳುತ್ತದೆ. ಈ ಧಯಂಡಿ (ಮೊಸರಿನ ಗಡಿಗೆ ಒಡೆಯುವುದು) ಕಾರ್ಯಕ್ರಮ ಮುಗಿದ ನಂತರ ಪ್ರಸಾದವನ್ನು ಸ್ವೀಕರಿಸಲಾಗುತ್ತದೆ. ಇಡೀ ರಾತ್ರಿ ಭಜನೆ ಮಾಡಲಾಗುತ್ತದೆ. ಮರುದಿನ ಬೆಳಗಿನ ಜಾವ ಎಲ್ಲರೂ ಸೇರಿ ಇನ್ನೊಂದು ಪಾದುಕೆಯಿರುವ ಶಹಗಂಜ್ ದ್ವಾರದ ಕಡೆಗೆ ದಿಂಡಿ (ಭಕ್ತರ ಗುಂಪು) ಹೋಗುತ್ತದೆ. ಅಲ್ಲಿಯೂ ಕೂಡ ಪಾಂಡುರಂಗನ ಪಾದಕ್ಕೆಗೆ ಪೂಜೆ ಸಲ್ಲಿಸಲಾಗುತ್ತದೆ. ನಂತರ ಶಹಾಗಂಜ್‌ನಲ್ಲಿರುವ ಪಾಂಡುರಂಗನ ದೇವಾಲಯಕ್ಕೆ ತೆರಳುತ್ತಾರೆ. ಅಲ್ಲಿ ಪೂಜೆ ಸಲ್ಲಿಸಿದ ಬಳಿಕ ಜಯಘೋಷ ಹಾಕುತ್ತಾ ಪಂಢರಪುರಕ್ಕೆ ಪಾಂಡುರಂಗನ ದರ್ಶನಕ್ಕೆ ತೆರಳುತ್ತಾರೆ. ಪ್ರತಿ ವರ್ಷ ಈ

ದಿಂಡಿ ಮಹೋತ್ಸವ ನಡೆಯುತ್ತದೆ. ಈ ಮಹೋತ್ಸವದಲ್ಲಿ ಹಿಂದೂ, ಮುಸ್ಲಿಂ, ಮರಾಠಾ ಜನಗಳು ಭಾಗವಹಿಸುತ್ತಾರೆ.

ಇಂಥ ಮೌಖಿಕ ಐತಿಹ್ಯಗಳು ಚರಿತ್ರೆಯು ಬಿಚ್ಚಿಡದ ಅನೇಕ ಸಂಗತಿಗಳನ್ನು ಹೇಳುವುದರಿಂದ ಐತಿಹ್ಯಗಳನ್ನು ಚರಿತ್ರೆಯ ಪುನಾರಚನೆಯಲ್ಲಿ ಬಳಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಐತಿಹ್ಯಗಳು ಕೇವಲ ಕಟ್ಟುಕಥೆಗಳಾಗಿರದೆ, ಬರೀ ಕಾಲ್ಪನಿಕವಾಗಿರದೆ ಪಾಂಡುರಂಗನ ಪಾದುಕೆಗಳಿಗೆ ಸಂಬಂಧಿಸಿದಂತೆ ಅದೆಷ್ಟೋ ಐತಿಹಾಸಿಕ ಅಂಶಗಳನ್ನು ಒಳಗೊಂಡಿವೆ. ಇಂಥ ಮೌಖಿಕ ಚರಿತ್ರೆಯು ಮನುಷ್ಯನ ಸಮಸ್ತ ವ್ಯವಹಾರಗಳನ್ನು ನಿರೂಪಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಮೌಖಿಕ ಚರಿತ್ರೆಯು ಮನುಷ್ಯನ ನಿಜವಾದ ಸ್ಥಿತಿಯನ್ನು, ನಿಜವಾದ ಬದುಕಿನ ಚಿತ್ರಣವನ್ನು ಯಾವುದೇ ಮುಚ್ಚುಮರೆಯಿಲ್ಲದೆ ಬಿಚ್ಚಿ ನಮ್ಮ ಮುಂದೆ ಇಡುತ್ತವೆ. ಮೌಖಿಕ ಚರಿತ್ರೆಯು ತನ್ನದೇ ಆದ ಒಂದು ನಿರ್ದಿಷ್ಟವಾದ ಚೌಕಟ್ಟನ್ನು ಮತ್ತು ಅದಕ್ಕೆ ಅದರದೇ ಆದ ನಿರ್ದಿಷ್ಟ ಅಂಶಗಳನ್ನು ಹೊಂದಿರುತ್ತದೆ. ಕೇವಲ ಕಾಲ್ಪನಿಕವಾಗಿ ಊಹಾಪೋಹವಾಗಿ ಎಲ್ಲಿ ಬೇಕಾದರಲ್ಲಿ ಹೇಗೆ ಬೇಕಾದರೂ ಹಾಗೆ ಹುಟ್ಟಿಕೊಳ್ಳಲು ಸಾಧ್ಯವಿಲ್ಲ.

"ಇತಿಹಾಸದ ಜ್ಞಾನ ಸ್ವಲ್ಪಮಟ್ಟಿಗಾದರೂ ಇದ್ದು ರೂಪುಗೊಂಡವುಗಳಾಗಿರುತ್ತವೆ. ಜನಪದ ಇತಿಹಾಸವು ಒಂದು ನಿರ್ದಿಷ್ಟವಾದ ಕಾಲವನ್ನು, ಸ್ಥಳವನ್ನು ನಿರ್ಣಯ ಮಾಡಬಹುದು. ಯಾವುದೋ ನಿರ್ದಿಷ್ಟ ಕಾಲದಲ್ಲಿ ಬಳಕೆಯಲ್ಲಿದ್ದ ಸಂಪ್ರದಾಯಗಳ ಬಗೆಗೆ, ಹೋರಾಡುವ ರೀತಿ ಬಗೆಗೆ, ಅಂದಿನ ಜನ ಧರಿಸುತ್ತಿದ್ದ ಪೋಷಾಕುಗಳ ಬಗ್ಗೆ, ಬಳಸುತ್ತಿದ್ದ ಆಯುಧ, ಯುದ್ಧಕ್ಕೆ ಹೊರಡುತ್ತಿದ್ದ ರೀತಿ, ಪೂಜಿಸುತ್ತಿದ್ದ ದೇವರು ಇತ್ಯಾದಿಗಳ ಬಗೆಗೆ ವಿವರಗಳನ್ನು ಕೊಡಬಹುದು" (ಕುಲಕರ್ಣಿ, ೧೯೯೭: ೧).

ದಾಮಾಜಿ ಪಂಥನು ಪೂಜಿಸುತ್ತಿದ್ದ ದೇವರು, ಆರಾಧಿಸುವ ರೀತಿಗಳಿಂದ ಧಾರ್ಮಿಕತೆಯನ್ನು ಗುರುತಿಸಿಕೊಳ್ಳಬಹುದು. ಆರಾಧಿಸುವ ದೇವರ ಮೇಲೆ ಒಬ್ಬ ಮನುಷ್ಯನು ಏನು, ಯಾವ ಜಾತಿ, ಯಾವ ನೀತಿ ಎಂದು ಅಳೆಯುವುದು ಎಂದು ಮಾತಿನ ಅರ್ಥವಲ್ಲ. ಈ ಸಂದರ್ಭದಲ್ಲಿ ಲಿಖಿತವಾದ ಆಕರಗಳು ನಮಗೆ ಚರಿತ್ರ ರಚನೆಯ ಸಂದರ್ಭದಲ್ಲಿ ದೊರೆಯದೆ ಇದ್ದಾಗ ಐತಿಹ್ಯಗಳ ಉಪಯೋಗ ಚರಿತ್ರೆಯನ್ನು ರಚಿಸಲು ಅನುಕೂಲವಾಗುವುದು.

ಈ ಕೋಟೆಯಲ್ಲಿರುವ ಪಾಂಡುರಂಗನ ಪಾದುಕೆಯ ಬಗ್ಗೆ ಇಲ್ಲಿಯವರೆಗೂ ಯಾವುದೇ ಲಿಖಿತವಾದ ದಾಖಲೆಗಳಿರುವುದು ಕಂಡುಬಂದಿಲ್ಲ. ಆದ್ದರಿಂದ ಮೌಖಿಕ ಆಕರವನ್ನು ಪ್ರಧಾನವಾಗಿಟ್ಟುಕೊಂಡು ಇತಿಹಾಸವನ್ನು ರಚಿಸಲು ಪ್ರಯತ್ನಿಸಲಾಗಿದೆ. ಕೋಟೆಯ ಬಗ್ಗೆ ಹೇಳುವಾಗ ಮತ್ತು ಅದರ ಸ್ಮಾರಕಗಳ ಬಗ್ಗೆ ಹೇಳುವಾಗ ಹಾಗೂ ಅದಕ್ಕೆ ಇರುವ ದ್ವಾರಗಳ ಬಗ್ಗೆ ಹೇಳುವಾಗ ಪಾಂಡುರಂಗನ ಪಾದುಕೆ ಗುಂಬಜ್ ದ್ವಾರದಲ್ಲಿದೆ ಎಂದು ಅಧಿಕ ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಪಾಂಡುರಂಗನ ಪಾದುಕೆ ಅಲ್ಲಿ ಯಾಕೆ ಬಂದಿತು, ಬರಲು ಕಾರಣವೇನು ಎಂಬ ಅಂಶಗಳ ಬಗ್ಗೆ ಯಾರು ಎಲ್ಲಿಯೂ

ಉಲ್ಲೇಖಿಸಿರುವುದು ಕಂಡುಬರುವುದಿಲ್ಲ. ಆದ್ದರಿಂದ ಈ ಪಾಂಡುರಂಗನ ಪಾದುಕೆಯ ಬಗ್ಗೆ ವಕ್ತೃರಿಂದ ಮೌಖಿಕವಾಗಿ ಪಡೆದ ಐತಿಹ್ಯಗಳಿಂದ ಚರಿತ್ರೆಯನ್ನು ರಚಿಸುವುದಕ್ಕೆ ಪ್ರಯತ್ನಿಸಲಾಗಿದೆ. ಪಾಂಡುರಂಗನ ಪಾದುಕೆ ಬಗ್ಗೆ ಯಾವುದೇ ಲಿಖಿತ ಆಧಾರಗಳಿಲ್ಲ, ದಾಖಲೆಗಳಿಲ್ಲ, ಪಾಂಡುರಂಗನ ಪಾದುಕೆ ಬಗ್ಗೆ ಐತಿಹ್ಯಗಳನ್ನು ಹೇಳುವುದು ಮೊದಲ ಪ್ರಯತ್ನವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ.

ಈ ಪಾಂಡುರಂಗನ ಪಾದುಕೆ ಕುರಿತಂತೆ ಲಿಖಿತ ಆಧಾರಗಳಿಲ್ಲದಿದ್ದರೂ ವಕ್ತೃರು ಹೇಳಿರುವ ಮೌಖಿಕ ಆಧಾರಗಳಲ್ಲಿಯೇ ಕೆಲವೊಂದು ವೈರುಧ್ಯ, ವ್ಯತ್ಯಾಸಗಳಿರುವುದು ಸೂಕ್ಷ್ಮವಾಗಿ ಅವಲೋಕಿಸಿದಾಗ ಕಂಡುಬರುತ್ತದೆ. ಐತಿಹ್ಯಗಳು ಇತಿಹಾಸದ ರಚನೆಗೆ ಪೂರಕವಾದ ಆಕರಗಳಾಗುವುದರಿಂದ ಅವುಗಳನ್ನು ಪರಿಶೀಲಿಸಿ, ವಿಮರ್ಶಿಸಿ, ವ್ಯಾಖ್ಯಾನಿಸುವ ಜರೂರಿದೆ. ಅಂತಹ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲು ಪ್ರಯತ್ನಿಸಲಾಗಿದೆ.

*** *** ***

ಟಿಪ್ಪಣಿಗಳು

೧. ಎಂ.ಎ.ಗಫರ್ ಇವರು ಸುಮಾರು ತೊಂಬತ್ತು ವರ್ಷ ವಯಸ್ಸಿನವರಾಗಿದ್ದು, ಬೀದರಿನ ಹಳೆಯ ಪಟ್ಟಣದಲ್ಲಿರುವ ಸಿದ್ದಿಕ್ ತಾಲೀಮ್ ಓಣಿಯಲ್ಲಿ ವಾಸವಾಗಿದ್ದಾರೆ. ಈಗ ಇವರು ಬೀದರಿನ ಹಳೆಯ ಪಟ್ಟಣದಲ್ಲಿ ಇರುವ ಮಹಮೂದ್ ಗವಾನ್ ಗ್ರಂಥಾಲಯದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪಾಂಡುರಂಗನ ಪಾದುಕೆ ಬಗ್ಗೆ ಹೆಚ್ಚಾಗಿ ತಿಳಿದುಕೊಂಡಿದ್ದಾರೆ. ಈ ಪಾದುಕೆ ಕುರಿತಂತೆ ಐತಿಹ್ಯವನ್ನು ಹೇಳಿದರಲ್ಲದೆ ತಮ್ಮ ಗ್ರಂಥಾಲಯದಲ್ಲಿ ಇರುವ ಜಿ.ಯಾಜ್ದಾನಿಯವರು ಬರೆದ ಪುಸ್ತಕಗಳನ್ನು ಮತ್ತು ಬೀದರಿಗೆ ಸಂಬಂಧಿಸಿದ ಅನೇಕ ಪುಸ್ತಕಗಳನ್ನು ನೀಡಿ ಅಧ್ಯಯನಕ್ಕೆ ತುಂಬಾ ಸಹಕರಿಸಿದ್ದಾರೆ.

೨. ಲಕ್ಷ್ಮಣ್ ಸಾಧು ಎಂಬುವರ ಶಿಷ್ಯರಾದ ಅರ್ಜುನ್ ಇವರು ಬೀದರ್‌ನಿಂದ ೩ ಕಿ.ಮೀ. ದೂರದಲ್ಲಿರುವ ಅಷ್ಟೂರಿನಲ್ಲಿ ವಾಸವಾಗಿದ್ದಾರೆ. ಇವರು ಪಾಂಡುರಂಗನ ಭಕ್ತರಾಗಿದ್ದು, ಅನೇಕ ಪಾಂಡುರಂಗನ ಧ್ವನಿಸುರುಳಿಗಳನ್ನು ಶೇಖರಿಸಿದ್ದಾರೆ. ಪಾಂಡುರಂಗನ ಹಾಡನ್ನು ಕೂಡ ಸ್ವತಃ ಪಾಡುತ್ತಾರೆ. ಸುಮಾರು ಅರವತ್ತು ವರ್ಷ ವಯಸ್ಸಿನ ಅರ್ಜುನ್ ಅವರಿಗೆ ಎರಡು ಕಾಲುಗಳಿಲ್ಲ. ಹೀಗಾಗಿ ಇವರಿಗೆ ಓಡಾಡಲು ಆಗುವುದಿಲ್ಲ. ಕುಂತಲ್ಲೆ ಕುಳಿತು ಸೊಗಸಾಗಿ ಪಾಂಡುರಂಗನ ಹಾಡುಗಳನ್ನು ಹಾಡುತ್ತಾರೆ. ಇವರ ಧ್ವನಿ ಸುರುಳಿಯನ್ನು ಪ್ರಸ್ತುತ ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ.

೩. ಬಹಮನಿಯರ ಆಳ್ವಿಕೆ ಕಾಲದಲ್ಲಿ ವಿವಿಧ ಹುದ್ದೆಗಳಿಗೆ ತಮ್ಮದೇ ವಿಶಿಷ್ಟವಾದ ಹೆಸರುಗಳನ್ನು ಇಡುತ್ತಿದ್ದರು. ಪ್ರಧಾನ ಮಂತ್ರಿಯನ್ನು ವಕೀಲ್ -ಎ-ಮುಲ್ಕಾಕ್ ಎಂದು ಕರೆಯಲಾಗುತ್ತಿತ್ತು. ಅವನ ನಂತರದ ಅಧಿಕಾರಿ, ಉನ್ನತ ಅಧಿಕಾರಿಗಳ ಕರ್ತವ್ಯಗಳನ್ನು ಸಂಯೋಜಿಸುವ ಹೊಣೆ ಹೊತ್ತ ಉಪಪ್ರಧಾನ ಮಂತ್ರಿಯು ಅಮೀರ್ -ಉಲ್-ಉಮ್ರಾ, ಸುಲ್ತಾನ್‌ನ ಆಪ್ತ ಕಾರ್ಯದರ್ಶಿಯನ್ನು ಬರ್ಬಕ್ ಎಂದು ಕರೆಯುತ್ತಿದ್ದರು. ರಾಜ್ಯದ ಆಡಳಿತದ ಮುಖ್ಯಾಧಿಕಾರಿ (ಲಾರ್ಡ್ ಚೇಂಬರ್ ಲೇನ್) ಯನ್ನು ಹಬೀಜ್ ಎ-ಖಾಸ್ ಎಂದು ಕರೆಯುತ್ತಿದ್ದರು. ಒಬ್ಬ ಯಶಸ್ವಿ ಚಕ್ರವರ್ತಿಗೆ ಅಗತ್ಯವಾದ ಗುಣಗಳು, ಮಂತ್ರಾಲೋಚನೆಗೆ ತಕ್ಕ ಸ್ಥಳ ಮತ್ತು ಸನ್ನಿವೇಶ, ಮೇಲಿನದಾಗಲಿ, ಕೆಳಗಿನದಾಗಲಿ ಪ್ರತಿಯೊಂದು ಹುದ್ದೆಗೂ ಅತ್ಯುತ್ತಮ ವ್ಯಕ್ತಿಯನ್ನೇ ಆಯ್ಕೆ ಮಾಡಬೇಕಾದ ಅಗತ್ಯ, ಅಧಿಕಾರಿಗಳಲ್ಲಿ ಕರ್ತವ್ಯಗಳ ಹಂಚಿಕೆ ಬುದ್ಧಿವಂತಿಕೆಯಿರುವ, ಲೇಖಣಿ ಹಿಡಿಯುವ ಅಧಿಕಾರಿಗಳು ಒಂದು ಕಡೆ ಇರುತ್ತಿದ್ದರು. ಪೌರ ಅಧಿಕಾರಿಗಳು ಸರಹದ್ದಾರ್ (ಸೇವಾ ಚಲನೆಯ ಅಧಿಕಾರಿ), ಕಿಲ್ಲಾದಾರ್ (ಒಂದು ಕೋಟೆಯ ಅಧಿಕಾರಿ) ಮತ್ತು ಬಕ್ಷಿ (ವೇತನ ನೀಡುವವನು) ಇವರು ನ್ಯಾಯಾಂಗ ಅಧಿಕಾರಿಗಳು, ಕೊತ್ವಾಲ (ಪೋಲಿಸ್ ಕಮಿಷನರ್), ಮುಹತ ಅಸಿಬ್ (ಸಾರ್ವಜನಿಕರ ನೈತಿಕತೆಯ ನಿಯಂತ್ರಕ) ಇವರು ಪೋಲೀಸ್ ಅಧಿಕಾರಿಗಳು. ಈ ರೀತಿ ವಿವಿಧ ಹುದ್ದೆಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಲಾಗಿತ್ತು. ಹೀಗೆ ನೇಮಕಗೊಂಡ ಅಧಿಕಾರಿಗಳಲ್ಲಿ ದಾಮಾಜಿ ಪಂಥನು ಕೂಡ ಒಬ್ಬನಾಗಿದ್ದನು. ಇವನು ಆಹಾರ ಧಾನ್ಯಗಳ ಅಧಿಕಾರಿಯಾಗಿದ್ದನು. ಬಹಮನಿ ಅರಸರ ಆಳ್ವಿಕೆ ಕಾಲದಲ್ಲಿ ಜನರು ಕಾನೂನನ್ನು ಮತ್ತು ಅದರ ಪರಿಣಾಮಗಳನ್ನು ತಿಳಿದುಕೊಳ್ಳಬೇಕು. ಆಮೇಲೂ ಅವರು ಅಪರಾಧ ಮಾಡಿದರೆ ಆಗ ಅವರನ್ನು ಶಿಕ್ಷಿಸಲಾಗುತ್ತಿತ್ತು. ಅಂಥ ತಪ್ಪೊಂದನ್ನು ದಾಮಾಜಿ ಪಂಥನು ಮಾಡಿದ್ದನು. ದಾಮಾಜಿ ಪಂಥನು ಅರಸನ ಅನುಮತಿ ಇರದೆ ತನ್ನ ಅಧೀನದಲ್ಲಿರುವ ಎಲ್ಲ ಆಹಾರ ಧಾನ್ಯಗಳನ್ನು ಜನರಿಗೆ ಹಂಚಿದನು. ಇದು ಕಾನೂನನ್ನು ಉಲ್ಲಂಘಿಸಿದ್ದಾಗಿತ್ತು. ಆ ಕಾರಣಕ್ಕಾಗಿ ದಾಮಾಜಿ ಪಂಥನನ್ನು ಬಂಧಿಸಿ ಸೆರೆಮನೆಯಲ್ಲಿ ಇಡಲಾಗಿತ್ತು.

ಅಧ್ಯಾಯ ೫

ಬೊಮಗೊಂಡನ ಕೆರೆಯ ಬಗೆಗಿನ ಐತಿಹ್ಯಗಳು

ಐದನೆಯ ಅಧ್ಯಾಯದಲ್ಲಿ ಒಟ್ಟು ಮೂರು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಬಾಲ್ಯದಿಂದಲೇ ಬೊಮಗೊಂಡನು ಒಬ್ಬ ಸಿದ್ಧಪುರುಷನಾಗಿ ಮಾಡಿದ ಒಟ್ಟು ನಾಲ್ಕು ಪವಾಡಗಳ ಬಗ್ಗೆ ಹೇಳಲಾಗಿದೆ. ಮೊದಲನೆಯ ಮತ್ತು ಎರಡನೆಯ ಪವಾಡಗಳಲ್ಲಿ ಬೊಮಗೊಂಡನು ತನ್ನ ಏಕಾಗ್ರ ಚಿತ್ತದಿಂದ ಮಳೆ ಬರುವಂತೆ ಮಾಡುತ್ತಾನೆ. ಮೂರನೆಯ ಪವಾಡದಲ್ಲಿ ತೋಳವೊಂದು ಕುರಿಗಳನ್ನು ತಿನ್ನಲು ಬಂದಾಗ ಬೊಮಗೊಂಡನು ತೋಳಕ್ಕೆ ನಾಯಿಯ ಬೆದರಿಕೆ ತೋರಿಸಿ ಓಡಿಸುತ್ತಾನೆ. ನಾಲ್ಕನೆಯ ಪವಾಡದಲ್ಲಿ ಹಾವು ಕಚ್ಚಿದ ಮಗುವಿನ ಪ್ರಾಣವನ್ನು ಉಳಿಸಿದರ ಬಗ್ಗೆ ಉಲ್ಲೇಖಿಸಲಾಗಿದೆ. ಎರಡನೆಯ ಭಾಗದಲ್ಲಿ ಬೊಮಗೊಂಡನಿಗೆ ಸಂಬಂಧಿಸಿದಂತೆ ವಚನವೊಂದು ಕಂಡುಬಂದಿದ್ದು ಅದನ್ನು ಪಂಚಾಕ್ಷರಿ ಪುಣ್ಯಶೆಟ್ಟಿ ಎನ್ನುವ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಮೂರನೆಯ ಭಾಗದಲ್ಲಿ ಬೊಮಗೊಂಡನ ಕೆರೆಯ ಬಗ್ಗೆ ಇರುವ ಐತಿಹ್ಯಗಳನ್ನು ಉಲ್ಲೇಖಿಸಲಾಗಿದೆ. ಮೊದಲನೆಯ ಐತಿಹ್ಯವನ್ನು ನಾಗಪ್ಪ ಇವರಿಂದ ಸಂಗ್ರಹಿಸಲಾಗಿದೆ. ಎರಡನೆಯ ಐತಿಹ್ಯವನ್ನು ಕೆ.ಎಂ.ಮೈತ್ರಿಯವರ 'ಸುಲ್ತಾನ ಸುರಳಿ'ಯಿಂದ ಆಯ್ದುಕೊಂಡು ಪ್ರಸ್ತುತ ಅಧ್ಯಾಯದಲ್ಲಿ ಬಳಸಿಕೊಳ್ಳಲಾಗಿದೆ.

ಒಳಕೋಟೆಯಲ್ಲಿ ಬೊಮಗೊಂಡನ ಕೆರೆಯು ಕೋಟೆಯ ದಕ್ಷಿಣ ಭಾಗದಲ್ಲಿದೆ. ಇದಕ್ಕೆ ಹೊಂದಿಕೊಂಡಂತೆ ಕೆಳಭಾಗದಲ್ಲಿ ಕೋಟೆಯ ಗೋಡೆ ಹಾದು ಹೋಗಿದೆ. ಕೆರೆಯ ಮೇಲ್ಭಾಗದಲ್ಲಿ ವೀರಸಂಗಯ್ಯನ ಗದ್ದುಗೆ ಇದೆ. ಈ ಕೆರೆಯು ಕೋಟೆಯನ್ನು ಕಟ್ಟುವುದಕ್ಕಿಂತ ಪೂರ್ವದಲ್ಲಿ ಇತ್ತೆಂದು ಇಲ್ಲಿಯ ಸುತ್ತಮುತ್ತಲಿನ ವಕ್ತೃರು ಹೇಳುತ್ತಾರೆ. ಈ ಕೆರೆಯ ನೀರು ಎಂದಿಗೂ ಬತ್ತುವುದಿಲ್ಲ. ಎಂಥ ಬೇಸಿಗೆ ಕಾಲದಲ್ಲಿಯೂ ಸಹ ಕೆರೆಯಲ್ಲಿ ನೀರು ಇರುವುದು ಕೆರೆಯ ಇನ್ನೊಂದು ವೈಶಿಷ್ಟ್ಯವಾಗಿದೆ. ಈ ಕೆರೆಗೆ ಆಗಾಗ ಅಂದರೆ ಹಬ್ಬ ಹರಿದಿನಗಳಲ್ಲಿ ಪೂಜೆ, ಅನ್ನದಾಸೋಹ ಮಾಡುತ್ತಿದ್ದರು. ಆದರೆ ಈ ಕಾರ್ಯ ಇತ್ತೀಚಿನ ದಿನಗಳಲ್ಲಿ ನಿಂತುಹೋಗಿದೆ. ಈ ಕೆರೆಯಲ್ಲಿ ಈಗಲೂ ಸಾಕಷ್ಟು ನೀರು ಇರುವುದರಿಂದ ಒಳಕೋಟೆಯಲ್ಲಿ ವಾಸಿಸುವ ಜನರಿಗೆ ಅನುಕೂಲವಾಗಿದೆ. ಈ ಒಳಕೋಟೆಯಲ್ಲಿ ಜನರು ಅಲ್ಲಲ್ಲಿ ಹಟ್ಟಿಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದಾರೆ. ಈ ಒಳಕೋಟೆಯಲ್ಲಿ ಸುಮಾರು ೨೦ ಹಿಂದೂಗಳ ಮನೆಯಿದ್ದು ಕೆಲವೊಂದು ರಜಪೂತರ ಮನೆಗಳು ಕೂಡ ಇವೆ. ಕೆರೆಗೆ ಹತ್ತಿಕೊಂಡಂತೆ ಹೊಲಗದ್ದೆಗಳಿದ್ದು ಈ ಕೆರೆಯ ನೀರಿನಿಂದ ಒಳಕೋಟೆಯ ಜನರು ಹೊಲಕ್ಕೆ ಪೈಪುಗಳ ಮುಖಾಂತರ ನೀರಿನ ಉಪಯೋಗ ಪಡೆದು ವರ್ಷಕ್ಕೆ ಮೂರು ರೀತಿಯ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ತರಕಾರಿ ಹಣ್ಣು ಹಂಪಲುಗಳನ್ನು ಬೆಳೆಯುತ್ತಿದ್ದಾರೆ. ಈ ಕೆರೆಯ ನೀರು ಎಂದಿಗೂ ಬತ್ತದೆ ಇರುವುದೇ ಈ ಬೆಳೆಗಳನ್ನು ಬೆಳೆಯಲಿಕ್ಕೆ ಸಾಧ್ಯವಾಗಿದೆ ಎಂದು ಒಳಕೋಟೆಯಲ್ಲಿ ವಾಸಿಸುವ ಜನರು ಹೇಳುತ್ತಾರೆ.

ಈ ಕೆರೆಯ ಹೆಸರಿನ ಬೊಮಗೊಂಡ ಯಾರು? ಎಲ್ಲಿಂದ ಬಂದವನು? ಕೆರೆಗೆ ಈ ಹೆಸರು ಬರಲು ಕಾರಣವೇನು? ಅವನ ಪೂರ್ವಾಪರಗಳೇನು? ಎಂಬ ಕುತೂಹಲ ಮೂಡುವದು ಸಹಜ. ಒಳಕೋಟೆಯಲ್ಲಿ ಇರುವ ಈ ಬೊಮಗೊಂಡನ ಕೆರೆ ಮೊದಲೇ ಇತ್ತೋ ಅಥವಾ ಕೋಟೆ ಕಟ್ಟಿದ ನಂತರ ಕೆರೆ ಕಟ್ಟಲಾಯಿತೋ ಅಥವಾ ಕೆರೆಯೇ ಮೊದಲಿದ್ದು ನಂತರ ಕೋಟೆ ಕಟ್ಟಲಾಯಿತೇ ಎಂಬ ಹಲವು ಪ್ರಶ್ನೆಗಳು ಸುಳಿಯುತ್ತವೆ.

ಆಂಧ್ರದಂಚಿನ ಕಾರಾಮುಂಗಿ ಗ್ರಾಮದ ಲಿಂಗವಂತ ಮಾಣಿಕಪ್ಪನವರು (೪೮) ಬೊಮಗೊಂಡನನ್ನು ಕಳುಸೇನ ರಾಜ ಎಂಬ ಕಥೆಯಲ್ಲಿ ವಿವರಿಸಿರುತ್ತಾರೆ. ಬೊಮಗೊಂಡನ ಕುರಿತಾದ ಇತ್ತೀಚಿನ ಬರಹಗಳು ಬೊಮಗೊಂಡನ ಜಾತಿ ಕುರುಬ ಎಂದು ಮತ್ತು ಅವನು ರಾಜಬೋಜನಿಗೆ ನೀರು ಕುಡಿಸಿದನೆಂದು ಹೇಳಲಾಗಿದೆ. ಆದರೆ ಸುಲ್ತಾನ ಸುರುಳಿ ಐತಿಹಾಸಿಕ ಹಸ್ತಪ್ರತಿಯಲ್ಲಿ ಬೊಮಗೊಂಡನ ಜಾತಿ 'ಧನಗರ್' ಎಂದು ಆತನು ಸುಲ್ತಾನ ಅಹಮದ್ ಶಹನಿಗೆ ನೀರು ಕುಡಿಸಿದ ಬಗ್ಗೆ ಉಲ್ಲೇಖವಿದೆ (ಮೈತ್ರಿ, ೧೯೯೪: ೨೦). ಕಥೆಗಿಂತ ಹಸ್ತಪ್ರತಿಯಲ್ಲಿರುವ ಮಾಹಿತಿಗಳು ಚರಿತ್ರೆಗೆ ಸಮೀಪವೆನಿಸುವವು. ಬೊಮಗೊಂಡನ ಜಾತಿಯಲ್ಲಿ ಗೊಂಡ>ಧನಗರ್>ಧನೂರ>ಕುರುಬ ಎಂಬ ವ್ಯತ್ಯಾಸಗಳು ಕಾಲಾಂತರದಲ್ಲಿ ಕಂಡುಬರುವವು. ಆತನ ಹೆಸರೇ ಹೇಳುವಂತೆ ಅವನು ಗೊಂಡ ಜನಾಂಗದ ದಾರ್ಶನಿಕ ಮತ್ತು ಐತಿಹಾಸಿಕ ಪುರುಷನಾಗಿರುವನು.

ಬೊಮಗೊಂಡೇಶ್ವರನ ಜನ್ಮಸ್ಥಳ ಬೀದರ್ ಜಿಲ್ಲೆಯ ಮುದನೂರು. ಇಂದಿನ ಬೀದರ್ ಜಿಲ್ಲೆಯಲ್ಲಿ ಬರುವ ಚಿದ್ರಿ ಗ್ರಾಮವಾಗಿತ್ತು. ಈತನ ತಂದೆ ಶಿವಗೊಂಡ (ಕೇದರಪ್ಪ) ತಾಯಿ ಗಂಗವ್ವ (ರತ್ನಾಂಬೆ). ಈ ದಂಪತಿಗಳು ಸದಾಚಾರಿಗಳಾಗಿದ್ದು ಸುಶೀಲರು, ಭಕ್ತಿಸಂಪನ್ನರೂ ಆಗಿದ್ದರು. ಇವರು ಪರಬ್ರಹ್ಮ ಸ್ವರೂಪವಾದ ಮೈಲಾರ (ಬೀದರ್ ಜಿಲ್ಲೆಯ ಒಂದು ಗ್ರಾಮ) ಲಿಂಗನ ಭಕ್ತರಾಗಿದ್ದರು.



ಒಳಕೋಟೆಯ ದೃಶ್ಯ



ಬೊಮಗೊಂಡನ ತಂದೆ ತಾಯಿಗಳು ಪವಿತ್ರ ಕ್ಷೇತ್ರವಾದ ಕೇದಾರ ಕ್ಷೇತ್ರಕ್ಕೆ ಪಾದಯಾತ್ರೆ ಮಾಡಿ ಬಂದಿದ್ದರು. ಬೊಮಗೊಂಡನು ಮೈಲಾರ ಮಲ್ಲಣ್ಣದೇವರ ವರಪ್ರಸಾದದಿಂದ ಜನಿಸಿದನು (ಮೈತ್ರಿ, ೧೯೯೪: ೧೩). ಇವರಿಗೆ ಕನ್ನಡ, ಮರಾಠಿ, ತೆಲುಗು ಭಾಷೆಯ ಜ್ಞಾನವಿತ್ತು. ಇವರು ಆಧ್ಯಾತ್ಮ ಮತ್ತು ತತ್ವಜ್ಞಾನಿಗಳಾಗಿದ್ದರು. ಆ ಬೊಮಗೊಂಡನ ಹೆಸರಿನ ಕೆರೆಯು ಒಳಕೋಟೆಯಲ್ಲಿದೆ.

ಸಿದ್ಧಿಪುರುಷನಾಗಿ ಬೊಮಗೊಂಡ

ಬೊಮಗೊಂಡನು ಮೈಲಾರಲಿಂಗನ ವರಪ್ರಸಾದದಿಂದ ಜನಿಸಿದ ಎಂಬ ವಿಷಯವನ್ನು ಈ ಹಿಂದೆ ಪ್ರಸ್ತಾಪಿಸಲಾಗಿದೆ. ಈ ಬೊಮಗೊಂಡನು ಒಬ್ಬ ಸಿದ್ಧಿಪುರುಷನಾಗಿದ್ದನೆಂದು ಕೆಲವೊಂದು ಐತಿಹ್ಯಗಳು ಹೇಳುತ್ತವೆ. ಇವುಗಳನ್ನು ಪುಣ್ಯಶೆಟ್ಟಿ ಮತ್ತು ಕೆ.ಎಂ.ಮೈತ್ರಿ ಮುಂತಾದ ವಿದ್ವಾಂಸರು ಸಂಗ್ರಹಿಸಿದ್ದಾರೆ. ಅವು ಹೀಗಿವೆ.

೧. ಒಮ್ಮೆ ಬೊಮಗೊಂಡನು ಬಾಲಕನಿದ್ದಾಗ ಮೈಲಾರಲಿಂಗನ ದರ್ಶನಕ್ಕೆ ಸ್ನೇಹಿತರ ಜೊತೆ ಹೋದನು. ಬಿಸಿಲಿನ ತಾಪಕ್ಕೆ ಜೊತೆಗಿದ್ದ ಹುಡುಗರೆಲ್ಲರೂ ಬಹಳ ಬಳಲಿದರು. ಬೊಮಗೊಂಡನು ತನ್ನ ಪವಾಡ ಶಕ್ತಿಯಿಂದ ಮಳೆ ತರಿಸಿ ವಾತಾವರಣ ತಂಪುಗೊಳಿಸಿದನು. ಆತನ ಆಧ್ಯಾತ್ಮ ಬಲದಿಂದ ಅಲ್ಲಿಯ ಜನರು ಚಕಿತರಾದರು. ಜನರಲ್ಲಿ ಈತನ ಬಗ್ಗೆ ಭಕ್ತಿ ಬೆಳೆಯತೊಡಗಿತು (ಪುಣ್ಯಶೆಟ್ಟಿ, ೧೯೯೧: ೫೨).

೨. ಎರಡನೆಯ ಪವಾಡ : ೧೩೩೫ರಲ್ಲಿ ಬಂದ ದುರ್ಗಾದೇವಿ ಬರಗಾಲ ೧೨ ವರ್ಷಗಳ ಕಾಲ ಬೀದರ್ ಜಿಲ್ಲೆಯನ್ನು ಪೀಡಿಸಿದೆ. ೧೪೨೨-೨೩ರಲ್ಲಿ ಕೂಡ ಮಳೆ ಬಾರದೆ ದುಸ್ಥಿತಿ ಉಂಟಾಗಿತ್ತು. ಬಿಸಿಲಿನ ತಾಪ ಹೆಚ್ಚಾಗಿ ಗಿಡಮರಗಳ ಎಲೆಗಳು ಉದುರಿದವು. ದನಕರುಗಳನ್ನು ಮೇಯಿಸಲು ಮೇವು ಇಲ್ಲವಾಯಿತು. ಕಾಡಿನ ಗೊಂಡ ಕುರುಬರೆಲ್ಲ ಹೌಹಾರಿ ಏನು ಮಾಡಬೇಕೆಂದು ದಿಕ್ಕು ತೋಚದಾಗಿ ಬೊಮಗೊಂಡನಿಗೆ ಕೇಳೋಣವೆಂದು ಬಂದರು. ಆಗ ಬೊಮಗೊಂಡ ನೂರೊಂದು ಡೊಳ್ಳು ನೆರೆಸಿ ಖಂಡೋಬ ಮಲ್ಲಣ್ಣ ದೇವರ ಮುಂದೆ ಒಂದು ಕಾಲಿನ ಮೇಲೆ ನಿಂತು ಏಕಾಗ್ರ ಚಿತ್ತದಿಂದ ಮಳೆ ಬರುವವರೆಗೆ ಭಾರಿಸುವುದು ಎಂದನು. ಎಲ್ಲ ಗೊಂಡರು ಅವರ ಹೇಳಿಕೆ ಪ್ರಕಾರ ಡೊಳ್ಳು ಸಮೇತ ಮೈಲಾರ ಘಟಕ್ಕೆ ಬಂದರು. ಖಂಡೋಬಾ ದೇವರ ಮುಂದೆ ನಿಂತು ಡೊಳ್ಳು ಭಾರಿಸಲಾರಂಭಿಸಿದರು. ಬ್ರಹ್ಮಾಂಡವೇ ನಡುಗಿತ್ತು,

ಹರಿಹರದಿಂದ ಉದ್ಭವಿಸಿ ಬಂದ
ಕುರಿ ಕಾಯುವವರ ಉದರದಿ ಜನಿಸಿ
ಪರಮ ಪವಿತ್ರ ಆತ್ಮ ಬ್ರಹ್ಮದೇವ
ಸುರಲೋಕದಿಂದಿಳಿದು ಬಂದಿರುವನು

ಆ ಬೊಮಗೊಂಡನ ನಾಲಿಗೆ ಮೇಲೆ ಭವಿಷ್ಯದ ನುಡಿ ಬರೆದ ಬಳಿಕ ಹೋಗು ನೀನೇ ಮುಂದೆ ಗೊಂಡ ಜನಾಂಗದ ಉದ್ಧಾರಕನಾಗು ಎಂದನು (ಮೈತ್ರಿ, ೧೯೯೭: ೧೪).

೩. ಮೂರನೆಯ ಪವಾಡ : ಒಂದು ದಿನ ಬೊಮಗೊಂಡ ಗೊಂಡಾರಣ್ಯದಲ್ಲಿ ಕುರಿ ಮೇಯಿಸುತ್ತಿದ್ದಾಗ ತೋಳವೊಂದು ಬಂತು. ಅದನ್ನು ಕಂಡು ಕುರಿಗಳು ಚದುರಿ ಹೋದವು. ಬೊಮಗೊಂಡ ತೋಳಕ್ಕೆ ಕೈ ಮಾಡಿ ಕರೆದ. ತೋಳ ಬಾಲ ಆಡಿಸುತ್ತಾ ಹತ್ತಿರ ಬಂದಿತು. ತೋಳಣ್ಣಾ ನೀನು ಪದೇ ಪದೇ ಕುರಿಗಳನ್ನು ನಾಶ ಮಾಡುತ್ತಿರುವೆ, ಹಾಗೆ ಮಾಡಬೇಡ ಕೇಳದಿದ್ದರೆ ಮೈಲಾರ ಲಿಂಗನ ಹತ್ತಿರವಿದ್ದ ನಾಯಿಗಳನ್ನು ಕರೆಯಿಸುತ್ತೇನೆ ಎಂದಾಗ ತೋಳ ಹೆದರಿ ಓಡಿ ಹೋಯಿತು (ಮೈತ್ರಿ, ೧೯೯೭: ೧೪)

೪. ನಾಲ್ಕನೆಯ ಪವಾಡ : ಇದು ಬೊಮಗೊಂಡೇಶ್ವರನ ಪವಾಡವನ್ನು ಪರೀಕ್ಷಿಸಿದ ಘಟನೆ; ಒಂದು ದಿನ ಗೊಂಡಾರಣ್ಯದಲ್ಲಿ ಮಗುವಿಗೆ ಹಾವು ಕಡಿದು ಮರಣವನ್ನಪ್ಪಿತ್ತು. ತಾಯಿ ಮಗುವನ್ನು ರಕ್ಷಿಸುವಂತೆ ಕೇಳಿಕೊಂಡಳು. ತಾಯಿಯ ರೋದನ ಕುರಿತು ಮಗುವನ್ನು ಪರೀಕ್ಷಿಸಿ ಮಂತ್ರ ತರಿಸಿ ತಮ್ಮ ಸಿದ್ಧಿ ಸಾಧನೆಯಿಂದ ಹಾವುಗಳಿಗೆ ಕರೆದಾಗ ಹಾವುಗಳನ್ನು ಪ್ರತ್ಯಕ್ಷಗೊಂಡವು. ಆದರೆ ಯಾವ ಹಾವಿನ ವಿಷದಿಂದ ಆ ಮಗು ಸಾವನ್ನಪ್ಪಿತೋ ಆ ಹಾವು ಬರಲಿಲ್ಲ. ಆಗ ಬೊಮಗೊಂಡ ಆ ಹಾವನ್ನು ಆಹ್ವಾನಿಸಿ ಮಗುವಿನ ವಿಷವನ್ನು ಹೀರಲು ಹೇಳಿದನು. ಆ ಹಾವು ಹಾಗೆಯೇ ಮಾಡಿತು. ನಂತರ ಮಗುವಿಗೆ ಗಿಡಮೂಲಿಕೆ ಹಾಗೂ ಮಂತ್ರಹಾಕಿ ಎಚ್ಚರಗೊಳಿಸಿದರು (ಪುಣ್ಯಶೆಟ್ಟಿ, ೧೯೯೧: ೫೨). ಬೊಮಗೊಂಡನು ಬರಗಾಲದಲ್ಲಿ ಮಳೆ ಬರಿಸಿರುವುದು, ತೋಳಕ್ಕೆ ಬೆದರಿಕೆ ಹಾಕಿ ಓಡಿಸಿರುವುದು, ವಿಷಯಕಕ್ಕಿದ ಹಾವು ಮತ್ತೆ ವಿಷವನ್ನು ಹೀರಿಕೊಳ್ಳುವಂತೆ ಮಾಡಿರುವುದು. ಇವುಗಳನ್ನೆಲ್ಲ ನೋಡಿದರೆ ನಿಜಕ್ಕೂ ನಡೆದಂಥ ಪವಾಡಗಳೇ ಎಂದು ಭಾಸವಾಗುತ್ತದೆ.

*** *** ***

ಬೊಮಗೊಂಡನು ವೀರಸಂಗಯ್ಯನ ಅಂಕಿತನಾಮದಲ್ಲಿ ಹಲವಾರು ವಚನಗಳನ್ನು ರಚಿಸಿದ್ದಾನೆ ಎಂಬ ಅಭಿಪ್ರಾಯವೂ ಇದೆ. ಪಂಚಾಕ್ಷರಿ ಪುಣ್ಯಶೆಟ್ಟಿ[೧] ಎನ್ನುವವರಿಂದ ಬೊಮಗೊಂಡನ ಕುರಿತಂತೆ ಇರುವ ಒಂದು ವಚನವನ್ನು ಸಂಗ್ರಹಿಸಲಾಗಿದ್ದು, ಆ ವಚನವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಎಲೆ ಗಾಣಿಗರ ಸಿದ್ದ| ಕಾಲೊಳಗೆ ಎಣ್ಣೆ
ಹಿಂಡ್ಹಿಂಡಿ ತೆಗೆಯುವಂತೆ
ಹಿಂಡಿ ತೆಗೆ ನೀ ದುರ್ಗುಣವ ಶಾಪ
ಕಡೆಗಾಯ್ತು| ಪಾಪ ಲೋಪವಾಯ್ತು |
ಓಂಕಾರ ನಾದ ಬಿಂದು ಒಂದಾದಂತೆ
ಲಿಂಗ ಲೀಲೆಯೊಳಗೆ ನೀನಾದೆ

ಹದಿನಾಲ್ಕನೆಯ ಶತಮಾನದಲ್ಲಿ ಜೀವಿಸಿದ್ದ ಬೊಮಗೊಂಡೇಶ್ವರ ಒಬ್ಬ ಪ್ರಶಸ್ತ ಶಿವಶರಣ. ಈತ ಅನೇಕ ವಚನಗಳನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ. ಬೊಮಗೊಂಡನ ಕುರಿತು ಹಲವಾರು

ನಿಗೂಢ ಮಾಹಿತಿಗಳನ್ನು ಹೈದರಾಬಾದಿನ ಇತಿಹಾಸ ತಜ್ಞರಿಂದ ಅರಿತ ಗೊಂಡ ಧರ್ಮದ ಗುರುಗಳಾದ ಶ್ರೀ ಸಿದ್ಧಯ್ಯ ಒಡೆಯರ್ ಅವರು ಹೀಗೆ ಹೇಳುತ್ತಾರೆ. ಬೊಮ (ಬ್ರಹ್ಮ) ಗೊಂಡ (ಗೊಲ್ಲ, ಕುರುಬ). ಈ ಕುರುಬನು ಒಬ್ಬ ಕುರಿ ಕಾಯುವ ಸಿದ್ಧಿ ಪುರುಷನೇ ಆಗಿದ್ದನು ಎಂದು ಹೇಳಿದ್ದಾರೆ.

ಬೊಮಗೊಂಡನು ಬೀದರ್ ಸಮೀಪದ ಚಿದ್ರಿ ಗ್ರಾಮದವನು ಎನ್ನಲು ಅನೇಕ ಗಟ್ಟಿಯಾದ ಸಾಕ್ಷಿಗಳಿವೆ. ಇಂದಿನ ಚಿದ್ರಿಯಲ್ಲಿ ಬೊಮಗೊಂಡನ ಬಗ್ಗೆ ಅಭಿಮಾನವುಳ್ಳ ಗೊಂಡರ ಸಂಖ್ಯೆ ೫೦೦ಕ್ಕೂ ಮಿಕ್ಕಿರುವ ಸುಮಾರು ನೂರು ಕುಟುಂಬಗಳಿವೆ. ಚಿದ್ರಿಯ ನರಸಗೊಂಡನ ಮಗ ನಾಗಪ್ಪ ಪೊಲೀಸನಾಗಿದ್ದ. ಆತನು ಆಧ್ಯಾತ್ಮ ಜೀವಿಯಾಗಿದ್ದು ಬೊಮಗೊಂಡನ ಚರಿತ್ರೆ ಸಂಗ್ರಹಿಸುತ್ತ ಅವರ ಒಂದು ಚಿತ್ರವನ್ನು ಪ್ರಪ್ರಥಮವಾಗಿ ಗೊಂಡರಿಗೆ ಪರಿಚಯಿಸಿದರು (ಮೈತ್ರಿ, ೧೯೯೭: ೧೩).

'ಬೊಮಗೊಂಡ ಶತಾಯುಸಿಗಳಾಗಿದ್ದರು.'[೨] ಎಂದು ಹೇಳಿದ್ದಾರೆ (ಪುಣ್ಯಶೆಟ್ಟಿ, ೧೯೯೧: ೫೩). ಬಹಮನಿ ಅರಸರು ಮಹಮೂದ್ ಗವಾನ್‌ನ ಕೊಲೆಯ ಸಂಚನ್ನು ನಡೆಸುತ್ತಿರುವುದು ಬೊಮಗೊಂಡನಿಗೆ ತಿಳಿದಿತ್ತು. ಒಂದು ದಿನ ಬೊಮಗೊಂಡನು ತನ್ನಲ್ಲಿರುವ ಬಂಗಾರದ ಪುತ್ಥಳಿಯನ್ನು ಕೋಟೆಯ ಕೆರೆಯ ಕುಂಡದಲ್ಲಿಟ್ಟು ಮರಳಿ ಬರುತ್ತಿರುವಾಗ ಬಹಮನಿಯ ಮನೆತನದವರು ಬೊಮಗೊಂಡನಿಗೆ ಕೆರೆಯಲ್ಲಿ ಜಲ ಸಮಾಧಿ ಮಾಡಿದರು ಅಥವಾ ಕೆರೆಯಲ್ಲಿಯೆ ಮುಳುಗಿಸಿ ಕೊಲೆ ಮಾಡಿದರು. ಆದರೆ ಇದು ಗುಪ್ತವಾಗಿ ನಡೆಸಿದ್ದರಿಂದ ಜನಸಾಮಾನ್ಯರು ಸಾಮಾನ್ಯವಾದ ಸಾವು ಎಂದು ನಂಬಿ ಕೆರೆಯ ಕಟ್ಟೆ ಮೇಲೆ ಅವನ ಮೋಕ್ಷ ಸಮಾಧಿ ಮಾಡಿದರು. ಮಹಮೂದ್ ಗವಾನ್‌ನ ಕೊಲೆಗಿಂತ ಮೊದಲೆ ಬೊಮಗೊಂಡನ ಕೊಲೆಯಾಗಿರಬಹುದು.

ಚಾರಿತ್ರಿಕ ಅಧ್ಯಯನವೆಂದರೆ ಅದೊಂದು ರೀತಿಯಲ್ಲಿ ಸಾಂಸ್ಕೃತಿಕ ಅಧ್ಯಯನವಾಗಿರುತ್ತದೆ. ಏಕೆಂದರೆ ಇಂಥ ಸ್ಥಳಗಳಲ್ಲಿ ಅಪೂರ್ವವಾದ ಸಂಗತಿಗಳು ಹುದುಗಿಕೊಂಡಿವೆ. ಸೂಕ್ಷ್ಮವಾಗಿ ವಿಮರ್ಶಿಸಿದಷ್ಟು ಹಿಂದೆ ಆಗಿ ಹೋದ ಅನೇಕ ಪ್ರಾಚೀನ ಐತಿಹಾಸಿಕ ಘಟನೆಗಳಿಗೆ ಯಾವ ಹೆಸರನ್ನು ಕಡೆಗಣಿಸಿ ತೀರಾ ಸಾಮಾನ್ಯರೆಂದು ಅವರನ್ನು ಉಲ್ಲೇಖಿಸುವುದಿಲ್ಲವೋ ಅಂಥ ಅನೇಕಾನೇಕ ಹೆಸರು ನಾಯಕರು, ಗೌಡರು, ಗೌಡತಿಯರು, ಕುರುಬರು, ಪ್ರಾದೇಶಿಕ ವೀರರು, ಗೊಲ್ಲರು ಮೊದಲಾದವರು ತಮ್ಮ ಹೆಸರಿನ ಪಟ್ಟಿಯನ್ನು ಕಟ್ಟಿಕೊಂಡು ತಮ್ಮ ಮಟ್ಟಿಗೆ ಅಜರಾಮರರಾಗಿದ್ದಾರೆ (ಮುದ್ದವೀರಪ್ಪ, ೨೦೦೨: ೧೯೭).

ಅಂದರೆ ಇಲ್ಲಿ ಕೇವಲ ಸಾಮಾನ್ಯರಲ್ಲದವರು ಮಾತ್ರ ಇತಿಹಾಸ ಪುಟಗಳಲ್ಲಿ ಸೇರಿಕೊಂಡಿರುತ್ತಾರೆ. ಸಾಮಾನ್ಯ ಜನರು ಇತಿಹಾಸಕ್ಕೆ ಸೇರಿರುವುದು ವಿರಳವೆಂದು ಹೇಳಿರುವುದು ಕಂಡುಬರುತ್ತದೆ.

ಬೊಮಗೊಂಡನ ಕೆರೆ ಎಂದು ಕರೆಯಲಾಗುವ ಈ ಕೆರೆ ಇರುವ ಸ್ಥಳ, ಇದರಿಂದ ಯಾರಿಗೆ ಅನುಕೂಲವಾಗಿದೆ ಮತ್ತು ಆ ಕೆರೆಯ ಸುತ್ತಮುತ್ತ ವಾಸಿಸುವ ಸಮುದಾಯಗಳಾವುವು ಎನ್ನುವುದರ ಬಗೆಗೆ ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಕೆರೆಯನ್ನು ನಿರ್ಮಿಸಿದವರು ಯಾರು ಎನ್ನುವ ವಿಷಯಕ್ಕೆ

ಬಂದರೆ ಬೀದರ್‌ನ ಈ ಕೋಟೆಯ ಸುತ್ತಮುತ್ತಲಿನ ವಕ್ತೃ ಬೊಮಗೊಂಡನ ಕೆರೆಯ ಕುರಿತು ಐತಿಹ್ಯಗಳನ್ನು ಹೇಳುತ್ತಾರೆ.

ಐತಿಹ್ಯಗಳು

ಒಳಕೋಟೆಯಲ್ಲಿರುವ ಬೊಮಗೊಂಡನ ಕೆರೆಯ ಕುರಿತು ಹಲವಾರು ಐತಿಹ್ಯಗಳಿವೆ. ಆದರೆ ಸಂಗ್ರಹಣೆಯಲ್ಲಿ ಎರಡು ಐತಿಹ್ಯಗಳು ದೊರಕಿವೆ. ಆ ಎರಡು ಐತಿಹ್ಯಗಳು ಮೌಖಿಕವಾಗಿ ವಕ್ತೃವಿನ ಭಾಷೆಯಲ್ಲಿಯೇ ಸಂಗ್ರಹಿಸಿ ಅವುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಮೊದಲನೆಯ ಐತಿಹ್ಯ

ಮೊದಲನೆಯ ಐತಿಹ್ಯವನ್ನು ಸಾಗಪ್ಪ ತಂದೆ ಕಂಟೆಪ್ಪ[1] ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಅವರ ಮಾತಿನಲ್ಲೇ ಅದನ್ನು ವಿವರಿಸಲಾಗಿದೆ.

ಒಬ್ಬ ಕುರಿಕಾಯುವ ಕುರುಬನು ಒಂದು ಚಿಕ್ಕಕೊಂಡದ ಮೇಲಿನ ದೊಡ್ಡ ಕಲ್ಲನ್ನು ಕೋಲಿನಿಂದ ಸರಿಸಿ ರಾಜಭೋಜನ ಸೈನ್ಯಕ್ಕೆಲ್ಲ ನೀರನ್ನು ಕುಡಿಸುವುದು. ನೀರನ್ನು ಕುಡಿದ ರಾಜಬೋಜನು ತೃಪ್ತನಾಗಿ ಆ ಕುಂಡದ ಸುತ್ತಲು ಕೆರೆಯನ್ನು ಕಟ್ಟಿಸುವುದು. ಹೀಗೆ ಬೊಮಗೊಂಡನ ಕೆರೆಯ ಕುರಿತಂತೆ ಐತಿಹ್ಯವೊಂದು ಇದೆ.

> ಒಂದು ದಿನಾ ಈ ಬಿದರ್ ಘಟದಾಗ ಒಬ್ಬವ್ ಕುರುಬ ಕುರಿ ಮೇಸ್ಕೋತ ಇದ್ದ. ಒಂದ್ ದಿನಾ ಕರ್‌ರ್‌ರ್ ... ಅಂತ ಬ್ಯಾಸಗಿ ಬಿಸ್ಲಾಗ ತುರುಕ್ ರಾಜಾ ತನ್ನ ದಂಡಿನ ಸಂಗಟೆ ಬ್ಯಾಟ ಆಡ್ಕೋತಾ ಇಕಡ್ ಬಂದುನ್. ಬ್ಯಾಸಗಿ ಬಿಸಲಾಗ ರಾಜಾ ಸಮೇತ ದಂಡಿಗ್ ದಂಡ್ ನೀರಡ್ಸಿ ಹೋಯ್ತು. ಅಡಿಗಲಡೀ ಕೆಳಗಾ ಮ್ಯಾಲೆ ಮಾಡ್ದುರಭೀ ಹನಿ ನೀರ್ ಸಿಗ್ಲೊದು. ಎಲ್ಲೋರೂ ಹೈರಾಣ ಆಗಿ ಬಾಯಿ ಒಣಸ್ಕೋಂಡ್ ಕುಂತುರ್. ಜರಾ ನಿಂತ ಒಬ್ಬವ್ ಮನಷ್ಯಾ ಕುರಿಕಾಯಿಕೋತಾ ಹೊಂಟಿನ. "ಆ ಮನಷ್ಯಾಗ ಹೋಗಿ ಇಲ್ಲೇಲ್ಲರಾ ಕುಡಿಲಾಕ ನೀರ್ ಸಿಗ್ತಾವ ಏನ್ ಅಂತ ಕೇಳ್ದುರ್". ಅವಾ ಕುರಿಕಾಯ ಮನಷ್ಯಾ ಎಂದ್ಲಿದ್ ಇಸ್ ಮಂದಿ ಇಗೊತ್ತಯ್ಯಾಕ್ ಬಂದಿರಬೇಕ ಅಂತ ತನ್ನ ಮನಸ್ಸಿನಾಗೆ ಅನ್ಕೊಂಡುನ್. ಆ ಮ್ಯಾಕ ಅವರಿಗಿ ನೀರ್ ಇರ ಜಾಗಾ ಹೇಳ್ತಾನ. 'ಆ ಕಡೀ ಬಂಡೆಗಲ್ ಅದಾ ಮತ್ತ ಅದುಕ್ ಬಾಜಿಗಿ ಸರ್ಸುದುರ ನೀರ್ ಬರ್ತಾವ ಅಂತಾನ'. ಮತ್ತ್ ಅದು ಒಂದು ನೀರಿನ ಚಿಲುಮಿ ಅದಾ ಅದುರ್ ಮ್ಯಾಲಿಂದ ಬಂಡೆಗಲ್ ಸರುಸಿ ನೀರ್ ಕುಡಿರಿ ಅಂತಾನ. 'ನೋಡು ನಾವ್ ಹಜಾರೋ ಮಂದಿ ಇದ್ದಿವಿ. ನಮ್ಮ ಬಲ್ಲಿ ಆನಿ, ಕುದುರಿ, ಒಂಟಿ, ಎಲ್ಲಾನೆ ಅವಾ, ಅದುಕ್ಕೆಲ್ಲ ನೀರ್

ಸಾಕಾಗ್ ಬೇಕ್ ಅಲಾ ಚಿಲುಮಿದಾಗಿಂದ ನೀರ್ ಸಾಕಾಯಿತಾವ್ ಏನ್ ಅಂದುರ'. 'ಹುಂ ಎಲ್ಲರಿಗಿಭೀ ಸಾಕಾಯತಾವ, ಅಂತ ಹೇಳ್ದುನ್' ಕುರಿಕಾಯ ಮನಷ್ಯಾ ಹೇಳಿದಾಂಗೆ ಅಲ್ಲಿ ಹೋಗಿ ನೋಡ್ತುರ ಒಂದು ಬಂಡೆಗಲ್ಲ್ ಇರ್ತುದ್. ಅದುಕ್ ಏಟ್ ಹೊಳ್ಳಿಸ್ಲಕ್ ಹೋದುರಭೀ ಬಂಡೆಗಲ್ ಹಲ್ಕಸಲ್ದೇ ಹೋಯ್ತು. ಆಗ್ ಮತ್ ನಾಕೈದ್ ಮಂದಿ ಕುರಿಕಾಯ ಮನಷ್ಯಾನ ಬಲ್ಲಿ ಬಂದು ಮತ್ತ ನಮುಗ್ ನೀರಿನ ಮ್ಯಾಲ ಮುಚ್ಚಿದ ಬಂಡೆಗಲ್ಲ್ ಸರ್ಸಲಾಕ್ ಬರಲ್ಲ ಹೋಗ್ಯಾದ್ ಅಂತ ಹೇಳ್ದುರ. 'ಈಸ್ ಮಂದಿಗಿ ಸರಸಲ್ಲಾಕ್ ಬರಲ್ದ ಅಂದುರ ನನುಗ ಒಬ್ಬಾವ್‌ಗೆ ಹ್ಯಾಂಗ ಬರ್ತುದ' ಅನ್ನೋತ ಅವುರ್ ಸಂಗಟ ನೀರ್ ಇರಾ ಚಿಲ್ಮಿ ಕಡೀಗಿ ಬರ್ತಾರ. ಬಂದ ತನ್ನ ಬಲ್ಲಿ ಇದ್ದಿದ ಕುರಿಕಾಯುವ ಒಂದು ವಂಕನ ಬಡ್ಗಿ ತೊಗೊಂಡ ಬಂಡ್ಗೆಲ್ ಬುಡಕ ಹಾಕಿ ಎತ್ತುದರ ಅದು ಬಾಜಿಗಿ ಸರ್ದು ಬಿಳುತದ. ಅದುರ ಕೆಳುಗ ಇದ್ದಿದ ಚಿಲ್ಮಿದಾಗಿಂದ ನೀರ ಬರ್ಲಾಕ ಸುರು ಮಾಡ್ತುದ. ಆಗ್ ರಾಜಾನ ಸಮೇತ ಎಲ್ಲರೂ ಪರೇಶಾನ್ ಆಗಿ ನೋಡ್ಲಾಕ ಶುರು ಮಾಡ್ತಾರ. ಕಡೀಗಿ ನೀರ್ ಸಿಕ್ತು ಅಲಾ ಅಂತ ತಿಳ್ದು ಎಲ್ಲೋರಿಗಿ ಖುಷಿ ಆಯ್ತು. ಎಲ್ಲರೂ ದಣಿಸ್ತಾನ ನೀರ್ ಕೊಂಡುರಭೀ ನೀರ ಖಲಾಸ್ ಆಗಲ್ದೆ ಹೋದುವು. ಇದರಿಂದ ರಾಜಾಗ ಸಂತೋಷ ಆಗಿ ಮತ್ತ್ ನೀರು ಕುಡ್ಸಿ ಆನಂದ ಮಾಡಿದಿ ನಾನೇನ್ ಕೊಡಬೇಕು ಅಂತಾನ್. ಆ ಮಾತಿಗಿ ಬೊಮಗೊಂಡ ಕುರುಬ ಅಂತಾನ್ ರಾಜರೇ ನನುಗ ಏನ್ ಭೀ ಬೇಕಾಗಿಲ್ಲ, ಆದುರ್ ಈ ಝರಿ ನೀರ್ ಹರ್ರೊಂಡ್ ಹೋಗಲ್ಲಾಂಗ ಇದುಕ್ ಒಂದು ಕೆರಿ ಕಟ್ಟುಸ್ರಿ ಅಂತಾನ್. ಅದುಕ್ ಆ ಚಿಲುಮಿ ಸುತ್ತಾ ಒಂದ್ ಕೆರಿ ಕಟ್‌ಸ್ಯಾರ, ಆ ಕೆರಿನೆ ಈಗ ಬೊಮಗೊಂಡುನ ಕೆರಿ ಅಂತ ಕರಿತಾರ ಎಂದು ವಕ್ತಾರು ಕೆರೆಯ ಬಗೆಗಿರುವ ಐತಿಹ್ಯವನ್ನು ಹೇಳುತ್ತಾರೆ. ಈ ಐತಿಹ್ಯವನ್ನು ಒಳಕೋಟೆಯಲ್ಲಿ ಕೆರೆಯ ಸುತ್ತಲೂ ವಾಸವಾಗಿರುವ ಜನಪದರಿಂದ ಸಂಗ್ರಹಿಸಲಾಗಿದೆ.

ಈ ಒಳಕೋಟೆಯ ಕೆರೆಯ ಬಗ್ಗೆ ಇರುವ ಐತಿಹ್ಯವನ್ನು ಸರಳಗನ್ನಡದಲ್ಲಿ ಈ ಕೆಳಗಿನಂತೆ ತಿಳಿಸಲು ಪ್ರಯತ್ನಿಸಲಾಗಿದೆ.

ಒಂದು ಊರಿನಲ್ಲಿ ಕುರಿಕಾಯುವ ವೃದ್ಧನು ಇದ್ದ. ಅವನು ದಿನ ಬೆಳಗಾದರೆ ಕೊಟ್ಟಿಗೆಯಿಂದ ಕುರಿಗಳನ್ನು ಬಿಟ್ಟುಕೊಂಡು ದೂರದಲ್ಲಿರುವ ಒಂದು ಬಿದಿರು ಘಟಕ್ಕೆ ಹೋಗಿ ಕುರಿಗಳನ್ನು ಮೇಯಿಸುತ್ತಿದ್ದ. ನಂತರ ಸಂಜೆ ಹೊತ್ತಿಗೆ ಬಂದು ಊರನ್ನು ಸೇರುತ್ತಿದ್ದ. ಹೀಗೆ ದಿನಾಲು ಅವನ ನಿತ್ಯ ಕಾರ್ಯ ಮುಂದುವರೆದಿತ್ತು. ಒಂದು ದಿವಸ ಆ ವೃದ್ಧನು ಘಟದಲ್ಲಿ ಹೋಗಿ ಕುರಿಗಳನ್ನು ಮೇಯಿಸುತ್ತಿದ್ದ. ಮೇಯಿಸುತ್ತಿರುವಾಗ ಅಲ್ಲಿಗೆ ಒಬ್ಬ ಮುಸ್ಲಿಂ ಅರಸನು ತನ್ನ ಸೈನ್ಯ ಸಮೇತನಾಗಿ ಬೇಟೆಯಾಡಲಿಕ್ಕೆ ಬಂದ. ಆಗ ಬೇಸಿಗೆಯ ಕಾಲ ತುಂಬಾ ಬಿಸಿಲು ಇರುವುದರಿಂದ ಅರಸನು ಮತ್ತು

ಅವನ ಸೈನಿಕರೆಲ್ಲರೂ ಬಾಯಾರಿಕೆಯಿಂದ ಬಳಲುತ್ತಾರೆ. ನಂತರ ನೀರಿಗಾಗಿ ಹುಡುಕಾಟ ನಡೆಸುತ್ತಾರೆ. ಆದರೆ ಅವರಿಗೆ ಎಲ್ಲಿಯೂ ನೀರು ಸಿಗುವುದಿಲ್ಲ. ಕೊನೆಗೆ ಎಲ್ಲರಿಗೂ ತುಂಬಾ ಆಯಾಸವಾಗಿರುತ್ತದೆ. ಅಂಥ ಸಮಯದಲ್ಲಿ ಒಬ್ಬ ಕುರಿಕಾಯುವ ವೃದ್ಧನು ತನ್ನ ಕುರಿಗಳನ್ನು ಮೇಯಿಸುತ್ತಾ ಬರುತ್ತಾನೆ. ಆಗ ಅರಸನ ಸೈನಿಕರು ಹೋಗಿ ಆ ವೃದ್ಧನನ್ನು ಕುಡಿಯಲು ನೀರು ಇಲ್ಲಿ ಯಾವ ಕಡೆ ಸಿಗುತ್ತವೆ ಎಂದು ಕೇಳುತ್ತಾರೆ. ಅದಕ್ಕೆ ವೃದ್ಧನು ನೀರು ಇರುವ ಚಿಲುಮೆಯ ಬಗ್ಗೆ ಹೇಳಿ ಅದರ ಮೇಲೆ ಒಂದು ದೊಡ್ಡದಾದ ಬಂಡೆಗಲ್ಲು ಇದೆ. ಆ ಕಲ್ಲನ್ನು ಸರಿಸಿದರೆ ನಿಮಗೆ ನೀರು ಸಿಗುತ್ತದೆ ಎಂದು ಹೇಳುತ್ತಾನೆ. ವೃದ್ಧನ ಮಾತಿನಂತೆ ಅರಸ ಮತ್ತು ಅವನ ಸೈನಿಕರೆಲ್ಲರೂ ನೀರು ಇರುವ ಕಡೆಗೆ ಹೋಗಿ ಚಿಲುಮೆ ಮೇಲೆ ಇರುವ ಬಂಡೆಯನ್ನು ಸರಿಸಲಿಕ್ಕೆ ಪ್ರಯತ್ನಪಡುತ್ತಾರೆ. ಆದರೆ ಆ ಬಂಡೆಗಲ್ಲನ್ನು ಸರಿಸಲಿಕ್ಕೆ ಇವರಿಂದ ಸಾಧ್ಯವಾಗಲಿಲ್ಲ. ಮರಳಿ ಆ ಕುರಿಕಾಯುವ ವೃದ್ಧನ ಬಳಿಗೆ ಬಂದು ಬಂಡೆಗಲ್ಲನ್ನು ಸರಿಸುವಂತೆ ಕೇಳಿಕೊಳ್ಳುತ್ತಾರೆ. ಇಷ್ಟು ಸೈನ್ಯವಿದ್ದರೂ ನಿಮ್ಮಿಂದ ಸರಿಸಲಿಕ್ಕೆ ಆಗದ ಬಂಡೆಗಲ್ಲು ನನ್ನೊಬ್ಬನಿಂದಲೇ ಸರಿಸಲಿಕ್ಕೆ ಸಾಧ್ಯವೇ ಎನ್ನುತ್ತಾ ಅರಸ ಮತ್ತು ಕುರಿಕಾಯುವ ವೃದ್ಧನು, ಸೈನ್ಯ ಪರಿವಾರವೆಲ್ಲ ನೀರು ಇರುವ ಚಿಲುಮೆ ಬಳಿಗೆ ಬರುತ್ತಾರೆ. ಬಂದ ಬಳಿಕ ಕುರಿಕಾಯುವನು ತನ್ನ ಕೈಯಲ್ಲಿರುವ ವಂಕನ (ಡೊಂಕ ಮೂಲೆ) ಕೋಲಿನಿಂದ, ಬಂಡೆಗಲ್ಲಿನ ಕೆಳಗೆ ಹಾಕಿ ಎತ್ತುತ್ತಾನೆ. ಬಂಡೆಗಲ್ಲು ಸರಿದು ಹೋಗಿ ದೂರ ಬೀಳುತ್ತದೆ. ಇದರಿಂದ ಅರಸ ಮತ್ತು ಅವನ ಸೈನಿಕರು ಆಶ್ಚರ್ಯದಿಂದ ನೋಡುತ್ತ ನೀರಿನ ದಾಹ ತೀರುವವರೆಗೆ ಕುಡಿದು ತೃಪ್ತರಾಗುತ್ತಾರೆ. ನೀರನ್ನು ಪೂರೈಸಿದ ಚಿಲುಮೆಯ ಬಗ್ಗೆ ಅರಸನಿಗೆ ಆಶ್ಚರ್ಯ ಮೂಡುತ್ತದೆ. ಇದರಿಂದ ಅರಸನು ಆ ಚಿಲುಮೆಯ ಸುತ್ತಲೂ ಕೆರೆಯನ್ನು ಕಟ್ಟಿಸುತ್ತಾನೆ. ಆ ಕೆರೆಯೇ ಈಗಿರುವ ಬೊಮಗೊಂಡನ ಕೆರೆಯಾಗಿದೆ ಎಂದು ವಕ್ತೃರು ಕೆರೆಯ ಸುತ್ತಲು ಇರುವಂಥ ಐತಿಹ್ಯವನ್ನು ಈ ರೀತಿ ಹೇಳುತ್ತಾರೆ.

ಎರಡನೆಯ ಐತಿಹ್ಯ

ಎರಡನೆಯ ಐತಿಹ್ಯವನ್ನು ಕೆ.ಎಂ.ಮೈತ್ರಿಯವರ 'ಸುಲ್ತಾನ ಸುರಳಿ' ಎಂಬ ಹಸ್ತಪ್ರತಿಯಲ್ಲಿ ಉಲ್ಲೇಖಿಸಿರುವುದನ್ನು ಪ್ರಸ್ತುತ ಅಧ್ಯಯನಕ್ಕಾಗಿ ಬಳಸಿಕೊಳ್ಳಲಾಗಿದೆ. ಮೈತ್ರಿಯವರು ಉಲ್ಲೇಖಿಸಿರುವ ಐತಿಹ್ಯವು ಸರಳಗನ್ನಡದಲ್ಲಿ ಇರುವುದರಿಂದ ಅದನ್ನು ನೇರವಾಗಿ ಬಳಸಿಕೊಳ್ಳಲಾಗಿದೆ.

> ಕಲಬುರ್ಗಿಯ ಸುಲ್ತಾನ-ಎ-ಅಹಮದ್ ಶಹ ತನ್ನ ಸೈನಿಕರೊಂದಿಗೆ ಬಿದಿರು ಘಟಕ್ಕೆ ಬೇಟೆಯಾಡಲು ಬಂದಿರುತ್ತಾನೆ. ಆಗ ಅವನಿಗೂ ಮತ್ತು ಅವನ ಸೈನಿಕರಿಗೂ ತುಂಬಾ ಬಾಯಾರಿಕೆಯಾಗುತ್ತದೆ. ಅಲ್ಲೆ ಕುರಿ ಕಾಯುತ್ತಿದ್ದ ಕುರುಬನಿಗೆ ರಾಜನೇ ನೀರು ಎಲ್ಲಿವೆ ಎಂದು ಕೇಳುತ್ತಾನೆ. ಅದಕ್ಕೆ ಕುರುಬ ಅಲ್ಲೊಂದು ಕುಂಡವಿದೆ. ಅದರ ಮೇಲಿನ ಕಲ್ಲನ್ನು ಸರಿಸಿದರೆ ನೀರು ಸಿಗುತ್ತದೆ ಎಂದು ಹೇಳಿದ. ರಾಜನ ಸೈನಿಕರು ಕುಂಡದ ಮೇಲಿನ



ಒಳಕೋಟೆಯಲ್ಲಿರುವ ಬೊಮಗೊಂಡನ ಕೆರೆ

ಕಲ್ಲನ್ನು ಸರಿಸಲಿಕ್ಕೆ ತುಂಬಾ ಪ್ರಯತ್ನಿಸಿದರೂ ಅದು ಸರಿಯಲಿಲ್ಲ. ಆಗ ಮತ್ತೆ ಆ ಕುರುಬನ ಹತ್ತಿರ ಹೋಗಿ ರಾಜ ವಿನಂತಿಸಿಕೊಳ್ಳುತ್ತಾನೆ. ನೀನು ಆ ಕಲ್ಲನ್ನು ತೆಗೆದರೆ ನಮ್ಮ ಸೈನಿಕರೆಲ್ಲ ನೀರು ಕುಡಿದು ತಮಗೆ ಪುಣ್ಯ ಬರಲೆಂದು ಹಾರೈಸುತ್ತಾರೆ ಎನ್ನುತ್ತಾರೆ. ಆಗ ಕುರುಬನು ತನ್ನ ಕೈಯಲ್ಲಿರುವ ಕೋಲಿನಿಂದ ಅದರ ಮೇಲಿದ್ದ ಬಂಡೆಗಲ್ಲನ್ನು ಸರಿಸಿದನು. ನಂತರ ಸೈನ್ಯ ಪರಿವಾರವೆಲ್ಲ ನೀರು ಕುಡಿದು ತೃಪ್ತರಾದರು. ತಮ್ಮ ಹೆಸರೇನು, ಈ ಸ್ಥಳ ಯಾವುದು, ಯಾರದು, ತಾವೊಬ್ಬರೆ ಇಲ್ಲಿ ಕುರಿಗಳನ್ನು ಕಾಯುತ್ತೀರಿ, ನಮಗೇನು ತಿಳಿಯದಾಗಿದೆ ಎಂದನು ರಾಜ. ಅದಕ್ಕೆ ಬೊಮಗೊಂಡ ಈ ಸ್ಥಳ ಸಿದ್ಧಿಪುರುಷರು ಇದ್ದ ಸ್ಥಳವಾಗಿದೆ. ಅವರು ಅಪಾರವಾದ ಶಿವನ ಭಕ್ತರಾಗಿದ್ದರು ಎಂದು ಸ್ಥಳದ ಮಹಿಮೆಯನ್ನು ಹೇಳುತ್ತಾನೆ. ಆಗ ರಾಜ ಆ ಕುಂಡದ ಸುತ್ತಲು ಒಂದು ಕೆರೆಯನ್ನು ಕಟ್ಟಿಸಿ ಅದಕ್ಕೆ ಬೊಮಗೊಂಡನ ಕೆರೆ ಎಂದು ಹೆಸರಿಟ್ಟನು (ಮೈತ್ರಿ, ೧೯೯೪: ೧೯).

ಐತಿಹಾಸಿಕವಾದ ಈ ಕೆರೆಯ ಕುರಿತಂತೆ ವಕ್ತೃರು ಮೌಖಿಕವಾಗಿ ಕಥೆಗಳನ್ನು ಹೇಳುವುದಲ್ಲದೇ ಕೆರೆಯ ಮತ್ತು ಅದರ ಮಹಿಮೆಯ ಬಗ್ಗೆ ಜಾನಪದ ಹಾಡುಗಳನ್ನು ಕೂಡ ಸೊಗಸಾಗಿ ಹಾಡುತ್ತಾರೆ. ಈ ಜಾನಪದ ಹಾಡನ್ನು ವಕ್ತೃರಾದ ದ್ರೌಪದಿ (ಗಂಡ: ಶಂಕರಡೋಮನೆ)[೩] ಇವರು ಹೇಳಿರುವುದನ್ನು ಇಲ್ಲಿ ದಾಖಲಿಸಲಾಗಿದೆ.



ಭೆಳ್ಳನೆ ಬಿಳಿ ಬಂಡಿ ಥೆಳ್ಳನ ತಿಳಿನೀರು
ಭಂಡಿ ಹೊಳಸಿರಿ ನೀರ ಮುಗಿಯಿರಿ (ಕುಡಿಯಿರಿ) ಕೂಲ||
ಬಾರಾ ಸಾವಿರ ವೀರ ದಂಡು ಅವರು ಭಂಡಿ ಹೊಳಸಲ್ಲರು
ಅವರು ನೀರ ಮುಗಿವಲ್ಲರು (ಕುಡಿವಲ್ಲರು) ಕೋಲ||
ಅವರ ಕೈದೊಳಗ ಒಂದ್ ವಂಕನ ಬಡಿಗಿ
ಬಂಡಿ ಹೊಳಸ್ಯಾರ ರಾಜರಗಿ ನೀರ ಮುಗಸ್ಯಾರ ಕೂಲ||

ಬೊಮಗೊಂಡನ ಕೆರೆ ಕುರಿತಂತೆ ಕೋಲುಪದದ ಹಾಡೊಂದು ಜನಪದರು ಹಾಡುತ್ತಾರೆ.

ಈ ಕೆರೆಯ ನೀರನ್ನೆ ಬೊಮಗೊಂಡನು ಸುಲ್ತಾನ ಅಹ್ಮದ್ ಶಹ ಮತ್ತು ಅವನ ದಂಡಾಳುಗಳಿಗೂ ಕುಡಿಸಿದನೆಂದು ಜನಪದರು ಹೇಳುತ್ತಾರೆ. ಈ ಕೋಲು ಪದದ ಹಾಡಿನ ಮೊದಲಿನ ಸಾಲುಗಳು ಬೊಮಗೊಂಡನಿಗೆ ಅರಸನು ಮತ್ತು ಅವನ ಸೈನ್ಯ ಪರಿವಾರವೆಲ್ಲ ನೀರಿಗಾಗಿ ಕೇಳಿದಾಗ ಬೊಮಗೊಂಡನು ಹೇಳಿರುವ ಮಾಹಿತಿಯಂತೆ ಸುಲ್ತಾನ ಅಹಮದ್ ಶಹ ಮತ್ತು ಸೈನಿಕರು ಹೋಗಿ ಈ ಬಂಡೆಯನ್ನು ಹೊರಳಿಸಲು ಪ್ರಯತ್ನಿಸುತ್ತಾರೆ. ಅವರಿಂದ ಬಂಡೆಯನ್ನು ಹೊರಳಿಸಲಾಗದ ಪರಿಸ್ಥಿತಿಯನ್ನು ವಕ್ತರು ಹಾಡಿನಲ್ಲಿ ವ್ಯಕ್ತಪಡಿಸಿದ್ದಾರೆ. ಹಾಡಿನ ಎರಡನೆಯ ಸಾಲುಗಳು ಬೊಮಗೊಂಡನ ಕೈಯಲ್ಲಿರುವ ಕೋಲಿನ ಮಹಿಮೆಯನ್ನು ಕುರಿತಂತೆ ವಿವರಿಸುತ್ತದೆ. ಬೊಮಗೊಂಡನು ತನ್ನ ಕೈಯಲ್ಲಿರುವ ಕೋಲಿನಿಂದ ದೊಡ್ಡದಾದ ಬಂಡೆಗಲ್ಲನ್ನು ಸರಿಸುತ್ತಾನೆ. ಅರಸ ಮತ್ತು ಸೈನ್ಯಕ್ಕೆಲ್ಲ ನೀರನ್ನು ಕುಡಿಸುತ್ತಾನೆ ಎಂದು ವಿವರಿಸುತ್ತದೆ. ಹೀಗೆ ಬೊಮಗೊಂಡನು ಬಂಡೆಯನ್ನು ಎತ್ತಿ ನೀರು ಕುಡಿಸಿದ ಘಟನೆ ಬೊಮಗೊಂಡನ ಕೆರೆಗೆ ಹೊಂದಿಕೊಂಡಿದ್ದು ಬೀದರ್ ತುಂಬಾ ಕಂಡುಬರುವ ಪ್ರಚಲಿತ ಐತಿಹ್ಯವಾಗಿದೆ.

ಈ ರೀತಿ ಕೆರೆಯ ಸುತ್ತಲೂ ಹೆಣೆದುಕೊಂಡ ಘಟನೆಯು ಕೆರೆಯ ಐತಿಹಾಸಿಕ ಸಂಗತಿಗಳನ್ನು ಬಿಚ್ಚಿಡುವುದರಿಂದ ಮಹತ್ವದ ಅಂಶವಾಗಿದೆ. "ಒಬ್ಬ ವ್ಯಕ್ತಿ ದೈವೀ ಶಕ್ತಿಯಿಂದ ಯಾರೂ ಮಾಡದ ಕಾರ್ಯವನ್ನು ಮಾಡಿ ತೋರಿಸಿದಾಗ ಜನ ಆತನಲ್ಲಿ ಭಯಭಕ್ತಿ, ನಿಷ್ಠೆಯನ್ನು ತಾಳುತ್ತಾರೆ. ಅಲ್ಲದೆ ಯಾವುದೇ ಒಂದು ಸ್ಥಳನಾಮವು ಹುಟ್ಟಿಕೊಳ್ಳಲು ಅಲ್ಲಿನ ಭೌಗೋಳಿಕ, ಧಾರ್ಮಿಕ ಮತ್ತು 'ಸಾಂಸ್ಕೃತಿಕ' ಅಂಶಗಳು ಕೂಡ ಮುಖ್ಯವಾಗಿರುತ್ತದೆ. ಒಂದು ಸ್ಥಳದ ಹೆಸರು ಅದರ ನಿರ್ಮಾಣದ ಬೆಳವಣಿಗೆಯಲ್ಲಿ ಐತಿಹಾಸಿಕತೆಯ ಅಂಶವು ಇದ್ದೆ ಇರುತ್ತದೆ. ವಿಶಿಷ್ಟವಾದ ಪರಿಸರ, ವಿಶೇಷವಾದ ಘಟನೆ, ವೈಶಿಷ್ಟ್ಯ ವ್ಯಕ್ತಿಯ ಹಿನ್ನೆಲೆಯಲ್ಲಿ ರಚಿತಗೊಂಡ ಇಂಥ ಐತಿಹ್ಯಗಳು ಇತಿಹಾಸ ರಚನೆಯಲ್ಲಿ ಬಹುಮುಖ್ಯವಾದ ಪಾತ್ರ ವಹಿಸುತ್ತವೆ" (ಮುದ್ದವೀರಪ್ಪ, ೨೦೦೨: ೧೯೮).

ಇಲ್ಲಿಯವರೆಗೆ ಮೌಖಿಕವಾಗಿ ವಕ್ತರು ಕೋಟೆಯ ಒಳಗಿರುವ ಬೊಮಗೊಂಡನ ಕೆರೆಯ ಬಗ್ಗೆ ಏನು ತಿಳಿದುಕೊಂಡಿದ್ದಾರೆ. ಕೆರೆಯನ್ನು ಯಾರು ಕಟ್ಟಿದರು. ಯಾವ ಕಾರಣಕ್ಕಾಗಿ ಕಟ್ಟಿದರು ಎನ್ನುವಂಥ ಹಲವಾರು ಪ್ರಶ್ನೆಗಳಿಗೆ ಮೌಖಿಕವಾಗಿ ದೊರಕುವ ಐತಿಹ್ಯಗಳ ಆಧಾರಗಳನ್ನು ಅವಲೋಕಿಸಲಾಯಿತು.

*** *** ***

ಬೊಮಗೊಂಡನ ಕೆರೆಯ ಕುರಿತಂತೆ ಲಿಖಿತ ಆಕರಗಳು ನಮಗೆ ಲಭ್ಯವಿಲ್ಲ. ಆದರೆ ಮೌಖಿಕ ಆಕರಗಳಲ್ಲಿಯೇ ಕೆಲವೊಂದು ವ್ಯತ್ಯಾಸಗಳನ್ನು ಕಾಣುತ್ತೇವೆ.

ಮೊದಲನೆಯದಾಗಿ ಸುಲ್ತಾನ್‌ನು ಬೀದರಿನಲ್ಲಿ ಆಡಳಿತ ನಡೆಸಬೇಕೆಂದಿರುವುದು, ಎರಡನೆಯದಾಗಿ ನೀರಿನ ಚಿಲುಮೆ, ಝರಿ ಎಂದೆಲ್ಲ ಬಳಸಲಾಗಿದೆ. ಮೂರನೆಯದಾಗಿ ಬಂಡೆಗಲ್ಲನ್ನು ಆನೆಗೆ ಹಚ್ಚಿ ಉರುಳಿಸಲು ಪ್ರಯತ್ನಿಸುವುದು, ಸುಸ್ತಾಗಿ ಎಲ್ಲರೂ ಒಂದು ಮರದಡಿ ಕೂಡುವುದು, ಬೊಮಗೊಂಡನನ್ನು ತಾವಿರುವ ಸ್ಥಳಕ್ಕೆ ಕರೆಯುವುದು ಅಥವಾ ಅವನಿರುವ ಸ್ಥಳಕ್ಕೆ ಹೋಗುವುದು. ಜಾಗೀರು ಕೊಡುವುದಾಗಿ ಹೇಳುವುದು, ಈ ರೀತಿಯ ವ್ಯತ್ಯಾಸಗಳು ಮೌಖಿಕ ಆಕರಗಳಲ್ಲಿ ಕಂಡುಬರುತ್ತವೆ. ಇಲ್ಲಿ ವಕ್ತೃರು ಐತಿಹ್ಯವನ್ನು ಹೇಳುವಾಗ ಒಂದು ಊರು, ಒಬ್ಬ ರಾಜ, ಸುಲ್ತಾನ, ಅರಸ ಇದ್ದನು ಎಂದು ಹೇಳುತ್ತಾರೆ. ಒಂದಾನೊಂದು ಕಾಲದಲ್ಲಿ ಅವರು ಬಿದಿರು ಘಟಕ್ಕೆ ಬಂದರು, ನೀರಿಗಾಗಿ ಶೋಧಿಸಿದರು ಇತ್ಯಾದಿ ವಿವರಗಳನ್ನು ಒಳಗೊಂಡಿವೆ. ಲಭ್ಯವಿರುವ ಲಿಖಿತ ಆಕರಗಳೊಂದಿಗೆ ಹೋಲಿಸಿ ನೋಡಿದಾಗ ಒಂದು ಊರು ಎಂದರೆ ಇಲ್ಲಿ ಗುಲ್ಬರ್ಗಾವೆಂದು, 'ಒಬ್ಬ ತುರುಕ್ ಸುಲ್ತಾನ' ಎಂದರೆ ಗುಲ್ಬರ್ಗಾದ ಆಡಳಿತ ದಲ್ಲಿ ಇದ್ದ ಬಹಮನಿ ಮನೆತನದ ಮುಸ್ಲಿಂ ಸುಲ್ತಾನ ೧ನೇ ಅಹಮದ್ ಶಹ (ಸುಲ್ತಾನ-ಎ-ಅಹಮದ್ ಶಹ) ಎಂದು ತಿಳಿದು ಬರುತ್ತದೆ. ಒಂದಾನೊಂದು ಕಾಲದಲ್ಲಿ ಎಂದರೆ ಬಹಮನಿಯ ಆಡಳಿತ ಕಾಲ ಎಂಬ ಅಂಶಗಳನ್ನು ಲಿಖಿತವಾದ ಆಕರಗಳ ಮೂಲಕ ಖಚಿತಪಡಿಸಲಾಗಿದೆ. ಒಂದು ಕಡೆ ವಕ್ತೃರ ಐತಿಹ್ಯವು ಸಾಮ್ರಾಜ್ಯ ಸ್ಥಾಪಿಸಿ ಆಡಳಿತ ನಡೆಸಲು ಅರಸನು ಬೀದರ್‌ಗೆ ಬಂದಿದ್ದನೆಂದು ಹೇಳಿದರೆ ಇನ್ನೊಂದು ಕಡೆ ಬೇಟೆಯಾಡಲಿಕ್ಕೆ ಬಂದಿದ್ದನೆಂದು ಹೇಳುತ್ತದೆ. ಈ ರೀತಿ ಬೀದರ್‌ನ ಒಳಕೋಟೆಯಲ್ಲಿರುವ ಬೊಮಗೊಂಡನ ಕೆರೆಯ ಸುತ್ತಲೂ ಜನಪದರು ಮೌಖಿಕವಾಗಿ ಹೇಳುವ ಐತಿಹ್ಯಗಳನ್ನು ವಿಮರ್ಶೆ ಮಾಡಲು ಪ್ರಯತ್ನಿಸಿದರೂ ಅವುಗಳಲ್ಲಿರುವ ವೈರುಧ್ಯಗಳನ್ನು ಇತಿಹಾಸದ ಭಾಗವನ್ನಾಗಿ ನೋಡುವುದು ಸಮಂಜಸವಾಗಿದೆ.

ಟಿಪ್ಪಣಿಗಳು

೧. ಪಂಚಾಕ್ಷರಿ ಪುಣ್ಯಶೆಟ್ಟಿ ಇವರು ಬೀದರ್ ನಗರದ ಹಳೆಯ ಪಟ್ಟಣವಾದ ಕುಂಬರವಾಡಾ ಎಂಬ ನಗರದಲ್ಲಿ ವಾಸವಾಗಿದ್ದಾರೆ. ಪಂಚಾಕ್ಷರಿ ಪುಣ್ಯಶೆಟ್ಟಿಯವರು ೧೯೭೬ರ ಬೀದರ್ ಜಿಲ್ಲಾದರ್ಶನದ ಸಂಪಾದಕರಾಗಿದ್ದರು. ಇವರು ಕಲ್ಯಾಣ ಕನ್ನಡ ಎಂಬ ಸಂಚಿಕೆಯಲ್ಲಿ 'ಇತಿಹಾಸ ಪ್ರಸಿದ್ಧ ಚೌಬಾರ ಗೋಪುರ' ಎಂಬ ಕವನವನ್ನು ಪ್ರಕಟಿಸಿದ್ದಾರೆ. ಇವರು ಸಾಹಿತ್ಯ ಮತ್ತು ಐತಿಹಾಸಿಕತೆಯ ಬಗ್ಗೆ ಹೆಚ್ಚು ಗಮನಹರಿಸಿರುವಂತೆ ಕಂಡುಬರುತ್ತದೆ.

೨. ಬೊಮಗೊಂಡೇಶ್ವರನು ಜೀವಿಸಿರುವ ಕಾಲ ಸುಲ್ತಾನ ಅಹಮದ್ ಶಹ (ಕ್ರಿ.ಶ.೧೪೨೨-೩೬) ರಿಂದ ಮೂರನೇ ಮಹಮದ್ (ಕ್ರಿ.ಶ.೧೪೬೩-೧೪೮೨) ಕಾಲದವರೆಗೆ. ಕ್ರಿ.ಶ.೧೪೨೨-೨೩ರಲ್ಲಿ ಬೀದರ್‌ನಲ್ಲಿ ಅನಾವೃಷ್ಟಿಯಾಗಿ ಬರಗಾಲ ಬಿದ್ದಾಗ ಬಹಮನಿಯ ರಾಜ ಅಹಮದ್ ಷಾನಿಗೆ ನೀರು ಕುಡಿಸಿದನು. ೧೯೭೯ರಲ್ಲಿ ಬಹಮನಿ ಸುಲ್ತಾನ ಮಾಳವ ಅರಸರಿಂದ ಸೋತಿದ್ದಾಗ ಬೊಮಗೊಂಡನು ಸುಲ್ತಾನ ಮೂರನೇ ಮಹಮೂದ್ ಶಹಾನ ರಾಣಿ ಮುಖ್ದುಂ ಜಹಾನ ಹಾಗೂ ಅವರ ಪರಿವಾರಕ್ಕೆ ಕಟ್ಟಿಗೆ ಮಾರುವವರಂತೆ ಲಂಬಾಣಿ ವೇಷದಲ್ಲಿ ಬೀದರ್‌ದಿಂದ ಗುಲ್ಬರ್ಗಾಕ್ಕೆ ಕರೆದೊಯ್ದನು ಎಂದು ಉಲ್ಲೇಖಿಸಿದ್ದಾರೆ (ಕುಲಕರ್ಣಿ, ೧೯೭೬: ೮) ಹಾಗೂ ಗುಂಡಪ್ಪ ಘಾಳೆಯವರಲ್ಲಿ ದೊರೆತ ಪರಿಷ್ಕೃತ ಹಸ್ತಪ್ರತಿಯೊಂದರಲ್ಲಿ ಕೂಡ ಬೊಮಗೊಂಡನು ಶತಾಯುಷಿ ಎಂದೇ ಮೈತ್ರಿಯವರು 'ನಿರ್ಲಕ್ಷಿತ ಇತಿಹಾಸದಲ್ಲಿ ಬೊಮಗೊಂಡನ ಚರಿತ್ರೆ' ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ.

ಮಹಮೂದ್ ಗವಾನ್‌ನು ಒರಿಸ್ಸಾದ ದೊರೆಯೊಡನೆ ಬಹಮನಿಯ ದೊರೆಯ ವಿರುದ್ಧ ಒಳಸಂಚು ಮಾಡಿಕೊಂಡಿದ್ದು ಹಾಗೂ ಬಹಮನಿ ರಾಜ್ಯದ ಸುಲ್ತಾನನ್ನು ಕೊಲೆ ಮಾಡಿ ಇಡೀ ರಾಜ್ಯವನ್ನೇ ಕಬಳಿಸುವ ಯೋಜನೆ ಹಾಗೂ ಒರಿಸ್ಸಾದ ದೊರೆಗೆ ಅರ್ಧರಾಜ್ಯ ಕೊಡುವುದು ಇವೇ ಮುಂತಾದ ಕುಹಕ ಯೋಜನೆಗಳಾಗಿದ್ದವು. (ಕುಲಕರ್ಣಿ, ೧೯೭೬: ೨೨). ಈ ಷಡ್‌ಯಂತ್ರ ಬೊಮಗೊಂಡ ಅರಿತಿದ್ದರಿಂದ ತನ್ನಲ್ಲಿದ್ದ 'ಪುರುಷನ ಪುತ್ಥಳಿ'(ಕಲ್ಪತರು) ಕೋಟೆಯ ಕೆರೆಯಲ್ಲಿಯ ಕುಂಡದಲ್ಲಿಟ್ಟು ಮರಳಿ ಬರುತ್ತಿರುವಾಗ ಗವಾನ್‌ನ ಬೆಂಬಲಿಗರು ಬೊಮಗೊಂಡನನ್ನು ಕೆರೆಯಲ್ಲಿ ಜಲಸಮಾಧಿ ಮಾಡಿದರು. ಅರ್ಥಾತ್ ಕೆರೆಯಲ್ಲಿಯೇ ಮುಳುಗಿಸಿ ಕೊಲೆ ಮಾಡಿದರು. ಆದರೆ ಅದು ಗುಪ್ತವಾಗಿ ನಡೆಸಿದ್ದರಿಂದ ಜನಸಾಮಾನ್ಯರು ಸಾಮಾನ್ಯ ಸಾವು ಎಂದು ಕೆರೆಯ ಕಟ್ಟೆಯ ಮೇಲೆ ಅವರ ಮೋಕ್ಷ(ಸಮಾಧಿ) ಮಾಡಿದರು. ಮಹಮೂದ್ ಗವಾನ್‌ನ ಮರಣಕ್ಕಿಂತ ಸುಮಾರು ಒಂದು ವರ್ಷ ಮೊದಲೇ ಬೊಮಗೊಂಡನ ಕೊಲೆಯಾಗಿರಬಹುದು. ಅಲ್ಲದೆ ಬೊಮಗೊಂಡನು ಜೀವಿಸಿದ ಕಾಲವಧಿ ಕ್ರಿ.ಶ. ೧೩೮೦ ರಿಂದ ೧೪೮೦ ಎಂದು ಹೇಳಬಹುದು.

೩. ನಾಗಪ್ಪನವರು ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಚಳಕಾಪುರ ಎಂಬ ಗ್ರಾಮದಲ್ಲಿ ವಾಸವಾಗಿದ್ದಾರೆ. ಕೂಲಿ ಕೆಲಸವನ್ನು ತಮ್ಮ ಜೀವನಕ್ಕೆ ಆಧಾರವಾಗಿ ಮಾಡಿಕೊಂಡಿರುವ ಇವರು ಪಾಂಡುರಂಗನ ಭಕ್ತರಾಗಿದ್ದು, ಇವರಿಗೆ ಐದು ಜನ ಮಕ್ಕಳಿದ್ದಾರೆ. ಅಕ್ಷರ ಜ್ಞಾನವಿಲ್ಲದ ನಾಗಪ್ಪನವರು ದೇವರ ಹಾಡುಗಳನ್ನು ಸೊಗಸಾಗಿ ಹೇಳುತ್ತಾರೆ. ಅನೇಕ ರಾಜಮಹಾರಾಜರ ಕಥೆಗಳನ್ನು ಹೇಳುವ ಇವರ ಬೀದರಿನ ಒಳಕೋಟೆಯಲ್ಲಿರುವ ಪಾಂಡುರಂಗನ ಪಾದುಕೆ ಕುರಿತಂತೆ ಐತಿಹ್ಯವೊಂದನ್ನು ಹೇಳಿದ್ದಾರೆ.

೪. ದ್ರೌಪದಿ (ಗಂಡ: ಶಂಕರ ಡೋಮನೆ) ಇವರು ಬೀದರ್ ಪಟ್ಟಣದ ಅಂಬೇಡ್ಕರ್ ನಗರದಲ್ಲಿ ವಾಸವಾಗಿದ್ದಾರೆ. ಕೂಲಿ ಕೆಲಸ ಮಾಡಿಕೊಂಡಿದ್ದ ದ್ರೌಪದಿಯವರು ಅನಕ್ಷರಸ್ಥರಾಗಿದ್ದು, ದೇವರ ಹಾಡು, ಆರತಿ ಹಾಡು, ರಜಾಕಾರರ ಹಾಡು ಹೀಗೆ ಅನೇಕ ರೀತಿಯ ಹಾಡುಗಳನ್ನು ಕಂಠಪಾಠದಲ್ಲಿ ಸೊಗಸಾಗಿ ಹಾಡುತ್ತಾರೆ. ಇವರು ಬೊಮಗೊಂಡನ ಕುರಿತಂತೆ ಅನೇಕ ಹಾಡುಗಳನ್ನು ಹಾಡುತ್ತಾರೆ. ಅವರ ಮನೆಗೆ ಹೋಗಿ ಕೈಗೊಂಡ ಶೋಧನೆಯ ಬಗ್ಗೆ ತಿಳಿಸಿದಾಗ ಅವರು ಬೊಮಗೊಂಡನ ಕುರಿತಂತೆ ಹಾಡಿದರು. ಅದನ್ನು ಧ್ವನಿಸುರುಳಿಯಲ್ಲಿ ಸಂಗ್ರಹಿಸಿಕೊಂಡು ಬರಲಾಯಿತು.

ಅಧ್ಯಾಯ ೬

ವೀರಸಂಗಯ್ಯನ ಗದ್ದುಗೆ ಬಗೆಗಿರುವ ಐತಿಹ್ಯಗಳು

ವೀರಶೈವ ಧರ್ಮದ ಕೇಂದ್ರವನ್ನಾಗಿ ಬೆಳಗಿಸಿದ ಮಹಾಪ್ರಭಾವಶಾಲಿ ಶರಣನಿವನು. ಸಂಗಯ್ಯನ ಹೆಂಡತಿ ಪುರುಷ ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಿ ತನ್ನನ್ನು ತಾನೇ ರಕ್ಷಿಸಿಕೊಂಡ ವೀರಶರಣೆ.

ಬಿದಿರು ಪುರದೊಳಗೆ ಶರಣ ಸಂಸ್ಕೃತಿಗೆ ಸುಪ್ರಸಿದ್ಧವಾದ ಮನೆತನದಲ್ಲಿ ವೀರಸಂಗಯ್ಯನ ಜನನವಾಯಿತು. ವೀರಸಂಗಯ್ಯನ ತಂದೆ ಕಾಮಣ್ಣ ತಾಯಿ ಸೋಮಲದೇವಿ. ಈ ನಿಗರ್ವಿ ದಂಪತಿಗಳ ಕುಲದೇವನಾದ ಕೇತಕಿ ಸಂಗಮೇಶ್ವರನಲ್ಲಿ ಸಂತಾನಕ್ಕಾಗಿ ಪ್ರಾರ್ಥಿಸುತ್ತಾರೆ. ಏಕೆಂದರೆ ಬಹಳ ವರ್ಷಗಳವರೆಗೆ ಇವರಿಗೆ ಸಂತಾನವಾಗಿರಲಿಲ್ಲ. ಈ ದಂಪತಿಗಳು ಸಂತಾನವಿಲ್ಲವೆಂಬ ಕೊರಗಿನಲ್ಲಿ ಇದ್ದರು. ಕೇತಕಿ ಸಂಗಮೇಶ್ವರನ ಆರ್ಶೀವಾದದಿಂದ ಮುಂದೆ ಇವರಿಗೆ ಸಂತಾನ ಪ್ರಾಪ್ತಿಯಾಗುತ್ತದೆ. ಕೇತಕಿ ಸಂಗಮೇಶ್ವರನ ಕೃಪೆಯಿಂದ ಜನಿಸಿದ ಕಾರಣ ವೀರಸಂಗಯ್ಯನೆಂದು ನಾಮಕರಣ ಮಾಡಲಾಗಿದೆ (ಕುಲಕರ್ಣಿ, ೧೯೭೮: ೧೭). ಸಂಗಮೇಶ್ವರನ ಕೃಪೆಯಿಂದ ಜನಿಸಿದ ಈ ವೀರಸಂಗಯ್ಯನು ಬೀದರ್ ಜಿಲ್ಲೆಯಲ್ಲಿ ಒಬ್ಬ ಐತಿಹಾಸಿಕ ಪುರುಷನಾಗಿಯೇ ಮೆರೆದಿದ್ದಾನೆ.

ವೀರಸಂಗಯ್ಯನು ಬಾಲ್ಯದಲ್ಲಿಯೇ ಪ್ರತಾಪಿಯೂ ತೇಜಸ್ವಿಯೂ ಆಗಿದ್ದನು. ಒಂದು ಸಲ ಕೋಹಿರದ ದೀಕ್ಷಿತ ಮನೆತನದ ೨ನೇ ವೇಣುಭಟ್ಟರು (೧೦೦೦ ವರ್ಷಗಳ ಹಿಂದೆ ಜೀವಿಸಿದ್ದರು) ಬೀದರ್ ನಗರಕ್ಕೆ ಬಂದರು. ಅವರ ಉದ್ದೇಶ ಬೀದರ್‌ದ ನರಸಿಂಹ (ನರಸಿಂಹ ಝುರಾ) ಭೇಟಿ ನೀಡುವುದಾಗಿತ್ತು. ಆಗ ತೇಜಸ್ವಿ ಬಾಲಕನಾದ ವೀರಸಂಗಯ್ಯನ ಭೇಟಿಯಾಯಿತು. ವಿಭೂತಿ ರುದ್ರಾಕ್ಷಿ ಧರಿಸಿದ ವೀರಸಂಗಯ್ಯ ವೇಣುಭಟ್ಟರಿಗೆ ಶಿವನ ಪುತ್ರನೆಂದೇ ಕಂಗೊಳಿಸಿದನಂತೆ ಕುತೂಹಲ ತಡೆಯದೆ ವೇಣುಭಟ್ಟರು ಆತನ ಹೆಸರು ಕೇಳಿದಾಗ ವೀರಸಂಗಯ್ಯನೆಂದು ದಿಟ್ಟತನದಿಂದ ಸ್ಪಷ್ಟವಾದ ಕನ್ನಡದಲ್ಲಿ ಅವರಿಗೆ ಉತ್ತರ ಕೊಟ್ಟನು. ಆಗ ವೇಣುಭಟ್ಟರು ಸಂಪ್ರೀತವಾಗಿ ಸಂಗಯ್ಯನನ್ನು ಕೋಹಿರಕ್ಕೆ "ನನ್ನ ಹಿಂಬಾಲ ಬರುತೀಯಾ" ಎಂದು ಕೇಳಿದಾಗ ಬರುತ್ತೇನೆ ಎಂದು ವೀರಸಂಗಯ್ಯ ಉತ್ಸಾಹದಿಂದ ನುಡಿದನಂತೆ. ಸುಮಾರು ಒಂದು ಸಾವಿರ ವರ್ಷಗಳ ಹಿಂದೆಯೇ ಕನ್ನಡ ಭಾಷೆ ಬೀದರಿನಲ್ಲಿ ಬಳಕೆಯಲ್ಲಿ? ಎಂಬ ಹೊಸ ವಿಷಯವು ಬೆಳಕಿಗೆ ಬಂದಂತಾಗಿದೆ (ಕುಲಕರ್ಣಿ, ೧೯೭೮: ೧೮). ಒಂದು ವೇಳೆ ವೀರಸಂಗಯ್ಯನು ವೇಣುಭಟ್ಟರ ಸಂಗಡ ಹೋಗುದ್ದಿರಲಿಲ್ಲವೆಂದರೆ ಅವರು ಐತಿಹಾಸಿಕವಾಗಿ ಇಷ್ಟೊಂದು ಪ್ರಾಮುಖ್ಯತೆ ಪಡೆಯುತ್ತಿರಲಿಲ್ಲವೆನಿಸುತ್ತದೆ. ಅಲ್ಲದೆ ಒಂದು ಸಾವಿರ ವರ್ಷಗಳ ಹಿಂದೆ ಬೀದರ್‌ನಲ್ಲಿ ಕನ್ನಡ ಬಳಕೆಯಲ್ಲಿ ಇತ್ತೆಂದು ಕುಲಕರ್ಣಿಯವರ ಉಲ್ಲೇಖದಿಂದ ತಿಳಿದುಬರುತ್ತದೆ.

ವೀರಸಂಗಯ್ಯನ ಬಾಲ್ಯ ಪವಿತ್ರ ಪರಿಸರದಲ್ಲಿ ರೂಪಿತವಾಯಿತು. ಶಿವದೇವ ಸ್ವಾಮಿಗಳು ವೀರಸಂಗಯ್ಯನಿಗೆ ದೀಕ್ಷೆ ನೀಡಿದರು. ಬಹುಶಃ ಸಂಗಯ್ಯನಿಗೆ ಆಗ ಹನ್ನೆರಡು ವರ್ಷ ವಯಸ್ಸು ಆಗಿರಬಹುದೆಂದು ತಿಳಿದುಬರುತ್ತದೆ. ಶಿವದೇವಸ್ವಾಮಿಗಳು ರುದ್ರಮುನಿಗಳ ಉತ್ತರಾಧಿಕಾರಿಗಳಾಗಿದ್ದರು. ರುದ್ರಮುನಿಗಳು ಮಹಾ ತಪಸ್ವಿಗಳಾಗಿದ್ದು, ಆಂಧ್ರ ಮತ್ತು ಕರ್ನಾಟಕದಲ್ಲಿ ಅನೇಕ ಮಠಗಳನ್ನು ಸ್ಥಾಪಿಸಿ ವೀರಶೈವ ಧರ್ಮದ ಪತಾಕೆಯನ್ನು ಹಾರಿಸಿದರು. ಗುರು, ಲಿಂಗ, ಜಂಗಮ, ದಾಸೋಹಕ್ಕೆ ಇವರು

ಸುಪ್ರಸಿದ್ಧರಾಗಿದ್ದರು. ಇವರೆಲ್ಲ ವೀರ ಬಣಜಿಗರೆಂದರೆ ಇತಿಹಾಸಕ್ಕೆ ಅಪಚಾರವಾಗಲಾರದು. ಇವರ ಕಾಲದಲ್ಲಿ ಇಡೀ ಪರಿಸರವೆಲ್ಲ ವೀರಶೈವ ಧರ್ಮದ ಹಾಗೂ ಜ್ಞಾನದ ಕೇಂದ್ರವಾಗಿತ್ತು. ಇಂಥ ಪವಿತ್ರ ಪರಿಸರದಲ್ಲಿ ವೀರಸಂಗಯ್ಯ ತನ್ನ ಬಾಲ್ಯದ ಕ್ಷಣಗಳನ್ನು ಕಳೆದನು (ಕುಲಕರ್ಣಿ, ೧೯೭೮: ೧೮). ಈ ಚರಿತ್ರೆಯು ಡಾ.ಡಿ.ಎನ್.ದೀಕ್ಷಿತ್ (ಮಹಾರಾಜ) ಅವರ ಮನೆಯಲ್ಲಿ ಮೂಲತ ದೊರೆತಿದ್ದು, ನಾನು ಈ ಚರಿತ್ರೆಗೆ ಸಂಬಂಧಿಸಿದ ಆಕರಗಳನ್ನು ಡಾ.ಎಲ್.ಆರ್.ಕುಲಕರ್ಣಿ ಇವರ ಮೂಲಕ ಪಡೆದುಕೊಂಡಿದ್ದೇನೆ. ಕೋಹಿರ ಗ್ರಾಮದ ಬಗ್ಗೆ ಹಾಗೂ ವೀರಸಂಗಯ್ಯನ ಜೀವನದ ಬಗ್ಗೆ ಈ ಚರಿತ್ರೆ ಹೊಸ ಬೆಳಕನ್ನು ಚೆಲ್ಲುತ್ತದೆ. ಈ ಚರಿತ್ರೆಯನ್ನು ಕಾಲಕಾಲಕ್ಕೆ ಬರೆಯಲಾಗಿದೆ. ಸುಮಾರು ೫೦೦ ಅಧ್ಯಾಯಗಳನ್ನೊಳಗೊಂಡ ಈ ಚರಿತ್ರೆಯನ್ನು ಸಂಸ್ಕೃತದಲ್ಲಿ ಬರೆಯಲಾಗಿದೆ. ಆದರೆ ಕುಲಕರ್ಣಿಯವರು ಈ ಪುಸ್ತಕದಲ್ಲಿ ವೀರಸಂಗಯ್ಯನ ಬಗ್ಗೆ ಇರುವ ಮಾಹಿತಿಯನ್ನು ಮಾತ್ರ ಭಾಷಾಂತರಿಸಿ ಕೊಟ್ಟಿದ್ದಾರೆ. ಇವರ ಎಲ್ಲ ಅಧ್ಯಯನಗಳು ನಮಗೆ ದೊರೆಯುವುದಿಲ್ಲ. ನೂರಾರು ವರ್ಷಗಳು ಉರುಳಿದರಿಂದ ಇದು ಓದಲಿಕ್ಕೆ ಬಾರದಷ್ಟು ಅದರ ಪ್ರತಿಗಳು ಕಿತ್ತು ಹೋಗಿವೆ. ಹೀಗಾಗಿ ಉಳಿದಿದ್ದನ್ನು ಉಪಯೋಗಿಸಿಕೊಳ್ಳಲಾಗಿದೆ.

ವೀರಸಂಗಯ್ಯನ ತಂದೆ ಕಾಮಣ್ಣಯ್ಯನೆಂಬುವನು ಸುಪ್ರಸಿದ್ಧ ವ್ಯಾಪಾರಿಯಾಗಿದ್ದನು. ನವರತ್ನ ಮುಂತಾದ ಬೆಲೆಯುಳ್ಳ ವಸ್ತುಗಳ ವ್ಯಾಪಾರ ವಹಿವಾಟು ಇಟ್ಟುಕೊಂಡಿದ್ದನೆಂದರೆ ಈತನೊಬ್ಬ ಅತ್ಯಂತ ಶ್ರೀಮಂತ ಹಾಗೂ ರಾಜ ಮನ್ನಣೆ ಪಡೆದ ವರ್ತಕನಾಗಿದ್ದನು ಎಂದು ತಿಳಿದುಬರುತ್ತದೆ. ಕಾಮಣ್ಣಯ್ಯನಲ್ಲಿ ವಿಪುಲವಾದ ಸೇವಕ ಪಡೆ ಇತ್ತೆಂಬುದರಲ್ಲಿ ಸಂಶಯವೇ ಇಲ್ಲ. ಕಾಮಣ್ಣಯ್ಯನು ರಾಜಪ್ರಮುಖ ನಾಗಿದ್ದನೆಂದು ನಂಬಲು ಬೀದರ್ ಕೋಟೆಯಲ್ಲಿ ದೊರೆತ ಕನ್ನಡ ಶಾಸನ ಆಧಾರವಾಗಿದೆ. ಆದರೆ ಈ ಕನ್ನಡ ಶಾಸನದ ಕಾಲ ಸ್ಪಷ್ಟವಾಗಿಲ್ಲ. ಆದರೆ ೧೨ನೇ ಶತಮಾನವೆಂದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಶಾಸನದಲ್ಲಿ ಶೆಟ್ಟಿಯ ಮಗನಾದ ಕಾಮಣ್ಣಯ್ಯನಿಗೆ ಹನ್ನೆರಡು (ಮ್ಯಾಟರ್) ಭೂಮಿಯನ್ನು ದೇವರ ಹೆಸರಿನಲ್ಲಿ ಕಾಣಿಕೆಯಾಗಿ ನೀಡಲಾದ ವಿವರವಿದೆ (ಕುಲಕರ್ಣಿ, ೧೯೭೮: ೧೮).

ಈ ಶಾಸನದಲ್ಲಿ ಬರುವ ಕಾಮಯ್ಯ ಈ ಕಾಮಣ್ಣಯ್ಯನೇ ಆಗಿದ್ದಾನೆಂದು ನಂಬಲಾಗಿದೆ. ಹೀಗಾಗಿ ಮುಂದೆ ವೀರಸಂಗಯ್ಯನ ಕಾಲಕ್ಕೆ ಸಪ್ತವಾರ ಪೇಟೆಗಳು ಬೀದರಿನಲ್ಲಿ ನಿರ್ಮಾಣವಾದವು. ಅವುಗಳಲ್ಲಿ ಈಗ ಮಂಗಳವಾರ ಪೇಟೆ ಮಾತ್ರ ಉಳಿದಿದೆ. ವೀರಸಂಗಯ್ಯನ ಕಾಲದಲ್ಲಿ ಸತ್ಯ, ಶಾಂತಿ, ಧರ್ಮ, ನೀತಿಗಳಿಂದ ಕೂಡಿದ ಸುಖಿ ರಾಜ್ಯವಾಗಿತ್ತು.

ಈ ವೀರಸಂಗಯ್ಯನ ಗದ್ದುಗೆ ಕುರಿತಂತೆ ವಕ್ತರು ಅನೇಕ ರೀತಿಯ ಐತಿಹ್ಯಗಳನ್ನು ಹೇಳಿದ್ದಾರೆ. ವೀರಸಂಗಯ್ಯನ ಗದ್ದುಗೆ ಒಳಕೋಟೆಯಲ್ಲಿ ಇರಲು ಕಾರಣ ಹಾಗೂ ಅವನು ಎಲ್ಲಿಯವನು ಎನ್ನುವ ಹಲವಾರು ಪ್ರಶ್ನೆಗಳನ್ನು ಬೀದರ್ ಕೋಟೆಯ ಸುತ್ತಮುತ್ತಲಿನ ಜನಪದರಿಗೆ ಕೇಳಿದರೆ ವೀರಸಂಗಯ್ಯನ ಗದ್ದುಗೆಯ ಸುತ್ತಲೂ ಹೆಣೆದುಕೊಂಡಿರುವ ಐತಿಹ್ಯವೊಂದನ್ನು ಹೇಳುತ್ತಾರೆ. ಈ ವೀರಸಂಗಯ್ಯನ

ಗದ್ದುಗೆ ಕುರಿತಂತೆ ಅನೇಕ ಐತಿಹ್ಯಗಳಿದ್ದು, ಸಂಗ್ರಹಣೆಯಲ್ಲಿ ಒಂದು ಐತಿಹ್ಯವು ದೊರೆತಿದ್ದು, ಅದನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಐತಿಹ್ಯಗಳು

ವೀರಸಂಗಯ್ಯನ ಗದ್ದುಗೆಗೆ ಸಂಬಂಧಿಸಿದಂತೆ ಐತಿಹ್ಯಗಳು ಹಲವಾರಿವೆ. ಆದರೆ ಸಂಗ್ರಹಣೆಯಲ್ಲಿ ಒಂದು ಐತಿಹ್ಯ ದೊರಕಿದೆ. ಮತ್ತೊಂದು ಐತಿಹ್ಯವನ್ನು ಎಲ್.ಆರ್.ಕುಲಕರ್ಣಿಯವರ ಪ್ರಕಟಿತ ಇತಿಹಾಸದರ್ಶನ, ಸಂಪುಟ ೩ರಿಂದ ಆಯ್ದುಕೊಂಡು ಉಲ್ಲೇಖಿಸಲಾಗಿದೆ.

ವೀರಸಂಗಯ್ಯನ ಗದ್ದುಗೆ ಕುರಿತಂತೆ ವಕ್ತೃರಿಂದ ಸಂಗ್ರಹಿಸಲಾದ ಐತಿಹ್ಯವು ಈ ರೀತಿಯಾಗಿದೆ. ''ಬೀದರ್ ನಗರದಲ್ಲಿ ವೀರಸಂಗಯ್ಯನೆಂಬ ಶರಣನು ಇದ್ದು, ಅವನಿಗೆ ಪಕ್ಕದ ಊರಿನ ಕನ್ಯೆ ಚಂದ್ರುಣಿಯೊಂದಿಗೆ ವಿವಾಹ ನಿಶ್ಚಯವಾಗಿರುತ್ತದೆ. ಚಂದ್ರುಣಿಯು ನೋಡಲು ತುಂಬಾ ರೂಪವತಿಯಾಗಿದ್ದಳು. ಚಂದ್ರುಣಿಯ ಊರಿನಲ್ಲಿ ಭಾಸ್ಕರನೆಂಬ ಒಬ್ಬ ಅರಸನಿದ್ದು, ಅವನು ಒಮ್ಮೆ ಚಂದ್ರುಣಿಯನ್ನು ನೋಡಿ ಆಕೆಯ ರೂಪವನ್ನು ಮೆಚ್ಚಿ ಆಕೆಯನ್ನು ವಿವಾಹವಾಗಲು ನಿರ್ಧರಿಸುತ್ತಾನೆ. ಈಗಾಗಲೇ ಚಂದ್ರುಣಿಯ ವಿವಾಹ ನಿಶ್ಚಯ ವೀರಸಂಗಯ್ಯನ ಜೊತೆ ಆಗಿರುತ್ತದೆ. ಹೀಗೆ ಒಂದು ಹೆಣ್ಣಿಗಾಗಿ ವೀರ ಸಂಗಯ್ಯ ಮತ್ತು ಭಾಸ್ಕರ ರಾಜನ ಮಧ್ಯೆ ನಡೆದ ಸೆಣಸಾಟವೇ ಈ ಐತಿಹ್ಯದಲ್ಲಿ ಅಡಗಿದೆ''.

ಮೊದಲನೆಯ ಐತಿಹ್ಯ

ಈ ಐತಿಹ್ಯವನ್ನು ಕಥೆಯ ರೂಪದಲ್ಲಿ ಶಾಂತಲಿಂಗಸ್ವಾಮಿ ಎನ್ನುವವರು ಹೇಳಿರುವುದನ್ನು ದಾಖಲಿಸ ಲಾಗಿದೆ.

> ಕಾಮಣ್ಣಯ್ಯನೆಂಬ ಶರಣನಿದ್ದು ಅವರ ನಿತ್ಯಕಾಯಕವೆಂದರೆ ಮುತ್ತು ರತ್ನಗಳ ವ್ಯಾಪಾರ ಮಾಡುವುದಾಗಿತ್ತು. ಇವರಿಗೆ ಬಹಳ ಕಾಲದವರೆಗೆ ಮಕ್ಕಳಾಗಿರಲಿಲ್ಲ. ಮುಂದೆ ಗುರುಜಂಗಮರ ಆಶೀರ್ವಾದಿಂದ ಒಂದು ಗಂಡು ಮಗು ಜನನವಾಯಿತು. ಆ ಮಗುವಿಗೆ ತಮ್ಮ ಆರಾಧ್ಯ ದೈವವಾದ ಕೇತಕಿ ಸಂಗಮನಾಥನ ಹೆಸರನ್ನೆ ಇಟ್ಟು ಸಂಗಯ್ಯ ಎಂದು ಕರೆಯತೊಡಗಿದರು. ಮುಂದೆ ಇವನು ಮಲ್ಲಯುದ್ಧ, ಖಡ್ಗ ತಿರುಗಿಸುವಲ್ಲಿ ಪ್ರವೀಣನಾದನು. ಗುಣವಂತನು, ಸುಂದರನು, ವಿನಯಶಾಲಿಯಾದ ಸಂಗಯ್ಯ ಸಕಲ ಕಲಾ ವಿಶಾರದನಾದ್ದರಿಂದ ಇವನ ಕೀರ್ತಿ ಎಲ್ಲ ಕಡೆಗೂ ಹರಡಿತ್ತು. ಕಲ್ಯಾಣದ ಅರಸ ಬೀದರ್ ನಗರ ಉಪರಾಜಧಾನಿಯನ್ನಾಗಿ ಮಾಡಿಕೊಂಡು ಮುಂದೆ ಸಂಗಯ್ಯನನ್ನು ಮಾಂಡಲಿಕನನ್ನಾಗಿ ನೇಮಕ ಮಾಡಿದನು. ಇವನು ತನ್ನ ರಾಜ್ಯದಲ್ಲಿ ಸುಖಶಾಂತಿಯಿಂದ ಕರ್ತವ್ಯ ನಿರ್ವಹಿಸತೊಡಗಿದನು.

ಬೀದರ್‌ನ ಪಕ್ಕದ ರಾಜ್ಯವಾಗಿರುವ (ಕೋಹಿರ್) ದ ಯಾದವ ರಾಜನ ಮಗನೇ ಭಾಸ್ಕರನಾಗಿದ್ದನು. ಸಂಗಯ್ಯನ ಸೋದರಮಾವ ಬೀಮಯ್ಯ, ಹೆಂಡತಿ ಕಮಲಾದೇವಿ ಅವರಿಗೆ ಚಂದ್ರುಣಿ ದೇವಿಯೆಂಬ ಮಗಳಿದ್ದು, ಇವರು ಗುರುಲಿಂಗ ಜಂಗಮ ಭಕ್ತರಾಗಿದ್ದರು. ಚಂದ್ರುಣಿಯು ಅಷ್ಟೇ ರೂಪವತಿಯೂ, ಗುಣವತಿಯೂ, ವಿದ್ಯಾವಂತಳಾಗಿ ಸದಾ ಶಿವಾಭಾವ ಸಂಪನ್ನಳಾಗಿದ್ದಳು.

ವೀರಸಂಗಯ್ಯನಿಗೆ ಚಂದ್ರುಣಿಯನ್ನು ತರುವುದಾಗಿ ನಿಶ್ಚಯಿಸಿದರು. ಒಂದು ದಿನ ಚಂದ್ರುಣಿಯು ತನ್ನ ಗೆಳತಿಯರೊಂದಿಗೆ ಬರುತ್ತಿದ್ದಾಗ ಭಾಸ್ಕರರಾಯನು ಎದುರಾದನು. ಚಂದ್ರುಣಿ ದೇವಿಯ ರೂಪಕ್ಕೆ ಮನಸೋತು ಇವಳನ್ನು ಲಗ್ನವಾಗಬೇಕೆಂದು ಪಣತೊಟ್ಟನು. ಇವಳೇ ನನ್ನ ಅರ್ಧಾಂಗಿಯಾಗಲು ಅರ್ಹಳೆಂದು ತನ್ನ ತಂದೆಗೂ ತಿಳಿಸಿದನು. ಚಂದ್ರುಣಿಯ ವಿವಾಹ ನಿಶ್ಚಯವು ಬೀದರಿನ ಸಂಗಯ್ಯನೊಡನೆ ಆಗಿದೆ ಎಂಬ ವಿಷಯ ತಿಳಿದ ಭಾಸ್ಕರರಾಯನು ನಿಮ್ಮ ಮಗಳನ್ನು ನನಗೆ ಕೊಡದೇ ಇದ್ದರೆ ಬಲತ್ಕಾರದಿಂದ ತನ್ನ ಮನೆಯಲ್ಲಿ ತಂದಿಟ್ಟುಕೊಳ್ಳುವುದಾಗಿ ತಿಳಿಸಿದನು. ಇದಕ್ಕೆ ಭೀಮಯ್ಯ ಶರಣರು ಒಪ್ಪಲಿಲ್ಲ. ಕಾಮಾವೇಶನಾದ ಭಾಸ್ಕರರಾಯ ನಿನ್ನ ಮಗಳನ್ನೇ ಕೇಳೀ ಅವಳನ್ನು ಒತ್ತಾಯಿಸಿ ತರುವೆ ಎಂದೆನ್ನುತ್ತಾ ಓಡುತ್ತಾ ಹೋಗಿ ಚಂದ್ರುಣಿಯ ಕರವಿಡಿದು ಸೀರೆಯ ಸೆರಗು ಎಳೆದನು. ಅವಳ ಸ್ಪರ್ಶದಿಂದ ಭಾಸ್ಕರರಾಯನು ಮೂರ್ಛೆ ಹೋದನು. ನಂತರ ಚಂದ್ರುಣಿಯು ಪಾಪಿ ಮುಟ್ಟಿದ ಸೆರಗು ಎಂದು ಹರಿದೊಗೆದಳು. ನಂತರ ಚಂದ್ರುಣಿಯು ಸಂಗಯ್ಯನಿಗೆ ಒಂದು ಪತ್ರ ಬರೆದು ವಿಷಯ ತಿಳಿಸಿದಳು. ಅಲ್ಲದೆ ಬೇಗ ವಿವಾಹವಾಗಿ ಕರೆದೊಯ್ಯಬೇಕೆಂದು ತಿಳಿಸಿದಳು. ನಂತರ ವಿವಾಹ ಮಾಡಿಕೊಂಡು ಬರುತ್ತಿರುವಾಗ ಭಾಸ್ಕರರಾಯನು ಸಂಗಯ್ಯನನ್ನು ಬಂಧಿಸಿ ಚಂದ್ರುಣಿಯನ್ನು ಒಪ್ಪಿಕೊಳ್ಳುವಂತೆ ಪ್ರಯತ್ನ ಮಾಡಿದನು. ನಂತರ ಭಾಸ್ಕರ ಮತ್ತು ಸಂಗಯ್ಯನ ನಡುವೆ ಯುದ್ಧವಾಯಿತು. ಯುದ್ಧದಲ್ಲಿ ಅನೇಕ ಜನ ಸಾವನ್ನಪ್ಪಿದರು. ಕೊನೆಗೆ ಸಂಗಯ್ಯನಿಗೆ ಜಯ ಲಭಿಸಿತ್ತು. ಬರುತ್ತಿರುವಾಗ ವೀರಭದ್ರದೇವನ ಗುಡಿಯೊಂದನ್ನು ಕಂಡು ಅಲ್ಲಿ ವಿಶ್ರಾಂತಿಗಾಗಿ ಬೀಡು ಬಿಟ್ಟರು. ವೀರಭದ್ರ ದೇವರಿಗೆ ನಮಿಸಲು ವೀರಭದ್ರನು ಪ್ರತ್ಯಕ್ಷನಾಗಿ ವೀರ ಖಡ್ಗ ಹಾಗೂ ತನ್ನ ಬಾಹುಬಲವನ್ನು ಕರುಣಿಸಿದನು. ವೀರ ಖಡ್ಗವನ್ನು ಪಡೆದ ಸಂಗಯ್ಯ ಅಂದಿನಿಂದ ವೀರಸಂಗಯ್ಯನಾದನು.

ವೀರಸಂಗಯ್ಯ ಜಂಗಮ ಪ್ರೇಮಿಯಾದ ಕಾರಣ ನಾನು ಜಂಗಮನಾಗಿ ಭಿಕ್ಷೆ ಬೇಡಲು ಹೋಗಿ ಸಂಗಯ್ಯನನ್ನು ಮೋಸದಿಂದ ಇರಿದು ಚಂದ್ರುಣಿಯನ್ನು ಮತ್ತೆ ತನ್ನ ಮನೆಗೆ ಎಳೆದೊಯ್ಯಬೇಕೆಂದು ಭಾಸ್ಕರರಾಯನು ಜಂಗಮನಾಗಿ ಸಂಗಯ್ಯನ ಮನೆಗೆ ಬಂದನು. ಭಾಸ್ಕರನು "ಭವತಿ ಭಿಕ್ಷಾಂದೇಹಿ"

ಎಂದು ಭಿಕ್ಷೆ ಬೇಡಲು ಸಂಗಯ್ಯ ಭಿಕ್ಷೆಯನ್ನು ಜೋಳಿಗೆಯಲ್ಲಿ ನೀಡಿ ನಮಸ್ಕಾರ ಮಾಡುತ್ತಿರುವಾಗ ಖಡ್ಗದಿಂದ ಇರಿಯಲು ಕೈಯೆತ್ತಿದನು. ಆಗ ಆತನ ಕೈ ಅಲ್ಲಿಯೇ ನಿಂತು ಬಿಟ್ಟಿತು. ಇದನ್ನು ಪ್ರತ್ಯೇಕ್ಷ ಅನುಭವಿಸಿದ ಭಾಸ್ಕರರಾಯ ಪಶ್ಚಾತ್ತಾಪಪಟ್ಟು ವೀರಸಂಗಯ್ಯ ಶರಣರ ಪಾದಕ್ಕೆ ಶರಣಾಗತನಾದನು.



ಒಳಕೋಟೆಯಲ್ಲಿರುವ ವೀರಸಂಗಯ್ಯನ ಗುಡಿ

ನಂತರ ಭಾಸ್ಕರರಾಯನು ವೀರಸಂಗಯ್ಯನಿಂದ ಲಿಂಗದೀಕ್ಷೆ ಪಡೆದನು.

ಎರಡನೆಯ ಐತಿಹ್ಯ

ಎರಡನೆಯ ಐತಿಹ್ಯವನ್ನು ಎಲ್.ಆರ್.ಕುಲಕರ್ಣಿ ಇತಿಹಾಸದರ್ಶನ, ಸಂಪುಟ ೩ರಲ್ಲಿ 'ಬಸವ ಪೂರ್ವದ ಬೀದರ್ ಜಿಲ್ಲೆಯ ಶಿವಶರಣ ವೀರಸಂಗಯ್ಯ' ಎನ್ನುವ ಲೇಖನದಲ್ಲಿ ವೀರಸಂಗಯ್ಯನ ಕುರಿತಂತೆ ಈ ರೀತಿಯಾದ ಐತಿಹ್ಯವೊಂದನ್ನು ಉಲ್ಲೇಖಿಸಿದ್ದಾರೆ.

> ಶರಣರ ಸಾಲಿನಲ್ಲಿ ಬೀದರಿನ ವೀರಗಣಚಾರಿ ವೀರಸಂಗಯ್ಯ ಪ್ರಮುಖನಾಗಿದ್ದಾನೆ. ಸೋಮನಾ ಪ್ರಭೆಯಂತೆ ಬೆಳೆದ ಸಂಗಯ್ಯನನ್ನು ಕಂಡು ತಂದೆ-ತಾಯಿಗಳಿಗೆ ಅವನ ಮದುವೆ ಮಾಡಬೇಕೆಂಬ ಹಂಬಲ ಮೂಡಿತು. ಓಂಕಾರಪುರದಲ್ಲಿರುವ ಬೀಗರ ಮನೆಯ ವಧು ಚಂದ್ರಾಣಿಯೇ ಸಂಗಯ್ಯನಿಗೆ ಸೂಕ್ತಳೆಂದು ತೀರ್ಮಾನಿಸಿದರು. ಚಂದ್ರಾಣಿ ಭೀಮಯ್ಯ-ಕಮಲಾದೇವಿ ಅವರ ಏಕೈಕ ಪುತ್ರಿ. ಓಂಕಾರೇಶ್ವರ ಚರಿತ್ರೆಯಲ್ಲಿ ವರ್ಣಿಸಿದಂತೆ



ಚಂದ್ರುಣಿ ಲಿಂಗಧಾರಣೆಯಾದ ಸೌಜನ್ಯ ಸುಂದರಿ ಜೊತೆ ವೀರಸಂಗಯ್ಯನ ವಿವಾಹ ನಿಶ್ಚಯವಾಗಿತ್ತು. ಕೋಹಿರಿನ ರಾಜನಾದ ಭಾಸ್ಕರನು ಚಂದ್ರುಣಿಯ ರೂಪಕ್ಕೆ ಮಾರುಹೋದನು. ಮೋಹಪರವಶನಾದ ಭಾಸ್ಕರ ಚಂದ್ರುಣಿಯನ್ನು ಕರೆತರಬೇಕೆಂದು ತನ್ನ ಸೈನಿಕರನ್ನು ಕಳಿಸಿದ. ಚಂದ್ರುಣಿಯ ತಂದೆ ಬಂದು ತನ್ನ ಮಗಳನ್ನು ಭಾಸ್ಕರನಿಗೆ ಕೊಡವುದಿಲ್ಲವೆಂದು ನುಡಿದ. ಭಾಸ್ಕರ ಧನ ಕನಕದ ಆಸೆ ಆಮಿಷ ನೀಡಿದ, ಸೌಕರ್ಯ ನೀಡುವುದಾಗಿ ಹೇಳಿದ. ಯಾವುದಕ್ಕೂ ಭೀಮಯ್ಯ ಒಪ್ಪದೇ ಅವಳು ವೀರಸಂಗಯ್ಯನ ಮಡದಿಯೆಂದು ಹೇಳಿದ. ಕುಪಿತನಾದ ಭಾಸ್ಕರ ಭೀಮಯ್ಯನನ್ನು ಹೊರನೂಕಿಸಿದ ಹಾಗೂ ಸೈನಿಕರಿಗೆ ಚಂದ್ರುಣಿಯನ್ನು ಕರೆತರಲು ಕಳುಹಿಸಿದ. ಚಂದ್ರುಣಿ ಧೈರ್ಯದಿಂದ ಭಾಸ್ಕರನ ಅರಮನೆಗೆ ಬಂದು "ಬರಬಹುದೆ ಪುರುಷನುಳ್ಳವಳು ಶರಣ ಕೇಳಿದರೆ ನಿಮ್ಮ ಮುರಿದು ಕೊಲ್ಲುವರು" ಎಂದು ಭಾಸ್ಕರನಿಗೆ ಸ್ತ್ರೀಧರ್ಮದ ಹಿತನುಡಿಗಳಿಂದ ಚುಚ್ಚಿದಳು. ಹೀಗೆಯೇ ಭಾಸ್ಕರ ಹಾಗೂ ಚಂದ್ರುಣಿ ಅವರೀರ್ವರಲ್ಲಿ ವಾದ-ವಿವಾದ ಬೆಳೆದು ಕೊನೆಗೆ ಭಾಸ್ಕರ ಚಂದ್ರುಣಿಯ ಸೆರಗನ್ನು ಹಿಡಿದೆಳೆದ, ಘಾಸಿಯಾದ ಚಂದ್ರುಣಿ ಶರಣ ಭವಿ ಮುಟ್ಟಿದನೆಂದು ಮುತ್ತಿನ ದಂಡೆ ಹರಿದು ಹಾಕಿದಳು. ಶೀಲ ರಕ್ಷಣೆಗಾಗಿ ಮಾರಿಯಂತೆ ಪ್ರತಿಭಟಿಸಿದಳು. ಮನೆಗೆ ಬಂದು ಅರಮನೆಯಲ್ಲಿ ನಡೆದ ಘಟನೆಯನ್ನು ತಿಳಿಸಿದಳು. ಬಿದರೂರು ಪುರದಲ್ಲಿರುವ ಸಂಗಯ್ಯನಿಗೆ ಪತ್ರ ಬರೆದಳು. ಓಂಕಾರ ಪುರದಲ್ಲಿ ನಡೆದ ಘಟನೆಯ ಸುದ್ದಿಯನ್ನು ಕೇಳಿ ವೀರಸಂಗಯ್ಯ ಕ್ರೋಧತಪ್ತನಾದ. ಕಡಿದು ಭಾಸ್ಕರನ ಶಿರ ಚಂಡಾಡದತನಕ ಬಿಡನೆಂದು ಮೀಸೆ ಹುರಿಗೊಳಿಸಿದ. ಲಗು-ಬಗೆಯಿಂದ ಓಂಕಾರಪುರಕ್ಕೆ ದಿಬ್ಬಣವನ್ನು ಹೊರಡಿಸಿದ ಬಿದರೂರುಪುರದ ಬೀಗರನ್ನು ಭೀಮಯ್ಯ ಆದರದಿಂದ ಸ್ವಾಗತಿಸಿದ. ಗುರುಹಿರಿಯರ, ನೆಂಟರೆಲ್ಲರ ಎದುರಿನಲ್ಲಿ ಶುಭಮುಹೂರ್ತದಲ್ಲಿ ವೀರಸಂಗಯ್ಯ, ಚಂದ್ರುಣಿಯರ ವಿವಾಹ ನಡೆದು ಹೋಯಿತು. ಆದ್ದೂರಿಯ ಮೆರವಣಿಗೆಯಲ್ಲಿ ಮಗಳನ್ನು ಭೀಮಯ್ಯ ಬೀಳ್ಕೊಟ್ಟ.

ಇನ್ನೂ ಚಂದ್ರುಣಿಯ ಕನಸನ್ನೇ ಕಾಣುತ್ತಿದ್ದ ಭಾಸ್ಕರ ಮೆರವಣಿಗೆಯ ಸಪ್ಪಳ ಕೇಳಿ, ಚಂದ್ರುಣಿಯ ಮದುವೆ ನಡೆದು ಹೋಯಿತೆಂದು ತಿಳಿದು ತನ್ನ ಸೈನಿಕರನ್ನು ಮೆರವಣಿಗೆಯ ಮೇಲೆ ಮುತ್ತಿಗೆ ಹಾಕಲು ಕಳಿಸಿದ. ವೀರಾಧಿ ವೀರಸಂಗಯ್ಯ, "ಹೆಣ್ಣು ಕೇಳುವನ ಹೆಸರೇನು? ಕಣ್ಣು ತಲೆ ವಾಸುಂಟು ನಿಮ್ಮ ಅರಸನಿಗೆ ಮಣ್ಣು ಕಾಣದ ಸಾಯಬೇಡ" ಎಂದು ಘರ್ಜಿಸಿದ. ಎರಡೂ ಬಣಗಳಲ್ಲಿ ಉಗ್ರ ಕದನ ಪ್ರಾರಂಭವಾಯಿತು. ಅರಸನ ಹಿರಿಯ ಪ್ರಧಾನಿ ರುಂಡ ಹಾರಿ ಹೋಯಿತು. ಅನೇಕ ಸೈನಿಕರು ಜೀವ ಕಳೆದುಕೊಂಡರು. ವೀರಸಂಗಯ್ಯನು ಇಲ್ಲಿ ರಣ ಚಂಡಿಯಂತೆ ಕಾದಾಡಿ

ಜಯಶಾಲಿಯಾದನು. ಓಂಕಾರಪುರದಲ್ಲಿ ನಡೆದ ಕದನದಲ್ಲಿ ಅಪಜಯ ಹೊಂದಿದ ಭಾಸ್ಕರ ಸಿಟ್ಟಿನಿಂದ ಕುದಿಯುತ್ತಿದ್ದ ಮತ್ತೊಂದು ಕದನಕ್ಕಾಗಿ ಯೋಚಿಸಿದ. ಈ ಎರಡನೆಯ ಕದನ ಬೀದರಿನಲ್ಲಿ ನಡೆಯಿತು. ಬೀದರ್ ಕೋಟೆಗೆ ಭಾಸ್ಕರನು ಮುತ್ತಿಗೆ ಹಾಕಿದನು. ಹೊರಭಾಗದಲ್ಲಿರುವ ಲಾಡಗೇರಿಯನ್ನು ಸುಲಿದು ಬೆಂಕಿ ಹಚ್ಚಿದ ಜನರೆಲ್ಲ ಗೋಳಿಟ್ಟರು. ಕದನದ ಸುದ್ದಿಯನ್ನು ಕೇಳಿದ ವೀರಸಂಗಯ್ಯನು ಸಿಂಹದಂತೆ ಕೆರಳಿದ. ಕತ್ತಿಹಿಡಿದು ಕುದುರೆಯನ್ನೇರಿದ. ಆದರೆ ಭಾಸ್ಕರನು ರಣರಂಗದಿಂದ ತಪ್ಪಿಸಿಕೊಂಡು ಪಲಾಯನ ಮಾಡಿದನು. ರಣರಂಗದಲ್ಲಿ ಲಿಂಗ ಕಟ್ಟಿದ ಹೆಣವನ್ನು ಕಂಡು ವೀರಸಂಗಯ್ಯ ಒಬ್ಬ ಶರಣನ ಸಾವು ಮಹಾಪಾತಕವೆಂದು ಹಳಹಳಿಸಿದನು. ಮರೆಯಲ್ಲಿ ನಿಂತು ಭಾಸ್ಕರನು ವೀರಸಂಗಯ್ಯನನ್ನೇ ವೀಕ್ಷಿಸುತ್ತಿದ್ದನು. ವೀರಸಂಗಯ್ಯನು ಒಬ್ಬ ಶರಣ ಜಂಗಮ ಮಡಿದುದ್ದನ್ನು ನೋಡಿ ಹಳಹಳಿಸಿದ್ದನ್ನು ಕಂಡಿದ್ದ ಭಾಸ್ಕರನು ವೀರಸಂಗಯ್ಯನನ್ನು ಯುದ್ಧದಲ್ಲಿ ಸೋಲಿಸುವುದು ಅಸಾಧ್ಯವೆಂದು ತಿಳಿದು ನಾನೇ ಒಬ್ಬ ಜಂಗಮರೂಪಿಯಾಗಿ ಹೋಗಿ ವೀರಸಂಗಯ್ಯನನ್ನು ಮುಗಿಸಬೇಕೆಂದು ಯೋಚಿಸಿದನು. ಅಂತೆಯೇ ಭಾಸ್ಕರನು ಒಬ್ಬ ಜಂಗಮನ ವೇಷ ಧರಿಸಿಕೊಂಡು ವೀರಸಂಗಯ್ಯನ ಮನೆಗೆ ಬಂದನು. ಮನೆಗೆ ಬಂದ ಜಂಗಮನಿಗೆ ಕಾಲನ್ನು ಮುಗಿಯಲು ವೀರಸಂಗಯ್ಯನು ಪಾದಕ್ಕೆ ಎರಗಿದ. ವೈರಿ ಸಿಕ್ಕಿದನು ಕೈಯೊಳಗೆ ಎಂದು ಭಾಸ್ಕರ ಕತ್ತಿಯಿಂದ ಅವನನ್ನು ತಿವಿಯಲು ಯತ್ನಿಸಿದ. "ನರ ಕೊಲ್ಲಲ್ ಹರ ಕಾಯ್ವನು" ಎನ್ನುವಂತೆ ವೀರಸಂಗಯ್ಯನ ಮುಗ್ಧತೆಗೆ ಶಿವನೇ ಪ್ರತ್ಯಕ್ಷನಾಗಿ ಭಾಸ್ಕರನ ಕೈಯನ್ನು ಹಿಡಿದು ವೀರಸಂಗಯ್ಯನನ್ನು ರಕ್ಷಿಸಿದನು. ಮುಂದೆ ಭಾಸ್ಕರ ರಾಯನು ವೀರಸಂಗಯ್ಯನ ಭಕ್ತನಾದನು. ಭಾಸ್ಕರನು ಚಂದ್ರುಣಿಯನ್ನು ಸಹೋದರಿಯಂತೆ ಸ್ವೀಕರಿಸಿದನು (ಕುಲಕರ್ಣಿ, ೧೯೭೮: ೨೦).

ನಮ್ಮ ಎಲ್ಲ ಐತಿಹಾಸಿಕ ಸಮಸ್ಯೆಗಳಿಗೆ ಸಮಂಜಸವಾದ ಅರ್ಥ ವಿವರಣೆ ದೊರೆಯುವುದು ಸಾಧ್ಯವೇ ಇಲ್ಲ. ಈ ಕಾರಣದಿಂದ ಇಡೀ ಕಥಾವಸ್ತುವನ್ನೇ ಕಾಲ್ಪನಿಕವೆಂದು, ನಂಬಲನರ್ಹವೆಂದು ತಳ್ಳಿ ಬಿಡುವುದು ಪ್ರಾಜ್ಞರ ಲಕ್ಷಣವಲ್ಲ. ಐತಿಹ್ಯಗಳನ್ನು ಘಟನೆಗಳ, ವ್ಯಕ್ತಿಗಳ ಆಧಾರದ ಮೇರೆಗೆ ಸಮಕಾಲೀನ ಐತಿಹಾಸಿಕ ಸಂಗತಿಗಳನ್ನು ಜೋಡಿಸಲು ಸಾಧ್ಯವಿದೆ.

ಲಿಖಿತ ಆಕರಗಳು

ವೀರಸಂಗಯ್ಯನು ಹನ್ನೆರಡನೆಯ ಶತಮಾನದಲ್ಲಿ ಬದುಕಿ ಬಾಳಿದನು ಎನ್ನುವುದಕ್ಕೆ ನಮಗೆ ಅನೇಕ ಲಿಖಿತ ಆಕರಗಳು ಲಭ್ಯವಾಗಿವೆ. ಇವನು ಬೀದರ್‌ನಲ್ಲಿಯೇ ವಾಸವಾಗಿದ್ದನು ಎನ್ನು ವುದಕ್ಕೆ ಲಿಖಿತ ಆಕರಗಳು ಸಾಕ್ಷಿಯಾಗಿ ನಿಲ್ಲುತ್ತವೆ.

ಅದೃಶ್ಯ ಕವಿ 'ಪ್ರೌಢದೇವರಾಯನ ಕಾವ್ಯ'ದ (೧೯೫೭) ೧೩ನೇ ಸಂಧಿಯಲ್ಲಿ ವೀರಸಂಗಯ್ಯನ ಕುರಿತಂತೆ ಈ ರೀತಿ ಉಲ್ಲೇಖಿಸಲಾಗಿದೆ.

ಆ ಪುರದಿ (ಬೀದರ ಕೋಟೆ) ಶಿವಭಕ್ತ ಶಿವ
ಸೇಮಂತ ಮಣಿಯನಿಪ | ಗೋಪವಾಹನಪಾದ
ಭಜಕ ಕಾಮಣ್ಣಯ್ಯನ | ರೂಪಯೌವನ ಸಗುಣ
ರಾಜಿ-ರಾಜಿಸುವ ಸೋಮಲದೇವಿ
ಯೆಂದೆಂಬುವ ಒಪಳೂಡಗೂಡಿರುತ
ವ್ಯಾವಹಾರಮುಖದಿಂದ | ಸೋಪು-ಸಕಲಾತಿ
ನವರತ್ನ ವಾಜಿಯ ಫಲವ | ಕೇಪುಗಳ
ತಂದು ಬೆಲೆಗಿತ್ತು ಬಿಲುಹರದನಾಗಿರಲು
ಒಂದು ದಿವಸದಲಿ || ಎಂದು ಉಲ್ಲೇಖಿಸಿದ್ದಾರೆ (ಕುಲಕರ್ಣಿ, ೧೯೭೮: ೧೮)

ಈ ರೀತಿ ವೀರಸಂಗಯ್ಯನ ಕುರಿತಂತೆ ಲಿಖಿತವಾದ ಆಕರಗಳು ಕೂಡ ಲಭ್ಯವಾಗಿದೆ. ಈ ಸಂಧಿಯು ಕೂಡ ಬೀದರ್ ಕೋಟೆಯಲ್ಲಿ ಶಿವಭಕ್ತನಿದ್ದು, ಅವನು ಮುತ್ತು ರತ್ನ ಸಕಲಾತಿಗಳನ್ನು ಮಾರುವ ವ್ಯಾಪಾರಿಯಾಗಿದ್ದನು. ಈ ಮುತ್ತು ರತ್ನ ಮಾರಾಟ ಮಾಡುತ್ತಿದ್ದ ಇವನು ಹಲವಾರು ವರ್ಷಗಳವರೆಗೆ ವ್ಯಾಪಾರ ಮಾಡುತ್ತ ವಿಭೂತಿ ಪುರುಷ ಶಿವಭಕ್ತನಾಗಿಯೇ ಇದ್ದನು ಎಂಬ ಮುಂತಾದ ಅಂಶಗಳನ್ನು ಒಳಗೊಂಡಿರುವ ಇದು ವೀರಸಂಗಯ್ಯನನ್ನು ವರ್ಣಿಸುತ್ತದೆ.

ಈ ಐತಿಹ್ಯವನ್ನು ವಕ್ತೃರಿಂದ ಮತ್ತು ಲಿಖಿತ ಆಕರಗಳಿಂದ ಸಂಗ್ರಹಿಸಲಾಗಿದ್ದು, ಈ ಐತಿಹ್ಯಗಳು ನಮಗೆ ಹಲವಾರು ರೀತಿಯ ಪ್ರಶ್ನೆಗಳಿಗೆ ಎಡೆ ಮಾಡಿಕೊಡುತ್ತವೆ. ಐತಿಹ್ಯದಲ್ಲಿ ಬರುವ ಓಂಕಾರಪುರ ಯಾವುದು? ಕೋಹಿರ್ ಎಂಬುದು ಯಾವುದು? ಓಂಕಾರಪುರ ಮತ್ತು ಕೋಹಿರಿಗೆ ಏನು ಸಂಬಂಧ? ಓಂಕಾರಪುರಕ್ಕೆ ಓಂಕಾರಪುರವೆಂದು ಕರೆಯಲು ಕಾರಣವೇನು? ಐತಿಹ್ಯದಲ್ಲಿ ಬರುವ ಮಾಧವರಾಯ ಮತ್ತು ಅರಸನಾದ ಭಾಸ್ಕರ ಯಾರು? ಹೀಗೆ ಹಲವಾರು ಪ್ರಶ್ನೆಗಳು ನಮ್ಮ ಸುತ್ತ ಸುಳಿಯುತ್ತವೆ.

ಓಂಕಾರಪುರ, ಕೋವುರು ಹಾಗೂ ಇಂದಿನ ಕೋಹಿರ್ ಎನ್ನುವುದಕ್ಕೆ ನಮಗೆ ಶಾಸನಗಳ ಆಧಾರವಿದೆ. ನಂದಿ-ಕಂದಿಯಲ್ಲಿ(ಆಂಧ್ರ) ದೊರೆತ ಕಲ್ಯಾಣಿ ಚಾಲುಕ್ಯರ ಕಾಲದ ಕನ್ನಡ ಶಾಸನದಲ್ಲಿ ಕೋವುರು ಗ್ರಾಮದ ಉಲ್ಲೇಖವಿದೆ. ಆ ಗ್ರಾಮವನ್ನು ನಂದಿ-ಕಂದಿಯ ನಾರಣೇಶ್ವರ ದೇವರಿಗೆ ಕಾಣಿಕೆಯೆಂದು ನೀಡಲಾಗಿದೆ. ಪಂಪ ಪೆರ್ಮಾಡಿ ಈತನು ಈ ಭಾಗದ ಚಾಲುಕ್ಯರ ಮಹಾಮಂಡಳೇಶ್ವರ ನೆಂಬುದು ಈ ಶಾಸನದಿಂದ ತಿಳಿದುಬರುತ್ತದೆ. ಕೋಹಿರದಲ್ಲಿಯೂ ಒಂದು ಕನ್ನಡ ಶಾಸನ ದೊರೆತಿದ್ದು, ಈ ಶಾಸನ ವೀರಸಂಗಯ್ಯನ ಕಟ್ಟೆಯ ಮೇಲೆ ದೊರೆತಿದೆ. ಇದು ಮೊದನಿಂದಲೇ ಇದೆಯೇ ಅಥವಾ ಇತ್ತೀಚೆಗೆ ಯಾರಾದರೂ ಹಾಗೆ ಕೂಡಿಸಿರಬಹುದೋ ಎಂದು ತಿಳಿಯದು. ಆದರೆ ಅಲ್ಲಿಯ ಜನರು

ಈ ಶಾಸನ ಇಲ್ಲಿಯೇ ದೊರೆತಿದೆ ಎಂದು ಹೇಳುತ್ತಾರೆ. ಈ ಶಾಸನದ ಕಾಲ ೯೯೧ ಶಕ ವರ್ಷ ಅಂದರೆ ಕ್ರಿ.ಶ.೧೦೭೯ರ ವರ್ಷ ಎರಡನೆಯ ಸೋಮೇಶ್ವರನ ಕಾಲ. ಈ ಶಾಸನದಲ್ಲಿಯೂ ಮಹಾಮಂಡಳೇಶ್ವರನ ಹೆಸರು ಪಂಪ ಪೆರ್ಮಾಡಿ ಎಂದು ಉಲ್ಲೇಖಿಸಲ್ಪಟ್ಟಿದೆ. ಈ ಎರಡು ಶಾಸನಗಳ ಆಧಾರದ ಮೇಲಿಂದ ಅಂದಿನ ಕೋವೂರು ಇಂದಿನ ಕೋಹಿರ್ ಎಂಬುದರಲ್ಲಿ ಸಂಶಯವಿಲ್ಲ. ಬಹಮನಿ ಸುಲ್ತಾನರ ಕಾಲದಲ್ಲಿ ಕೋಹಿರ್ ಎಂದೆ ಉಲ್ಲೇಖಿತವಾಗಿದೆ (ಎಪಿಗ್ರಾಫಿ, ೧೯೬೦: ೬೧, ೯೪ಬಿ).

ಲಭ್ಯವಿರುವ ಶಾಸನ ಮತ್ತು ಲಿಖಿತ ಆಕರಗಳ ಮೇರೆಗೆ ಅಂದಿನ ಕೋವೂರು ಎಂಬ ಗ್ರಾಮವೇ ಇಂದಿನ ಕೋಹಿರ್ ಎಂಬ ಹೆಸರಿನಿಂದ ಪ್ರಚಲಿತದಲ್ಲಿದೆ. ಕೋಹಿರ್ ಇದು ಈಗ ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಬರುವ ಒಂದು ಗ್ರಾಮ. ಈ ಗ್ರಾಮವೇ ಕೋಹಿರ್ ಆಗಿದೆ ಎಂದು ತಿಳಿದುಬರುತ್ತದೆ.

ಹಾಗಾದರೇ ಇಂದಿನ ಕೋಹಿರ್ ಅಂದಿನ ಓಂಕಾರಪುರವೆನ್ನುವುದಕ್ಕೆ ನಮಗೆ ಏನು ಆಧಾರ? ಇಂದಿನ ಕೋಹಿರ ಅಂದಿನ ಓಂಕಾರಪುರವೇ ಎಂದು ಹೇಳಲು ನಮಗೆ ಶಾಸನಗಳ ಆಧಾರವಿಲ್ಲ. ಆದರೆ "ಸಮಕಾಲೀನ ಸಾಹಿತ್ಯಿಕ ಆಧಾರವಿದೆ. 'ಓಂಕಾರೇಶ್ವರ ಚರಿತ್ರೆ' ನಂಬಲರ್ಹ ಸಮಕಾಲೀನ ಗ್ರಂಥವಾಗಿದೆ. ಓಂಕಾರಪುರ ಪಟ್ಟಣದ ಬಗ್ಗೆ ಮಹತ್ವಪೂರ್ಣವಾದ ಬೆಳಕನ್ನು ಇದು ನೀಡುತ್ತದೆ"(ಕುಲಕರ್ಣಿ, ೧೯೭೮: ೨೧).

ಎಲ್.ಆರ್.ಕುಲಕರ್ಣಿಯವರು ಓಂಕಾರಪುರ ಮತ್ತು ಕೋಹಿರ್ ಎಂಬ ಎರಡು ಗ್ರಾಮಗಳು ಇತಿಹಾಸದಲ್ಲಿ ದಾಖಲಾದ ಗ್ರಾಮಗಳಾಗಿದ್ದು, ಆಗಿನ ಕೋಹಿರ್ ಮತ್ತು ಓಂಕಾರಪುರ ಎರಡೂ ಹೆಸರುಗಳಿಂದ ಕರೆಯುತ್ತಿದ್ದರೆಂದು ಉಲ್ಲೇಖಿಸಿದ್ದಾರೆ. ಇದರಿಂದ ಓಂಕಾರಪುರ, ಕೋವುರು (ಕೋಹಿರ್) ಒಂದೇ ಹೆಸರಿನ ಗ್ರಾಮಗಳೆಂದು ತಿಳಿದುಬರುತ್ತದೆ.

ಈ ಚರಿತ್ರೆಯ ಪ್ರಕಾರ ಓಂಕಾರಪುರ ಬಹಳ ಪ್ರಾಚೀನವಾದ ನಗರ. ಸುಮಾರು ೧೪೪೪ ವರ್ಷಗಳ ಹಿಂದೆ ಪ್ರಸಿದ್ಧಿಗೆ ಬಂತು. ಓಂಕಾರಪುರದ ವರ್ಣನೆ ಬ್ರಹ್ಮಾಂಡಪುರಾಣದಲ್ಲಿ(ಕಾಲಿಕಾ ಖಂಡ) ಶಿವ-ಬ್ರಹ್ಮರ ಸಂವಾದ ರೂಪದಲ್ಲಿ ಬಂದಿದೆ. ಅಲ್ಲದೆ ಉಪಪುರಾಣಗಳಾದ ವಾಯು-ಅಗ್ನಿ ಪುರಾಣಗಳಲ್ಲಿ ನಾರದ-ಅಗಸ್ತ್ಯರ ಸಂವಾದದ ಸಂದರ್ಭದಲ್ಲಿ ಹಾಗೂ ಕಾಲಜ್ಞಾನದಲ್ಲಿ ಓಂಕಾರಪುರ ಉಲ್ಲೇಖಿಸಲ್ಪಟ್ಟಿದೆ (ಕುಲಕರ್ಣಿ, ೧೯೭೮: ೨೨).

ಕುಲಕರ್ಣಿಯವರ ಉಲ್ಲೇಖದ ಪ್ರಕಾರ ಓಂಕಾರಪುರ ಎಂಬ ಗ್ರಾಮವು ಪುರಾಣಗಳಲ್ಲಿಯೂ ಪ್ರಸಿದ್ಧಿಗೆ ಬಂದ ಗ್ರಾಮವಾಗಿದೆ ಎಂದು ತಿಳಿದುಬರುತ್ತದೆ. ಅಲ್ಲದೆ ಎಲ್.ಆರ್.ಕುಲಕರ್ಣಿಯವರಿಗೆ ಓಂಕಾರಪುರದ ಬಗ್ಗೆ ಹಾಗೂ ಅದಕ್ಕೆ ಓಂಕಾರಪುರವೆಂದು ಕರೆಯಲು ಕಾರಣವೇನು ಎಂಬುದರ ಬಗ್ಗೆ ಕೇಳಿದರೆ ಅದಕ್ಕೆ ಅವರು ಈ ರೀತಿ ಹೇಳುತ್ತಾರೆ.

"ಕೋಹಿರದ ದೀಕ್ಷಿತ ಮನೆತನದ ಮೂಲಪುರುಷರಾದ ಸುದರ್ಶನ ದೀಕ್ಷಿತರು ಧರ್ಮಪುರ (ಆಂಧ್ರದಿಂದ) ಇಲ್ಲಿಗೆ ಬಂದರು. ಅವರು ಶಿವಭಕ್ತರು, ೫೦ ವರ್ಷಗಳವರೆಗೆ ತಪಸ್ಸು ಮಾಡಿದರು. ಆ ಕಾರಣ ಓಂಕಾರೇಶ್ವರ (ಶಿವ) ಪ್ರತ್ಯಕ್ಷನಾದನಂತೆ. ಶಿವನ ಸ್ಮಾರಕವಾಗಿ ಲಿಂಗ ಸ್ಥಾಪಿಸಿದರು. ನಗರಕ್ಕೆ ಓಂಕಾರಪುರವೆಂದು ನಾಮಕರಣ ಮಾಡಿದರು.

"ಓಂಕಾರೇಶ್ವರ ದೇವಾಲಯದ ಪ್ರತಿಷ್ಠಾಪನೆಯಿಂದ ಈ ನಗರ ಪ್ರಸಿದ್ಧಿಗೆ ಬಂದಿದೆ. ಮೊಗಲರ ಕಾಲದಿಂದಲೂ ನಿಜಾಮರ ಅರಸರ ಕಾಲದವರೆಗೆ ಕೋಹಿರಿನ ದೀಕ್ಷಿತ ಮನೆತನಕ್ಕೆ ಮಾಶಾಸನ ದೊರೆಯುತ್ತಿತ್ತು. ಓಂಕಾರೇಶ್ವರನ ಪೂಜೆ ಮತ್ತು ಇತರ ಖರ್ಚಿಗೆ ಸರಕಾರದಿಂದ ಧನ ಅವರಿಗೆ ದೊರೆಯುತ್ತಿತ್ತು. ೧೫೭೭ರ ಫಸಲಿಯ ಒಂದು ಫರಮಾನ ಈ ವಿಷಯ ತಿಳಿಸುತ್ತದೆ. ಮೊಗಲರ ಕಾಲದ ಉಂಗುರ ಮುದ್ರೆಗಳೂ ಇವರಿಗೆ ನೀಡಲ್ಪಟ್ಟಿವೆ. ಇವು ಇಂದಿಗೂ ಅವರಲ್ಲಿವೆ. ತಾಮ್ರಪಟಗಳು ಇನ್ನಿತರ ದಾಖಲೆಗಳು ಕೂಡ ಇವೆ. ಇವು ಇಂದಿನ ಕೋಹಿರ್ ಅಂದಿನ ಓಂಕಾರಪುರವೆಂದು ನಂಬಲು ಬಲವಾದ ಆಧಾರಗಳಾಗಿವೆ" (ಕುಲಕರ್ಣಿ, ೧೯೭೮: ೨೨).

ಇದಲ್ಲದೆ ಇಂದಿಗೂ ವೀರಸಂಗಯ್ಯನ ಹೆಸರು ಕೋಹಿರದಲ್ಲಿ ಮನೆಮಾತು. ಶರಣನ ನೆನಪಿಗಾಗಿ ವೀರ ಸಂಗಯ್ಯನ ಕಟ್ಟೆ ಇಂದಿಗೂ ಜೀವಂತ ಸಾಕ್ಷಿಯಾಗಿದೆ. ಈ ಸ್ಥಳದಲ್ಲಿಯೇ ಕದನ ನಡೆಯಿತೆಂದು ಊರಿನ ಜನರು ಹೇಳುತ್ತಾರೆ. ಹಾಗಾದರೆ ಅರಸು ಮಾಧವರಾಯ ಹಾಗೂ ಆತನ ಮಗ ಭಾಸ್ಕರ ಯಾರು? ಐತಿಹ್ಯದಲ್ಲಿ ಮಾಧವರಾಯನು ಅರಸನೆಂದು ವರ್ಣಿಸಲಾಗಿದೆ. ಯಾವ ಶಾಸನದಲ್ಲಿಯೂ ಈತನ ಹೆಸರು ಉಲ್ಲೇಖಿತವಾಗಿಲ್ಲ.

ಪಂಪ ಪೆರ್ಮಾಡಿ ಆ ಕಾಲದ ಚಾಲುಕ್ಯರ ಮಹಾಮಂಡಳೇಶ್ವರನು ಎಂಬುದು ಶಾಸನಗಳಿಂದ ತಿಳಿದುಬರುತ್ತದೆ. 'ಓಂಕಾರೇಶ್ವರ ಚರಿತ್ರೆ' ನಮಗೆ ಕೋಹಿರ ನಗರದ ಅರಸುಮನೆತನದ ವಿವರಣೆಯನ್ನು ಸ್ಪಷ್ಟವಾಗಿ ನೀಡುತ್ತದೆ. ಸುದರ್ಶನ ದೀಕ್ಷಿತರಿಂದ ಪ್ರಸಿದ್ಧಿಗೆ ಬಂದ ಓಂಕಾರಪುರ ರಾಜಧಾನಿಯಾಗಿ ಕಂಗೊಳಿಸಿತು. ಕ್ಷತ್ರಿಯ ಬಾಲಕನನ್ನು ತನ್ನ ಬಳಿಯೇ ಇಟ್ಟುಕೊಂಡ ಅವನ ಗುಣ ಸ್ವಭಾವ ಕಂಡು ಸುದರ್ಶನರು ಅವನಿಗೆ ರಾಜನಾಗೆಂದು ಆರ್ಶೀವಾದಿಸಿದರು. ಅಂತೆಯೇ ಅವರ ಶಿಷ್ಯನಾದ ಕ್ಷತ್ರಿಯ ಬಾಲಕ ಪ್ರತಾಪನೆಂದು ಅಭಿದಾನ ಹೊಂದಿ ಓಂಕಾರಪುರದ ಅರಸನಾದನು. ಆಗಿನ ಕಾಲದಲ್ಲಿ ೮೦ ಗ್ರಾಮಗಳ ಅಧಿಕಾರ ಅವನಿಗೆ ದೊರೆಯಿತು. ನಂತರ ಏಳು ಜನ ಅರಸರು ಓಂಕಾರಪುರವನ್ನು ಆಳಿದರು (ಕುಲಕರ್ಣಿ, ೧೯೭೮ : ೨೨). ಎಲ್.ಆರ್.ಕುಲಕರ್ಣಿಯವರ ಹೇಳಿಕೆ ಪ್ರಕಾರ ಓಂಕಾರಪುರ ಆಳಿದ ಏಳು ಜನ ಅರಸರ ಹೆಸರುಗಳನ್ನು ಈ ಕೆಳಗಿನಂತೆ ಉಲ್ಲೇಖಿಸಲಾಗಿದೆ.

ಪ್ರತಾಪ ಮಮ ಶಿಷ್ಯ ಪ್ರಮುಖಲು|
ದ್ವಿತೀಯೋ ವಿದ್ಯಾಧರ
ತೃತೀಯೇ ಪ್ರ ಚಂದ್ರಜ| ಚತುರ್ಥ

ನರಹರಿಪ್ರೊಕ್ತಾ

ಪಂಚಮೇ ಸಿಂಹವಾನ
ಷಷ್ಠೇತು ಮಾಧವಾ ಪ್ರೊಕ್ತಾರಿ
ಸಪ್ತಮೇ ಭಾಸ್ಕರ ಪ್ರಭು

ಇಲ್ಲಿ ನಮಗೆ ಬೇಕಾದ ಹೆಸರು ಮಾಧವರಾಯ ಹಾಗೂ ಭಾಸ್ಕರ ವಂಶಾವಳಿಯ ಪ್ರಕಾರ ಇವರು ಆರನೆಯ ಹಾಗು ಏಳನೆಯ ಅರಸರು. ಇವರ ಕಾಲದ ಬಗ್ಗೆಯೂ ಚರಿತ್ರೆ ವಿವರ ನೀಡುತ್ತದೆ (ಗ್ಯಾಸೇಟಿಯರ್, ೧೯೭೭: ೫೬೪).

ಏಳನೆಯ ವಂಶದವರೆಗೆ ಒಬ್ಬೊಬ್ಬನ ಆಯುಷ್ಯದ ಅವಧಿಯನ್ನು ಸುಮಾರು ೫೦ ವರ್ಷ ಎಂದು ನಾವು ಭಾವಿಸಿದರೆ ಸುಮಾರು ೪೦೦ ವರ್ಷಗಳ ನಂತರ ಮಾಧವರಾಯ ಹಾಗೂ ಭಾಸ್ಕರ ಇವರು ಅಧಿಕಾರಕ್ಕೆ ಬಂದರೆಂದು ಹೇಳಬಹುದು. ಅಂದರೆ ಸುಮಾರು ೧೦೦೦ ವರ್ಷಗಳ ಹಿಂದೆಯೇ ಇವರು ಓಂಕಾರಪುರದ ದೊರೆಗಳಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಈ ಮೇಲಿನ ಎಲ್ಲ ಲಿಖಿತ ಆಧಾರಗಳನ್ನು ನೋಡಿದರೆ ವೀರಸಂಗಯ್ಯ ಒಬ್ಬ ಸಾಧಾರಣ ವ್ಯಕ್ತಿ ಅಲ್ಲವೆಂದು ತಿಳಿಯುತ್ತದೆ. ಇವನೊಬ್ಬ ಐತಿಹಾಸಿಕ ಪುರುಷನೆಂಬುವುದಕ್ಕೆ ಈ ಮೇಲಿನ ಲಿಖಿತ ಶಾಸನಾದಿಗಳೇ ಸಾಕು. ಒಂದು ವೇಳೆ ವೀರಸಂಗಯ್ಯ ಸಾಧಾರಣ ವ್ಯಕ್ತಿಯಾಗಿದ್ದರೆ, ಕೋಟೆಯ ಒಳಪ್ರದೇಶದಲ್ಲಿ ಅವನ ಸಮಾಧಿ ಇರಲು ಅಸಾಧ್ಯ, ಕೇವಲ ಸಾಧಾರಣ ವ್ಯಕ್ತಿಗಳಿಗೆ ಕೋಟೆಯ ಒಳಗೆ ಇರಲು ಅವಕಾಶವಿರಲಿಲ್ಲ. ವಕ್ಫ ಐತಿಹ್ಯದ ಪ್ರಕಾರ ಕೋಟೆಯ ಒಳಗೆ ಇರುವ ವೀರಸಂಗಯ್ಯನ ಸಮಾಧಿಯು ಕೋಟೆಯನ್ನು ಕಟ್ಟುವುದಕ್ಕಿಂತ ಪೂರ್ವದಲ್ಲಿ ಅಂದರೆ ಬಹಮನಿ ಅರಸರ ಆಳ್ವಿಕೆಗಿಂತ ಪೂರ್ವದಲ್ಲೆ ಈ ಸಮಾಧಿ ಒಳಕೋಟೆಯಲ್ಲಿತ್ತೆಂದು ತಿಳಿದುಬರುತ್ತದೆ.

ಈ ಮೇಲೆ ವೀರಸಂಗಯ್ಯನ ಕುರಿತು ಇರುವ ಶಾಸನಗಳ ವಿವರಕ್ಕೂ ಮತ್ತು ಈಗಿರುವ ವೀರಸಂಗಯ್ಯನ ಸಮಾಧಿಗೂ ಒಂದು ರೀತಿಯ ಸಂಬಂಧ ಇದೆ ಎಂದು ನಂಬಲು ಸಾಧ್ಯವಿದೆ.

"ವೀರಸಂಗಯ್ಯನು ಬೀದರ್ ನಗರದ ಅಧಿಪತಿ ಆಗಿದ್ದನೇ ಎಂಬ ಮಾತಿಗೂ ಪುಷ್ಟಿ ನೀಡುವ ಒಂದು ಆಧಾರ ನಮಗೆ ಲಭ್ಯವಿದೆ. ಶತಮಾನಗಳ ಹಿಂದೆ (ಮೂಡಿ ಬರಹ) ಬರೆದುದೆನ್ನುವುದು 'ಸುಲ್ತಾನ ಸುರುಳಿ' ಹಸ್ತಪ್ರತಿ ಪುಸ್ತಕದಲ್ಲಿ "ಬೀದರ ಮಧ್ಯ ವೀರಸಂಗಯ್ಯ ಮಣ್ಣನ ಹಿಂದು ರಾಜ ಕರೀತ ಹೊತಾ" ಎಂದು ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟಿದೆ. ಅವನ ಸಮಕಾಲೀನರು ಚಿಂಚೋಳಿಯ ಸಿಂದರೆಂದು ವಿವರಿಸಲಾಗಿದೆ. ಸಿಂಧೂರಂಜೋಲಖೇಣಿ (ಬೆಂದು) ಯಲ್ಲಿ ಪ್ರಭುತ್ವ ಸ್ಥಾಪಿಸಿದ್ದರೆಂಬುದು ಅವರ ಶಾಸನಗಳಿಂದ ತಿಳಿದುಬರುತ್ತದೆ (ಕುಲಕರ್ಣಿ, ೧೯೭೮: ೨೩). ಇವರು ಕಲ್ಯಾಣಿ ಚಾಲುಕ್ಯರ ಮಾಂಡಲಿಕರಾಗಿದ್ದರು. ವಿಷಾದದ ಸಂಗತಿಯೆಂದರೆ ಕಲ್ಯಾಣಿ ಚಾಲುಕ್ಯರ ಶಾಸನದಲ್ಲಿ ಮಾಂಡಲಿಕ ನಾಗಿದ್ದನೋ ಇಲ್ಲವೊ ಎಂಬುದು ಸ್ಪಷ್ಟವಾಗುವುದಿಲ್ಲ. ಶಾಂತಲಿಂಗಸ್ವಾಮಿ ಹೇಳುವ ಐತಿಹ್ಯದ ಪ್ರಕಾರ

ಚಾಲುಕ್ಯರ ಆಳ್ವಿಕೆಯ ಕಾಲದಲ್ಲಿ ಬೀದರ್ ಚಾಲುಕ್ಯ ಉಪರಾಜಧಾನಿಯಾಗಿದ್ದು, ಈ ರಾಜಧಾನಿಗೆ ವೀರಸಂಗಯ್ಯನನ್ನು ಮಾಂಡಲಿಕ (ಸಾಮಂತ) ನಾಗಿ ನೇಮಕ ಮಾಡಲಾಗಿತ್ತೆಂದು ಹೇಳಿದ್ದಾರೆ. ಹಾಗಾದರೆ ವೀರಸಂಗಯ್ಯನು ಹನ್ನೆರಡನೇ ಶತಮಾನಕ್ಕೆ ಸೇರಿದವನೋ, ಬಸವ ಪೂರ್ವದವನೋ ಅಥವಾ ಇತ್ತೀಚಿನವನೋ ಎಂದು ನಮಗೆ ಲಭ್ಯವಾಗಿರುವ ಆಧಾರಗಳ ಮೇಲೆ ಹೇಳುವುದಾದರೆ, ವೀರಸಂಗಯ್ಯ ಬಸವ ಪೂರ್ವದವನೆಂದೇ ತಿಳಿದುಬರುತ್ತದೆ.

"ಪುರಾಣಗಳಲ್ಲಿ ವೀರಸಂಗಯ್ಯನ ಹೆಸರು ಉಲ್ಲೇಖಿತವಾಗಿದೆ. ಇವುಗಳಲ್ಲಿ ಮುಖ್ಯವಾದವುಗಳೆಂದರೆ ೬೩ ಪುರಾತನ ಕಥೆಗಳು ಅಮರ ಗಣಾಧೀಶ್ವರ ಚರಿತ್ರೆ ಇತ್ಯಾದಿ. ಅವನು ಇತ್ತೀಚಿನವನಾಗಿದ್ದರೆ, ಪ್ರಾಚೀನ ಗ್ರಂಥಗಳಲ್ಲಿ ಅವನ ಹೆಸರು ಬರುವುದು ಅಸಹಜ. ಇನ್ನೊಂದು ಆಧಾರವೆಂದರೆ, ಅದೃಶ್ಯ ಕವಿ ರಚಿತ ಪ್ರೌಢರಾಯನ ಕಾವ್ಯ "ವಸುಧೇಶ ಕೇಳು ಬಿಜ್ಜಳ ನೃಪಕಾಲದ ನೋಡನು ಬಸವೇಶ ಪೇಳ ಕಥೆಯಂ ಪೇಳ್ವೆನಾರಿಪುದು" ಬಸವೇಶ್ವರನೇ ಬಿಜ್ಜಳನಿಗೆ ಬಿದರೂರಿನ ಸುಪ್ರಸಿದ್ಧ ಶರಣ ವೀರಸಂಗಯ್ಯನು ವಿವರಿಸಿದನೆಂದು ಕವಿ ಇಲ್ಲಿ ಉಲ್ಲೇಖಿಸಿದ್ದಾನೆ. ಅಂದ ಮೇಲೆ ಬಸವಗಿಂತ ವೀರಸಂಗಯ್ಯ ಅನೇಕ ವರ್ಷಗಳ ಪೂರ್ವದಲ್ಲಿ ಜೀವಿಸಿದನೆಂಬುದನ್ನು ಅದೃಶ್ಯ ಕವಿಯ ಕೃತಿ ಸಾಕ್ಷಿ ಎಂದಿದ್ದಾರೆ" (ಕುಲಕರ್ಣಿ,೧೯೭೮: ೨೩).

ವೀರಸಂಗಯ್ಯನ ಕಾಲವನ್ನು ನಿರ್ಧರಿಸುವಲ್ಲಿ ವೀರಸಂಗಯ್ಯನ ಸಮಾಧಿ ನಮಗೆ ನಂಬಲರ್ಹ ಆಧಾರ. ಬೀದರ್ ಕೊಟೆಯ ಒಳ ಪ್ರದೇಶದಲ್ಲಿ ವೀರಸಂಗಯ್ಯ ಹಾಗೂ ಆತನ ಪತ್ನಿ ಚಂದ್ರುಣಿಯ ಸಮಾಧಿಗಳು ಇಂದಿಗೂ ಜೀವಂತ ಸಾಕ್ಷಿಗಳಾಗಿವೆ. ೧೫ನೇ ಶತಮಾನದ ಪೂರ್ವದಲ್ಲಿ ಈ ಸಮಾಧಿಗಳು ನಿರ್ಮಾಣಗೊಂಡಿರಬಹುದಾಗಿದೆ. ಅದರ ನಂತರ ನಿರ್ಮಾಣವಾಗುವ ಸಂಭವ ಕಡಿಮೆ. ಕಾಕತೀಯ ಅಧೀನಕ್ಕೆ ಸೇರಿದ ಈ ಕಾಲದಲ್ಲಿ ಬೀದರ್ ಕೋಟೆಯಲ್ಲಿ ದೇವಾಲಯಗಳು ಹಾಗೂ ಇನ್ನಿತರ ಹಿಂದೂ ಸ್ಮಾರಕಗಳು ಕಂಗೊಳಿಸುತ್ತಿದ್ದವೆಂದು ಇತಿಹಾಸಕಾರರ ಅಭಿಪ್ರಾಯ. ಸುಮಾರು ಕ್ರಿ.ಶ.೧೩೦೦ ರಿಂದ ಮುಸಲ್ಮಾನ ಅರಸರ ಪ್ರಾಬಲ್ಯ ದಕ್ಷಿಣದಲ್ಲಿ ಪ್ರಾರಂಭವಾಯಿತು. ಕ್ರಿ.ಶ.೧೩೨೦ ವೇಳೆಗೆ ಬೀದರ್ ಕೋಟೆ ಮಹಮದ್ ಬಿನ್ ತೊಘಲಕನ ಆಳ್ವಿಕೆಗೆ ಒಳಪಟ್ಟಿತು. ಕ್ರಿ.ಶ.೧೪೦೦ರಿಂದ ಬೀದರ್‌ದಲ್ಲಿ ಬಹಮನಿ ಸುಲ್ತಾನನ ಚಟುವಟಿಕೆಗಳು ಪ್ರಾರಂಭವಾದವು. ಕ್ರಿ.ಶ.೧೪೨೪ರಲ್ಲಿ ಕೋಟೆಯ ಒಳಭಾಗದಲ್ಲಿ ಸೋಲಾ ಕಂಬ ಮಸೀದಿ ನಿರ್ಮಾಣವಾಯಿತು. ಬಹಮನಿ ಸುಲ್ತಾನರ ನಂತರ ಬರೀದಶಾಹಿ ಸುಲ್ತಾನರು, ಹೈದರಾಬಾದ್‌ದ ನಿಜಾಮ ಬೀದರ್ ಪ್ರದೇಶದಲ್ಲಿ ಪ್ರಭುತ್ವವನ್ನು ನಡೆಸಿದರು. ಇವರ ಆಳ್ವಿಕೆಯಲ್ಲಿ ಬೀದರ್ ಕೋಟೆಯ ಒಳಪ್ರದೇಶದಲ್ಲಿ ಹಿಂದೂ ದೇವಾಲಯ ಹಾಗೂ ಸ್ಮಾರಕಗಳ ರಚನೆ ಅಸಾಧ್ಯವೇ ಸರಿ. ಅಂದ ಮೇಲೆ ವೀರಸಂಗಯ್ಯನ ಸಮಾಧಿ ರಚನೆ ಕಾಕತೀಯರ ಕಾಲದಲ್ಲಿ ಅಥವಾ ಅದಕ್ಕೂ ಪೂರ್ವದಲ್ಲಿ ನಿರ್ಮಾಣವಾಗಿರಬೇಕೆಂಬುದು ನಿರ್ವಿವಾದ. ಮಹಮದೀಯರ ಕಾಲದಲ್ಲಿಯೂ ಈ ಸಮಾಧಿ ನಾಶವಾಗದೇ ಉಳಿದಿರುವುದು ಒಂದು ಪವಾಡವೇ ಸರಿ.

ಈ ಚರಿತ್ರೆಯ ಪ್ರಕಾರ 'ಕೋಹಿರದ' ದೀಕ್ಷಿತ ಮನೆತನದ ಎರಡನೆಯ ವೇಣುಭಟ್ಟ ವೀರಸಂಗಯ್ಯನ ಸಮಕಾಲೀನನೆಂದು ತಿಳಿದುಬರುತ್ತದೆ. ದೀಕ್ಷಿತ ಮನೆತನದ ವಂಶಾವಳಿಯ ಪ್ರಕಾರ ಎರಡನೇ ವೇಣುಭಟ್ಟ ಸಾವಿರ ವರ್ಷಗಳ ಹಿಂದೆ ಜೀವಿಸಿದ್ದ. ಅಲ್ಲದೇ ಮಾಧವರಾಯ ಭಾಸ್ಕರ ಇವರೀರ್ವರೂ ೧೦೦೦ ವರ್ಷಗಳ ಹಿಂದೆ ಕೋಹಿರ್ ನಗರದ ಪ್ರಭುಗಳಾಗಿದ್ದರೆಂಬುದನ್ನು ಈ ಮೊದಲೇ ವಿವರಿಸಲಾಗಿದೆ. ವೀರಸಂಗಯ್ಯ ಇವರೀರ್ವರ ಸಮಕಾಲೀನನಾದ್ದರಿಂದ ಆತನು ಸಾವಿರ ವರ್ಷಗಳ ಹಿಂದೆ ಜೀವಿಸಿದ್ದನೆಂದು ನಂಬಲು ಯಾವ ಸಂಶಯವು ಇಲ್ಲ. ಈ ಮೇಲೆ ವಿವರಿಸಿದ ಆಧಾರಗಳ ಮೇಲಿಂದ ಹೇಳುವುದಾದರೆ ವೀರಸಂಗಯ್ಯ ಕ್ರಿ.ಶ.೧೦೦೦ ಹಾಗೂ ಕ್ರಿ.ಶ.೧೧೦೦ರ ಅವಧಿಯಲ್ಲಿ ಜೀವಿಸಿದ್ದನೆಂದು ಸ್ಪಷ್ಟವಾಗುತ್ತದೆ" (ಕುಲಕರ್ಣಿ, ೧೯೭೮: ೨೪). ಸಾವಿರಾರು ವರ್ಷಗಳಿಂದ ಇತ್ತೀಚಿನವರೆಗೆ ವೀರಸಂಗಯ್ಯ ಸಾಹಿತ್ಯ ಹಾಗೂ ಪ್ರಾರಂಭಿಕ ಕೃತಿಗಳಲ್ಲಿ ಸ್ಥಿರ ಸ್ಥಾನ ಪಡೆದಿದ್ದಾನೆ. ಬೀದರ್ ಪ್ರದೇಶದಲ್ಲಿ ಈತನ ಹೆಸರು ಮನೆಮಾತು. ಮಕ್ಕಳಿಗೆ ವೀರಸಂಗಯ್ಯನ ಹೆಸರು ಇಡುವ ವಾಡಿಕೆ. ಒಬ್ಬ ಶಿವಶರಣ ಇಷ್ಟು ಸ್ಥಾನ ಗಳಿಸಬೇಕಾದರೆ ಅವನು ಒಬ್ಬ ಮಹಾ ಪ್ರಭಾವಶಾಲಿಯಾದ ವ್ಯಕ್ತಿತ್ವವನ್ನು ಹೊಂದಿರಬೇಕಾಗುತ್ತದೆ. ಸಾಮಾನ್ಯ ವ್ಯಕ್ತಿಯ ಬಗ್ಗೆ ಇಷ್ಟೊಂದು ಸಾಹಿತ್ಯ ಲಭ್ಯವಾಗುವುದು ವಿರಳ. ಆದ್ದರಿಂದ ವೀರಸಂಗಯ್ಯ ಒಬ್ಬ ಐತಿಹಾಸಿಕ ವ್ಯಕ್ತಿ ಎಂಬುದು ನಿರ್ವಿವಾದ. ಈತನ ಸುತ್ತ ಹೆಣೆದ ಘಟನೆಗಳು ಕೇವಲ ಪವಾಡ ಹಾಗೂ ವರ್ಣನೆಗಳನ್ನು ಬಿಟ್ಟರೆ ಕಾಲ್ಪನಿಕವೆನಿಸಲಾರವು.

ವೀರಸಂಗಯ್ಯ ಜೀವಿಸಿದ ಕರ್ಮಭೂಮಿ ಲಾಡಗೇರಿ. ಇಂದು ರುದ್ರಮುನಿಗಳ ಗದ್ದಿಗೆಯ ಅತ್ಯಂತ ಪವಿತ್ರ ಜಾಗೃತ ಸ್ಥಳ. ಈ ಪ್ರದೇಶವೆಲ್ಲ ಶಿವಪುರ ಎಂದು ಹೆಸರು ಗಳಿಸಿತ್ತು. ಶಿವಶರಣರ ಅನುಷ್ಠಾನದ ಕೇಂದ್ರವಾಗಿತ್ತು. ಇಲ್ಲಿ ವೀರಸಂಗಯ್ಯನು ಅನುಷ್ಠಾನ ಮಾಡಿದ ಸ್ಥಳ (ಗವಿ) ಇನ್ನೂ ಹಸಿರಾಗಿದೆ. ಗುರುಲಿಂಗಜಂಗಮ ದಾಸೋಹ ಗಣಾರಾಧನೆ ನಿತ್ಯದ ಮಾತಾಗಿತ್ತು. ಪ್ರಾಚೀನ ಬೀದರ್ ಪ್ರದೇಶವೇ ಇದಾಗಿತ್ತು. ಶಾಸನಗಳ ಹಾಗೂ ಸಮಕಾಲೀನ ಕೃತಿಗಳ ಆಧಾರವಿಲ್ಲವೆಂದು ಅಲ್ಲಗಳೆಯಲೂ ಬರುವಂತಿಲ್ಲ. ಸದ್ಭಕ್ತಿ ಸದಾಚಾರಗಳಿಂದ ವೀರಸಂಗಯ್ಯ ಇಡೀ ಪ್ರದೇಶವನ್ನು ಜಾಗೃತಗೊಳಿಸಿದ್ದ. ಅವನ ಸ್ಮಾರಕವಾದ ವೀರಸಂಗಯ್ಯನ ಗವಿ (ಲಾಡಗೇರಿ) ಇರುವ ಸ್ಥಳ ಬೇರೊಬ್ಬರ ಹೊಲದಲ್ಲಿತ್ತು. ಅದನ್ನು ಇಂದು ಆ ಹೊಲದ ಒಡೆಯ ತನ್ನಿಂದ ತಾನೇ ಸ್ಫೂರ್ತಿಗೊಂಡು ರುದ್ರಮುನಿಗಳ ಮಠಕ್ಕೆ ಒಪ್ಪಿಸಿದ್ದಾನೆ. ಇದರಿಂದ ವೀರಸಂಗಯ್ಯನ ಪ್ರಭಾವ ಇಂದಿಗೂ ನಮ್ಮ ಕಣ್ಣ ಮುಂದೆ ಸಾಕ್ಷಿಯಾಗಿದೆ. ಬೀದರಿನ ಒಳಕೋಟೆಯಲ್ಲಿ ಆತನ ಸಮಾಧಿ ಇಂದಿಗೂ ಉಳಿದುಕೊಂಡಿರುವುದು ಆಶ್ಚರ್ಯಕರ ಸಂಗತಿಯಾಗಿದೆ ಹಾಗೂ ಅವನ ಪ್ರಭಾವಿ ಪೂರ್ವವ್ಯಕ್ತಿತ್ವಕ್ಕೆ ಕೈಗನ್ನಡಿಯಾಗಿದೆ.

ಈ ಲಿಖಿತವಾದ ಆಕರಗಳಲ್ಲದೆ ವೀರಸಂಗಯ್ಯನ ಕುರಿತು ವಚನವೊಂದು ಲಭ್ಯವಾಗಿದೆ. ಅದನ್ನು ಶಾಂತಲಿಂಗಸ್ವಾಮಿ ವೀರಸಂಗಯ್ಯನವರ ಭಜನೆ ಎಂಬ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಅದರಲ್ಲಿ ವೀರಸಂಗಯ್ಯನ ಪ್ರಭಾವೀ ವ್ಯಕ್ತಿತ್ವ ನಿದರ್ಶನದ ವರ್ಣನೆ ಹೀಗಿದೆ.

"ಶ್ರೀ ಗುರು ವೀರಸಂಗಯ್ಯನ ಬಣ್ಣಿ-ಬಣ್ಣಿಸುವುದೆಂತು ಸಾಧ್ಯವೋ
ಸೂಳೆಯ ಮನೆಯಲ್ಲುಂಡು ಅವಳ ದೀಕ್ಷೆಯಗೈದು
"ಶಿವಶರಣೆಯನ್ನಾಗಿ ಮಾಡಿದ; ಕಾಮುಗನ ಮನೆಯಲ್ಲುಂಡು
ಅವನ ಜಂಗಮ ದಾಸೋಹಿಯಾಗಿ ಮಾಡಿದ"
ವೈರಿ ಭಾಸ್ಕರಂಗೆ ಲಿಂಗದೀಕ್ಷೆಯ ತೆತ್ತು ಮೈದುನನ್ನಾಗಿ
ಮಾಡಿಕೊಂಡ, ಮೃತ ಪಟ್ಟವಂಗ ಮರಳಿ ಪ್ರಾಣವ ತೆತ್ತು
ಪುರುಷದ ಪುತ್ಥಳಿ ಪತಿತ ಪಾವನ ಮೂರ್ತಿ
ಗುರು ವೀರಸಂಗಯ್ಯನ ಶ್ರೀಪಾದಕ್ಕೆ ನಮೊ, ನಮೋ (ಶಾಂತಲಿಂಗ, ೯೮೫: ೩೮).

ಎಂದು ಬದುಕಿದನು. ಬಸವಣ್ಣ ಬೊಮಗೊಂಡೇಶ್ವರನು ವೀರಸಂಗಯ್ಯನ ಬಗ್ಗೆ ಎಷ್ಟೊಂದು ಪೂಜ್ಯ ಭಾವನೆ ಹೊಂದಿದನೆಂಬುದಕ್ಕೆ ಈ ಮೇಲಿನ ವಚನವೇ ಆಧಾರವಾಗಿ, ಸಾಕ್ಷಿಯಾಗಿ ನಿಲ್ಲುತ್ತದೆ. ವೀರಸಂಗಯ್ಯನ ದೀನ ದಲಿತರ ಉದ್ಧಾರದ ಕಾರ್ಯ ಪ್ರಶಂಸನೀಯ. ಇಲ್ಲಿ ವೀರಸಂಗಯ್ಯನಷ್ಟೇ ಆತನ ಪತ್ನಿ ಚಂದ್ರುಣಿಯೂ ಪ್ರಾಮುಖ್ಯತೆ ಪಡೆದಿದ್ದಾಳೆ. ಒಂದೆಡೆ ವೀರಸಂಗಯ್ಯನು ವೀರಪ್ರತಾಪನಾಗಿ, ಕ್ಷಮಾಶೀಲನಾಗಿ ಕಂಗೊಳಿಸಿದರೆ, ಇನ್ನೊಂದೆಡೆ ಶರಣೆ ಚಂದ್ರುಣಿ ಸ್ತ್ರೀ ಧರ್ಮದ ಮೂಲ ಸಂಕೇತವಾಗಿ ಮೆರೆದಿದ್ದಾಳೆ. ಶೀಲಭಂಗ ಮಾಡಲೆತ್ನಿಸಿದ ಕಾಮುಕನನ್ನು ಔದಾರ್ಯದಿಂದ ಕ್ಷಮಿಸಿ ಸಹೋದರನೆಂದು ಮನ್ನಿಸಿ ಹೆಣ್ಣು ಎಷ್ಟು ಕರುಣಾಮಯಿ ಎಂಬುದನ್ನು ತೋರಿಸಿದ್ದಾಳೆ. ಧಾರ್ಮಿಕವಾಗಿ ಸಾಮಾಜಿಕವಾಗಿ ವೀರಸಂಗಯ್ಯ ಮುಗ್ಧ ಭಕ್ತಿಯ ಶರಣನಾಗಿ ಬಾಳಿದರೂ, ಧರ್ಮ ದೌರ್ಜನ್ಯ ಅನ್ಯಾಯದ ವಿರುದ್ಧ ಖಡ್ಗ ಹಿಡಿದು ಮೆರೆದಿದ್ದಾನೆ. ಇವರಿಬ್ಬರ ಬದುಕು ತೇಜೋಮಯ ಹಾಗೂ ಚೇತೋಹಾರಿಯಾದ ಅನುಪಮ ನಿದರ್ಶನವಾಗಿದೆ.

ಅಧ್ಯಾಯ ೭

ಅಹಮದ್-ಶಹ-ವಲೀ ಗೋರಿಯ ಬಗೆಗಿನ ಐತಿಹ್ಯಗಳು

ಏಳನೆಯ ಅಧ್ಯಾಯದಲ್ಲಿ ಎರಡು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಅಷ್ಟೂರಿನಲ್ಲಿರುವ ಬಹಮನಿಯರ ಎಂಟು ಸಮಾಧಿಗಳ ಬಗ್ಗೆ ಉಲ್ಲೇಖಿಸಲಾಗಿದೆ. ಎರಡನೆಯ ಭಾಗದಲ್ಲಿ ಅಹಮದ್-ಶಹ-ವಲೀ ಗೋರಿಯ ಬಗೆಗಿರುವ ಐತಿಹ್ಯಗಳ ಬಗ್ಗೆ ಚರ್ಚಿಸಲಾಗಿದೆ.

ಬಹಮನಿ ಅರಸರ ಕಾಲದಲ್ಲಿ ನಿರ್ಮಿಸಲಾಗಿರುವ ಸ್ಮಾರಕಗಳನ್ನು ಬೀದರ್ ಪಟ್ಟಣದಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿರುವ ಅಷ್ಟೂರಿನಲ್ಲಿ ಕಾಣುತ್ತೇವೆ. ಈ ಅಷ್ಟೂರಿನಲ್ಲಿ ಬಹಮನಿ ಅರಸರ ಸಮಾಧಿಗಳನ್ನು ನಿರ್ಮಾಣ ಮಾಡಲಾಗಿದೆ. ಈ ಗ್ರಾಮಕ್ಕೆ ಬೀದರ್ ಪಟ್ಟಣದ ದುಲಹನ್ ದರವಾಜಾ ಮುಖಾಂತರ ನೇರ ರಸ್ತೆ ಸೌಲಭ್ಯವಿದೆ. ಈ ಗ್ರಾಮದಲ್ಲಿ ಸುಮಾರು ೪೨ ಗೋರಿಗಳಿದ್ದು (ಸಮಾಧಿ) ಅವುಗಳಲ್ಲಿ ಸುಮಾರು ೮ ಸಮಾಧಿಗಳು ಬಹಮನಿ ಅರಸರ ಸಮಾಧಿಗಳಾಗಿವೆ. ಸ್ಥಳೀಯವಾಗಿ ಇಲ್ಲಿರುವ ಅಹಮದ್-ಶಹ-ವಲೀಯ ಗೋರಿಗೆ ಹಿಂದುಗಳು ಈ ಸಮಾಧಿಯನ್ನು ಅಲ್ಲಮ ಪ್ರಭುವಿನ ಸಮಾಧಿ ಎಂದು ಕರೆಯುತ್ತಾರೆ. ಅಲ್ಲಮ ಎಂದರೆ ೧೨ನೇ ಶತಮಾನದಲ್ಲಿ ಇದ್ದ ಶರಣ ಅಲ್ಲಮನೆಂದು ವಕ್ತೃರು ಹೇಳುತ್ತಾರೆ. ಹಾಗಾದರೆ "ಅಲ್ಲಮ" ಎಂಬ ಶಬ್ದ ಎಲ್ಲಿಂದ ಬಂತು. ಅರಬ್ಬಿಯಲ್ಲಿ ಅಲಂ (ಜಗತ್ತು) ಎಂಬ ಶಬ್ದವಿದೆ. ಆಲಂನಿಂದ ಅಲ್ಲಮ ಪ್ರಭು ಆಗಿದೆ ಎಂದು ಮತ್ತು ಅಲ್ಲಮ ಪ್ರಭು ಒಬ್ಬ ಲಿಂಗಾಯತ ಪ್ರವರ್ತಕನೆಂತಲೂ ಕರೆಯುತ್ತಾರೆಂದು" ಉಲ್ಲೇಖಿಸಿದ್ದಾರೆ (ತರೀಕೆರೆ, ೧೯೯೮ : ೬). ಈ ಸಮಾಧಿಯ ಮೇಲ್ವಿಚಾರಣೆಗಾಗಿ ಹಿಂದೂ ಮತ್ತು ಮುಸ್ಲಿಂ ಮುಜಾವರುಗಳು (ಪೂಜಾರಿ) ಇದ್ದಾರೆ. ಬಹಮನಿ ಅರಸರ ಕಾಲಕ್ಕೆ ನಿರ್ಮಿಸಲಾದ ಗುಲ್ಬರ್ಗಾದ ಕಟ್ಟಡಗಳಿಗಿಂತಲೂ ಅತ್ಯಂತ ಎತ್ತರವಾದ ಮತ್ತು ದುಂಡಾಗಿರುವ ಗೋರಿಗಳು ಈ ಅಷ್ಟೂರಿನಲ್ಲಿವೆ. ಸಾಮಾನ್ಯವಾಗಿ ಇಲ್ಲಿರುವ ಗೋರಿಗಳು ಅಲಂಕಾರಯುತವಾಗಿವೆ. ಗೋರಿಗಳ ಒಳಭಾಗದ ಗೋಡೆ ಮತ್ತು ಹೊರಭಾಗಗಳ ಮೇಲೆ ಅಲಂಕೃತವಾದ ಚಿತ್ರ-ವಿಚಿತ್ರ ಬಳ್ಳಿಗಳು, ಸುಂದರ ಪಟ್ಟಿಕೆಗಳು, ಬಣ್ಣ ಬಣ್ಣದ ಸೂಡು ಚಿತ್ರಗಳು ಆಕರ್ಷಕವಾಗಿವೆ. ಅಲ್ಲಾವುದ್ದಿನ್ ಗೋರಿಯ ಕಮಾನುಗಳು ವಿಶಿಷ್ಟ ಶೈಲಿಯದ್ದಾಗಿವೆ. ಅಲ್ಲಿಯೇ ಇರುವ ಹುಮಾಯೂನ್‌ನ ಗೋರಿಯ ಕಮಾನುಗಳನ್ನು ಮುಸ್ಲಿಮ್ ಶೈಲಿಯಲ್ಲಿ ನಿರ್ಮಿಸಲಾಗಿದೆ. ಈ ಗೋರಿಯನ್ನು ಅಗಲವಾದ ಗಟ್ಟಿ ಕಲ್ಲುಗಳಿಂದ ಕಟ್ಟಲಾಗಿದ್ದು ಇದರ ಗುಮ್ಮಟವನ್ನು ಇಟ್ಟಿಗೆಗಳಿಂದ ನಿರ್ಮಿಸಲಾಗಿದೆ. ಈಗಾಗಲೇ ಹೇಳಿದಂತೆ ಎಂಟು ಸಮಾಧಿಗಳ ವಿವರಗಳನ್ನು ಇಲ್ಲಿ ನೀಡಲಾಗಿದೆ.

೧ನೇ ಅಹಮದ್ ಶಹ-ವಲೀ ಸಮಾಧಿ (೧೪೨೨-೧೪೩೫)

೧ನೇ ಅಮಹಮದ್-ಶಹ-ವಲೀ ಬಹಮನಿ ಸಾಮ್ರಾಜ್ಯದ ೯ನೇ ಅರಸನಾಗಿದ್ದನು. ತನ್ನ ಉದಾರವಾದ ಮನೋಭಾವನೆಗಳಿಂದಾಗಿ ಶರಣನೆಂಬ ಗೌರವಕ್ಕೆ ಪಾತ್ರನಾಗಿದ್ದನೆಂದು ಉಲ್ಲೇಖಿಸಲಾಗಿದೆ.

ಈತ ಖಾಜಾ ಬಂದೇನವಾಜರ ಕಟ್ಟಾ ಬೆಂಬಲಿಗನಾಗಿದ್ದನು. ಈ ಅಹಮದ್-ಶಹ-ವಲೀ ಗೋರಿಯು ಅಷ್ಟಭುಜಾಕೃತಿ ಆಕಾರದಲ್ಲಿ ಇದ್ದು ೨೧೪ ಅಡಿ ೮ ಇಂಚು ಎತ್ತರ, ೨೬ ಅಡಿ ೧೦ ಇಂಚು ಉದ್ದವಾಗಿದೆ. ಈ ಸಮಾಧಿಯ ಗೋಪುರದ ಸುತ್ತಳತೆ ೧೯೬ ಅಡಿ ಇದ್ದು ೫೪ ಅಡಿ ಎತ್ತರವಾಗಿದೆ. ನೆಲದಿಂದ ಛಾವಣಿಯವರೆಗೆ ೧೦೭ ಅಡಿ ೯ ಇಂಚು ಎತ್ತರದಲ್ಲಿ ಈ ಸಮಾಧಿಯನ್ನು ನಿರ್ಮಿಸಲಾಗಿದೆ (ಯಾಜ್ದಾನಿ, ೧೯೪೭: ೧೧೪). ಇದು ಒಂದನೆಯ ಅಹಮದ್-ಶಹ-ವಲೀ ಗೋರಿಯಾಗಿದ್ದು ಅಷ್ಟೂರಿನಲ್ಲಿ ಇರುವ ಗೋರಿಗಳಲ್ಲಿ ಈ ಗೋರಿಯು ಅತ್ಯಂತ ದೊಡ್ಡದಾದ ಮತ್ತು ಪ್ರಾಮುಖ್ಯತೆ ಪಡೆದ ಗೋರಿಯಾಗಿದೆ.

ಷೇಕ್‌ಅಲಿಯವರ ಹೇಳಿಕೆಯ ಪ್ರಕಾರ, ಅಹಮದ್-ಶಹ-ವಲೀ ಗೋರಿಯ ಹೊರಗೋಡೆಗಳಲ್ಲಿ ಮೊನಚಾದ ಕಮಾನು ಗೂಡುಗಳಿರುವ ಮೂರು ಅಂತಸ್ತುಗಳಿವೆ. ಅತ್ಯುತ್ತಮವಾದ ಅಲಂಕಾರ ಲಿಪಿ ಮತ್ತು ಪಟ್ಟಿಕೆ ಸಾಲುಗಳಿದ್ದು, ಪ್ಲಾಸ್ಟರಿನ ಬಿಲ್ಲೆಗಳಿವೆ ಹಾಗೂ ತೆನೆಗಳಿರುವ ಕೈಪಿಡಿ ಗೋಡೆಯಿದೆ. ೧೬ ಮುಖದ ಡ್ರಂ ಆಕಾರದ ಮೇಲೆ ಮೂಲೆಕಂಬಗಳಿವೆ. ಅದರ ಮೇಲೆ ಗುಮ್ಮಟವಿದ್ದು, ಅದರ ಮೇಲೆ ಮಡಿಕೆಯಾಕಾರದ ಗೋಪುರವಿದೆ. ಒಳಗೆ ಎಲೆ ಬಳ್ಳಿಗಳು, ರೇಖಾಗಣಿತೀಯ ವಿನ್ಯಾಸಗಳು, ಪರ್ಷಿಯನ್ ಸ್ಫೂರ್ತಿಯ ಲತಾ ಚಿತ್ರಗಳು ಗೋಡೆಗಳ ಮೇಲೆ ಮತ್ತು ಗುಮ್ಮಟದ ಮೇಲೆ ವರ್ಣರಂಜಿತವಾಗಿ ಚಿತ್ರಿತವಾಗಿವೆ. ಇವು ಇಂದಿಗೂ ಉಜ್ವಲವಾದ ಚಿನ್ನದ ಬಣ್ಣ, ಕೆಂಪು, ಹಸಿರು ಬಣ್ಣಗಳನ್ನು ಉಳಿಸಿಕೊಂಡಿವೆ (ಷೇಕ್‌ಅಲಿ, ೧೯೯೭: ೩೧೩). ಪರ್ಷಿಯನ್ ಭಾಷೆಯಲ್ಲಿರುವ ಒಂದು ಶಾಸನವು ಅಹಮದ್-ಶಹ- ವಲೀ ಗುಂಬಜ್‌ದಲ್ಲಿ ಇದೆ. ಇದು ಅಹ್ಮದ್-ಶಹ-ವಲೀ ಅವರ ಗುರು ಪರಂಪರೆಯ ವಂಶವೃಕ್ಷವನ್ನು ರೇಖಿಸಿದೆ. ೧೫ನೇ ಶತಮಾನದ ಲಿಪಿಯಲ್ಲಿ (ಸು.ಕ್ರಿ.ಶ.೧೪೩೭) ಎಂದು ಉಲ್ಲೇಖಿಸಿದ್ದಾರೆ(ಖಿದೂಸಿ, ೨೦೦೧: ೨೯). ಈ ಶಾಸನದ ಪ್ರಕಾರ ಅಷ್ಟೂರಿನಲ್ಲಿರುವ ಗೋರಿಗಳು ಬಹಮನಿ ಅರಸರ ಆಳ್ವಿಕೆಯ ಕಾಲದಲ್ಲಿ ನಿರ್ಮಿತವಾಗಿರುವ ಗೋರಿಗಳಾಗಿವೆ ಎಂದು ತಿಳಿಯುತ್ತದೆ.

ಅಹಮದ್-ಶಹ-ವಲೀ ಪತ್ನಿಯ ಸಮಾಧಿ

ಅಮಹದ್-ಶಹ-ವಲೀ ಪತ್ನಿಯ ಸಮಾಧಿಯು ಅಹಮದ್-ಶಹ-ವಲೀಯ ಸಮಾಧಿಗಿಂತ ಕೆಳಭಾಗದಲ್ಲಿದೆ. ಈ ಸಮಾಧಿಯನ್ನು ಅಹಮದ್-ಶಹ-ವಲೀಯ ಸಮಾಧಿಗಿಂತ ಚಿಕ್ಕ ಗಾತ್ರದಲ್ಲಿ ನಿರ್ಮಾಣ ಮಾಡಲಾಗಿದೆ. ಈ ಸಮಾಧಿಯ ಬುನಾದಿ ೪೮ ಅಡಿ ೩ ಇಂಚು ಚೌಕಾಕಾರದಲ್ಲಿದ್ದು ೭೭ ಅಡಿ ೧ ಇಂಚು ಎತ್ತರದಲ್ಲಿದೆ. ಸಮಾಧಿಯ ಗೋಡೆಗಳು ೨೮ ಅಡಿ ೮ ಇಂಚುಗಳಾಗಿವೆ. ಸಮಾಧಿಯ ಒಳಭಾಗ ಚೌಕಾಕಾರದಲ್ಲಿದ್ದು ಪ್ರತಿ ಗೋಡೆಯು ೩೧ ಅಡಿ ೭ ಇಂಚು ಉದ್ದವಾಗಿದೆ (ಯಾಜ್ದಾನಿ, ೧೯೪೭: ೧೨೮).

ಅಹಮದ್-ಶಹ-ವಲೀ ಸಮಾಧಿಯ ಎಡಭಾಗದಲ್ಲಿ ಅವನ ಪತ್ನಿಯ ಸಮಾಧಿ ಇದ್ದು, ಈ ಸಮಾಧಿಯ ಮುಖವು ಪೂರ್ವದಿಕ್ಕಿನೆಡೆಗೆ ಇದೆ. ಅಹಮದ್-ಶಹ-ವಲೀ ಸಮಾಧಿಯ ಎತ್ತರದ

ಕಟ್ಟೆಯಿಂದ ಸುಮಾರು ಐದು ಮೆಟ್ಟಿಲುಗಳನ್ನು ಇಳಿದು ಹೋದ ಬಳಿಕ ನಮಗೆ ಈ ಸಮಾಧಿಯು ನೋಡಲು ಸಿಗುತ್ತದೆ. ಈ ಸಮಾಧಿಯನ್ನು ಯಾವುದೇ ಎತ್ತರದ ಜಗುಲಿಯ ಮೇಲೆ ನಿರ್ಮಿಸಿಲ್ಲ. ನೆಲಕ್ಕೆ ಹೊಂದಿಕೊಂಡಂತೆ ತಳಭಾಗದಿಂದಲೇ ಈ ಸಮಾಧಿ ನಿರ್ಮಿತವಾಗಿದೆ. ಅಹಮದ್-ಶಹ-ವಲೀ ಸಮಾಧಿಯ ಸಾಲಿನಿಂದ ಸ್ವಲ್ಪ ಮುಂದಕ್ಕೆ ಈ ಸಮಾಧಿಯನ್ನು ನಿರ್ಮಿಸಲಾಗಿದೆ.

೧ನೇ ಅಹಮದ್-ಶಹ-ವಲೀಗೆ ಸುಮಾರು ನಾಲ್ಕುಜನ ಮಕ್ಕಳಿದ್ದು ಮೊದಲನೆಯವನು ಎರಡನೆಯ ಅಲ್ಲಾ-ಉದ್-ದಿನ್, ಎರಡನೆಯವನು ಮಹಮದ್ ಖಾನ್, ಮೂರನೆಯವನು ಮಾಹೂರ, ನಾಲ್ಕನೆಯವನು ಕಲಾಂ ಎಂಬ ಮಕ್ಕಳಿದ್ದರು. ಎರಡನೆ ಅಲ್ಲಾ- ಉದ್-ದಿನ್-ಶಾಹ : ಈತನು ಅಹಮದ್-ಶಹ-ವಲೀಯ ಹಿರಿಯ ಪುತ್ರನಾಗಿದ್ದು ಜಫರ್ ಖಾನ್ ಅಹಮದ್ ಎಂಬ ಬಿರುದನ್ನು ಹೊಂದಿದ್ದನು. ಇವನು ವಿದ್ಯಾವಂತನಾಗಿದ್ದನು. ಆದರೆ ಆಡಳಿತ ನಡೆಸುವಲ್ಲಿ ಕೆಲಮಟ್ಟಿಗೆ ವಿಫುಲವಾಗಿದ್ದನು. ಬೀದರ್ ನಗರದಲ್ಲಿ ಬಹುದೊಡ್ಡ ಆಸ್ಪತ್ರೆಯನ್ನು ನಿರ್ಮಿಸಿದ್ದನನ್ನೆಲಾಗಿದೆ. ದತ್ತಿ ಬಿಡಲಾಗಿದ್ದ ಕೃಷಿ ಭೂಮಿಯಿಂದ ಬರುವ ಆದಾಯವನ್ನು ವೈದ್ಯಕೀಯ, ಆಹಾರ, ಕುಡಿಯುವ ನೀರಿನ ವ್ಯವಸ್ಥೆಗೆ ಖರ್ಚು ಮಾಡಿದ್ದಲ್ಲದೆ ರೋಗಿಗಳಿಗೆ ಚಿಕಿತ್ಸೆ ನೀಡಲು ಹಿಂದೂ ಮುಸ್ಲಿಂ ವೈದ್ಯರನ್ನು ನೇಮಿಸಿಕೊಂಡಿದ್ದನು. ಈತನು ತನ್ನ ಸಮಾಧಿಯನ್ನು ಜೀವಿತದ ಅವಧಿಯಲ್ಲಿಯೇ ನಿರ್ಮಿಸಿದ್ದನು ಎನ್ನಲಾಗುತ್ತದೆ (ಷೇಕ್‌ಅಲಿ, ೧೯೯೭: ೫೧).

ಈಗ ಈ ಆಸ್ಪತ್ರೆಯು ಬೀದರ್ ನಗರದ ಹಳೆಯಪಟ್ಟಣದಲ್ಲಿ ಇದ್ದು, ಇದು ತನ್ನ ವೈಭವವನ್ನು ಕಳೆದುಕೊಂಡು ಕೇವಲ ಒಂದು ಕಟ್ಟಡವಾಗಿ ಕಾಣುತ್ತಿದೆ. ಇದರ ಆವರಣದಲ್ಲೇ ಜನರು ಮನೆಗಳನ್ನು ನಿರ್ಮಿಸಿಕೊಂಡು ವಾಸವಾಗಿದ್ದಾರೆ.

ಈ ಸಮಾಧಿಯನ್ನು ೧ನೇ ಅಹಮದ್-ಶಹ-ವಲೀಯ ಗೋರಿ ಪಕ್ಕದಲ್ಲಿಯೇ ನಿರ್ಮಿಸಲಾಗಿದೆ. ಈ ಸಮಾಧಿಯು ಅಹಮದ್-ಶಹ-ವಲೀಯ ಗೋರಿಯಷ್ಟೇ ಎತ್ತರವನ್ನು ಹೊಂದಿದ್ದು ತನ್ನ ಜೀವಿತದ ಕಾಲಾವಧಿಯಲ್ಲಿಯೇ ನಿರ್ಮಿಸಿಕೊಂಡಿದ್ದಾನೆ. ಈ ಸಮಾಧಿಯ ಸಭಾಂಗಣವನ್ನು ೫೧ ಅಡಿ ೨ ಇಂಚು ಚೌಕಾಕಾರದಲ್ಲಿ ನಿರ್ಮಿಸಲಾಗಿದೆ. ಇದರ ಸುತ್ತಲೂ ಅನೇಕ ರೀತಿಯ ಅರೇಬಿಕ್ ಪದಗಳಲ್ಲಿ ಕುರಾನನ್ನು ಬರೆಯಲಾಗಿದೆ (ಯಾಜ್ದಾನಿ, ೧೯೪೭ : ೧೩೦) ಈ ಸಮಾಧಿಯು ಅಹಮದ್-ಶಹ-ವಲೀ ಸಮಾಧಿಯ ಸಾಲುಗಳಲ್ಲಿಯೇ ಇದರ ಬಾಗಿಲು ಪೂರ್ವ ದಿಕ್ಕಿನೆಡೆಗೆ ಮುಖ ಮಾಡಿಕೊಂಡಿದೆ. ಈ ಗುಂಬಜ್‌ನ ಗೋಡೆಯ ಸುತ್ತಲೂ ಅರೇಬಿಕ್ ಪದಗಳನ್ನು ಉಲ್ಲೇಖಿಸಿರುವುದು ನಾಶವಾಗದೆ ಇದ್ದು, ಈಗಲೂ ಅದನ್ನು ಕಾಣಬಹುದಾಗಿದೆ.

ಸುಲ್ತಾನ ಹುಮಾಯೂನ್-ಶಹ ಸಮಾಧಿ (೧೪೫೮-೧೪೬೧)

ಎರಡನೆಯ ಅಹಮದ್-ಶಹ-ವಲೀಯ ಮಗನಾದ ಸುಲ್ತಾನ ಅಲ್ಲಾವುದಿನ್ ಹುಮಾಯೂನ್‌ನ ಸಮಾಧಿಯು ೫೨ ಅಡಿ ೪ ಇಂಚು ಉದ್ದವಾಗಿದ್ದು ೭೭ ಅಡಿ ೨ ಇಂಚು ಎತ್ತರವಾಗಿದೆ. ಈ ಸಮಾಧಿಯ

ಹೊರಗೆ ನಿರ್ಮಿಸಲಾದ ಕಮಾನುಗಳಿಗಿಂತ ಒಳಗೋಡೆಯಲ್ಲಿರುವ ಕಮಾನನು ಕಿರಿದಾಗಿ ಮಾಡಲ್ಪಟ್ಟಿವೆ. (ಯಾಜ್ದಾನಿ, ೧೯೪೭: ೧೩೨).

ಎರಡನೆಯ ಅಹಮದ್-ಶಹ-ವಲೀಯ ಮಗನಾಗಿದ್ದು, ಈತನ ಸಮಾಧಿಯನ್ನು ಅಹಮದ್-ಶಹ-ವಲೀ ಮತ್ತು ಅವನ ಮಗನಾದ ಎರಡನೆಯ ಅಹಮದ್-ಶಹ-ವಲೀ ಸಮಾಧಿಯ ಪಕ್ಕದಲ್ಲೇ ನಿರ್ಮಿಸಲಾಗಿದೆ. ಈ ಸಮಾಧಿಯು ಸಂಪೂರ್ಣವಾಗಿ ನೋಡಲು ನಮಗೆ ಸಿಗುವುದಿಲ್ಲ. ಏಕೆಂದರೆ ಈ ಸಮಾಧಿಗೆ ಸಿಡಿಲು ಬಡಿದುದ್ದರಿಂದ ಗೋಪುರ ಹಾಗೂ ಬದಿಯ ಗೋಡೆಗಳು ನಿರ್ನಾಮವಾಗಿವೆ. ಈ ಸಮಾಧಿಯು ಸಮತಟ್ಟಾದ ಭೂಮಿಯ ಮೇಲೆ ನಿರ್ಮಿಸಲಾಗಿದೆ. ಈ ಗೋರಿಯ ಮುಖವು ಸಹ ಪೂರ್ವದಿಕ್ಕಿನೆಡೆಗೆ ಇದೆ.

ಸುಲ್ತಾನ ನಿಜಾಮ್-ಶಹ ಬಹಮನಿ (೧೪೬೧-೧೪೬೩)

ಸುಲ್ತಾನ ಅಲ್ಲಾವುದ್ದೀನ್ ಹುಮಾಯೂನ್‌ನ ಮಗನೇ ಸುಲ್ತಾನ ನಿಜಾಮ್-ಶಹನಾಗಿದ್ದು ಈತನ ಸಮಾಧಿಯನ್ನು ತಂದೆ ಹುಮಾಯೂನ್ ಶಹನ ಪಕ್ಕದಲ್ಲೇ ನಿರ್ಮಿಸಲಾಗಿದೆ. ಈ ಸಮಾಧಿಯು ೧ನೇ ಅಹಮದ್-ಶಹ-ವಲೀ, ಎರಡನೆಯ ಅಹಮದ್-ಶಹ-ವಲೀ ಈ ಗೋರಿಗಳ ಸಾಲುಗಳಲ್ಲಿಯೇ ಇದೆ. ಸುಲ್ತಾನ ನಿಜಾಮ್-ಶಹನು ಕೇವಲ ೮ ವರ್ಷದ ಬಾಲಕನಾಗಿರುವಾಗಲೇ ತಂದೆ ಹುಮಾಯೂನ್‌ನು ತೀರಿಕೊಂಡನು. ನಿಜಾಮ್-ಶಹನು ಕೇವಲ ಎರಡು ವರ್ಷ ಮಾತ್ರ ಆಳ್ವಿಕೆ ಮಾಡಿದ್ದಾನೆ.

ಸುಲ್ತಾನ ನಿಜಾಮ-ಶಹನು ಕಿರಿಯ ವಯಸ್ಸಿನಲ್ಲಿ ಸಮಾಧಿಯನ್ನು ನಿರ್ಮಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇವನ ಸಮಾಧಿಯು ೨೫ ಅಡಿ ಎತ್ತರ ೭೭ ಅಡಿ ಉದ್ದವಾಗಿದ್ದು ೫೦ ಅಡಿ ೪ ಇಂಚು ಅಗಲವಿದೆ. ಈ ಸಮಾಧಿಯ ದಕ್ಷಿಣ, ಪೂರ್ವ, ಉತ್ತರಭಾಗದಲ್ಲಿ ಬಾಗಿಲುಗಳನ್ನು ನಿರ್ಮಿಸಿದ್ದು ಎಲ್ಲ ಕಡೆಗಳಿಂದ ಪ್ರವೇಶಿಸಬಹುದಾಗಿದೆ. ಪಶ್ಚಿಮ ಭಾಗಕ್ಕೆ ಗೋಡೆಯನ್ನು ಕಮಾನುಗಳ ಆಕಾರದಲ್ಲಿ ನಿರ್ಮಿಸಲಾಗಿದೆ (ಯಾಜ್ದಾನಿ, ೧೯೪೭: ೧೩೪). ಈ ಸಮಾಧಿಯು ಸಹ ಸಾಲು ಗೋರಿಗಳಲ್ಲಿಯೇ ಇದ್ದು ಈ ಗೋರಿಯ ವಿಶಿಷ್ಟತೆ ಎಂದರೆ ದಕ್ಷಿಣ, ಪೂರ್ವ ಮತ್ತು ಉತ್ತರ ದಿಕ್ಕುಗಳಲ್ಲಿ ಬಾಗಿಲುಗಳನ್ನು ಹೊಂದಿದೆ. ಆದರೆ ಇದರ ಒಂದು ಬಾಗಿಲನ್ನು ಮಾತ್ರ ಉರುಸ್ ಸಂದರ್ಭದಲ್ಲಿ ತೆರೆಯಲಾಗುತ್ತದೆ. ಇನ್ನುಳಿದ ದಿನಗಳಲ್ಲಿ ಈ ಬಾಗಿಲು ಮುಚ್ಚಲಾಗುತ್ತದೆ.

ಮೂರನೇ ಸುಲ್ತಾನ ಮಹಮದ್-ಶಹ ಬಹಮನಿ (೧೪೬೩-೧೪೮೨)

ಬಹಮನಿ ಮನೆತನದ ೧೨ನೇ ಸುಲ್ತಾನನೇ ಮೂರನೆಯ ಮಹಮದ್-ಶಹನಾಗಿದ್ದು, ಈತನ ಆಳ್ವಿಕೆಯ ಕಾಲದಲ್ಲಿ ಬಹಮನಿ ಸಾಮ್ರಾಜ್ಯವು ಆಡಳಿತದಲ್ಲಿ ಸರ್ವತೋಮುಖ ಅಭಿವೃದ್ಧಿಯನ್ನು ಕಂಡಿತು. ದಕ್ಷ ಆಡಳಿತಗಾರ ಎನಿಸಿಕೊಂಡಿದ್ದ ಮಹಮೂದ್ ಗವಾನ್‌ನು ಮೂರನೆಯ ಮಹಮದ್-ಶಹನ ಆಳ್ವಿಕೆಯ ಕಾಲದಲ್ಲಿಯೂ ಇದ್ದನು. ಸುಲ್ತಾನ ಮೂರನೆಯ ಮಹಮ್ಮದ್-ಶಹನ ಸಮಾಧಿ

ಕೂಡ ಅರ್ಧ ನಿರ್ಮಾಣಗೊಂಡಿದೆ. ಈ ಅರಸನು ೧೯ ವರ್ಷಗಳ ಕಾಲ ರಾಜ್ಯಭಾರ ಮಾಡಿದರೂ ಇವನನ್ನು ಮೂಲೆಗುಂಪು ಮಾಡಲಾಗಿತ್ತು. ಮೂರನೆಯ ಮಹಮ್ಮದ್-ಶಹನು ಒಂಬತ್ತು ವರ್ಷದವನಿದ್ದಾಗಲೇ ಅಧಿಕಾರಕ್ಕೆ ಬಂದರೂ, ಈತನ ತಾಯಿ ಮುಖ್ದುಂ-ಇ-ಜಹಾನ್ ಮತ್ತು ಆಡಳಿತದ ಇಬ್ಬರು ಸಚಿವರಾದ ಖ್ವಾಜಾ ಜಹಾನ್ ತುರ್ಕ ಮತ್ತು ಮಹಮೂದ್ ಗವಾನ್ ಸಂಪೂರ್ಣ ಆಡಳಿತವನ್ನು ನಿಯಂತ್ರಿಸುತ್ತಿದ್ದುದರಿಂದ ಸುಲ್ತಾನ ಮೂರನೆಯ ಮಹಮೂದ್-ಶಹನನ್ನು ಮೂಲೆಗುಂಪು ಮಾಡಲಾಗಿತ್ತು. ಈತನ ಸಮಾಧಿಯನ್ನು ೩೪ ಅಡಿ ೬ ಇಂಚು ಎತ್ತರವಾಗಿದ್ದು ೧೪ ಅಡಿ ೮ ಇಂಚು ಅಗಲವಾದ ಸ್ಥಳದಲ್ಲಿ ನಿರ್ಮಿಸಲಾಗಿದೆ. ಮೂರನೆಯ ಮಹಮದ್-ಶಹನ ಸಮಾಧಿಯ ಪಕ್ಕದಲ್ಲಿಯೇ ಅವನ ಹೆಂಡತಿಯ ಸಮಾಧಿಯನ್ನು ನಿರ್ಮಾಣ ಮಾಡಲಾಗಿದೆ ಎಂದು ಷೇಕ್‌ಅಲಿ ಉಲ್ಲೇಖಿಸಿದ್ದಾರೆ (ಷೇಕ್‌ಅಲಿ, ೧೯೯೭: ೬೨).

ಈ ಸಮಯದಲ್ಲಿ ಹಿಂದಿನ ಆಳ್ವಿಕೆಯು ತೋರಿಸಿದ ಕ್ರೌರ್ಯದ ಕಳಂಕಿತ ಚಿತ್ರವನ್ನು ಹೋಗಲಾಡಿಸಲು ಈ ಮುಖ್ದುಂ-ಇ-ಜಹಾನ್, ಖ್ವಾಜಾ ಜಹಾನ್ ಮತ್ತು ಮಹಮೂದ್ ಜಹಾನ್‌ರ ನಿಯಂತ್ರಣದಲ್ಲೆ ಸಂಪೂರ್ಣ ಆಡಳಿತ ಇತ್ತೆಂದು ತಿಳಿದುಬರುತ್ತದೆ. ಇದು ಬಹಮನಿಗಳಿಗೆ ಇಕ್ಕಟ್ಟಿನ ಸಮಯವೇ ಆಗಿತ್ತೆಂದು ಕಾಣುತ್ತದೆ.

ನಾಲ್ಕನೆಯ ಮಹಮದ್-ಶಹ-ಬಹಮನಿ (೧೪೮೨-೧೫೧೮)

ಈ ಸುಲ್ತಾನನು ಮೂರನೆಯ ಮಹಮದ್-ಶಹನ ಮಗನಾಗಿದ್ದನು. ಈತನು ಸುಮಾರು ೩೬ ವರ್ಷಗಳ ಕಾಲ ರಾಜ್ಯಭಾರವನ್ನು ಮಾಡಿದನು. "ಈತನ ಜೀವಿತಾವಧಿಯಲ್ಲಿ ಸಮಾಧಿ ನಿರ್ಮಾಣ ಮಾಡಿರಬಹುದೆಂದು ಹೇಳಲಾಗಿದೆ. ತನ್ನ ತಂದೆ ಮಹಮೂದ್-ಶಹ ಮತ್ತು ಆತನ ಚಿಕ್ಕಪ್ಪ ನಿಜಾಮಶಹ ಅವರ ಅಪೂರ್ವವಾದ ಸಮಾಧಿಗಳನ್ನು ಗಣನೆಗೆ ತೆಗೆದುಕೊಂಡು ತನ್ನ ಸಮಾಧಿಯನ್ನು ನಿರ್ಮಿಸಿದನೆಂದು ಹೇಳಲಾಗಿದೆ. ಈತನ ಸಮಾಧಿಯು ೭೭ ಅಡಿ ೧೦ ಇಂಚು ಎತ್ತರ ಹಾಗೂ ಸಮಾಧಿಯ ನಾಲ್ಕು ದಿಕ್ಕಿಗೆ ಕಮಾನುಗಳನ್ನು ನಿರ್ಮಿಸಲಾಗಿದೆ. ಈ ಸಮಾಧಿಯ ಗೋಪುರವನ್ನು ಅಷ್ಟಭುಜಾಕೃತಿಯಲ್ಲಿ ನಿರ್ಮಿಸಲಾಗಿದ್ದು, ಇದರ ಗೋಡೆಗಳು ೧೩ ಅಡಿ ೪ ಇಂಚು ಎತ್ತರವಾಗಿದೆ. ಗೋಪುರದ ಸುತ್ತಳತೆ ೨೦೬ ಅಡಿ ಹೊಂದಿದೆ ಎಂದು ಜಿ.ಯಾಜ್ದಾನಿ ಉಲ್ಲೇಖಿಸಿದ್ದಾರೆ(ಯಾಜ್ದಾನಿ, ೧೯೪೭: ೧೩೬).


ಸುಲ್ತಾನ ಕಲೀಂ-ಉಲ್ಲಾ-ಬಹಮನಿ (೧೫೨೫)

ಸುಲ್ತಾನ ಕಲೀಂ-ಉಲ್ಲಾನು ಬಹಮನಿ ಮನೆತನದ ಕೊನೆಯ ಅರಸನಾಗಿದ್ದು, ಈತನ ನಂತರ ಇವನ ಮಗನಾದ ಅಜಮತ್-ಶಹ ಬಹಮನಿಯು ಅಧಿಕಾರಕ್ಕೆ ಬರುತ್ತಾನೆ. ಆದರೆ ಈವನೊಬ್ಬ ಅಸಮರ್ಥ ದೊರೆಯಾಗಿದ್ದು ಕಾಮುಕನಾಗಿದ್ದನು. ಇವನು ಹೆಚ್ಚು ವರ್ಷಗಳವರೆಗೆ ಆಡಳಿತ ನಡೆಸಲಿಲ್ಲವೆಂದು ತೋರುತ್ತದೆ. "ಸುಲ್ತಾನ ಕಲೀಂ-ಉಲ್ಲಾನ ಮಂತ್ರಿ ಅಮೀರ ಬರೀದ ಅರಸನನ್ನು

ಜನರಿಂದ, ಆಡಳಿತದಿಂದ ದೂರ ಮಾಡಿದ್ದಲ್ಲದೇ ಕೀಳಾಗಿ ಕಂಡನು. ಕಲೀಂ-ಉಲ್ಲಾನನ್ನು ಬೀದರ್‌ನಿಂದ ಬಿಜಾಪುರಕ್ಕೆ, ಅಲ್ಲಿಂದ ಅಹ್ಮದ್ ನಗರಕ್ಕೆ ಕಳುಹಿಸಿಕೊಟ್ಟನು. ನಂತರ ತನ್ನ ಜೀವನದ ಹೆಚ್ಚಿನ ಅವಧಿಯನ್ನು ಕಾರಾಗೃಹದಲ್ಲಿಯೇ ಕಳೆದನು (ಯಾಜ್ದಾನಿ, ೧೯೪೭: ೧೪೦).

ಈತನ ಮರಣದ ನಂತರ ಕಲೀಂ-ಉಲ್ಲಾನನ್ನು ಬೀದರ್‌ಕ್ಕೆ ತರಲಾಯಿತು. ಈವನ ಸಮಾಧಿಯು ಕೂಡ ಅಷ್ಟೂರಿನಲ್ಲಿಯೇ ಇದ್ದು ಸಮಾಧಿಯು ೨೮ ಅಡಿ ೧೦ ಇಂಚು ಎತ್ತರವಾಗಿದ್ದು ಅಷ್ಟಭುಜಾ ಕೃತಿಯಲ್ಲಿ ನಿರ್ಮಾಣಗೊಂಡಿದೆ ಎಂದು ಉಲ್ಲೇಖಿಸಿದ್ದಾರೆ (ಯಾಜ್ದಾನಿ, ೧೯೪೭: ೧೪೦).

ಈ ಎಲ್ಲ ಗುಂಬಜ್‌ಗಳು ಬಹಮನಿಯ ಅರಸರ ಸಮಾಧಿಗಳಾಗಿದ್ದು, ಈ ಸಮಾಧಿಗಳ ವಿಶೇಷತೆ ಏನೆಂದರೆ ಇವುಗಳನ್ನು ಯಾವ ಕಡೆಯಿಂದ ನೋಡಿದರೂ ಸಮಾನ ಸ್ಥಿತಿಯನ್ನು ಹೊಂದಿದಂತೆ



ಅಷ್ಟೂರಿನಲ್ಲಿರುವ ಗುಂಬಜ್‌ಗಳು

ಕಾಣುತ್ತವೆ. ಗುಂಬಜ್‌ಗಳ ಪ್ರವೇಶ ದ್ವಾರದಲ್ಲಿ ಗಾಳಿ ಮತ್ತು ಬೆಳಕಿನ ಸುವ್ಯವಸ್ಥೆ ಮಾಡಲಾಗಿದೆ. ಗುಂಬಜ್‌ನ ಒಳಗೋಡೆಗಳ ಮೇಲೆ ಪವಿತ್ರ ಗ್ರಂಥಗಳ ಮಾಹಿತಿ ನೀಡಲಾಗಿದೆ.

ಐತಿಹ್ಯಗಳು

ಅಷ್ಟೂರಿನಲ್ಲಿರುವ ಗೋರಿಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳಿದ್ದು, ಕ್ಷೇತ್ರಕಾರ್ಯದಲ್ಲಿ ಎರಡು ಐತಿಹ್ಯಗಳು ಲಭ್ಯವಾಗಿದ್ದು ಅವುಗಳನ್ನು ಶಾಂತಪ್ಪ ದೇವರಾಯ್ ಮತ್ತು ವಿಶ್ವನಾಥ ಎಂಬುವವರಿಂದ ಸಂಗ್ರಹಿಸಲಾಗಿದೆ.

ಅಷ್ಟೂರಿನಲ್ಲಿರುವ ಈ ಅಹಮದ್-ಶಹ-ವಲೀಯ ಗೋರಿ ಕುರಿತಂತೆ ಬೀದರ್ ಮತ್ತು ಸುತ್ತಮುತ್ತಲಿನ ಜನ ಕೆಲವೊಂದು ಐತಿಹ್ಯಗಳನ್ನು ಹೇಳುತ್ತಾರೆ. ಈ ಗೋರಿಯನ್ನು ಮುಸ್ಲಿಮರು



ಅಹಮದ್-ಶಹ-ವಲೀಯ ಗೋರಿ ಎಂದು ಕರೆದರೆ, ಹಿಂದೂಗಳು ಅಲ್ಲಮ ಪ್ರಭುವಿನ ದೇವಸ್ಥಾನವೆಂದೇ ಕರೆಯುತ್ತಾರೆ. ಅಲ್ಲಮ ಪ್ರಭುವಿನ ದೇವಸ್ಥಾನವೆಂದು ಕರೆಯಲು ಕಾರಣವೇನೆಂದರೆ ಅದಕ್ಕೂ ಒಂದು ಐತಿಹ್ಯವನ್ನು ಜನರು ಹೇಳುತ್ತಾರೆ. 'ಅಲ್ಲಮ ಪ್ರಭು' ಎಂದರೆ ಹನ್ನೆರಡನೇ ಶತಮಾನದಲ್ಲಿ ಇದ್ದ ಬಸವಣ್ಣನ ಸಮಕಾಲೀನ ಶರಣ, ವಚನಕಾರನೇ ಅಲ್ಲಮ ಪ್ರಭು ಅವನ ದೇವಸ್ಥಾನವೇ ಇದಾಗಿದೆ ಎಂದು ನಂಬಿಕೆಯಾಗಿದೆ. ಜನಪದರಿಂದ ಸಂಗ್ರಹಿಸಲಾದ ಐತಿಹ್ಯಗಳು ಈ ಕೆಳಗಿನಂತಿವೆ.

ಮೊದಲನೆಯ ಐತಿಹ್ಯ

ಈ ಐತಿಹ್ಯವನ್ನು ಕಥೆಯ ರೂಪದಲ್ಲಿ ಶಾಂತಪ್ಪದೇವರಾಯ್[7] ಎನ್ನುವವರು ಹೇಳಿರುವುದನ್ನು ದಾಖಲಿಸಲಾಗಿದೆ. ಅರಸನು ತನ್ನ ಸಹೋದರರಿಂದ ತಪ್ಪಿಸಿಕೊಳ್ಳುವುದು, ಜಂಗಮರ ಜಾತ್ರೆಯಲ್ಲಿ ಸೇರಿಕೊಳ್ಳುವುದು ಇದರಿಂದ ಜಂಗಮರ ಮೇಲೆ ಅಪಾರ ಭಕ್ತಿ ಹೊಂದಿ ತನ್ನ ಸಮಾಧಿಯನ್ನು ಆ ಸ್ಥಳದಲ್ಲೇ ನಿರ್ಮಿಸುವಂತೆ ಹೇಳುವುದು. ಈ ರೀತಿ ಸಮಾಧಿ ನಿರ್ಮಾಣದ ಹಿಂದೆ ಘಟಿಸಿದ ಘಟನೆಯನ್ನು ವಕ್ತೃರಿಂದ ಸಂಗ್ರಹಿಸಲಾಗಿದೆ.

> ೧ನೇ ಅಹಮದ್-ಶಹ-ವಲಿಯು ತನ್ನ ದಾಯಾದಿಗಳಿಂದ ತಪ್ಪಿಸಿಕೊಂಡು ಓಡಿಬರುತ್ತಾನೆ. ಆಗ ಅವನನ್ನು ಅವನ ದಾಯಾದಿಗಳು ಬೆನ್ನಟ್ಟಿ ಬರುತ್ತಾರೆ. ಅದೇ ಸಮಯದಲ್ಲಿ ಮಾಡ್ಯಾಳದಿಂದ ಜಂಗಮರ ಜಾತ್ರೆಯು ಅಷ್ಟೂರಿನತ್ತ ಹೊರಟಿತ್ತು. ಆ ಜಾತ್ರೆಯಲ್ಲಿ ಅಹಮದ್-ಶಹ-ವಲೀ ಸೇರಿಕೊಂಡು ತಪ್ಪಿಸಿಕೊಳ್ಳುತ್ತಾನೆ. ತಾನು ಬದುಕಿದ್ದು ಈ ಸ್ವಾಮಿಗಳಿಂದಲೇ ಎಂದುಕೊಂಡು ಆ ಸ್ವಾಮಿಯ ಮೇಲೆ ಅಪಾರವಾದ ಭಕ್ತಿಯನ್ನು ಹೊಂದುತ್ತಾನೆ. ಮುಂದೆ ತಾನು ಸತ್ತ ಬಳಿಕ ತನ್ನ ಸಮಾಧಿಯನ್ನು ಈ ಜಾಗದಲ್ಲೇ ಮಾಡಬೇಕು ಎನ್ನುತ್ತಾನೆ. ಅವನ ಇಚ್ಛೆಯಂತೆ ಅಹಮದ್-ಶಹ-ವಲೀಯು ಸತ್ತ ಬಳಿಕ ಅವನ ಸಮಾಧಿಯನ್ನು ಈ ಅಷ್ಟೂರಿನ ಸ್ಥಳದಲ್ಲಿಯೇ ನಿರ್ಮಿಸಲಾಗಿದೆ. ಅದೇ ಸಮಾಧಿ ಎಂದು ವಕ್ತೃರು ಸಮಾಧಿಯತ್ತ ಬೊಟ್ಟು ಮಾಡಿ ತೋರಿಸುತ್ತಾ ಐತಿಹ್ಯವನ್ನು ಹೇಳುತ್ತಾರೆ.

ಎರಡನೆಯ ಐತಿಹ್ಯ

ಈ ಐತಿಹ್ಯವನ್ನು ಕಥೆಯ ರೂಪದಲ್ಲಿ ವಿಶ್ವನಾಥ ಎನ್ನುವವರು ಹೇಳಿರುವುದನ್ನು ದಾಖಲಿಸಲಾಗಿದೆ. ಸಹೋದರರ ಕಿರುಕುಳ ತಾಳಲಾರದ ಬಹಮನಿಯ ಅರಸನು ಬೀದರ್‌ನತ್ತ ಓಡಿಬಂದು, ಜಂಗಮರ ಜಾತ್ರೆಯಲ್ಲಿ ನುಸುಳಿ ಪ್ರಾಣ ರಕ್ಷಿಸಿಕೊಂಡು ಆಡಳಿತ ನಡೆಸಿದನು. ತಾನು ತನ್ನ ಜೀವವನ್ನು ರಕ್ಷಿಸಿಕೊಂಡ ಸ್ಥಳದಲ್ಲೇ ಸಮಾಧಿ ನಿರ್ಮಿಸಿದ್ದಾನೆ ಎಂಬ ಐತಿಹ್ಯವನ್ನು ವಕ್ತೃರಿಂದ ಸಂಗ್ರಹಿಸಿ ಇಲ್ಲಿ ಉಲ್ಲೇಖಿಸಲಾಗಿದೆ.

> ಬಹಮನಿಯ ಅರಸ ಅಹಮದ್-ಶಹ- ವಲೀಯು ತನ್ನ ಸಾಮ್ರಾಜ್ಯದ ಮೊದಲ ರಾಜಧಾನಿಯಾದ ಕಲಬುರ್ಗಿಯಲ್ಲಿ ಆಳ್ವಿಕೆ ಮಾಡುತ್ತಿದ್ದನು. ಈತನ ಸಹೋದರನು

ಈತನಿಗೆ ಕಿರುಕುಳ ಕೊಡಲು ಆರಂಭಿಸಿದನು. ಆಗ ಗುಲ್ಬರ್ಗಾದಲ್ಲಿರುವ ಸೂಫಿ ಸಂತ ಬಂದೇ ನವಾಜರು ಅಹಮದ್-ಶಹ-ವಲೀಯನ್ನು ತನ್ನ ಸೇವಕರಿಗೆ ಕೊಟ್ಟು 'ಉತ್ತರದಿಕ್ಕಿನೆಡೆಗೆ ಹೋಗು ಅಲ್ಲೇ ಆಡಳಿತವನ್ನು ನಡೆಸು' ಎಂದು ಸೂಚಿಸುತ್ತಾರೆ. ಆಗ ಅಹಮದ್-ಶಹ-ವಲೀಯು ಬೀದರ್‌ನತ್ತ ಬರುತ್ತಾನೆ. ಬರುವಾಗ ಅಹಮದ್-ಶಹ-ವಲೀಯ ಸಹೋದರು ಅವನನ್ನು ಹೊಡೆಯಲು ಹಿಂದೆ ಬರುತ್ತಾರೆ. ಆಗ ಅಹಮದ್-ಶಹ-ವಲೀ ತನ್ನ ಜೀವವನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಅದೇ ಸಮಯದಲ್ಲಿ ಮಾಡ್ಯಾಳದಿಂದ ಜಂಗಮರ ಜಾತ್ರೆಯೊಂದು ಅಷ್ಟೂರಿನತ್ತ ಹೊರಟಿತ್ತು. ಅಹಮದ್-ಶಹ-ವಲೀಯು ಆ ಜಾತ್ರೆಯಲ್ಲಿ ಸೇರಿಕೊಂಡು ತನ್ನ ಜೀವವನ್ನು ರಕ್ಷಿಸಿಕೊಳ್ಳುತ್ತಾನೆ. ನಂತರ ಬೀದರ್‌ನಲ್ಲಿ ಆಡಳಿತ ನಡೆಸುತ್ತಾನೆ. ತನ್ನ ಜೀವವನ್ನು ರಕ್ಷಿಸಿಕೊಂಡಾಗಿನಿಂದ ಆ ಜಾಗದ ಮೇಲೆ ಅಹಮದ್-ಶಹ-ವಲೀಗೆ ಅಪಾರವಾದ ನಂಬಿಕೆ ಮತ್ತು ಭಕ್ತಿ ಬೆಳೆಯಲು ಆರಂಭವಾಯಿತು. ಏಕೆಂದರೆ ತಾನು ಈ ದೇವರ ದಯೆಯಿಂದಲೇ ಬದುಕಿ, ಆಡಳಿತ ನಡೆಸುವಂತೆ ಆಯಿತೆಂದು ನಂಬುತ್ತಾನೆ. ಅಲ್ಲದೇ ತಾನು ಸತ್ತ ಬಳಿಕ ತನ್ನ ಸಮಾಧಿಯನ್ನು ಇದೇ ಸ್ಥಳದಲ್ಲಿ ಕಟ್ಟಬೇಕೆಂದು ಹೇಳುತ್ತಾನೆ. ಆಗ ಕಟ್ಟಿದ ಸಮಾಧಿಯೇ ಇದಾಗಿದೆ ಎಂದು ವಕ್ತೃರು ಈ ಸಮಾಧಿಯ ಸುತ್ತಲೂ ಐತಿಹ್ಯವೊಂದನ್ನು ಹೇಳುತ್ತಾರೆ.

ಮೂರನೆಯ ಐತಿಹ್ಯ


ಬೀದರ್ ಸುತ್ತಮುತ್ತಲಿನ ಜನರು ಅಷ್ಟೂರಿನ ಗುಂಬಜ್ ಕುರಿತಂತೆ ಐತಿಹ್ಯಗಳನ್ನು ಈ ಮೇಲಿನ ರೀತಿಯಲ್ಲಿ ಹೇಳಿದ್ದಾರೆ. ಆದರೆ ಅಪ್ರಕಟಿತ ಗ್ರಂಥದಲ್ಲಿ ಈ ಅಹಮದ್-ಶಹ-ವಲೀಯ ಗೋರಿಯ ಕುರಿತಂತೆ ಈ ರೀತಿಯ ಐತಿಹ್ಯವೊಂದು ಉಲ್ಲೇಖಗೊಂಡಿದೆ.

ಬಹಮನಿಯರ ರಾಜ್ಯ ಗುಲ್ಬರ್ಗಾದಲ್ಲಿ ಇದ್ದಾಗ ಅಹಮದ್-ಶಹ-ವಲೀ ಅವರ ದಾಯಾದಿಗಳಿಂದ ತೀವ್ರ ಮತ್ಸರ, ದ್ವೇಷಗಳಿಗೆ ಗುರಿಯಾಗಬೇಕಾಗಿ ಬಂತು. ಒಮ್ಮೆ ಅಹಮದ್-ಶಹ-ವಲೀಯ ವಿರುದ್ಧ ಕೊಲೆಯ ಸಂಚೊಂದು ನಡೆದಾಗ ಗುಲ್ಬರ್ಗಾದಲ್ಲಿ ಇದ್ದ ಬಂದೆ ನವಾಜ್ ಗೇಸೂದ್ ರಾಜರು ಅಲ್ಲಿಂದ ಪಾರಾಗಲು ತಮ್ಮ ಸೂಫಿ ವಸ್ತುಗಳನ್ನು ಅಹಮದ್-ಶಹನಿಗೆ ನೀಡಿ ಬೀದರ್‌ಗೆ ಹೊರಟು ಹೋಗಲು ಸೂಚಿಸಿದರು. ಅಲ್ಲಿಂದ ಫಕೀರನ ವೇಷದಲ್ಲಿ ಅಷ್ಟೂರಿನವರೆಗೆ ಬರುತ್ತಿದ್ದಾಗ ಕೊಲೆಗಾರರು ಬೆನ್ನಟ್ಟಿ ಅಹಮದ್-ಶಹನನ್ನು ಪತ್ತೇ ಹಚ್ಚಲು ಶತಾಯ ಗತಾಯ ಪ್ರಯತ್ನ ನಡೆಸಿದರು. ಫಕೀರನ ವೇಷದಲ್ಲಿರುವ ಅಹಮದ್-ಶಹನ ಗುರುತು ಸಿಗದಿದ್ದರೂ ಸುರಕ್ಷತೆಗಾಗಿ ಅಷ್ಟೂರಿನತ್ತ ನಡೆದ ವೀರಶೈವ ವಿರಕ್ತಿಗಳ ಗುಂಪಲ್ಲಿ ನುಸುಳಿಕೊಂಡು ಪಾರಾದನು. ಮುಂದೆ ಅವನು ರಾಜ್ಯ ಸ್ಥಾಪಿಸಿ ಸುಲ್ತಾನನಾದನು. ಬಂದೇ ನವಾಜರ ಪವಿತ್ರ

ವಸ್ತ್ರಗಳನ್ನು ಅಂದು ಅಷ್ಟೂರಿನಲ್ಲಿ ನೆರೆದಿದ್ದ ವೀರಶೈವ ವಿರಕ್ತರ ಮುಖ್ಯಸ್ಥರಿಗೆ ಗೌರವಾರ್ಥ ನೀಡಿದನು. ಆತನೇ ಅಲ್ಲಮ ಪ್ರಭು (ಮಲ್ಲಿಕಾರ್ಜುನ, ೧೯೯೬: ೧೧೦).

ಈಗಲೂ ಇವರ ಜಾತ್ರೆ ಅಷ್ಟೂರಿನಲ್ಲಿ ನಡೆಯುತ್ತದೆ ಎಂದು ಉಲ್ಲೇಖಿಸಲಾಗಿದೆ. ಐತಿಹ್ಯವೆಲ್ಲ ನಮಗೆ ಸೂಫಿ ಸಂತ, ಗೇಸೂದ್‌ರಾಜ್, ಖಾಜಾ ಬಂದೆ ನವಾಜ್ ಎಂಬ ಹೆಸರುಗಳು ಕಂಡುಬರುತ್ತವೆ. ಹಾಗಾದರೆ ಈ ಹೆಸರಿನಿಂದ ಯಾರನ್ನು ಕರೆಯಲಾಗುತ್ತಿತ್ತು? ಇವರ ಮೂಲ ಯಾವುದು? ಎಲ್ಲಿಂದ ಬಂದವರು? ಬಹಮನಿಯ ಅರಸ ಅಹಮದ್-ಶಹ-ವಲೀಗೂ ಈ ಬಂದೇನವಾಜರಿಗೂ ಏನು ಸಂಬಂಧ ಎಂಬ ಪ್ರಶ್ನೆಗಳು ಉದ್ಭವಿಸುವುದು ಸಹಜ, ಈ ಸೂಫಿಗಳು ಎಲ್ಲೋ ಹುಟ್ಟಿ ತಮ್ಮ ಜೀವಿತದ ಬಹುಕಾಲವನ್ನು ಇನ್ನೆಲ್ಲೋ ಕಳೆದು ಕರ್ನಾಟಕಕ್ಕೆ ಬಂದು ನೆಲೆಸಿದವರಾಗಿದ್ದಾರೆ. ಸಾಮಾನ್ಯವಾಗಿ "ಕರ್ನಾಟಕದ ಸೂಫಿಗಳ ಬೇರುಗಳು ಬಾಗ್ದಾದ್, ದೆಹಲಿಗಳಿಂದ ದೌಲತಾಬಾದ್, ಕರ್ನೂಲುಗಳ ತನಕ ಇದೆ. ಆಳ್ವಿಕೆಯನ್ನು ಮಾಡುವ ಅರಸರು ಈ ಸೂಫಿಗಳನ್ನು ಬೇರೆ ದೇಶಗಳಿಂದ ಕರೆಯಿಸಿಕೊಳ್ಳುತ್ತಿದ್ದರು" ಎಂದು ತರೀಕೆರೆ ಉಲ್ಲೇಖಿಸಿರುವುದು ಗಮನಾರ್ಹವಾಗಿದೆ (ತರಿಕೇರೆ, ೧೯೯೮: ೩).

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಈ ಅಷ್ಟೂರಿನ ಗುಂಬಜ್‌ಗಳಿಗೆ ಭೇಟಿ ನೀಡಲಾಗಿತ್ತು. ಆ ಸಮಯದಲ್ಲಿ ೧ನೇ ಅಹಮದ್ ಷಾ-ವಲಿಯ ಜಾತ್ರೆಯು ಅಷ್ಟೂರಿನಲ್ಲಿ ಪ್ರಾರಂಭವಾಗಿತ್ತು. ಅದು ೧ನೇ ಅಹಮದ್-ಶಹ-ವಲೀಯ ಮರಣ ಶತಾಬ್ದಿಯ ಪ್ರತಿ ವರ್ಷ ಆಚರಿಸುವ ಜಾತ್ರೆ (ಉರುಸ್) ಆಗಿತ್ತು. ಹೋಳಿ ಹುಣ್ಣಿಮೆಯು ಕಳೆದ ೫ ದಿವಸಕ್ಕೆ ಸರಿಯಾಗಿ (ಫಾಲ್ಗುಣ ವದ್ದೆ ಏಕಾದಶಿಗೆ) ಜಾತ್ರೆಯು ಪ್ರಾರಂಭವಾಗುತ್ತದೆ. ಈ ಜಾತ್ರೆಗೆ ಮಾಡ್ಯಾಳದಿಂದ ಕುದುರೆ ಮೇಲೆ ಕುಳಿತ ಜಂಗಮರು (ಸ್ವಾಮಿ) ಬರುತ್ತಾರೆ. ಅವರು ಅಷ್ಟೂರಿನ ಗುಂಬಜಿಗೆ ಬಂದಾಗ ಸರಿಯಾಗಿ ೫ ಗಂಟೆಯಾಗಿತ್ತು. ಇವರು ಬರುವಾಗ ಜೊತೆಯಲ್ಲಿ ಕಟ್ಟಿಗೆಯಿಂದ ಮಾಡಿದ ಒಂದು ಉದ್ದವಾದ ಬಂಬು ತರುತ್ತಾರೆ. ಅದಕ್ಕೆ ಬಣ್ಣ ಬಣ್ಣದ ಬಟ್ಟೆಯನ್ನು ಸುತ್ತಿರುತ್ತಾರೆ. ಅದನ್ನು ತಂದು ಅಹಮದ್-ಶಹ-ವಲೀ ಸಮಾಧಿಯ



ಮಾಡ್ಯಾಳದಿಂದ ತರುವ ಧ್ವಜ



ಬಾಗಿಲಿಗೆ ಹಚ್ಚಿ ಪೂರ್ವ ಮುಖ ಮಾಡಿ ನಿಲ್ಲಿಸುತ್ತಾರೆ. ನಂತರ ಜಂಗಮರು ಗುಂಬಜಿನ ಮೊದಲ ದ್ವಾರಕ್ಕೆ ಗಂಧ ಹೂಗಳನ್ನು ಅರ್ಪಿಸಿ ಶಂಖ ಊದುತ್ತಾ ಗೋರಿಯ ಎರಡನೇ ದ್ವಾರಕ್ಕೆ ಬರುತ್ತಾರೆ. ಈ ದ್ವಾರವು ಪಶ್ಚಿಮ ದಿಕ್ಕಿಗೆ ಮುಖ ಮಾಡಿದ್ದು, ಈ ದ್ವಾರವನ್ನು ಜಂಗಮರು ತೆರೆದು ಇದಕ್ಕೂ ಗಂಧ ಮತ್ತು ಹೂವುಗಳನ್ನು ಅರ್ಪಿಸಿ, ಗೋರಿಯ ಮೂರನೆ ದ್ವಾರವು ದಕ್ಷಿಣಕ್ಕೆ ಮುಖ ಮಾಡಿದ್ದು ಈ ದ್ವಾರಕ್ಕೆ ಬಂದು ಗಂಧ, ಹೂವುಗಳಿಂದ ಪೂಜೆಯನ್ನು ಮಾಡಿ ಗೋರಿಗೆ ಶಂಖವನ್ನು ಊದುತ್ತಾ ಮೂರು ಸುತ್ತು ತಿರುಗುತ್ತಾರೆ. ನಂತರ ಜಂಗಮರು ಅಹಮದ್-ಶಹ-ವಲೀಯ ಪತ್ನಿ ಗೋರಿಗೆ ಬರುತ್ತಾರೆ. ಅಲ್ಲಿಯೂ ಸಹ ಗಂಧ, ಹೂಗಳನ್ನು ಅರ್ಪಿಸಿ ಶಂಖ ಊದುತ್ತಾ ಮೂರು ಸುತ್ತು ತಿರುಗುತ್ತಾರೆ. ನಂತರ ಎರಡನೇ ಅಹಮದ್ -ಷಾ-ವಲೀಯ ಗೋರಿಗೆ ಬರುತ್ತಾರೆ. ಈ ಗೋರಿಯ ಬಾಗಿಲಿಗೆ ಗಂಧ, ಹೂಗಳಿಂದ ಪೂಜೆ ಮಾಡಿ ಶಂಖ ಊದುತ್ತ ಮೂರು ಸುತ್ತು ಗೋರಿಯ ಸುತ್ತಲೂ ಸುತ್ತುತ್ತಾರೆ. ಹೀಗೆ ಬಹಮನಿ ಅರಸರ ಸಮಾಧಿಗಳಿಗೆ ಮಾತ್ರ ಪೂಜೆಯನ್ನು ಸಲ್ಲಿಸುತ್ತಾರೆ. ಮಾಡ್ಯಾಳದಿಂದ ಬಂದ ಜಂಗಮರು ಮುಸ್ಲಿಂರ ಹಾಗೆ ತಲೆಯ ಮೇಲೊಂದು ಧಾರ್ಮಿಕ ಟೋಪಿ ಕೈಯಲ್ಲೊಂದು ದಂಡ, ಮುಸ್ಲಿಂ ಸಂತನ ಸಡಿಲವಾದ ಇಳಿಯ ಉಡುಗೆಯನ್ನು ಧರಿಸುತ್ತಾರೆ. ಜಂಗಮರು ಎಲ್ಲಾ ಗುಂಬಜ್‌ಗಳಿಗೆ ಪೂಜೆಯನ್ನು ಮಾಡುತ್ತಾರೆ. ಪೂಜೆ ಮಾಡುವಾಗ ಡೋಲು, ನಗಾರಿಗಳನ್ನು ಬಾರಿಸುತ್ತಾರೆ. ಪೂಜೆಯನ್ನು ಮಾಡಿದ ಬಳಿಕ ಮುಸ್ಲಿಮರ ಜಾತ್ರೆ (ಉರುಸ್) ಪ್ರಾರಂಭವಾಗುತ್ತದೆ. ಅಂದಿನಿಂದ ಐದು ದಿವಸಗಳ



ಕುದುರೆಯ ಮೇಲೆ ಕುಳಿತ ಮಾಡ್ಯಾಳದ ಜಂಗಮರು



ಕಾಲದವರೆಗೆ ಈ ಜಾತ್ರೆಯು ನಡೆಯುತ್ತದೆ. ಈ ಜಾತ್ರೆಯು ಮುಸ್ಲಿಂರ ಕ್ಯಾಲೆಂಡರ್ ಪ್ರಕಾರ ನಡೆಯದೆ ಹಿಂದೂಗಳ ಪಂಚಾಂಗದ ಪ್ರಕಾರ ಆಚರಣೆಯಾಗುತ್ತದೆ. ಹಿಂದೂ ಪಂಚಾಂಗದ ಪ್ರಕಾರ ಹೋಳಿಯನ್ನು ಆಚರಿಸುವ ತಿಂಗಳಿನ ೨೦ನೆಯ ದಿನದಂದು ಜಾತ್ರೆಯನ್ನು ನಡೆಸಲಾಗುತ್ತದೆ.

ಮಾಡ್ಯಾಳದಿಂದ ಬರುವ ಜಂಗಮರ ಜೊತೆಯಲ್ಲಿ ಕಾಲ್ನಡಿಗೆಯಲ್ಲಿ ಪುರುಷರು, ಸ್ತ್ರೀಯರು, ಸಣ್ಣ ಮಕ್ಕಳು ಕೂಡ ಬಂದಿರುತ್ತಾರೆ. ಹೀಗೆ ಬಂದವರೆಲ್ಲ ಐದು ದಿವಸ ಜಾತ್ರೆ ಮುಗಿಯುವವರೆಗೂ ಅಷ್ಟೂರಿನಲ್ಲಿಯೇ ಉಳಿಯುತ್ತಾರೆ. ಮಾಡ್ಯಾಳದಿಂದ ಜಂಗಮರ ಜೊತೆ ಬಂದ ಭಕ್ತರೆಲ್ಲ ದಿನಕ್ಕೆ ಒಬ್ಬರಂತೆ ಜಾತ್ರೆಗೆ ಸೇರಿರುವ ಎಲ್ಲ ಜನರಿಗೂ ಪ್ರಸಾದದ ವ್ಯವಸ್ಥೆಯನ್ನು ಮಾಡಿಸುತ್ತಾರೆ. ಎಲ್ಲರನ್ನು ಒಟ್ಟಿಗೆ ಊಟಕ್ಕೆ ಸಾಲಾಗಿ ಕುಳಿಸುತ್ತಾರೆ. ಬಂದ ಭಕ್ತರ ಜೊತೆಯಲ್ಲಿ ಜಂಗಮರು ಸಹ ಊಟಕ್ಕೆ ಕುಳಿತಿರುತ್ತಾರೆ. ಶಂಖವನ್ನು ಊದಿದ ಬಳಿಕವೇ ಎಲ್ಲರೂ ಪ್ರಸಾದವನ್ನು ಸ್ವಿಕರಿಸಬೇಕು. ಸಾಲಾಗಿ ಊಟಕ್ಕೆ ಕುಳಿತಿರುವವರು ಎಲ್ಲರ ಊಟ ಮುಗಿದ ಬಳಿಕವೇ ಊಟದ ಸಾಲಿನಿಂದ ಏಳಬೇಕು. ಅಲ್ಲಿಯವರೆಗೆ ಊಟದ ಸಾಲಿನಿಂದ ಏಳುವಂತೆ ಇಲ್ಲ.

ಪ್ರಸ್ತುತದಲ್ಲಿ ಪೂಜೆಯ ಕಾರ್ಯವನ್ನು ನಡೆಸಿಕೊಂಡು ಹೋಗುವವರು ಶಿವರಾಯ್ ಒಡೆಯರು (ಜಂಗಮ). ಇವರು ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲೂಕಿನ ಮಾಡ್ಯಾಳ ಎಂಬ ಗ್ರಾಮದವರಾಗಿದ್ದಾರೆ. ಇದೇ ತಾಲೂಕಿನಲ್ಲಿ ಬರುವ ಜಿರೊಳ್ಳಿ, ಹಬ್ಬಿಯ ಜನರೂ ಸಹ ಜಂಗಮರ ಜೊತೆ ಬರುತ್ತಾರೆ. ಶಿವರಾಯ್ ಒಡೆಯರಿಗೆ ಹೋಗಿ ಸಂದರ್ಶಿಸಿದಾಗ ಇದು ನಮ್ಮ ಹಿರಿಯರು ಮಾಡಿಕೊಂಡು ಬಂದ ಸಂಪ್ರದಾಯಿಕ ಆಚರಣೆಯಾಗಿದೆ. ಇದನ್ನು ನಾವು ಕೂಡ ಮುಂದುವರೆಸಿಕೊಂಡು ಬಂದಿದ್ದೇವೆ. ಈ ಸಮಾಧಿಗೆ ನಾವು ಅಲ್ಲಮ ಪ್ರಭುವಿನ ಗುಡಿ ಎನ್ನುತ್ತೇವೆ. ಈ ಗೋರಿಯ ಕೆಳಗೆ ಶಿವಲಿಂಗವಿದೆ'' ಎಂದು ಅವರು ಹೇಳುತ್ತಾರೆ. ಆದರೆ ನೀವು ಪೂಜೆ ಮಾಡುವ ಈ ಗೋರಿಗೂ ನಿಮ್ಮ ಮನೆತನಕ್ಕೂ ಏನು ಸಂಬಂಧ? ಎಂದರೆ ಅವರು ಮೌನವಾಗುತ್ತಾರೆ. ಬಹುಶಃ ಅವರಿಗೆ ಇದರ ನೆನಪುಗಳು ಇದ್ದಂತಿಲ್ಲ. ವಂಶದ ಹಕ್ಕಿನಂತೆ ಈ ವಿಧಿಯನ್ನು ಯಾಂತ್ರಿಕವಾಗಿ ಆಚರಿಸಿಕೊಂಡು ಬಂದಿದ್ದಾರಷ್ಟೆ. ಈ ಜಾತ್ರೆಯಲ್ಲಿ ಹಿಂದೂ ಮತ್ತು ಮುಸ್ಲಿಮ ಎರಡು ಜಾತಿಯ ಜನರು ಭಾಗಿಯಾಗಿರುತ್ತಾರೆ. ಹಿಂದೂಗಳು ಜಾತ್ರೆಯಲ್ಲಿ ಒಂದು ಕಡೆ ಭಜನೆ ಮಾಡಿದರೆ, ಇನ್ನೊಂದು ಕಡೆ ಮುಸ್ಲಿಂರು ಫಾತೆ ಕೊಡುತ್ತಾರೆ. ಭಾರತದಲ್ಲಿ ಬೇರೆಲ್ಲೂ ಹೀಗೆ ಶತಮಾನಗಳಿಂದ ಇಂದಿನವರೆಗೂ ಹಿಂದೂ ಮತ್ತು ಮುಸ್ಲಿಂ ವಂಶಗಳು ಬೆರೆತು ಒಂದು ಸಮಾರಂಭವನ್ನು ಆಚರಿಸಿದ ಉದಾಹರಣೆಗಳಿಲ್ಲ. ಇದು ಸಮಗ್ರ ಸಂಸ್ಕೃತಿಗೆ ವಿಶಿಷ್ಟ ಉದಾಹರಣೆಯಾಗಿದೆ. ಜಾತಿ ಮತಗಳ ತಡೆಗಳನ್ನು ದಾಟಿದ ಅಹಮದ-ಶಹ-ವಲೀಯ ರಾಜಕೀಯ ಜೀವನದ ಸುಂದರ ಮುಖವನ್ನು ಇದು ಪ್ರತಿಬಿಂಬಿಸುತ್ತದೆ.

ಆದರೆ ಇಲ್ಲಿ ಎರಡು ಪ್ರಮುಖವಾದ ಅಂಶಗಳು ಕಂಡುಬರುತ್ತವೆ. ಅನೇಕ ಹೆಣ್ಣುಮಕ್ಕಳು ಕಾಲ್ನಡಿಗೆಯಿಂದ ದೂರದ ಊರುಗಳಿಂದ ಬಂದು ದೇವರಿಗೆ ಹರಕೆಯನ್ನು ಹೊರುತ್ತಾರೆ. ಆದರೆ ಈ

ಗುಂಬಜ್‌ನ ಒಳಗೆ ಹೆಣ್ಣು ಮಕ್ಕಳಿಗೆ ಪ್ರವೇಶವಿಲ್ಲ. ಇನ್ನೊಂದು ವಿಷಯವೆಂದರೆ ಸಾಲುಗಳಲ್ಲಿರುವ ಎಲ್ಲಾ ಗುಂಬಜ್‌ಗಳಿಗೂ ಜಂಗಮರು ಪೂಜೆಯನ್ನು ಮಾಡುತ್ತಾರೆ. ಆದರೆ ಕೊನೆಯದೊಂದು ಗುಂಬಜ್‌ಗೆ ಜಂಗಮರು ಪೂಜೆ ಮಾಡುವುದಿಲ್ಲ. ನಿಂತ ಜಾಗದಿಂದಲೇ ಆ ಗೋರಿಯ ಕಡೆಗೆ ಮುಖ



ಮಾಡ್ಯಾಳದ ಜಂಗಮರು

ಮಾಡಿ ನೀರು ಒಗೆಯುತ್ತಾರೆ. ಯಾಕೆ ಹೀಗೆ ಮಾಡುತ್ತೀರಿ? ಎಂದು ಕೇಳಿದರೆ ಅದಕ್ಕೆ ಶಿವರಾಯ್ ಒಡೆಯರು ಇನ್ನೊಂದು ರೀತಿಯ ಐತಿಹ್ಯವನ್ನು ಹೇಳುತ್ತಾರೆ.

ಪ್ರತಿವರ್ಷದಂತೆ ಜಂಗಮರು ಸಾಲಾಗಿರುವ ಎಲ್ಲ ಗುಂಬಜ್‌ಗಳಿಗೆ ಪೂಜೆಯನ್ನು ಮಾಡುತ್ತಾ ಹೋದರು. ಕೊನೆಗೆ ಆ ಗುಂಬಜ್‌ನ ಬಳಿಗೆ ಬಂದರು. ಅಲ್ಲಿ ಬಂದಾಗ ಒಬ್ಬ ಕೌಡ್ಯಾ ಎನ್ನುವನ ಮಗ ಏಕಾ ಏಕಿ (ಒಮ್ಮಿಂದೊಮ್ಮೆ) ವಾಂತಿ, ಬೇಧಿ ಮಾಡಿಕೊಂಡು ಅದೇ ಸ್ಥಳದಲ್ಲೇ ಸಾಯುತ್ತಾನೆ. ಇದರಿಂದಾಗಿ ಎಲ್ಲ ಗುಂಬಜ್‌ಗೆ ಪೂಜೆ ಸಲ್ಲಿಸುತ್ತೇವೆ. ಆದರೆ ಆ ಗುಂಬಜ್‌ಗೆ ಮಾತ್ರ ಪೂಜೆ ಸಲ್ಲಿಸುವುದಿಲ್ಲವೆಂದು ಒಡೆಯರ್ ಈ ರೀತಿಯ ಐತಿಹ್ಯಯೊಂದು ಹೇಳುತ್ತಾರೆ.

ಜಂಗಮರಾಗಿರುವ ಶಿವರಾಯ್ ಒಡೆಯರಿಗೆ ಶಾಗೂ ಅಲ್ಲಮ ಪ್ರಭುವಿಗೂ ನಿಮ್ಮ ವಂಶಕ್ಕೂ ಯಾವ ರೀತಿಯ ಸಂಬಂಧವಿದೆ ಎಂದು ಕೇಳಿದರೆ ಅವರು ಇದರ ಬಗ್ಗೆ ಹೆಚ್ಚಾಗಿ ಗೊತ್ತಿಲ್ಲ. "ನಮ್ಮ ಹಿರಿಯರು ಈ ಪ್ರಭುವಿನ ಮೇಲೆ ಭಕ್ತಿಯನ್ನು ಇಟ್ಟುಕೊಂಡು ಪೂಜೆ ಮಾಡುತ್ತಾ ಬಂದಿದ್ದಾರೆ. ಆ ಕಾರ್ಯವನ್ನು ನಾವು ಮುಂದುವರೆಸಿಕೊಂಡು ಬಂದಿದ್ದೇವೆ. ನಮ್ಮ ಭಕ್ತಿ ಆ ಪ್ರಭುವಿನ ಮೇಲೆ ಇದೆ



ಅವನ ಆರ್ಶೀವಾದ ನಮ್ಮ ಮೇಲಿದ್ದು, ಕಾಲಕಾಲಕ್ಕೆ ಮಳೆ ಬೆಳೆಯಾಗುತ್ತಿದೆ'' ಎಂದು ಅವರು ಹೇಳುತ್ತಾರೆ.

ಆದರೆ ಈ ಮಾಡ್ಯಾಳದ ಜಂಗಮರು ವಾಸ್ತವವಾಗಿ ಜಂಗಮರಲ್ಲ 'ಕುಡುವಕ್ಕಲಿಗರು'. ಮಾಡ್ಯಾಳದಲ್ಲಿರುವ ಅಲ್ಲಮ ಪ್ರಭುವಿನ ದರಗಾದ ಪೂಜಾರಿಕೆ ಮಾಡುತ್ತಿರುವ ಈ ಒಡೆಯರು, ಉರುಸಿನ ಸಂದರ್ಭದಲ್ಲಿ ಧರಿಸುವ ವೇಷ ಗಡ್ಡ, ಹಸಿರು ಪೇಟ, ಉದ್ದನೆಯ ನಿಲುವಂಗಿ (ಗುದಡಿ) ಕುದುರೆ ಸವಾರಿಕೆ ಇವೆಲ್ಲವನ್ನು ನೋಡಿದರೆ ಸೂಫಿ ವೇಷವೇ ಆಗಿದೆ ಅನಿಸುತ್ತದೆ. ಈ ಜಂಗಮರಿಗೆ ಬಹಮನಿ ಅರಸರ ಕಾಲದ ಇನಾಮುಗಳಿವೆ ಎಂದು ಎಲ್.ಆರ್.ಕುಲಕರ್ಣಿಯವರು ಉಲ್ಲೇಖಿಸಿದ್ದು, ಅವು ಈ ಕೆಳಗಿನಂತಿವೆ.

ಊರಿನ ಹೆಸರು	ಸರ್ವೆ.ನಂ.	ಎಕರೆ
೧. ಜಿರೋಲ್ಲಿ	೪೮	೨೭
೨. ವಾಗ್ದಾರಿಗಿ	೧೨೪	೩೬
೩. ಮಾಡ್ಯಾಳ	೨೩೫	೨೫
೪. ಮಾಡ್ಯಾಳ	೨೩೬	೮
೫. ಮಾಡ್ಯಾಳ	೪೫೪	೨೩
		೧೧೯

(ಕುಲಕರ್ಣಿ, ೧೯೭೭: ೩೧೪)

ಈ ಜಂಗಮರಿಗೆ ಸುಮಾರು ೧೧೯ ಎಕರೆ ಭೂಮಿಯು ಬೇರೆ ಬೇರೆ ಗ್ರಾಮಗಳಲ್ಲಿ ಈ ಅಲ್ಲಮ ಪ್ರಭುವಿನ ಗುಡಿಯ ವಾರಸುದಾರಿಕೆಗಾಗಿ ಇನಾಮುಗಳ ರೂಪದಲ್ಲಿ ಕೊಡಲಾಗಿದೆ. ಆದರೆ ಈ ಅಲ್ಲಮ ಪ್ರಭುವಿನ ದೇವಸ್ಥಾನವೆಂದು ಹಿಂದೂಗಳು ಹೇಳುವ ಈ ಗುಂಬಜ್‌ನೊಳಗೆ ಮಹಿಳೆಯರಿಗೆ ಯಾಕೆ ಪ್ರವೇಶವಿಲ್ಲ? ಸಾಮಾನ್ಯವಾಗಿ ಎಲ್ಲ ಹಿಂದೂಗಳ ದೇವಾಲಯಗಳೆಂದು ಹೇಳುವ ಗುಡಿಗಳಲ್ಲಿ ಮಹಿಳೆಯರಿಗೆ ಪ್ರವೇಶವಿರುತ್ತದೆ. ಇಲ್ಲಿ ಯಾಕೆ ಇಲ್ಲ? ಸಾಮಾನ್ಯವಾಗಿ ಮುಸ್ಲಿಮರ ದರ್ಗಾಗಳಿಗೆ ಮಹಿಳೆಯರ ಪ್ರವೇಶವಿಲ್ಲದಿರುವುದನ್ನು ಕಾಣುತ್ತೇವೆ. ಹಾಗಾದರೆ ಈ ಗೋರಿಯು ಅಲ್ಲಮ ಪ್ರಭುವಿನ ದೇವಸ್ಥಾನವೊ ಅಥವಾ ಬಹಮನಿ ಅರಸ ಅಹಮದ್-ಶಹ-ವಲೀ ಗೋರಿಯೊ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಹಿಂದೂಗಳ ನಂಬಿಕೆಯಂತೆ ಇದು ಅಲ್ಲಮ ಪ್ರಭುವಿನ ಗುಡಿಯೂ ಹೌದು, ಮುಸ್ಲಿಮರ ನಂಬಿಕೆಯಂತೆ ಅಹಮದ್-ಶಹ-ವಲೀಯ ಗೋರಿಯೂ ಆಗಿತ್ತೆಂದು ತಿಳಿದುಬರುತ್ತದೆ.

ಟಿಪ್ಪಣಿಗಳು

೧. ಶಾಂತಪ್ಪ ದೇವರಾಯ ಇವರು ದೇಶಾಂಶ ಹುಡುಗಿ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಪಡೆದಿದ್ದಾರೆ. ಬೀದರ್ ಪಟ್ಟಣದ ಅಲ್ಲಮ ಪ್ರಭುನಗರದಲ್ಲಿ ವಾಸವಾಗಿದ್ದಾರೆ. ಪ್ರಾರಂಭದಲ್ಲಿ ಶಾಲಾ ಶಿಕ್ಷಕರ ಹುದ್ದೆಗೆ ಸೇರಿದ ಇವರು ಹುದ್ದೆಯಲ್ಲಿ ಬಡ್ತಿಯನ್ನು ಹೊಂದುವುದರ ಮೂಲಕ ಮುಂದೆ ಶಾಲಾ ಮುಖ್ಯಾಧಿಕಾರಿ ಹುದ್ದೆಗೆ ಸೇರಿ ನಂತರ ಶಾಲಾ ತನಿಖಾಧಿಕಾರಿ ಹುದ್ದೆಯಿಂದಲೇ ನಿವೃತ್ತಿಯನ್ನು ಪಡೆದರು. ದೇಶಾಂಶ ಹುಡುಗಿಯವರು ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಸಣ್ಣಪುಟ್ಟ ಕಥೆ ಮತ್ತು ಕವನಗಳನ್ನು ರಚಿಸಿದ್ದಾರೆ. ಬೀದರ್ ಜಿಲ್ಲಾ ದರ್ಶನದಲ್ಲಿ ಇವರ ಲೇಖನಗಳು ಪ್ರಕಟಗೊಂಡಿವೆ. ಬೀದರ್ ತಾಲೂಕಿನ ಭಾತಂಬ್ರಾ ಗ್ರಾಮದಲ್ಲಿ ನೀಡಿದ 'ಬೀದರ್ ಜಿಲ್ಲೆ ತತ್ವಪದಕಾರರು' ಎಂಬ ಪ್ರಚಾರೋಪನ್ಯಾಸ ಪುಸ್ತಕವನ್ನು ಪ್ರಕಟಿಸಿದ್ದಾರೆ (೧೯೯೮) ಇದು ೧೨೩ನೇ ಪ್ರಚಾರೋಪನ್ಯಾಸ ಮಾಲೆಯಾಗಿದೆ.

ಬೀದರ್‌ನ ಇತಿಹಾಸದ ಬಗ್ಗೆ ಅಪಾರವಾಗಿ ತಿಳಿದಿರುವ ಇವರು ಬೀದರ್ ಕೋಟೆ ನಿರ್ಮಾಣಕ್ಕೆ ಸಂಬಂಧಿಸಿದ ಐತಿಹ್ಯಗಳನ್ನು ಹೇಳುತ್ತಾರೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ಐತಿಹ್ಯವನ್ನು ಹೇಳಿದ್ದಾರೆ. ಫೆಬ್ರವರಿ ೨೨ರಂದು ಬೆಳಿಗ್ಗೆ ಹತ್ತುಗಂಟೆಗೆ ಅವರನ್ನು ಅವರ ಮನೆಯಲ್ಲಿ ಭೇಟಿ ಮಾಡಲಾಯಿತು. ಸ್ವಲ್ಪ ಚಳಿಗಾಲದ ಸಮಯ ಇದ್ದುದರಿಂದ ದಿನಪತ್ರಿಕೆ ಓದುತ್ತಾ ಮನೆಯ ಹೊರಗೆ ಕಟ್ಟೆಯ ಮೇಲೆ ಕುಳಿತಿದ್ದರು. ನಾನು ಹೋಗಿ ನನ್ನ ಪರಿಚಯ ಮತ್ತು ಸಂಶೋಧನೆಗಾಗಿ ಕೈಗೊಂಡಿರುವ ವಿಷಯದ ಬಗ್ಗೆ ತಿಳಿಸಿದೆ. ನಂತರ ಅವರು ಮನೆಯೊಳಕ್ಕೆ ಕರೆದು 'ಇವಳು ಪಾರ್ವತಿ ನನ್ನ ಧರ್ಮ ಪತ್ನಿ' ಎಂದು ಅವರ ಪರಿಚಯ ಮಾಡಿಕೊಟ್ಟರು. ನಂತರ ಮಗ ಸೊಸೆ ಮತ್ತು ಮೊಮ್ಮಗನ ಪರಿಚಯ ತಿಳಿಸಿದರು. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಒದಗಿಸಿದರು.

೨. ಇಂಥ ಸೂಫಿ ಸಂತರಲ್ಲಿ ಗುಲ್ಬರ್ಗಾದ ಬಂದೇ ನವಾಜರು ಒಬ್ಬರಾಗಿದ್ದಾರೆ. ಇಂಥ ಸೂಫಿಗಳು ಕಾಲ-ದೇಶವನ್ನು ಮೀರಿದ ನೆಲೆ ಪಡೆದುಕೊಳ್ಳುವ ಸಂತರು ಮತ ಪಂಥಗಳನ್ನು ಮೀರುವ ನೆಲೆಯನ್ನು ಪಡೆದುಕೊಂಡು ಬಿಡುತ್ತಾರೆ. ಅನೇಕ ಸೂಫಿಗಳು ಮಹಾನುಭಾವ ಪಂಥಕ್ಕೂ ದತ್ತ ಪಂಥಕ್ಕೂ ಸೇರಿ ಹೋಗಿದ್ದಾರೆ. ಉದಾಹರಣೆಗೆ ಇತ್ತೀಚೆಗೆ ನಿರ್ಮಾಣವಾಗಿರುವ ಬಾಬಾ ಬುಡನ್‌ಗಿರಿ ಗುಲ್ಬರ್ಗಾದ ಬಂದೇ ನವಾಜನು ಕೇಶವ ಚೈತನ್ಯ, ಆಳಂದೆಯ ಲಾಡ್ಲ ಮಶಾಯಿಕನು ರಾಘವ ಚೈತನ್ಯ, ಇವರಿಬ್ಬರ ಗುರುವಾದ ದೆಹಲಿಯ ಪ್ರಸಿದ್ಧ ಚಿಸ್ತಿ ಸೂಫಿ ನಾಸಿರುದ್ದೀನ್‌ನು ನಾಗನಾಥ. ವಾಸ್ತವವಾಗಿ ನಾಸೀರುದ್ದೀನ್‌ನೇ (೧೩೫೬) ದಖ್ಖನಿಗೆ ಬರಲೇ ಇಲ್ಲ. ಬದಲಿಗೆ ತನ್ನ ಶಿಷ್ಯ ಬಂದೇ ನವಾಜನನ್ನು ಗುಲ್ಬರ್ಗಾಕ್ಕೆ ಕಳುಹಿಸಿಕೊಟ್ಟನು. ಹಾಗಾದರೆ ಇಲ್ಲಿ ಸೂಫಿಗಳೆಂದು ಕರೆಯಿಸಿಕೊಳ್ಳುವರು ಹಿಂದೂಗಳೊ ಮುಸ್ಲಿಮರೊ ಎಂಬ ಸಮಸ್ಯೆಯು ಉಂಟಾಗುತ್ತದೆ. ಕನ್ನಡ ಕಥೆಗಾರ ಮಹಮದ್ ಕಟ್ಪಾಡಿ, ಒಮ್ಮೆ ಗುಲ್ಬರ್ಗೆಯ ಬಂದೇನವಾಜ್ ದರಗಾದಲ್ಲಿ ಒಬ್ಬ ಸೂಫಿ ವ್ಯಕ್ತಿಯ ಜೊತೆ ಮಾತಾಡುತ್ತ "ನೀವು ಸುನ್ನಿ ಅಥವಾ ಷಿಯಾ ಯಾವ ಪಂಗಡಕ್ಕೆ ಸೇರಿದವರು" ಎಂಬ ಪ್ರಶ್ನೆಯನ್ನು ಕೇಳುತ್ತಾರೆ. ಆಗ ಅವನು "ನಾವು ಹಿಂದೂಗಳು ಅಲ್ಲ ಮುಸ್ಲಿಂರೂ ಅಲ್ಲ. ನಾವು ಸೂಫಿಗಳು ಹೀಗಿರುವಾಗ ನಾವು ಸುನ್ನಿ ಷಿಯಾ ಆಗುವುದು ಹೇಗೆ ಸಾಧ್ಯ ಎಂಬ ಪ್ರಶ್ನೆಯನ್ನು ಕೇಳುತ್ತಾನೆ ಎಂದು ಉಲ್ಲೇಖಿಸಿದ್ದಾರೆ. ತರೀಕೆರೆಯವರು ಭೇಟಿ ಮಾಡಿದ ಉತ್ತರಭಾರತದ ಸೂಫಿ 'ಲಿಯಾಕತ್

ಹುಸೇನ್' ಎಂಬುವನು 'ಹಮ್ ಮುಸಲ್ಮಾನ್ ನಹಿ ಸೂಫಿ ಹ್ಞೂಂ' ಎಂದೇ ಹೇಳಿದನಂತೆ (ತರೀಕೆರೆ, ೧೯೯೮: ೨೩). ಈ ಉತ್ತರಗಳು ಚಾರಿತ್ರಿಕ ಸತ್ಯವೊಂದನ್ನು ಹೇಳುತ್ತಿವೆ. ಆ ಸತ್ಯವೆಂದರೆ ಸೂಫಿಸಂ ಮೂಲತಃ ಒಂದು ತತ್ವವಾಗಿದೆ. ಅನುಭಾವ ಪಂಥವಾಗಿದೆ. ಅದು ಸಾಂಪ್ರದಾಯಿಕ ಇಸ್ಲಾಂ ಧರ್ಮ ಅಲ್ಲ. ಆದರೆ ಸೂಫಿ ಪಂಥವನ್ನು ಇಸ್ಲಾಮಿನ ಅನುಭಾವಿ ಶಾಖೆ ಎಂದೇ ವ್ಯಾಖ್ಯಾನಿಸಿಕೊಂಡು ಬರಲಾಗಿದೆ. ಸೂಫಿ ಎಂದರೆ ಅನುಭಾವಿಗಳು ಎಂದರ್ಥ. ಇವರು ಉಣ್ಣೆಯ ನಿಲುವಂಗಿ ಧರಿಸುತ್ತಿದ್ದರು. ಅಂದರೆ ಸೂಫಿಗಳು ಉಣ್ಣೆಯ ಕಂಬಳಿಯಿಂದ ಮಾಡಿದ ಬಿಳಿ ಗುದಡಿಯನ್ನು ಧರಿಸುತ್ತಿದ್ದರು. ಶವದ ಉಡುಪಿನಂತಿರುತ್ತಿದ್ದ ಗುದಡಿಯು ಫಕೀರತನದ ಪರಮ ಸಂಕೇತವಾಗಿತ್ತು. ರಹಮತ್ ತರೀಕೆರೆ ಅವರು ರಾಜಕೀಯ ಉದ್ದೇಶಗಳಿಗಾಗಿ ಇಂಥ ಸೂಫಿಗಳನ್ನು ಬೇರೆ ಬೇರೆ ದೇಶಗಳಿಂದ ಕರೆಯಿಸಿಕೊಳ್ಳುತ್ತಿದ್ದರು ಎಂದು ಉಲ್ಲೇಖಿಸಿದ್ದಾರೆ.

ಹೀಗೆ ಕರೆಯಿಸಿಕೊಳ್ಳುವುದರಲ್ಲಿ ರಾಜಕೀಯ ಉದ್ದೇಶಗಳು ಕೂಡ ಅಡಗಿರುತಿದ್ದವು. ತಮ್ಮ ಆಡಳಿತಕ್ಕಾಗಿ ಅಧಿಕಾರಿಗಳನ್ನು ಪರ್ಶಿಯಾದಿಂದ ಕರೆಯಿಸಿಕೊಳ್ಳುವ ನೀತಿ ಅನುಸರಿಸುತ್ತಿದ್ದ ಬಹಮನಿಗಳು ಸೂಫಿಗಳನ್ನು ಸಹ ಕರೆಯಿಸಿಕೊಳ್ಳುತ್ತಿದ್ದರು. ಅಹಮದ್-ಶಹ ಬಹಮನಿಯು ಪರ್ಶಿಯಾದಿಂದ ನಿಯಾಮತ್ ಉಲ್ ಖಾದ್ರಿಯನ್ನು ಕರೆಯಿಸಿಕೊಳ್ಳಲು ಮೂರು ಸಲ ನಿಯೋಗಗಳನ್ನು ಕಳುಹಿಸಿದನೆಂದು ಉಲ್ಲೇಖಿಸಿದ್ದಾರೆ (ತರೀಕೆರೆ, ೧೯೯೮: ೩೯).

ಇಲ್ಲಿ ಸಮಸ್ಯೆ ಇರುವುದು ಅಲ್ಲಮ ಶಬ್ದದ ಮೂಲ ಶೋಧದಲ್ಲಿ ಅಲ್ಲ. ಕರ್ನಾಟಕದ ಅಲ್ಲಮ ಪ್ರಭುವಿನ ಗುಡಿಗಳಲ್ಲಿ ಕೊಡೇಕಲ್, ಮಾಡ್ಯಾಳ, ಜೀರೊಳ್ಳಿ, ಹಬ್ಬಿ, ಅಷ್ಟೂರ ಮುಂತಾದ ಕಡೆ ಅಲ್ಲಮ ಪ್ರಭುವಿನ ಗುಡಿಗಳಿವೆ. ಆದರೆ ಇವುಗಳ ವಾಸ್ತು ದರಗಾ ಮಾದರಿಯಲ್ಲಿದೆ. ಆಚರಣೆಯು ಕೂಡ ದರಗಾಗಳಲ್ಲಿ ಇರುವಂತೆಯೇ ಇದೆ. ಅಲ್ಲಮ ಶಬ್ದ, ಅಲ್ಲಮ ಪ್ರಭು ಗುಡಿಗಳ ಆಕಾರ ಹಾಗೂ ಅಲ್ಲಿ ನಡೆಯುವ ಆಚರಣೆಗಳು ಅಲ್ಲಮ ಪ್ರಭು ಪರಂಪರೆಯು ಸೂಫಿಧಾರೆಯ ಜೊತೆಗೆ ಬೆರೆತಿರುವತ್ತ ಈಶಾರೆ ಮಾಡುತ್ತಿವೆ. ಆದರೆ ಅದು ಹೇಗೆ ಎಂಬುದು ಖಚಿತವಾಗುವುದಿಲ್ಲ. ಆದರೆ ಈ ಅಲ್ಲಮ ಪ್ರಭುವಿನ ಬಗ್ಗೆ ರಹಮತ್ ತರೀಕೆರೆಯವರು ಈ ರೀತಿ ಹೇಳುತ್ತಾರೆ.

ಮರಾಠಿ ಗ್ರಂಥಗಳ ಆಧಾರದ ಮೇರೆಗೆ ವಡಬಾಳ ನಾಗನಾಥನಿಗೆ ಪೈಠಾಣದಿಂದ ಅಲ್ಲಮಖಾನ್ ಎಂಬ ಶಿಷ್ಯನಿದ್ದ. ಈತನಿಗೆ ಅಲ್ಲಮಣ್ಣ, ಅಲ್ಲಮಪ್ರಭು, ಅಲಮಾಪ್ರಭು ಶಹದತ್ತ ಅಲಮ ಮುಂತಾದ ಹೆಸರುಗಳಿದ್ದವು. ಗುರುವಿನ ಅಣತಿಯಂತೆ ಇವನು ಬೀದರ ಸೀಮೆಗೆ ಬಂದು ನೆಲೆಸಿದ; ಇವನು ಮರಾಠಿ ಕವಿಯೂ ಆಗಿದ್ದ. ಈ ಹೆಸರುಗಳಲ್ಲಿ ಆಲಮ್ (ಅರಬ್ಬಿ) ಶಹಾ (ಫಾರಸಿ) ಪ್ರಭು (ಸಂಸ್ಕೃತಿ) ಅಣ್ಣ (ಕನ್ನಡ) ಹಲವು ಭಾಷೆಗಳ ಬೆರಕೆಯ ಹೆಸರನ್ನುಳ್ಳ ವ್ಯಕ್ತಿ ಶಹಾ (ದೊರೆ) ಕೂಡ ಆಗಿದ್ದಾನೆ. ಈ ವ್ಯಕ್ತಿಯೇ ಅಷ್ಟೂರಿನ ಅಲ್ಲಮಪ್ರಭು ಆಗಿರಬಹುದೇ? ಬೀದರ್‌ನ್ನು ಆಳಿದ (೧೪೨೨-೩೬) ಅಹಮದ್-ಶಹ ಬಹಮನಿಯ ಸಮಾಧಿ ಅಷ್ಟೂರಿನಲ್ಲಿದ್ದು, ಇವನ ದರ್ಗಾದ ಬಾಗಿಲ ಚೌಕಟ್ಟಿನ ಮೇಲೆ ದೇವನಾಗರಿಯಲ್ಲಿ 'ಆಲಮಪ್ರಭು' ಎಂದು ಬರೆಯಲಾಗಿದೆ. ಇವನು ಬಂದೇನವಾಜ್‌ನ ಶಿಷ್ಯನಾಗಿದ್ದನು. ಬಂದೇನವಾಜ್ ನಿಧನದ ಬಳಿಕ ಅಹಮದ್-ಷಾ-ನಿಯಾಮತ್ ಉಲ್ ಸೂಫಿಯ ಪ್ರೇರಣೆಯಿಂದ ಖಾದ್ರಿಯ ಪಂಥಕ್ಕೆ ಸೇರಿದನು. ಸೂಫಿ ಪಂಥದಲ್ಲಿ

ದೊರೆಗಿರುವ ಶ್ರದ್ಧೆಯನ್ನು ಕಂಡು ನಿಯಾಮತನು ಅವನಿಗೆ "ವಲಿ' ಎಂದು ಕರೆದಿದ್ದರಿಂದ ಅಹಮದ್ ಶಾ ಹೆಸರಿಗೆ ವಲಿ ಶಬ್ದ ಸೇರಿಕೊಂಡಿತು ಎಂದು ಉಲ್ಲೇಖಿಸಿದ್ದಾರೆ (ತರೀಕೆರೆ, ೧೯೯೮: ೬೫).

೩. ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಬರುವ ಒಂದು ಗ್ರಾಮವೆ ಈ ಮಾಡ್ಯಾಳ ಆಗಿದೆ. ಈ ಗ್ರಾಮದಲ್ಲಿ ಅನುವಂಶಿಕವಾಗಿ ಪೊಲೀಸ್ ಪಾಟೀಲನಾಗಿರುವ ಶೈವ ಜಂಗಮನು ಈ ಅಲ್ಲಮ ಪ್ರಭು ಎಂತಲೆ ಕರೆಯು ಗುಂಬಜ್‌ಗೆ ಬರುತ್ತಾರೆ. ಇವರು ಮೂಲತ ಕುಡುವೊಕ್ಕಲಿಗ ಜಂಗಮರು ಆಗಿದ್ದಾರೆ. ಇವರಿಗೆ ಈಗ ಒಡೆಯರ್ ಎಂಬ ಹೆಸರಿನಿಂದ ಕರೆಯುತ್ತಾರೆ. ಈ ಮಾಡ್ಯಾಳವು ಸುಮಾರು ಬೀದರ್‌ನಿಂದ ೨೦೦ ಕಿ.ಮೀ. ದೂರದಲ್ಲಿ ಇದೆ. ಇಷ್ಟು ದೂರದಿಂದ ಜನ ಕಾಲ್ನಡಿಗೆಯಲ್ಲಿ ಬಂದು ಜಾತ್ರೆಯಲ್ಲಿ ಭಾಗಿಯಾಗಿರುತ್ತಾರೆ. ಜಂಗಮರು ಮಾತ್ರ ಕುದುರೆ ಮೇಲೆ ಕುಳಿತು ಬರುತ್ತಾರೆ. ಈಗ ಆನುವಂಶಿಕವಾಗಿ ಶಿವರಾಯ್ ಒಡೆಯರ್ ಎಂಬುವರು ಇದರ ವಾರಸುದಾರರಾಗಿ ಉಸ್ತುವಾರಿ ವಹಿಸಿದ್ದಾರೆ. ಇವರ ತಾತ ಮುತ್ತಾತರ ಕಾಲದಿಂದಲೂ ಅನುಸರಿಸಿಕೊಂಡು ಬಂದಿರುವ ಸಂಪ್ರದಾಯ, ಪದ್ಧತಿ, ಆಚರಣೆಗಳನ್ನು ಇವರು ಈಗಲೂ ಚಾಚು ತಪ್ಪದೆ ಮಾಡುತ್ತಿದ್ದಾರೆ.

ಅಧ್ಯಾಯ ೮

ಮಹಮೂದ್ ಗವಾನ್‌ನ ಕೊಲೆಯ ಬಗೆಗಿನ ಐತಿಹ್ಯಗಳು

ಎಂಟನೆಯ ಅಧ್ಯಾಯದಲ್ಲಿ ನಾಲ್ಕು ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮಹಮೂದ್ ಗವಾನ್‌ನು ನಿರ್ಮಿಸಿದ ಮಹಮೂದ್ ಗವಾನ್ ಮದರಸಾದ ಬಗ್ಗೆ ಇರುವ ಲಿಖಿತ ಆಕರಗಳ ಬಗ್ಗೆ ಹೇಳಲಾಗಿದೆ. ಎರಡನೆಯ ಭಾಗದಲ್ಲಿ ಮದರಸಾದ ವಿನ್ಯಾಸದ ಬಗ್ಗೆ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಉಲ್ಲೇಖಿಸಲಾಗಿದೆ. ಮೂರನೆಯ ಭಾಗದಲ್ಲಿ ಮುಖ್ಯವಾಗಿ ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ಇರುವ ಲಿಖಿತ ಆಕರಗಳನ್ನು ಚರ್ಚಿಸಲಾಗಿದೆ. ನಾಲ್ಕನೆಯ ಭಾಗದಲ್ಲಿ ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ವಕ್ತೃಗಳಿಂದ ಸಂಗ್ರಹಿಸಲಾದ ವಿಭಿನ್ನ ಐತಿಹ್ಯಗಳ ಬಗ್ಗೆ ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ.

ಖ್ವಾಜಾ ಮಹಮೂದ್ ಗವಾನ್ ಮೂಲತಃ ಉತ್ತರ 'ಇರಾನಿನ ರೆಸ್ತಾ' ಎಂಬ ಪಟ್ಟಣದ ಸಮೀಪ ಇರುವ ಗವಾನ್ ಎಂಬ ಊರಿನಲ್ಲಿ ಕ್ರಿ.ಶ.೧೪೧೧ರಲ್ಲಿ ಒಂದು ಶ್ರೀಮಂತ ಕುಟುಂಬದಲ್ಲಿ ಜನಿಸಿದನು. ಉತ್ತಮ ಶಿಕ್ಷಣವನ್ನು ಪಡೆದ ಮಹಮೂದ್ ಗವಾನ್ ವ್ಯಾಪಾರ ವೃತ್ತಿಯನ್ನು ಅವಲಂಬಿಸಿದನು. ಕ್ರಿ.ಶ.೧೪೫೩ರಲ್ಲಿ ಮಹಮೂದ್ ಗವಾನ್ ಬೀದರ್‌ನ ಸುಪ್ರಸಿದ್ಧ ಮುಸ್ಲಿಂ ಸಂತ ಮಹಿಬುಲ್ಲಾ ಕಿರ್ಮಾನಿಯ ಕೀರ್ತಿಯನ್ನು ಕೇಳಿ ಅವನನ್ನು ಸಂಧಿಸಲು ಬೀದರ್‌ಗೆ ಪ್ರಯಾಣ ಬೆಳೆಸಿದನು (ರಾಮಲಿಂಗಪ್ಪ, ೧೯೯೯: ೨೧೩). ಮಧ್ಯಕಾಲೀನ ಕರ್ನಾಟಕದ ಚರಿತ್ರೆಯಲ್ಲಿ ಮಹಮೂದ್ ಗವಾನ್ ಒಬ್ಬ ಆಕರ್ಷಕ ವ್ಯಕ್ತಿ ಆಗಿದ್ದನು. ಇವನು ತನ್ನ ೪೨ನೇ ವಯಸ್ಸಿನಲ್ಲಿ ಗಿಲಾನ್‌ನಿಂದ ವ್ಯಾಪಾರಕ್ಕೆಂದು ಕ್ರಿ.ಶ.೧೪೫೩ರಲ್ಲಿ ಬೀದರ್‌ಗೆ ಬಂದಿದ್ದಾನೆ ಎಂದು ಬಸವರಾಜ ಎಸ್.ಅಕ್ಕಿ ಉಲ್ಲೇಖಿಸಿದ್ದಾರೆ (ಬಸವರಾಜ, ೨೦೦೪: ೬೩).

ಬಹಮನಿ ಅರಸನ ಪ್ರಧಾನಿಯಾಗಿ ಅವನ ಪ್ರಭಾವ ಮುಖ್ಯವಾಗಿ ಇದೇ ರಾಜ್ಯದ ಬುನಾದಿಗೆ ಕಾರಣನಾದವನು. ಇವನ ಆಳ್ವಿಕೆಯ ಕಾಲದಲ್ಲಿ ಬಹಮನಿ ಸಾಮ್ರಾಜ್ಯ ಸರ್ವತೋಮುಖ ಬೆಳವಣಿಗೆ ಕಂಡಿತು. ಇವನೊಬ್ಬ ದಕ್ಷ ಆಡಳಿತಗಾರನಾಗಿದ್ದನು.

ವ್ಯಾಪಾರಕ್ಕೆಂದು ಬೀದರ್ ನಗರವನ್ನು ಪ್ರವೇಶಿಸಿದ ಮಹಮೂದ್ ಗವಾನ್‌ನು ಹುಮಾಯೂನ್ ಶಹನ ಆಳ್ವಿಕೆಯ ಕಾಲದಲ್ಲಿ ಬಹಮನಿಯ ರಾಜಕೀಯ ರಂಗವನ್ನು ಪ್ರವೇಶಿಸಿದನು. ತನ್ನ ಕರ್ತವ್ಯ ನಿಷ್ಠೆ ಮತ್ತು ಚತುರತೆಯಿಂದ ಅಲ್ಲಾವುದ್ದೀನ್‌ನ ಆಸ್ಥಾನದಲ್ಲಿ ಸೇವಕನಾಗಿ ಸೇರಿಕೊಂಡನು. ಮುಂದೆ ಸುಲ್ತಾನ್ ಹುಮಾಯೂನ್ ಶಹನ ಆಳ್ವಿಕೆಯ ಕಾಲದಲ್ಲಿ ಇವನನ್ನು ಹುದ್ದೆಯಲ್ಲಿ ಬಡ್ತಿಯನ್ನು ನೀಡಿ ಮಲ್ಲಿಕ್ ನಾಯಿಬ್ ಎಂಬ ಹುದ್ದೆಗೆ ನೇಮಕ ಮಾಡಲಾಯಿತು. ಸುಲ್ತಾನ ಹುಮಾಯೂನ್‌ನ ಮರಣದ ನಂತರ ಅಧಿಕಾರವನ್ನೇರಿದ ಸುಲ್ತಾನ ನಿಜಾಮ್ ಶಹನ ಆಳ್ವಿಕೆ ಕಾಲದಲ್ಲಿ ಗವಾನ್‌ನಿಗೆ ತನ್ನ ಶಕ್ತಿ ಸಾಮರ್ಥ್ಯ ತೋರಿಸುವ ಅವಕಾಶ ಒದಗಿತ್ತು. ನಿಜಾಮ್ ಶಹನ ಆಳ್ವಿಕೆಯ ಕಾಲದಲ್ಲಿ ಮಾಳವದ

ಸುಲ್ತಾನನು ಬಹಮನಿಯ ರಾಜ್ಯದ ಮೇಲೆ ದಂಡೆತ್ತಿ ಬಂದಾಗ ಮಹಮೂದ್ ಗವಾನ್‌ನು ತನ್ನ ಅಂತಿಮ ಸಾಹಸದಿಂದ ವೈರಿಗಳನ್ನು ಹಿಮ್ಮೆಟ್ಟಿಸುವಲ್ಲಿ ಸಫಲನಾದನು. ಈ ಸಾಧನೆಯಿಂದ ಗವಾನ್‌ನ ಪ್ರತಿಷ್ಠೆಯು ಇಮ್ಮಡಿಸಿತು. ಗವಾನ್‌ನ ರಾಜನಿಷ್ಠೆ, ಪರಾಕ್ರಮ ಮತ್ತು ರಾಜನೀತಿ ಚತುರತೆಯನ್ನು ಮೆಚ್ಚಿ ಅವನಿಗೆ ರಾಜಮಾತಾ ರಾಣಿ ಮುಖ್ದಂ-ಇ-ಜಹಾನ್ ಮಹಮೂದ್‌ನಿಗೆ ಅಮೀರ್-ಉಲ್-ಉಮ್ರಾ ಎಂಬ ಬಿರುದನ್ನು ನೀಡಿ ಗೌರವಿಸಿದಳು (ಬಸವರಾಜ, ೨೦೦೪: ೨೭೬) ಮಹಮೂದ್ ಗವಾನ್‌ನಿಗೆ ಈ ಬಿರುದನ್ನು ನೀಡಿದ ರಾಜಮಾತೆಯು ಮೂರನೆ ಮಹಮದ್ ಶಹನ ತಾಯಿ ಆಗಿದ್ದಳೆಂದು ತಿಳಿದುಬರುತ್ತದೆ. ನಿಜಾಮ್ ಶಹನ ತಾಯಿ ತನ್ನ ಬಲಗೈಯಂತಿದ್ದ ಮಹಮೂದ್ ಗವಾನ್‌ನ ಮೇಲೆ ಅಪಾರ ವಿಶ್ವಾಸ ಹೊಂದಿದವಳಾಗಿದ್ದಳು. ಮುಂದೆ ಮೂರನೆ ಮಹಮೂದ್ ಶಹನು ಅಪ್ರಾಪ್ತ(೧೪) ವಯಸ್ಕನಾಗಿದ್ದರಿಂದ ಮಹಮೂದ್ ಗವಾನ್‌ನನ್ನು ಪ್ರಧಾನ ಮಂತ್ರಿಯಾಗಿ ನೇಮಕ ಮಾಡಲಾಯಿತು.

ರಷ್ಯಾದ ಪ್ರವಾಸಿ ನಿಕೇಟಿನ್ನನ ಪ್ರಕಾರ ಬೀದರ್‌ನ ಬಹಮನಿ ಸುಲ್ತಾನ ಕೇವಲ ೨೦ ವರ್ಷದ ಬಾಲಕನೆಂದು ಹೇಳಿದ್ದಾನೆ (ನಾಗೇಗೌಡ, ೧೯೬೯: ೧೭೬). ಬಹುಶಃ ಮೂರನೇ ಮಹಮದ್ ಶಹನ ಆಳ್ವಿಕೆಯ ಕಾಲದಲ್ಲಿಯೇ ಮುಹಮೂದ್ ಗವಾನ್ ಪ್ರಧಾನ ಮಂತ್ರಿ ಹುದ್ದೆಗೆ ನೇಮಕಗೊಂಡಿರಬಹುದು ಎಂದು ತಿಳಿದುಬರುತ್ತದೆ. ಏಕೆಂದರೆ ನಿಕಿಟಿನ್ನನ ಹೇಳಿಕೆ ಪ್ರಕಾರ ೧೪೫೮-೬೧ ಈ ಅವಧಿಯ ನಂತರ ಅಪ್ರಾಪ್ತ ವಯಸ್ಕರೆಂದರೆ ಇವನೇ ಆಗಿರಬಹುದೆಂದು ಕಾಣುತ್ತದೆ. ಈ ಸಮಯದಲ್ಲಿ ಮೂರನೆಯ ಮಹಮದ್ ಷಾನ ಆಳ್ವಿಕೆ ಇತ್ತೆಂದು ಇತಿಹಾಸದಿಂದ ತಿಳಿದುಬರುತ್ತದೆ.

ಮಹಮೂದ್ ಗವಾನ್‌ನ ಅದ್ವಿತೀಯ ಗುಣವೆಂದರೆ ಈತನ ನಿಸ್ವಾರ್ಥತೆ, ರಾಜ್ಯದ ಕರ್ತವ್ಯಗಳ ವಿಚಾರದಲ್ಲಿ ಆತನಿಗಿದ್ದ ರಾಜನಿಷ್ಠೆ. ಈತ ಅತ್ಯಂತ ದಕ್ಷತೆಯಿಂದ ಕರ್ತವ್ಯ ಲೋಪವಾಗದಂತೆ ಮೂರನೇ ಮಹಮೂದ್ ಶಹನ ಆಳ್ವಿಕೆ ಕಾಲದಲ್ಲಿ ನಿರ್ವಚನೆಯಿಂದ ದುಡಿದನು. ಈತನು ದೊಡ್ಡ ಆಡಳಿತಗಾರ, ವಿದ್ವಾಂಸ, ಗಣಿತಶಾಸ್ತ್ರದಲ್ಲಿ ಪ್ರವೀಣನಾಗಿದ್ದು ಸ್ವತಃ ಕವಿಯು ಕೂಡ ಆಗಿದ್ದನೆಂದು ತಿಳಿದುಬರುತ್ತದೆ. ಇವನು ಗದ್ಯ ರೂಪದಲ್ಲಿ ಲೇಖನಗಳನ್ನು ರಚಿಸಿದ್ದಾನೆಂದು ತಿಳಿದುಬರುತ್ತದೆ. ಇವನ ಕೃತಿಗಳು ೧. ಯಾಜತ್-ಇನ್ಸಾ ೨. ಮನಜರುಲ್-ಇನ್ಸಾ ಎಂಬ ಎರಡು ಕೃತಿಗಳನ್ನು ರಚಿಸಿದನೆಂದು ಉಲ್ಲೇಖಿಸಿದ್ದಾರೆ (ಷೇಕ್‌ಅಲಿ, ೧೯೯೭: ೧೫೧). ನಿಕೇಟಿನ್ನನ ಪ್ರಕಾರ ಮಹಮೂದ್ ಗವಾನ್‌ನು ಬಲಾಢ್ಯನು, ವಿಚಾರ ಸಂಪನ್ನನು, ನಿಪುಣನು ಖಗೋಳ ಶಾಸ್ತ್ರದಲ್ಲಿ ಜ್ಞಾನಿಯು ಆಗಿದ್ದನೆಂದು ವರ್ಣಿಸಿದ್ದಾನೆ (ಕುಲಕರ್ಣಿ, ೧೯೬೯: ೨೦).

ಬಿ.ಷೇಕ್‌ಅಲಿ ಅವರ ಪ್ರಕಾರ ಬಹಮನಿ ರಾಜ್ಯದ ಆಡಳಿತ ಕ್ಷೇತ್ರದಲ್ಲಿ ಗವಾನ್‌ನು ಮಾಡಿದ ಸಾಧನೆ ಅವನು ನುರಿತ ದಕ್ಷ, ಸಮರ್ಥ ಆಡಳಿತಗಾರನೆಂಬುದನ್ನು ಮನದಟ್ಟು ಮಾಡಿಕೊಡುತ್ತವೆ. ಗವಾನ್‌ನು ಬಹಮನಿ ಆಡಳಿತದಲ್ಲಿ ದಕ್ಷತೆಯನ್ನು ಹೆಚ್ಚಿಸಿದನು. ಆಡಳಿತದ ಅನುಕೂಲಕ್ಕಾಗಿ ಇಡೀ ರಾಜ್ಯವನ್ನು ೮ ಪ್ರಾಂತ್ಯಗಳನ್ನಾಗಿ ವಿಂಗಡಿಸಿದನು. ಬಿಜಾಪುರ, ಕಲಬುರ್ಗಿ, ದೌಲತಾಬಾದ್, ಜುನ್ನಾರ,

ಮಾಹುರ, ಬೀದರ್, ರಾಜಮಹೇಂದ್ರ ಮತ್ತು ವಾರಂಗಲ್‌ಗಳು ಎಂದು ವಿಂಗಡಿಸಿ ಅಧಿಕಾರಿಗಳನ್ನು ನೇಮಕ ಮಾಡಿದನು. ಮಿಲಿಟರಿ ವ್ಯವಹಾರಗಳನ್ನು ಸುಭದ್ರಗೊಳಿಸಿದನು. ಭೂಮಾಪನ ಕಾರ್ಯವನ್ನು ಕೈಗೊಂಡನು. ದಖ್ಖನ್ ವಿಶಾಲ ಪ್ರಪಂಚದೊಂದಿಗೆ ಸಂಪರ್ಕಕ್ಕೆ ಬಂದುದೇ ಮಹಮೂದ್ ಗವಾನ್‌ನಿಂದ. ಅವನ ವಿದ್ವತ್ ಪ್ರೇಮ, ಬರೆಯುವ ಸಾಮರ್ಥ್ಯ, ಅವನ ಜಾಣ್ಮೆ ಮತ್ತು ತಿಳಿವಳಿಕೆಯೆಲ್ಲವನ್ನು ರಾಜಕೀಯ ಉಪಯೋಗಕ್ಕೆ ಬಳಸಿಕೊಳ್ಳಲಾಯಿತು. "ಮಹಮೂದ್‌ಗವಾನ್‌ನು ಮಾಡಿದ ಕೆಲಸಕ್ಕೆ ಮತ್ತು ನಡೆಸಿದಂತಹ ಸುವ್ಯವಸ್ಥಿತ ಆಡಳಿತದ ಕಾಲವನ್ನು ಮಹಮೂದ್ ಗವಾನ್‌ನ ಯುಗವೆಂದೇ ಕರೆಯಲಾಯಿತು" (ಷೇಕ್‌ಅಲಿ, ೧೯೯೭: ೧೫೦).

ಮಹಮೂದ್ ಗವಾನ್‌ನು ಶಿಕ್ಷಣ, ಸಾಹಿತ್ಯ, ಕಲೆ ವಾಸ್ತುಶಿಲ್ಪ, ಧರ್ಮ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಮಹತ್ವದ್ದಾದ ಸಾಧನೆ ಮಾಡಿ ದಕ್ಷ ಆಡಳಿತಗಾರನು ಎನಿಸಿಕೊಂಡಿದ್ದಾನೆ.

*** *** ***

ಮಹಮೂದ್ ಗವಾನ್ ಮದರಸಾ

ಹಳೆ ಬೀದರ್ ಪಟ್ಟಣದಲ್ಲಿ ಅನೇಕ ಸ್ಮಾರಕಗಳಿವೆ. ಅವುಗಳಲ್ಲಿ ಮುಖ್ಯವಾದುದು ಮಹಮೂದ್ ಗವಾನ್ ಮದರಸಾ. ಮಹಮೂದ್ ಗವಾನ್‌ನು ದಕ್ಷ ಆಡಳಿತಗಾರನಾಗಿ ಬಹಮನಿ ಸಾಮ್ರಾಜ್ಯವನ್ನು ಅಭಿವೃದ್ಧಿ ಪಡಿಸಿದನಲ್ಲದೆ ಈತನೊಬ್ಬ ಶಿಕ್ಷಣ ಪ್ರೇಮಿ ಎಂದು ತಿಳಿಯುತ್ತದೆ. ಗವಾನ್‌ನ ಶಿಕ್ಷಣ ಪ್ರೇಮದ ಸಂಕೇತವಾಗಿ ಬೀದರ್‌ನಲ್ಲಿ ಮಹಮೂದ್ ಗವಾನ್ ನಿರ್ಮಿಸಿದ ವಿದ್ಯಾಲಯ ಇಂದಿಗೂ ಜೀವಂತ ಸಾಕ್ಷಿಯಾಗಿ ನಿಂತಿದೆ. ಇದು ಮಹಮೂದ್ ಗವಾನ್‌ನ ಬದುಕಿನ ಹೆಮ್ಮೆಯ ಸಾಧನೆಯೇ ಎನ್ನಬೇಕು. ಬಹಮನಿ ಅರಸರ ಕಾಲದಲ್ಲಿ ನಿರ್ಮಿಸಲಾದ ಅನೇಕ ಸ್ಮಾರಕಗಳಲ್ಲಿ ಅನುಪಮವಾದುದೆಂದು ಹೇಳಬಹುದು. "೧೪೭೨ರಲ್ಲಿ ಬಹಮನಿಯ ಪ್ರಧಾನಮಂತ್ರಿ ಮಹಮೂದ್ ಗವಾನ್‌ನಿಂದ ನಿರ್ಮಿಸಲಾದ ಈ ವಿಶ್ವವಿದ್ಯಾಲಯ ಕಟ್ಟಡ ಮನಮೋಹಕವಾಗಿದ್ದು ಭಾರತದಲ್ಲಿಯೇ ಇಂತಹ ಕಟ್ಟಡ ಏಕೈಕವಾಗಿದೆ. ಚೌಬಾರದಿಂದ ಸುಮಾರು ೩೫೦ ಯಾಡ್ (Yard) ಎಡಭಾಗದಲ್ಲಿ ಮಹಮೂದ್ ಗವಾನ್ ವಿಶ್ವವಿದ್ಯಾಲಯ ನಿರ್ಮಿಸಲಾಗಿದೆ. ಮಹಮೂದ್ ಗವಾನ್ ಮದರಸಾ ಆ.ಹಿ. ೮೭೭ ಅಂದರೆ ಕ್ರಿ.ಶ.೧೪೭೨ರಲ್ಲಿ ಕಟ್ಟಲಾಗಿದೆ ಎಂದು ಶಾಸನಯೊಂದರಲ್ಲಿ ಉಲ್ಲೇಖಿಸಲಾಗಿದೆ ಎಂದು ಜಿ.ಯಾಜ್ದಾನಿಯವರ ಹೇಳಿಕೆಯಾಗಿದೆ (ಯಾಜ್ದಾನಿ, ೧೯೪೭: ೯೩). ಈ ಶಾಸನದ ಆಧಾರದ ಮೇರೆಗೆ ಮಹಮೂದ್ ಗವಾನ್ ಮದರಸಾವು ೧೪೭೨ರಲ್ಲಿಯೇ ನಿರ್ಮಿತವಾಗಿದೆ ಎಂದು ಖಚಿತವಾಗಿ ಹೇಳಬಹುದು.

ಅನೇಕ ವಿದೇಶಿ ಲೇಖಕರು ಮಹಮೂದ್ ಗವಾನ್‌ನ ವಿದ್ಯಾಲಯವನ್ನು ಸಂದರ್ಶಿಸಿ ಬಾಯ್ತುಂಬ ಹೊಗಳಿದ್ದಾರೆ. ದಕ್ಷಿಣ ಭಾರತದಲ್ಲಿಯೇ ಇಂಥ ಕಟ್ಟಡ ಇರಲಿಲ್ಲವೆಂದರೇ ಅತಿಶಯೋಕ್ತಿಯಾಗಲಾರದು.

ಸರ್ ರಿಚರ್ಡ್ ಟೆಂಪಲ್ ಈ ವಿಶ್ವವಿದ್ಯಾಲಯದ ಬಗೆಗೆ ಹೀಗೆ ಉದ್ಗರಿಸಿದ್ದಾನೆ. "Among the old building of India the school building is of its type and very beautiful" ಎಂದು ಎಲ್.ಆರ್.ಕುಲಕರ್ಣಿ ಉಲ್ಲೇಖಿಸಿದ್ದಾರೆ (ಕುಲಕರ್ಣಿ, ೧೯೬೯: ೧೫).



ಮಹಮೂದ್ ಗವಾನ್ ವಿಶ್ವವಿದ್ಯಾಲಯ

ಈ ವಿದ್ಯಾಲಯವನ್ನು ಕಟ್ಟಲು ಪರ್ಶಿಯಾ ಮತ್ತು ಇನ್ನಿತರ ದೇಶಗಳಿಂದ ಶಿಲ್ಪಕಲಾಕಾರರನ್ನು ಹಾಗೂ ತಾಂತ್ರಿಕ ತಜ್ಞರನ್ನು ಕರೆಯಿಸಿದನೆಂದು ನಂಬಲಾಗಿದೆ. ಈ ಸಂಗತಿಯನ್ನು ಪುಷ್ಟೀಕರಿಸಲು ಐತಿಹಾಸಿಕ ದಾಖಲೆಗಳ ಬೆಂಬಲವು ದೊರೆಯುತ್ತದೆ. ಪಶ್ಚಿಮ ಆಫ್ರಿಕಾ, ಸಮರಕಂದ ಹಾಗೂ ಖೊರಸಾನಗಳಲ್ಲಿ ಕಟ್ಟಿದ ಪ್ರಸಿದ್ಧ ವಿದ್ಯಾಲಯಗಳು ಇದೇ ಮಾದರಿಯಲ್ಲಿ ನಿರ್ಮಾಣವಾಗಿವೆ ಎಂದು ಅನೇಕ ಲೇಖಕರು ಅಭಿಪ್ರಾಯಪಟ್ಟಿದ್ದಾರೆ. ಮುಸ್ಲಿಂ ಇತಿಹಾಸಕಾರ ಫೆರಿಸ್ತಾನು ಕೂಡ ಈ ಮೇಲಿನ ಅಭಿಪ್ರಾಯವನ್ನು ಒಪ್ಪಿಕೊಂಡಿದ್ದಾನೆ. ಫೆರಿಸ್ತಾನ ಪ್ರಕಾರ "ಮಹಮೂದ್ ಗವಾನ್ ಮದರಸಾ ಜಗತ್ತಿನ ಆ ಕಾಲದ ವಿದ್ಯಾಲಯಗಳೊಡನೆ ಹಾಗೂ ಪ್ರಸಿದ್ಧ ಮೇಧಾವಿಗಳೊಡನೆ ತನ್ನ ಸಂಪರ್ಕವನ್ನಿರಿಸಿಕೊಂಡಿದ್ದಲ್ಲದೆ ಜಗತ್ತಿನ ಪ್ರಸಿದ್ಧ ವಿದ್ಯಾಲಯಗಳ ಮಾದರಿಯಲ್ಲಿ ಬೀದರ್‌ನಲ್ಲಿ ವಿದ್ಯಾಲಯವನ್ನು ನಿರ್ಮಾಣ ಮಾಡಿದನು (ಕುಲಕರ್ಣಿ, ೧೯೬೯: ೧೭). ಈ ವಿಶ್ವವಿದ್ಯಾಲಯದ ಭಗ್ನಾವಶೇಷ ಇಂದಿಗೂ ಆಕರ್ಷಣೀಯ ಸ್ಮಾರಕವಾಗಿದೆ. ಇದೊಂದು ಶಿಕ್ಷಣ ಪ್ರೇಮವನ್ನು ಸೂಚಿಸುತ್ತ ರಾಜ್ಯದ ಹೆಮ್ಮೆಯ ಸಂಕೇತವಾಗಿ ನಿಂತಿದೆ. ಮಹಮೂದ್ ಗವಾನ್ ವಿದ್ಯಾಲಯದ ಬಗ್ಗೆ ಕುಲಕರ್ಣಿ[೨] ಅವರು ಹೇಳಿರುವುದನ್ನು ನೋಡಬಹುದು.



ಈ ವಿದ್ಯಾಲಯದ ವಿನ್ಯಾಸಕ್ಕೆ ಸಂಬಂಧಿಸಿದಂತೆ ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯಗಳಿಲ್ಲ. ಭಿನ್ನ ಭಿನ್ನವಾದ ನಿಲುವುಗಳನ್ನು ತಳೆದಿದ್ದಾರೆ. ಕುಲಕರ್ಣಿ[1] ಯಾಜ್ದಾನಿ[2] ಬಸವರಾಜ ಸಬರದ ಅವರು ವಿದ್ಯಾಲಯದ ವಿನ್ಯಾಸ ಕುರಿತು ಉದ್ದ ಅಗಲ ೬೨:೫೩, ೫೪:೯ ಮೀ.ನಷ್ಟಾಗಿದೆ (ಸಬರದ, ೧೯೮೨: ೪೫). ಗವಾನ್ ವಿದ್ಯಾಲಯವು ಗಟ್ಟಿಮುಟ್ಟಾದ ತಳಪಾಯದ ಮೇಲೆ ಸುಂದರವಾಗಿ ನಿರ್ಮಿತವಾಗಿದೆ. ಇಂಥ ಕಟ್ಟಡವು ಪರ್ಶಿಯಾದ ಫೆಜ್ ಮತ್ತು ಕಬಾತ್‌ನಲ್ಲಿ ಬಿಟ್ಟರೆ ಅಭೇದ್ಯ ಬೃಹತ್ ಕಟ್ಟಡವಿರುವುದು ಬೀದರ್‌ನಲ್ಲಿ ಮಾತ್ರ. ಈ ವಿದ್ಯಾಲಯದ ರಚನೆ ವಿಶಿಷ್ಟವಾಗಿದ್ದು, ವಿನ್ಯಾಸದಲ್ಲಿ ಸಂಪೂರ್ಣವಾಗಿ ಪರ್ಶಿಯಾ ದೇಶದ ಮಾದರಿಯಾಗಿದ್ದು ಬೇರೆ ಎಲ್ಲಿಂದಲೋ ತಂದು ಭಾರತೀಯರ ನೆಲದ ಮೇಲೆ ನೆಟ್ಟಂತೆ ತೋರುತ್ತದೆ (ಜಿಲ್ಲಾದರ್ಶನ, ೧೯೯೭: ೨೨).

ಈ ಮೇಲಿನ ವಿದ್ವಾಂಸರ ಹೇಳಿಕೆಗಳನ್ನು ನೋಡಿದಾಗ ಬಹಮನಿಯರ ಆಸ್ಥಾನದ ಮೇಲೆ ಪರ್ಷಿಯನ್ನರ ಪ್ರಭಾವ ಬೀರಿದಂತೆ ಸೂಚಿಸುತ್ತದೆ. ಹಾಗೆ ದಖ್ಖಿನ್ನಿನ ಶಿಯಾಪಂಥವು ಪ್ರಚುರವಾಗಿರುವುದನ್ನು ಸೂಚಿಸುತ್ತದೆ. ಚಚ್ಚೌಕಾಕಾರದ ಅಂಗಳಕ್ಕೆ ಅಭಿಮುಖವಾಗಿ ಕಮಾನು ಸಾಲುಗಳಿಂದ ಅಲಂಕೃತವಾದ ನಾಲ್ಕು ದೊಡ್ಡ ದ್ವಾರಗಳು ಇದ್ದು ಇವುಗಳ ಮೇಲೆ ಎತ್ತರವಾದ ಗುಮ್ಮಟಗಳಿವೆ. ಬಾಗಿಲುಗಳ ಎರಡೂ ಬದಿಗಳಲ್ಲಿ ತೆರೆದ ಕಮಾನುಗಳ ೩ ಅಂತಸ್ತುಗಳಿವೆ. ಇವುಗಳ ಮೂಲಕ ಪಾಠ ಹೇಳಿಕೊಡುವ ಕೋಣೆಗಳಿಗೆ ಮತ್ತು ಗ್ರಂಥಾಲಯಕ್ಕೆ ಹೋಗಬಹುದು. ಪೂರ್ವದಿಕ್ಕಿನ ಮುಂಭಾಗದಲ್ಲಿ ಎತ್ತರವಾದ ವೃತ್ತಾಕಾರದ ಸ್ತಂಭ ಗೋಪುರಗಳಿವೆ. ಸ್ತಂಭಗೋಪುರದ ಮೇಲುತುದಿಯು ಗುಮ್ಮಟವಾಗಿದೆ.

ಐತಿಹ್ಯಗಳು

ಮಹಮೂದ್ ಗವಾನ್‌ನ ಕೊಲೆ ಜನಪದರ ಐತಿಹ್ಯದಲ್ಲಿ ಬೇರೆ ರೀತಿಯದ್ದಾಗಿದೆ. ಮಹಮೂದ್ ಗವಾನ್‌ನು ಉಸಿರುಗಟ್ಟಿ ಸಾಯುವಂತೆ ಮಾಡಿದರೆಂದು ದೇಶಾಂಶ ಹುಡುಗಿ ಹೇಳಿದರೆ, ಮಹಮೂದ್ ಗವಾನ್‌ನನ್ನು ಬೀದರ್‌ನಿಂದ ಗುಲ್ಬರ್ಗಾಕ್ಕೆ ಕರೆದುಕೊಂಡು ಹೋಗುವಾಗ ಸಂಚಿನಿಂದ ಮಹಮೂದ್ ತಲೆಯನ್ನು ಕತ್ತರಿಸಲಾಯಿತೆಂದು ಮತ್ತೊಂದು ಐತಿಹ್ಯವು ಹೇಳುತ್ತದೆ. ಮಹಮೂದ್ ಗವಾನ್‌ನ ಕೊಲೆಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳು ಬೀದರ್ ಪ್ರದೇಶದಲ್ಲಿ ಇದ್ದು ಕ್ಷೇತ್ರ ಕಾರ್ಯವನ್ನು ಕೈಗೊಂಡಾಗ ಎರಡು ರೀತಿಯ ಐತಿಹ್ಯಗಳು ದೊರಕಿವೆ.

ಮಹಮೂದ್ ಗವಾನ್‌ನ ಕೊಲೆಗೆ ಸಂಬಂಧಿಸಿದಂತೆ ಅನೇಕ ಐತಿಹ್ಯಗಳು ಬೀದರ್ ಪ್ರದೇಶದಲ್ಲಿ ಇದ್ದು, ಕ್ಷೇತ್ರಕಾರ್ಯವನ್ನು ಕೈಗೊಂಡಾಗ ಎರಡು ರೀತಿಯ ಐತಿಹ್ಯಗಳು ದೊರಕಿವೆ. ಬಹಮನಿಯ ಮನೆತನದಲ್ಲಿ ದಕ್ಷ ಆಡಳಿತಗಾರನು ಎಂಬ ಹೆಸರಿನಿಂದ ಖ್ಯಾತಿ ಪಡೆದ ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ವಕ್ತರು ಎರಡು ಐತಿಹ್ಯಗಳನ್ನು ಭಿನ್ನವಾದ ರೀತಿಯಲ್ಲಿ ಹೇಳಿದ್ದು, ಬಹಮನಿ ಮನೆತನದ ಹನ್ನೆರಡನೆಯ ಅರಸ ಮೂರನೆಯ ಮಹಮದ್ ಶಹನ ಆಳ್ವಿಕೆಯ ಕಾಲದಲ್ಲಿ ಬಹಮನಿ ಮನೆತನದ

ಅರಸರಲ್ಲಿ ಆಂತರಿಕ ಕಲಹಗಳು ಉಂಟಾಗಿ ಈ ಅಂತಃಕಲಹಗಳಿಂದ ಮಹಮೂದ್ ಗವಾನ್‌ನ ಮೇಲೆ ಆರೋಪ ಹೊರಿಸಿ ಅರಸನು ಅವನಿಗೆ ಜೀವಂತವಾಗಿ ಗೋಣಿ ಚೀಲದಲ್ಲಿ ಹಾಕಿ ಉಸಿರುಗಟ್ಟಿ ಸಾಯುವಂತೆ ಶಿಕ್ಷೆಯನ್ನು ನೀಡಿದನೆಂದು ವಕ್ತೃರು ಐತಿಹ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ಮೊದಲನೆಯ ಐತಿಹ್ಯ

ಮೊದಲನೆಯ ಐತಿಹ್ಯವನ್ನು ಶಾಂತಪ್ಪ ದೇವರಾಯ್ ಎಂಬ ವಕ್ತೃವಿನಿಂದ ಸಂಗ್ರಹಿಸಲಾಗಿದೆ. ಅವರ ಆಡು ಭಾಷೆಯಲ್ಲಿ ಅದನ್ನು ವಿವರಿಸಲಾಗಿದೆ.

> ಒಂದು ಊರಿನಲ್ಲಿ ಒಬ್ಬವ್ ಅರಸ ಇದ್ದುನ್. ಅವನ ಬಲ್ಲಿ ಒಬ್ಬವ್ ಪರದಾನಿ ಇದ್ದುನ್. ಪರದಾನಿ ಮತ್ ರಾಜಾ ಇಬ್ಬರ ಭೀ ಭಾರಿ ದೊಸ್ತನ ಇತ್ ರಾಜಾ ಹೇಳಿದ ಮಾತಿಗಿ ಪರದಾನಿ ಎಂದ ಭೀ ವಲ್ಲ್ ಅಂತಿಲ್ಲ. ಪರದಾನಿ ಇದ್ದುನ್ ಬಾರಿ ಶಾಣ್ಯಾ ಮನಷ್ಯಾ, ಪರದಾನಿ ಶಾಣ್ಯಾ ಇದ್ದಿದ್ ನೋಡಿ ರಾಜನ ಬಲ್ಲಿ ಇದ್ದಿದ ಬ್ಯಾರೆ ಬ್ಯಾರೆ ಮಂದಿಗಿ ಆಗಾಗ್ ಹೊಟ್ಯಾಗ ಕಿಚ್ಚು ಬೀಳತಿತ್, ಹ್ಯಾಂಗಾರಾ ಮಾಡಿ ಪರದಾನಿಗಿ ರಾಜನ ಬಲಿಂದ ಪರದಾನಿ ನೌಕರಿ ಬಿಡ್ಸ್ ಬೇಕಂತ ಪೆಲೆನ ಹಾಕುರ್. ಏನಾರಾ ಮಾಡಿ ರಾಜಾ ಇವನಿಗಿ ಸಿಟ್ಟಿಗಿ ಬಂದ ಬಯ್ಯಪಲೇ ಮಾಡಬೇಕ. ಯಾಕೆಂದುರ ಪರದಾನಿ ಅಟೊಂದ್ ಶಾಣ್ಯಾ ಮನುಷ್ಯಾ ಇದ್ದುನ್. ಹ್ಯಾಂಗಾರಾ ಮಾಡಿ ಪರದಾನಿಗಿ ಆ ಜಾಗುದಾಂಗಿ ಬಿಡ್ಸಬೇಕ್ ಅಂದುರ್ ತಾನೆ ಊರ ಬಿಟ್ಟ ಹೊಯಿತಾನ. ಯಾಕಂದುರ ಇವನಿಗಿ ಮಾಡಲಾಕ್ ಬ್ಯಾರೆ ಕೆಲ್ಸಾ ಇರಾಲ್ ಅದುಕ್ ಹೊಯಿತಾನ್, ಅಂತ ಪೆಲೆನ ಮಾಡ್ದುರ್ ಆದುರ ರಾಜಾ ಪರದಾನಿಗಿ ಬಯ್ಯಪಲೇ ಮಾಡ್ದುರ್. ರಾಜಾಗ್ ಇಲ್ದೆ ಒಂದ್ ಸುಳ್ ಹೇಳಿ. ಪರದಾನಿಗಿ ಬಯ್ಯಪಲೇ ಮಾಡ್ದುರ ಅಲ್ದೆ ಸಿಟ್ಟಿಗ್ ಬಂದಿದ್ ರಾಜಾ ಆ ಕ್ಷಣದಾಗ ಪರದಾನಿಗಿ ಜೀವಾ ತೆಗೆ ಶಿಕ್ಷಾನೇ ಕೊಟ್ಟುನ್. ಆ ಶಿಕ್ಷಾ ಅಂದುರ್ ಪರದಾನಿಗಿ ಜೀವಂತ ಒಂದ್ ಗೋಣಿ ಚೀಲದಾಗ್ ಹಾಕಿ ಅದುರ್ ಬಾಯಿ ಒಂದ್ ಹಗ್ಗುದ್‌ದಿಂದ ಬಿಗುದ್ ಕಟ್ದುರ್ ಇದುರದಿಂದ ಪರದಾನಿ ಅಲ್ಲೆ ಉಸಿರ್ ಗಟ್ಟಿ ಸತ್ತುನ್".

ಈ ಐತಿಹ್ಯವನ್ನು ಸರಳಗನ್ನಡದಲ್ಲಿ ಕೆಳಗಿನಂತೆ ತಿಳಿಸಲು ಪ್ರಯತ್ನಿಸಲಾಗಿದೆ.

ಒಂದು ಊರಿನಲ್ಲಿ ಅರಸ ಮತ್ತು ಪ್ರಧಾನಿ ಇದ್ದರು. ಇವರಿಬ್ಬರು ಒಳ್ಳೆಯ ಸ್ನೇಹಿತರಂತೆ ಇರುತ್ತಿದ್ದರು. ಅರಸನ ಮಾತನ್ನು ಪ್ರಧಾನಿಯು ಶಿರಸಾವಹಿಸಿ ಪಾಲಿಸುತ್ತಿದ್ದನು. ಪ್ರಧಾನಿ ತುಂಬ ಬುದ್ಧಿವಂತನು, ಚತುರನು, ಪಾರಮಾರ್ಥಿಕ ಜ್ಞಾನವನ್ನು ಹೊಂದಿದವನಾಗಿದ್ದನು. ಪ್ರಧಾನಿಯು ಬುದ್ಧಿವಂತಿಕೆಯಿಂದ ಮಾಡುವ ಕೆಲಸಕ್ಕೆ ರಾಜ್ಯದ ಜನರು ಹೊಟ್ಟೆಕಿಚ್ಚು ಪಡುತ್ತಿದ್ದರು. ಹೇಗಾದರೂ

ಮಾಡಿ ಪ್ರಧಾನಿ ಹುದ್ದೆಯಿಂದ ತೆಗೆಯಬೇಕೆಂದು ಯೋಚಿಸುತ್ತಿದ್ದರು. ಅದರಂತೆ ಅರಸನಿಗೆ ಪ್ರಧಾನಿಯ ಬಗ್ಗೆ ಇಲ್ಲ ಸಲ್ಲದ ವಿಷಯಗಳನ್ನು ಹೇಳಿ ಆರೋಪಿಯನ್ನಾಗಿ ಮಾಡುತ್ತಾರೆ. ಆರೋಪಿಯ ಸ್ಥಾನದಲ್ಲಿರುವ ಪ್ರಧಾನಿಗೆ ಅರಸನು ಶಿಕ್ಷೆಯನ್ನು ನೀಡುತ್ತಾನೆ. ಪ್ರಧಾನಿಗೆ ಜೀವಂತವಾಗಿ ಒಂದು ಗೋಣಿ ಚೀಲದಲ್ಲಿ ಹಾಕಿ ಉಸಿರುಗಟ್ಟಿಸಿ ಸಾಯುವಂತೆ ಮಾಡುತ್ತಾರೆ.

ಎರಡನೆಯ ಐತಿಹ್ಯ

ಈ ಐತಿಹ್ಯವನ್ನು ಕಥೆಯ ರೂಪದಲ್ಲಿ ವಿಶ್ವನಾಥ ಎನ್ನುವರು ಹೇಳಿರುವುದನ್ನು ದಾಖಲಿಸಲಾಗಿದೆ.

> ಮಹಮೂದ್ ಗವಾನ್‌ನ ಕೊಲೆಯ ಕುರಿತಂತೆ ಮೊದಲನೆಯ ಐತಿಹ್ಯವು ಯಾವ ರೀತಿ ಒಂದು ಊರಿನಲ್ಲಿ ಒಬ್ಬ ಅರಸ ಮತ್ತುಪ್ರಧಾನಿಯಿಂದ ಪ್ರಾರಂಭವಾಗುತ್ತದೆಯೋ ಅದೇ ರೀತಿ ಎರಡನೆಯ ಐತಿಹ್ಯವು ಕೂಡ ಪ್ರಾರಂಭಗೊಳ್ಳುತ್ತದೆ. ಇಲ್ಲಿಯೂ ಕೂಡ ಪ್ರಧಾನಿ ತುಂಬಾ ಬುದ್ದಿವಂತನಾಗಿದ್ದು, ಈತನು ಅರಸನ ಆಡಳಿತದ ಎಲ್ಲ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದು, ಅರಸನ ಸಾಮ್ರಾಜ್ಯದಲ್ಲಿ ಉಂಟಾದ ಅಣ್ಣ ತಮ್ಮಂದಿರ ಮಧ್ಯದ ಆಂತರಿಕ ಒಳಜಗಳಗಳು ಮುಂದೆ ಮಹಮೂದ್ ಗವಾನ್‌ನ ಕೊಲೆಗೆ ಕಾರಣವಾಗುತ್ತದೆ. ಆದರೆ ಕೊಲೆಯ ಕ್ರಮವು ಮೊದಲನೆಯ ಐತಿಹ್ಯದಲ್ಲಿ ಮತ್ತು ಎರಡನೆಯ ಐತಿಹ್ಯದಲ್ಲಿ ಭಿನ್ನವಾಗಿ ಕಂಡುಬರುತ್ತದೆ. 'ಪರದಾನಿಗಿ ಮೋಸದಿಂದ ರಾಜಾನ ಹೆಸರು ಹೇಳಿ ಊರ ಹೊರಗೆ ಕರೆದುಕೊಂಡು ಒಯಿದು ಅವನ ತಲೆಯನ್ನು ಕತ್ತರಿಸಿ ಆ ಕತ್ತರಿಸಿದ ತಲೆಯನ್ನು ತಂದು ಅರಸನ ಸಹೋದರರಿಗೆ ಸೇವಕರಿಗೆ ಹೇಳುತ್ತಾನೆ. ಅದನ್ನು ನೋಡಿದ ಅವನ ಸಹೋದರರು ತುಂಬಾ ಖುಷಿಯಾಗಿ ಅವನ ಧಂಡಾ ಮತ್ತು ತಲೆಯಲ್ಲಾ ಸೇರಿ "ಉಸಕೋ ಬೀದರ ನಗರ ಕೇ ಬಾಹರ ದಫನ್ ಕರೋ ಎಂದು ಸೇವಕುರಿಗಿ ಹೇಳ್ತಾನ್" ಈ ರೀತಿಯಾಗಿ ಎರಡನೆಯ ಐತಿಹ್ಯದಲ್ಲಿ ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ವ್ಯಕ್ತವಾಗಿದೆ.

ವಕ್ತರು ಮೌಖಿಕವಾಗಿ ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ಹೇಳಿರುವ ಈ ಎರಡು ರೀತಿಯ ಐತಿಹ್ಯಗಳು ಕೊಲೆಯನ್ನು ಪ್ರತ್ಯೇಕವಾಗಿ ಕಂಡುಕೊಂಡಿರುವುದು ನಮಗೆ ಕಂಡುಬರುತ್ತದೆ. ಈ ಎರಡು ಐತಿಹ್ಯಗಳ ತಾತ್ವಿಕ ಹಿನ್ನೆಲೆಯನ್ನು ನಾವು ನೋಡಿದಾಗ ಒಂದು ಊರಿನಲ್ಲಿ ಒಬ್ಬ ಅರಸ ಮತ್ತು ಪ್ರಧಾನಿ ಇದ್ದರು ಎನ್ನುವುದರ ಮೂಲಕ ಮಹಮೂದ್‌ನ ಕೊಲೆಯ ಐತಿಹ್ಯವು ಪ್ರಾರಂಭಗೊಳ್ಳುತ್ತದೆ.

ಈ ಐತಿಹ್ಯದ ಪ್ರಕಾರ ಒಂದು ಊರು ಎಂದರೆ ಅದು ಬೀದರ್ ಆಗಿದ್ದು ಬಹಮನಿಯ ರಾಜ ಮೂರನೆ ಮಹಮದ್ ಶಹನಾಗಿದ್ದು ಮತ್ತು ಅವನ ಪ್ರಧಾನ ಮಂತ್ರಿ ಮಹಮೂದ್ ಗವಾನ್‌ನಾಗಿದ್ದನೆಂದು ಐತಿಹ್ಯದಿಂದ ತಿಳಿದುಬರುತ್ತದೆ. ಏಕೆಂದರೆ ಬಹಮನಿಯ ಅರಸರ ಆಳ್ವಿಕೆಯಲ್ಲಿ ದಕ್ಷ ಪ್ರಧಾನಿ ಎಂದರೆ

ಮಹಮೂದ್ ಗವಾನ್‌ನನ್ನು ಬಿಟ್ಟು ಬೇರೆ ಯಾರು ಕಂಡುಬರುವುದಿಲ್ಲ. ಆದ್ದರಿಂದ ಆ ದಕ್ಷ ಮತ್ತು ನಿಷ್ಠಾವಂತ ಪ್ರಧಾನಿ ಮಹಮೂದ್ ಗವಾನ್‌ನೇ ಆಗಿರುತ್ತಾನೆ. ಈ ಪ್ರಧಾನಿ ಬೇರೆ ಊರಿನಿಂದ ಬಂದವನೆಂತಲೂ ಕೂಡ ಐತಿಹ್ಯದಲ್ಲಿ ಕಂಡುಬರುತ್ತದೆ. ಮೂಲತಃ ಮಹಮೂದ್ ಗವಾನ್‌ನು ಉತ್ತರ ಇರಾನಿನ ರೇಸ್ತಾ ಪಟ್ಟಣದ ಗವಾನ್ ಎಂಬ ಊರಿನವನಾಗಿದ್ದಾನೆ. ಬಹಮನಿಯ ಅರಸ ಹುಮಾಯೂನ್‌ನ ನಿಗೂಢ ಕೊಲೆಯ ನಂತರ ಬಹಮನಿ ಅರಸರ ಆಳ್ವಿಕೆಯ ಕಾಲದಲ್ಲಿ ಮತ್ತಷ್ಟು ಪ್ರಕ್ಷೋಭೆಯುಂಟಾಯಿತು. ಹುಮಾಯೂನ್‌ನ ಮರಣದ ನಂತರ ಮೂರನೆ ಮಹಮೂದನ ತಾಯಿ ತನ್ನ ಮಗನನ್ನು ೮ ವರ್ಷದ ಬಾಲಕನಾಗಿರುವಾಗಲೇ ಬಹಮನಿ ಸಿಂಹಾಸನದ ಮೇಲೆ ಕುಳಿಸುತ್ತಾಳೆ. ಮೂರನೆಯ ನಿಜಾಮುದ್ದಿನ್ ಅಹಮದ್‌ನೆಂಬ ಹೊಸ ನಾಮಕರಣದೊಂದಿಗೆ ಪೂರ್ವ ಸೂಚನೆಯೋ ಮುಂದಾಲೋಚನೆಯೋ ಒಟ್ಟಿನಲ್ಲಿ ಹುಮಾಯೂನ್‌ನನ್ನು ಒಂದು ರಾಜಪ್ರತಿನಿಧಿ ಆಡಳಿತವನ್ನು (ಲಜೆನ್ಸಿ) ರೂಪಿಸಿದರು. ಅದರಲ್ಲಿ ಮೂವರು ಸದಸ್ಯರಿದ್ದರು. ೧. ಮಹಮೂದ್ ಗವಾನ್ ೨. ಖ್ವಾಜಾ ಜಹಾನ್ ೩. ವಿಧವೆ ರಾಣಿ ಮುಖ್ದುಂ-ಇ-ಜಹಾನ್. ಈಕೆ ಬುದ್ಧಿವಂತಳಾಗಿದ್ದು ಇತರ ರೀಜೆಂಟರ ನೆರವಿನಿಂದ ಲನೇ ಅಹಮದ್ ಹಾಗೂ ಮೂರನೇ ಮಹಮೂದ್ ಶಹ ಈಕೆ ಇಬ್ಬರ ಆಳ್ವಿಕೆಯ ಅವಧಿಯಲ್ಲೂ ರಾಜ್ಯದ ಆಡಳಿತವನ್ನು ಮುನ್ನಡೆಸಿಕೊಂಡು ಹೋದಳು.

ಲಿಖಿತ ಆಕರಗಳು

ಮೌಖಿಕ ಆಕರಗಳನ್ನಲ್ಲದೆ ಮಹಮೂದ್ ಗವಾನ್‌ನ ಕೊಲೆಗೆ ಸಂಬಂಧಿಸಿದಂತೆ ಲಿಖಿತ ಆಕರಗಳು ಲಭ್ಯವಿದ್ದು, ಅವು ಈ ಕೆಳಗಿನಂತಿವೆ.

"ಬಹಮನಿ ಮನೆತನದ ಅರಸರ ಮಧ್ಯದಲ್ಲಿ ಅಂದರೆ ಮೂರನೆಯ ಮಹಮೂದ್ ಶಹ ಮತ್ತು ಆತನ ನಂತರ ಬಂದ ಮುಜಾಹಿದ ಶಹ ಈ ಅರಸರ ಮಧ್ಯದಲ್ಲಿ ಒಳಜಗಳಗಳು ಪ್ರಾರಂಭವಾದವು. ಏಕೆಂದರೆ ಮೂರನೆಯ ಮಹಮದ್ ಶಹನು ಒಬ್ಬ ದಕ್ಷ ಮತ್ತು ನಿಷ್ಠಾವಂತ ಅಧಿಕಾರಿಯನ್ನು ಹೊಂದಿದ್ದು ಆಡಳಿತವು ದಕ್ಷತೆಯಿಂದ ಸಾಗುತ್ತಿತ್ತು. ಇಂಥ ಸಮಯದಲ್ಲಿ ಮೂರನೆಯ ಮಹಮೂದ್ ಶಹನ ಸಹೋದರರಿಗೆ ಹೊಟ್ಟೆ ಕಿಚ್ಚು ಪ್ರಾರಂಭವಾಯಿತು. ಏಕೆಂದರೆ ಎಲ್ಲ ಅಧಿಕಾರಗಳು ಮಹಮೂದ್ ಗವಾನ್‌ನ ಕೈಯಲ್ಲಿದ್ದು ರಾಜ್ಯದ ಆಡಳಿತದಲ್ಲಾಗಲಿ, ಲೆಕ್ಕದಲ್ಲಾಗಲಿ ಯಾವುದೇ ರೀತಿಯ ಅವ್ಯವಹಾರಗಳನ್ನು ಮಾಡಲು ಬರುತ್ತಿರಲಿಲ್ಲ. ಇದರಿಂದ ಮೂರನೆಯ ಮಹಮದನ್ ಸಹೋದರರಿಗೆ ಹೆಜ್ಜೆ ಹೆಜ್ಜೆಗೂ ಅಡ್ಡಿಯಾಗಿ ಮಹಮ್ಮೂದ್ ಗವಾನ್‌ನು ಕಾಣಿಸುತ್ತಿದ್ದನು. ಆದ್ದರಿಂದ ಮಹಮೂದ್ ಗವಾನ್‌ನನ್ನು ಮುಗಿಸುವುದಕ್ಕಾಗಿ ಸಂಚನ್ನು ನಡೆಸಿದರು. "ಬಹಮನಿ ಮನೆತನದ ಹಳಬರು ಮತ್ತು ಹೊಸಬರ (ಹಳೆಬರು ಎಂದರೆ ಬಹಮನಿ ಮನೆತನದವರಾಗಿದ್ದು ಹೊಸಬರು ಪರದೇಶಿಗಳಾಗಿದ್ದರು (ವಿದೇಶಿಗರು) ನಡುವಣ ಅಧಿಕಾರದ ಕಂದಕವು ಅಗಲವಾಗಿ ದ್ವೇಷವು ಉರಿಯುತ್ತಿದ್ದಾಗ ಅನೇಕ

ಪಿತೂರಿಗಳು ಮತ್ತು ಒಳಸಂಚುಗಳು ನಡೆದು 'ಫ್ಯೂಡಲ್ ಸಮಾಜದ ಅಂತರ್ಗತ ಅಂಶವೇ ಮಹಮೂದ್ ಗವಾನ್‌ನ ಕೊಲೆಗೆ ಕಾರಣವೆಂದು' ಷೇಕಲಿ ಉಲ್ಲೇಖಿಸಿದ್ದಾರೆ'' (ಷೇಕ್‌ಅಲಿ, ೧೯೯೪: ೧೫೭).

''ಪ್ರಧಾನ ಮಂತ್ರಿಯಾಗಿ ಬಹಮನಿ ರಾಜ್ಯದ ರಾಜಕೀಯ ಶೈಕ್ಷಣಿಕ ಮತ್ತು ಆರ್ಥಿಕ ಉನ್ನತಿಗಾಗಿ ಹಗಲಿರುಳು ಶ್ರಮಿಸಿದ ಈ ನಿಷ್ಠಾವಂತ ವ್ಯಕ್ತಿಯ ಮರಣವು ಬಹಮನಿ ಚರಿತ್ರೆಯಲ್ಲಿ ಮಹಾ ದುರಂತಮಯ ವಾಗಿದೆ. ಗವಾನ್‌ನ ಜನಪ್ರಿಯತೆ ಅನೇಕರನ್ನು ಆಕರ್ಷಿಸಿದರೂ ಕೆಲವು ಅಧಿಕಾರದಾಹಿ ಸ್ವಾರ್ಥಿಗಳ ಈರ್ಷ್ಯೆಯನ್ನು ಇಮ್ಮಡಿಸಿತ್ತು. ದಖ್ಖನೀ ಸರದಾರರ ಗುಂಪು ಪರಕೀಯನಾದ ಗವಾನ್‌ನ ಸಾಧನೆಯನ್ನು ಸಹಿಸದಾದರು. ಈ ಸ್ಥಳೀಯ ದಖ್ಖನೀ ಸರದಾರರು ಗವಾನ್‌ನ ಕೊಲೆ ಮಾಡಲು ಒಂದು ದೊಡ್ಡ ಸಂಚನ್ನು ಹೂಡಿದರು. ಮಲ್ಲಿಕ್ ಹಸನ್‌ನು ಈ ಸಂಚಿನ ಮೂಲ ವ್ಯಕ್ತಿಯಾಗಿದ್ದನು. ಇವರು ಮೊದಲು ಗವಾನ್‌ನ ಹೆಸರಿನಲ್ಲಿ ಒರಿಸ್ಸಾದ ಹಿಂದೂ ಅರಸನಿಗೆ ಒಂದು ಪತ್ರವನ್ನು ಬರೆದರು. ಇದಕ್ಕೆ ಮಹಮೂದ್ ಗವಾನ್‌ನ ಅಧಿಕೃತ ರಾಜಮುದ್ರೆಯನ್ನು ಹಾಕಲಾಗಿತ್ತು. ಈ ಪತ್ರದಲ್ಲಿ ಗವಾನ್‌ನು ಒರಿಸ್ಸಾದ ರಾಜನೊಂದಿಗೆ ಸಂಚು ನಡೆಸಿ ಬಹಮನಿಯ ವಿನಾಶಕ್ಕಾಗಿ ಸಮಯ ಕಾಯುತ್ತಿರುವುದಾಗಿ ನಮೂದಿಸಲಾಗಿತ್ತು. ಈ ರೀತಿ ಸೃಷ್ಟಿ ಮಾಡಿದ ಖೊಟ್ಟಿ ಪತ್ರವನ್ನು ಸಮಯ ಸಾಧಿಸಿ ಅಮಲಿನಿಂದ ಮತ್ತನಾದ ಸುಲ್ತಾನನಿಗೆ ತಲುಪಿಸಿದರು. ಅಮಲಿನಲ್ಲಿದ್ದ ಸುಲ್ತಾನ ಮಹಮೂದ್ ಶಹನು ಯಾವ ವಿಚಾರಣೆಯನ್ನು ಮಾಡದೇ ಗವಾನ್‌ನನ್ನು ತಕ್ಷಣ ಮರಣ ದಂಡನೆಗೆ ಗುರಿಪಡಿಸಲು ಆಜ್ಞಾಪಿಸಿದನು. ಕ್ರಿ.ಶ.೧೪೮೧ರಲ್ಲಿ ಗವಾನ್‌ನ ಶಿರಚ್ಛೇದ ಮಾಡಲಾಯಿತು'' (ಹೂಗಾರ, ೨೦೦೪: ೧೯೦).

''ಮಹಮೂದ್ ಗವಾನ್‌ನ ಆಳ್ವಿಕೆಯನ್ನು ನೋಡಿ ಬಹಮನಿ ಮನೆತನದ ಇನ್ನುಳಿದವರಿಗೆ ಹೊಟ್ಟೆಗೆ ಬೆಂಕಿ ಬಿದ್ದಂತೆ ಆಯಿತು. ಅಸೂಯೆಪರವಾದ ಶ್ರೀಮಂತರು ಹಾಗೂ ಆಸ್ಥಾನಿಕರು ಸೇರಿ ಗವಾನ್‌ನ ಸಹಿ ಮುದ್ರೆಯನ್ನು ಅಪಹರಿಸಿ, ಅದರ ದುರುಪಯೋಗ ಪಡೆದು ರಾಜದ್ರೋಹದ ಆರೋಪವನ್ನು ಗವಾನ್‌ನ ಮೇಲೆ ಹೊರಿಸಿದರು. ಇದರಿಂದ ಕೋಪಗೊಂಡ ಸುಲ್ತಾನನು ಮರಣದಂಡನೆಗೆ ಈಡು ಮಾಡಿದನು'' (ಫಾಲಾಕ್ಷ, ೧೯೯೯: ೧೨೭).

''ದಖ್ಖನೀ ಮತ್ತು ಅಫಿಕ್ಸ್ ಈ ಗುಂಪಿನಲ್ಲಿ ದಖ್ಖನೀ ಗುಂಪು ಪ್ರಧಾನ ಮಂತ್ರಿ ಮಹಮೂದ್ ಗವಾನ್‌ನ ವಿರುದ್ಧ ಒಳಸಂಚು ನಡೆಸಿ ರಾಜನ ಕಿವಿಯೂದಿದರು. ಮಹಮೂದ್ ಗವಾನ್‌ನು ನೆಲ್ಲೂರು ಪ್ರವಾಸ ಕೈಗೊಂಡಾಗ ಜರಿಫುಲ್ ಮುಲ್ಕ ದಖ್ಖನಿ ಮಫ್ತಾಹ ಹಬ್ಸಿ ಕೊಂಡಪಲ್ಲಿ ಬಳಿ ಮಹಮೂದ್ ಗವಾನ್‌ನ ಹತ್ಯೆಗೆ ಸಂಚು ರೂಪಿಸಿದರು. ಅದೇ ದಾರಿಯಲ್ಲಿ ಬರುತ್ತಿದ್ದ ಮಹಮೂದ್ ಗವಾನ್‌ನ ಪತ್ರಗಾರ ಇಲಾಖೆಯ ಕಾರ್ಮಿಕನನ್ನು ಬೆದರಿಸಿ ಅವನಲ್ಲಿರುವ ಪತ್ರಗಳನ್ನು ತೆಗೆದುಕೊಂಡು ಇನ್ನೊಂದು ಸುಳ್ಳು ಪತ್ರ ಬರೆದು ಒರಿಸ್ಸಾದ ಪ್ರಧಾನ ಮಂತ್ರಿ ಪುರುಷೋತ್ತಮರಿಗೆ ಬಹಮನಿ ಸಾಮ್ರಾಜ್ಯ ಆಳುವಂತೆ

ಕರೆ ನೀಡಿ ಬರೆದ ಪತ್ರವನ್ನು ರಾಜನಿಗೆ ಮುಟ್ಟಿಸುವಲ್ಲಿ ಯಶಸ್ವಿಯಾದರು. ರಾಜನ ಒಳಸಂಚಿಗೆ ಬಲಿಯಾಗಿ ಪ್ರಧಾನಿ ಗವಾನ್‌ನನ್ನು ಗಲ್ಲಿಗೇರಿಸಿದನು'' (ಬಸವರಾಜ, ೧೯೮೪: ೧೮೪).

ಈ ಲಿಖಿತ ಆಕರವನ್ನು ಪರಿಶೀಲಿಸಿದಾಗ ಮಹಮೂದ್ ಗವಾನ್ ಒಬ್ಬ ದಕ್ಷ ಆಡಳಿತಗಾರನಾಗಿರುವ ಕಾರಣಕ್ಕಾಗಿಯೇ ವಿಧವೆ ರಾಣಿ ಮುಖ್ದುಂ-ಇ-ಜಹಾನಳು ಗವಾನ್‌ನನ್ನು ಹಿಂದೆ ಇಟ್ಟುಕೊಂಡು ಬಹಮನಿಯ ಆಡಳಿತವನ್ನು ನಡೆಸುತ್ತಾಳೆ. ಈ ಲಿಖಿತ ಆಧಾರದ ಮೂಲಕ ಐತಿಹ್ಯದಲ್ಲಿರುವಂತೆ ಒಬ್ಬ ಚಾಣಾಕ್ಷ ಬುದ್ಧಿವಂತ ಪ್ರಧಾನಿ ಮಹಮೂದ್ ಗವಾನ್‌ನು ಆಗಿದ್ದಾನೆ. ಐತಿಹ್ಯದಲ್ಲಿ ರಾಜನ ಮನೆಯಲ್ಲಿ ಅಣ್ಣ ತಮ್ಮರ ಮಧ್ಯದಲ್ಲಿ ನಡೆದಂಥ ಅಂತಃಕಲಹಗಳೇ ಪ್ರಧಾನಿಯ ಕೊಲೆಗೆ ಕಾರಣವಾಯಿತೆಂದು ಹೇಳಲಾಗುತ್ತದೆ. ಲಿಖಿತ ದಾಖಲೆಗಳ ಪ್ರಕಾರ ಮಹಮೂದ್ ಗವಾನ್‌ನ ಜನಪ್ರಿಯತೆಯನ್ನು ಸಹಿಸಲಾಗದ ಅನೇಕ ಅಧಿಕಾರ ಶಾಹಿಗಳು ಮಹಮೂದ್ ಗವಾನ್‌ನನ್ನು ಕೊಲೆ ಮಾಡಲು ಮುಂದಾದರು. ಬಹಮನಿಯ ಅರಸರ ಆಳ್ವಿಕೆ ಕಾಲದಲ್ಲಿ ದಖ್ಖನಿಗಳು (ಸ್ಥಳೀಯರು), ವಿದೇಶಿ (ಪರದೇಶಿಗರೆಂದು) ಪ್ರಮುಖವಾಗಿ ಎರಡು ಗುಂಪುಗಳಿರುತ್ತವೆ. ಈ ಎರಡು ಗುಂಪುಗಳಲ್ಲಿ ಅಧಿಕಾರಕ್ಕಾಗಿ ಆಡಳಿತಕ್ಕಾಗಿ ಅಂತಃಕಲಹಗಳು ನಡೆಯುತ್ತವೆ. ವಿದೇಶಿಗರು ಅಥವಾ ಪರದೇಶಿಗರೆಂದು ಕರೆಯುವರಲ್ಲಿ ಮಹಮೂದ್ ಗವಾನ್ ಕೂಡ ಒಬ್ಬನಾಗಿದ್ದನು. ಈ ಪರದೇಶಿಗಳ ಆಡಳಿತವನ್ನು ಸ್ಥಳೀಯರು ಸಹಿಸುತ್ತಿರಲಿಲ್ಲ. ಇದರಿಂದಾಗಿ ಮಹಮೂದ್ ಗವಾನ್‌ನ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರೆಸಿ ಅವನಿಗೆ ಅರಸನು ಶಿರಚ್ಛೇದನದ ಶಿಕ್ಷೆಯನ್ನು ನೀಡುವಂತೆ ಮಾಡಿದರು ಎಂದು ಈ ಲಿಖಿತ ಆಧಾರಗಳು ಹೇಳುತ್ತವೆ. ಒಟ್ಟಿನಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಈಗಾಗಲೆ ಇರುವ ಆಧಾರಗಳಿಗೆ ಪೂರಕವಾಗಿರುವಂತೆ ಕಂಡುಬಂದರೂ, ಅವನ ಅಂತಿಮಗಳಿಗೆಗೆ ಸಂಬಂಧಿಸಿದಂತೆ ಮೌಖಿಕ ಆಕರಗಳು ಭಿನ್ನಭಿನ್ನ ರೀತಿಯ ಮಾಹಿತಿಗಳನ್ನು ನೀಡಿರುವುದು ಗಮನಾರ್ಹವಾದುದು.

ಟಿಪ್ಪಣಿಗಳು

೧. ಬಿ.ಷೇಕ್‌ಅಲಿ ಅವರು ಮಹಮೂದ್ ಗವಾನ್‌ನ ಆಡಳಿತ ಕುರಿತಂತೆ ಈ ರೀತಿ ಹೇಳಿದ್ದಾರೆ. ರಾಜಕೀಯ ಗುಂಪುಗಾರಿಕೆಯು ಶಿಖರಾವಸ್ಥೆಯಲ್ಲಿ ಇದ್ದಾಗ ಬದುಕಿನ ಹಲವು ಕ್ಷೇತ್ರಗಳಲ್ಲಿ ಅಸಾಧಾರಣ ಸಿದ್ಧಿಗಳನ್ನು ಗಳಿಸಿದ್ದು ಮಹಮೂದ್ ಗವಾನ್‌ನ ಹಿರಿಮೆ. ಪ್ರತಿಯೊಂದು ಹಂತದಲ್ಲೂ ಮಹಮೂದ್ ಗವಾನ್ ಆಂತರಿಕ ವೈಷಮ್ಯವನ್ನು ಎದುರಿಸಬೇಕಾಯಿತು. ಆದರೂ ಅವನು ರಾಜ್ಯವನ್ನು ವೈಭವದ ಶಿಖರಕ್ಕೆ ಏರಿಸಿದನು. ಈ ಹಳೆಯ ಮತ್ತು ಹೊಸಬರ ನಡುವೆ ತಕ್ಕಡಿಯನ್ನು ಸಮವಾಗಿ ಇಟ್ಟುಕೊಂಡಿದ್ದು ಮಾತ್ರವಲ್ಲ. ಅವನು ಹಿಂದೂ ಜನರ ನಿಷ್ಠೆಯನ್ನು ಗಳಿಸಿದನು. ಬೆಳಗಾಂ ಅರಸನ ಅಕೃತ್ಯಗಳನ್ನು ಅಲಕ್ಷಿಸಿ ಅವನನ್ನು ರಾಜ್ಯದ ಒಬ್ಬ ಅಮೀರನನ್ನಾಗಿ ಮಾಡಿದನು. ಕಪಿಲೇಶ್ವರನ ವಿರುದ್ಧ ವಿಜಯನಗರದೊಂದಿಗೆ ಮೈತ್ರಿಯನ್ನು ಮಾಡಿಕೊಂಡದ್ದು, ಒರಿಸ್ಸಾದ ಹಮ್ಮೀರನಿಗೆ ಸಹಾಯ ಮಾಡಿದ್ದು ರಾಜಕೀಯ ಸಂಬಂಧಗಳಲ್ಲಿ ನೂತನ ಪ್ರವೃತ್ತಿಗಳನ್ನು ಹಾಕಿಕೊಟ್ಟವು. ವಿಜಯನಗರದ ವಿರುದ್ಧ ಗಜಪತಿ ಮತ್ತು ಬಹಮನಿ ಅರಸರ ನಡುವೆ ಮೈತ್ರಿಯಾದದ್ದು, ಗುಜರಾತಿ, ಮಾಳವ ಮತ್ತು ಖಾಂದೇಶದ ಮುಸ್ಲಿಂ ರಾಜ್ಯಗಳ ವಿರುದ್ಧ ಬಹಮನಿ ಸುಲ್ತಾನರು ಯುದ್ಧ ಮಾಡಿದುದು ಇವೆಲ್ಲ ಆಡಳಿತದ ಜಾತ್ಯತೀತ ಲಕ್ಷಣವನ್ನು ಸಮರ್ಥಿಸುವ ಘಟನೆಗಳೇ ಹೊರತು ವಸಾಹತುಶಾಹಿ ಇತಿಹಾಸಕಾರರು ನಿರೂಪಿಸಲು ಪ್ರಯತ್ನಿಸಿದ ಮತೀಯ ಕಲಹಗಳಲ್ಲಿ ಮುಸ್ಲಿಮರನ್ನು ರಾಜಕೀಯ ಶಕ್ತಿಗಳಾಗಿ ನೋಡಲಾಯಿತೇ ಹೊರತು ನಾಶ ಮಾಡಬೇಕಾದ ಮತೀಯ ಗುಂಪುಗಳಿಂದಲ್ಲ. ಹೀಗೆ ಮಹಮೂದ್ ಗವಾನ್‌ನ ಆಳ್ವಿಕೆಯ ಕಾಲದಲ್ಲಿ ರಾಜಕೀಯ ಯುದ್ಧ, ಸಾಮಾಜಿಕ, ಸಾಂಸ್ಕೃತಿಕ ಕಲೆ ಮತ್ತು ವಾಸ್ತುಶಿಲ್ಪ ಹೀಗೆ ಹಲವಾರು ಹಂತಗಳಲ್ಲಿ ಗಣನೀಯವಾದ ಸಾಧನೆಯನ್ನು ಮಹಮೂದ್ ಗವಾನ್‌ನು ಮಾಡಿದ್ದಾನೆ. ಬಹಮನಿಯ ಅರಸ ಹುಮಾಯೂನ್‌ನ ಆಳ್ವಿಕೆ ಕಾಲದಲ್ಲಿ ಮಹಮೂದ್ ಗವಾನ್‌ನನ್ನು ಪ್ರಧಾನಿಯಾಗಿ ನೇಮಕ ಮಾಡಲಾಯಿತು. ಅಂದಿನಿಂದ ಬಹಮನಿಯ ಇತಿಹಾಸವು ಒಬ್ಬ ವ್ಯಕ್ತಿಯೊಂದಿಗೆ ಹೇಗೆ ನಿಕಟವಾಗಿ ಸೇರಿಕೊಂಡಿತೆಂದರೆ ಅದನ್ನು ಮಹಮೂದ್ ಗವಾನ್‌ನ ಯುಗ ಎಂದೇ ಕರೆಯಲಾಯಿತು. ಏಕೆಂದರೆ ಬಹಮನಿ ರಾಜ್ಯವನ್ನು ಅದರ ಇಡೀ ಇತಿಹಾಸದಲ್ಲೇ ಅಭೂತಪೂರ್ವ ಎತ್ತರಕ್ಕೆ ಕೊಂಡೊಯ್ದುವನು ಮಹಮೂದ್ ಗವಾನ್. ಅದಕ್ಕೆ ಅವನ ಆಳ್ವಿಕೆಯ ಕಾಲ ಮಹಮೂದ್ ಗವಾನ್‌ನ ಯುಗವೆಂತಲೇ ಕರೆಯಲಾಯಿತು (ಷೇಕ್‌ಅಲಿ, ೧೯೯೭: ೧೫೦).

೨. ಗವಾನ್‌ನ ವಿದ್ಯಾಲಯವೆಂದರೆ ಮಹಾ ಮೇಧಾವಿಗಳ ಹಾಗೂ ವಿಜ್ಞಾನಿಗಳ ಸಂಗಮ, ತತ್ವಶಾಸ್ತ್ರ, ಗಣಿತಶಾಸ್ತ್ರ, ವಿಜ್ಞಾನ ಮುಂತಾದ ಮೇದಾವಿಗಳು ಇಲ್ಲಿ ಸಮಾವೇಶಗೊಂಡಿದ್ದರು. ಗವಾನ್‌ನು ಸಹ ತನ್ನ ವಿಶ್ರಾಂತಿಯ ಹಾಗೂ ಬಿಡುವಿನ ವೇಳೆಯಲ್ಲಿ ಈ ಮದರಸಾದಲ್ಲಿಯೇ ಕಾಲ ಕಳೆಯುತ್ತಿದ್ದನು. ಮಹಮೂದ್ ಗವಾನ್‌ನು ಸ್ವತಃ ಗಣಿತ ಹಾಗೂ ತತ್ವಶಾಸ್ತ್ರದಲ್ಲಿ ಮಹಾಮೇಧಾವಿಯಾಗಿದ್ದ. ಈ ವಿದ್ಯಾಲಯದಲ್ಲಿ ಸುಮಾರು ೩,೦೦೦ ಕೈಬರಹದ ಪ್ರತಿಗಳಿದ್ದವೆಂದು ನಂಬಲಾಗಿದೆ. ಆದರೆ ಅವು ಕಾಲಚಕ್ರದ ವಶಕ್ಕೆ ಸಿಲುಕಿ ನಾಶವಾಗಿರಬಹುದು. ಉಳಿದಿದ್ದರೂ ಓದಲೂ ಬಾರದ ಸ್ಥಿತಿಯಲ್ಲಿವೆ. ಗುರುಗಳಿಗೆ ಮತ್ತು ಮಕ್ಕಳಿಗೆ ವಸತಿ ಊಟ ಇಲ್ಲೇ ಇತ್ತು. ಅರೇಬಿಯಾ ಮತ್ತು ಪರ್ಷಿಯಾ ದೇಶಗಳಿಂದ ವಿದ್ಯಾರ್ಜನೆಗಾಗಿ ವಿದ್ಯಾರ್ಥಿಗಳು

ಬರುತ್ತಿದ್ದದರಿಂದ ಅವರಿಗೆ ವಸತಿ ಇಲ್ಲಿಯೇ ಇತ್ತು ಎಂದು ಇತಿಹಾಸದಿಂದ ತಿಳಿದುಬರುತ್ತದೆ (ಕುಲಕರ್ಣಿ, ೧೯೬೯: ೧೮).

೩. ಮೂರು ಅಂತಸ್ತುಗಳಲ್ಲಿ ಈ ವಿದ್ಯಾಲಯ ನಿರ್ಮಾಣವಾಗಿದೆ. ಈ ಕಟ್ಟಡಕ್ಕೆ ಎರಡು ಎತ್ತರವಾದ ಸ್ತಂಭಗಳಿದ್ದವೆಂದು ಐತಿಹಾಸಿಕ ದಾಖಲೆ ಇದೆ. ಆದರೆ ಈಗ ಕಾಣಸಿಗುವುದು ಒಂದೇ ಸ್ತಂಭ ಇನ್ನೊಂದು ಸ್ತಂಭವು ೧೯೬೯ರಲ್ಲಿ ಸಿಡಿಲಿಗೆ ಸಿಕ್ಕಿ ನಾಶವಾಗಿದೆ. ಈ ವಿದ್ಯಾಲಯದ ಹೊರಗಿನ ಗೋಡೆಯು ಪೂರ್ವ-ಪಶ್ಚಿಮವಾಗಿ ೨೪೧ ಅಡಿ ಉದ್ದ, ಉತ್ತರ-ದಕ್ಷಿಣವಾಗಿ ೨೨೦ ಅಡಿಗಳಷ್ಟು ಅಗಲವಾಗಿದೆ. ಮುಗಿಲನ್ನೆ ಚುಂಬಿಸುತ್ತಿರುವ ಈ ವಿದ್ಯಾಲಯ ತಳಪಾಯದಿಂದ ೧೩೧ ಅಡಿ ಎತ್ತರವಾಗಿದೆ. ಒಳಗಿನ ಆವರಣ ಪೂರ್ವ ಪಶ್ಚಿಮವಾಗಿ ೭೫ರವರೆಗೆ ಉದ್ದವಾಗಿದೆ. ಉತ್ತರ ದಕ್ಷಿಣವಾಗಿ ೫೫ ಅಡಿ ಅಗಲವಾಗಿದೆ. ಆವರಣದ ಎತ್ತರ ೪೫ ಅಡಿ ಇದೆ (ಕುಲಕರ್ಣಿ, ೧೯೬೯: ೧೮).

೪. ಈ ಕಟ್ಟಡವನ್ನು ಎತ್ತರದ ಬುನಾದಿಯ ಮೇಲೆ ನಿರ್ಮಾಣ ಮಾಡಲಾಗಿದೆ. ಮುಖ್ಯದ್ವಾರವು ನಾಶವಾಗಿ ಹೋಗಿದೆ. ಆದರೆ ಅಲ್ಲಿರುವ ಚಿತ್ರಣದ ಪ್ರಕಾರ 'ಮುಖ್ಯದ್ವಾರದ ಹೊರಕಮಾನು ೨೧ ಅಡಿ ಉದ್ದ ಒಳಕಮಾನು ೧೦ ಅಡಿ ೧೫ ಇಂಚು ಉದ್ದ ಕಮಾನುಗಳಿಂದ ನಿರ್ಮಾಣವಾಗಿದೆ. ಕಟ್ಟಡದ ಎರಡು ಬದಿಗೆ ಮಿನಾರ್ ನಿರ್ಮಾಣ ಮಾಡಲಾಗಿತ್ತು. ಇದು ಸಿಡಿಲಿನಿಂದ ನಾಶವಾಗಿದೆ ಎಂದು ಉಲ್ಲೇಖಿಸಲಾಗಿದೆ. ಉಳಿದ ಮಿನಾರ್ ವೃತ್ತಾಕಾರದಲ್ಲಿದ್ದು, ನೆಲದಿಂದ ೬೭ ಅಡಿ ೪ ಇಂಚು ಎತ್ತರವಾಗಿದೆ. ಮೇಲಕ್ಕೆ ಹೋದಂತೆ ಕಿರಿದಾಗುತ್ತಾ ಹೋಗುವಂತೆ ನಿರ್ಮಾಣ ಮಾಡಲಾಗಿದೆ. ಈ ಗೋಪುರವು ೩ ಅಂತಸ್ತುಗಳನ್ನು ಹೊಂದಿದೆ. ಮೊದಲನೇ ಹಾಗೂ ಎರಡನೇ ಅಂತಸ್ತಿನ ಮುಂಭಾಗದಲ್ಲಿ ಖಾಲಿ ಸ್ಥಳವನ್ನು ಬಿಡಲಾಗಿದೆ. ಎರಡನೇ ಹಾಗೂ ೩ನೇ ಅಂತಸ್ತು ನಾಶವಾಗಿದ್ದರಿಂದ ಇದರ ಚಿತ್ರಣ ವಿವರಿಸಲು ಅಸಾಧ್ಯವಾಗಿದೆ. ಗೋಪುರದ ಹೊರಾಂಗಣ ಗೋಡೆಯನ್ನು ಚೀನಿ ಶಿಲೆಗಳಿಂದ ಶೃಂಗಾರ ಮಾಡಲಾಗಿದ್ದು, ಅರೇಬಿಕ್ ಹಾಗೂ ಪರ್ಷಿಯಾ ಭಾಷೆಯಲ್ಲಿ ಕುರಾನ್ ಪದಗಳಿಂದ ಅಲಂಕರಿಸಲಾಗಿದೆ ಎಂದು ಉಲ್ಲೇಖಿಸಿದ್ದಾರೆ. ಮೆಡೋಸ್ ಟೇಲರ್‌ವರ "ಸ್ಕೆಚ್ಚಸ್ ಇನ್ ದ ಡೆಕ್ಕನ್' ಮತ್ತು ಬರ್ಗೆಸ್‌ರವರ 'ಆರ್ಕಿಯಾಲಾಜಿಕಲ್ ಆಫ್ ವೆಸ್ಟರ್ನ್ ಇಂಡಿಯಾ' ಎಂಬ ಗ್ರಂಥಗಳಲ್ಲಿ ಮದರಸಾ ವಿದ್ಯಾಲಯದ ಬಗ್ಗೆ ಈ ಕೆಳಗಿನಂತೆ ವರ್ಣಿಸಲಾಗಿದೆ. "ಇದು ಮೂರು ಅಂತಸ್ತುಗಳನ್ನು ಹೊಂದಿದ್ದು ೨೦೫ ಅಡಿ ಉದ್ದ ೧೮೦ ಅಡಿ ಅಗಲವಿದೆ. ಕಟ್ಟಡದಲ್ಲಿನ ಶಿಕ್ಷಕರ ಕೋಣೆಗಳು ೮ ಮೂಲೆಗಳುಳ್ಳ ಕೋಣೆಗಳಾಗಿದ್ದು ಪ್ರತಿಯೊಂದು ಕೋಣೆಯಲ್ಲೂ ಪುಸ್ತಕಗಳನ್ನಿಡಲು ಸ್ಥಳದ ವ್ಯವಸ್ಥೆ ಮಾಡಲಾಗಿದೆ (ಯಾಜ್ದಾನಿ, ೧೯೧೭: ೧೯೬, ೨೧).

ಅಧ್ಯಾಯ ೯

ಉಪಸಂಹಾರ

ಕರ್ನಾಟಕ ಚರಿತ್ರೆಯನ್ನು ಕಟ್ಟಿಕೊಳ್ಳುವ ಸಂದರ್ಭದಲ್ಲಿ ಸಾಂಪ್ರದಾಯಿಕ ಆಕರಗಳು ಪ್ರಬಲವಾದ ಪ್ರೇರಣಾ ಶಕ್ತಿಗಳಾಗಿರುವುದನ್ನು ನಾವು ನೋಡಿದ್ದೇವೆ. ಕರ್ನಾಟಕ ಚರಿತ್ರೆಯ ಅಧ್ಯಯನದಲ್ಲಿ ಸ್ಥಳೀಯ ಚರಿತ್ರೆ ಮತ್ತು ಮೌಖಿಕ ಚರಿತ್ರೆಗಳ ಪ್ರಾಧಾನ್ಯತೆ ಇತ್ತೀಚೆಗೆ ಹೆಚ್ಚಾಗಿರುವುದನ್ನು ನಾವು ನೋಡಬಹುದು. ಆದರೆ ಈ ಬಗೆಯ ಸಂಶೋಧನ ಕಾರ್ಯಗಳು ಬಹುತೇಕವಾಗಿ ಜಾನಪದ ವಿದ್ವಾಂಸರಿಂದ ನಡೆಯುತ್ತಿವೆ. ವೃತ್ತಿನಿರತ ಚರಿತ್ರಕಾರರು ಕಳೆದ ದಶಕದಿಂದೀಚೆಗೆ ತಮ್ಮ ಆಸಕ್ತಿಯನ್ನು ಈ ನಿಟ್ಟಿನಲ್ಲಿ ಕೇಂದ್ರೀಕರಿಸಿರುವ ವಿಷಯವನ್ನು ಈಗಾಗಲೇ ಪ್ರಸ್ತಾವನೆ ಮತ್ತು ಅಧ್ಯಾಯ ಎರಡರಲ್ಲಿ ವಿವರಿಸಲಾಗಿದೆ (ಪ್ರಸ್ತಾವನೆ, ಪು.೮, ಅಧ್ಯಾಯ ೩, ಪು.೪೩).

ಪುರುಷೋತ್ತಮ ಬಿಳಿಮಲೆ, ಹಿ.ಚಿ.ಬೋರಲಿಂಗಯ್ಯ ಮುಂತಾದ ಜಾನಪದ ವಿದ್ವಾಂಸರು ಮಾಡಿದ್ದ 'ಶಿಷ್ಟ ಚರಿತ್ರೆ' ಮತ್ತು 'ಪರಿಶಿಷ್ಟ ಚರಿತ್ರೆ' ಎನ್ನುವ ತರ್ಕವನ್ನು ವಿಜಯ್ ಪೂಣಚ್ಚ ಅವರಂಥ ಚರಿತ್ರಕಾರರು ಈಗಾಗಲೇ ವಿಶ್ಲೇಷಿಸಿರುವುದನ್ನು ನಾವು ಗಮನಿಸಬೇಕು (ಪಳಮೆ, ೨೦೦೪). ಅವರ ವಾದದ ಪ್ರಕಾರ ಶಿಷ್ಟ ಮತ್ತು ಪರಿಶಿಷ್ಟ ಚರಿತ್ರೆಯ ಆಕರಗಳು ಪರಸ್ಪರ ಪೂರಕವಾಗಿರುತ್ತವೆ. ಅನೇಕ ಸಂದರ್ಭಗಳಲ್ಲಿ ಶಿಷ್ಟ ಚರಿತ್ರೆಯಲ್ಲಿ ಇಲ್ಲದಿರುವ ಮೌನಗಳಿಗೆ ಉತ್ತರವನ್ನು ಮೌಖಿಕ ಆಕರಗಳಲ್ಲಿ ದೊರೆತಿರುವುದನ್ನು ಅವರು ವಿಶ್ಲೇಷಿಸಿರುವುದು ಗಮನಿಸಬಹುದು (ಪೂಣಚ್ಚ, ೨೦೦೪: ೬).

ಬೀದರ್ ಕೋಟೆಯನ್ನು ವಸ್ತುವಿಷಯವನ್ನಾಗಿ ತೆಗೆದುಕೊಂಡಾಗ ಎದುರಾದ ಸವಾಲುಗಳು ಅನೇಕ. ಪ್ರಮುಖ ಆಕರಗಳಾಗಿ ಬಹುತೇಕ ಲಿಖಿತ ದಾಖಲೆಗಳೆ ಈ ನಿಟ್ಟಿನಲ್ಲಿ ಪ್ರಧಾನ ಪಾತ್ರ ವಹಿಸಿದ್ದನ್ನು ಈವರೆಗೆ ಪ್ರಕಟವಾದ ಕೃತಿಗಳಲ್ಲಿ ಗಮನಿಸಬಹುದು. ಪ್ರಸ್ತುತ ಅಧ್ಯಯನದಲ್ಲಿ ಚರಿತ್ರೆಯ ಇನ್ನೊಂದು ಮಗ್ಗುಲನ್ನು ನೋಡುವ ಪ್ರಯತ್ನ ಮಾಡಲಾಗಿದೆ. ಈಗಾಗಲೇ ಪ್ರಸ್ತುತ ಅಧ್ಯಯನದ ವಿವಿಧ ಅಧ್ಯಾಯಗಳಲ್ಲಿ ಚರ್ಚೆಗೆ ಎತ್ತಿಕೊಂಡಿರುವ ಅನೇಕ ವಿಷಯಗಳನ್ನು ಒರೆಹಚ್ಚಿ ನೋಡಲಾಗಿದೆ. ಈ ಸಂದರ್ಭದಲ್ಲಿ ಅನೇಕ ಬಾರಿ ಲಿಖಿತ ಆಕರಗಳಿಗಿಂತ ಮೌಖಿಕ ಆಕರಗಳು ನೀಡಿರುವ ದೃಷ್ಟಿಕೋನಗಳು ಭಿನ್ನವಾಗಿರುವುದನ್ನು ನೋಡಿದ್ದೇವೆ (ಉದಾ. ಅಧ್ಯಾಯ ೨ ಕೋಟೆಯ ನಿರ್ಮಾಣದ ಬಗೆಗಿರುವ ಐತಿಹ್ಯಗಳನ್ನು ನೋಡಿ). ಇನ್ನು ಕೆಲವು ಸಂದರ್ಭಗಳಲ್ಲಿ ಒಂದೇ ವಸ್ತು ವಿಷಯವನ್ನು ಭಿನ್ನ ಭಿನ್ನ ಮೌಖಿಕ ಆಕರಗಳು ಬೇರೆ ಬೇರೆ ರೀತಿಯಲ್ಲಿ ವಿಶ್ಲೇಷಿಸಿರುವುದನ್ನು ನಾವು ನೋಡಬಹುದು. (ಉದಾ. ಅಧ್ಯಾಯ ೮, ಮಹಮೂದ್ ಗವಾನ್‌ನ ಕೊಲೆ ಬಗ್ಗೆ ಇರುವ ಐತಿಹ್ಯಗಳು, ಪು.೧೪೧, ೧೪೨). ಕೆಲವು ಸಂದರ್ಭಗಳಲ್ಲಿ ಲಿಖಿತ ಆಕರಗಳು ಮತ್ತು ಮೌಖಿಕ ಆಕರಗಳು ಪರಸ್ಪರ ಪೂರಕವಾಗಿರುವುದನ್ನು ಅಧ್ಯಾಯದುದ್ದಕ್ಕೂ ಗಮನಿಸಬಹುದು.

ಪ್ರಸ್ತುತ ಅಧ್ಯಯನವು ಹಿಂದೆ ವಿವರಿಸಲಾದ ಅನೇಕ ಬಗೆಯ ತಾರ್ಕಿಕ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ಬಗೆಯ ಚರಿತ್ರೆಯ ಇನ್ನೊಂದು ಮಗ್ಗುಲನ್ನು ಅಭ್ಯಸಿಸಲು ಪ್ರಯತ್ನಿಸಿದೆ. ಈ ಕಾರಣಕ್ಕಾಗಿ ಐತಿಹ್ಯಗಳು ಪ್ರಸ್ತುತ ಅಧ್ಯಯನದ ಕೇಂದ್ರ ಬಿಂದುವಾಗಿದೆ. ಇದರ ಮೂಲಕ ಖ್ಯಾತ ವಿದ್ವಾಂಸರಾದ ಜಿ.ಯಾಜ್ದಾನಿ ಅವರು ರಚಿಸಿರುವ ಕೃತಿಯಲ್ಲಿ ದೊರೆಯದ ಅನೇಕ ಮಾಹಿತಿಗಳು ಮತ್ತು ವಿವರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಲಾಗಿದೆ. ಈ ಮೂಲಕ ಬೀದರ್ ಕೋಟೆಯ ನಿರ್ಮಾಣದ ಬಗ್ಗೆ, ಗರ್ಭಬುರ್ಜಿನ ಬಗ್ಗೆ, ಪಾಂಡುರಂಗನ ಪಾದುಕೆ ಬಗ್ಗೆ, ಬೊಮಗೊಂಡನ ಕೆರೆಯ ಬಗ್ಗೆ, ವೀರಸಂಗಯ್ಯನ ಗದ್ದುಗೆಯ ಬಗ್ಗೆ, ಅಹಮದ್-ಶಹ-ವಲೀ ಗೋರಿಯ ಬಗ್ಗೆ ಮತ್ತು ಮಹಮೂದ್ ಗವಾನ್‌ನ ಕೊಲೆಯ ಬಗ್ಗೆ ಲಭ್ಯವಾದ ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಆ ಮೂಲಕ ಬಹುತೇಕವಾಗಿ ನಿರ್ಲಕ್ಷಿಸಲ್ಪಟ್ಟಿರುವ ಚರಿತ್ರೆ ಬರವಣಿಗೆಯ ಮಾದರಿಯೊಂದನ್ನು ಪ್ರಸ್ತುತ ಅಧ್ಯಯನದಲ್ಲಿ ಅಭ್ಯಸಿಸುವ ಪ್ರಯತ್ನವನ್ನು ಮಾಡಲಾಗಿದೆ. ಕರ್ನಾಟಕ ಚರಿತ್ರೆಯಲ್ಲಿ ನಿರ್ಲಕ್ಷಿಸಲ್ಪಟ್ಟ ಬೀದರ್‌ನಂಥ ಪ್ರದೇಶಗಳಲ್ಲಿ ದೊರೆಯುವ ಮೌಖಿಕ ಆಕರಗಳನ್ನು ಪ್ರಸ್ತುತ ಅಧ್ಯಯನದಲ್ಲಿ ಬಳಸಿಕೊಳ್ಳಲು ಪ್ರಯತ್ನ ಮಾಡಲಾಗಿದೆ. ಈ ಮೂಲಕ ಕರ್ನಾಟಕ ಚರಿತ್ರೆಯನ್ನು ಜನಪದೀಯ ನೆಲೆಗಳಿಂದ ಅರ್ಥಮಾಡಿಕೊಳ್ಳುವ ಪ್ರಯತ್ನ ಇದಾಗಿದೆ.

ಅನುಬಂಧಗಳು

೧. ಗ್ರಂಥ ಋಣ

೨. ವಕ್ತೃಗಳ ವಿವರ

೧. ಗ್ರಂಥಋಣ

ಪ್ರಕಟಿತ ಗ್ರಂಥಗಳು

೧. ಅಪರಂಜಿ ಎನ್.ಆರ್., ಪ್ರಾಚೀನ ಭಾರತದ ಇತಿಹಾಸ, ಕೇಂಬ್ರಿಜ್ ಪಬ್ಲಿಷಿಂಗ್ ಕಂಪನಿ, ಬೆಂಗಳೂರು, ೧೯೯೮

೨. ಅಮರೇಶ ನುಗಡೋಣಿ, ಹೈದರಾಬಾದ್ ಕರ್ನಾಟಕ ಹಾಡು-ಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೩. ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೪. ಉಮಾಮಹೇಶ್ವರ ಎಂ.ಎ., ಕರ್ನಾಟಕ ಇತಿಹಾಸ, ಗೌರಿ ಪ್ರಕಾಶನ, ಚಿತ್ರದುರ್ಗ, ೨೦೦೨

೫. ಎಚ್ಚೆಸ್ಕೆ, ಅವಲೋಕನ ಕರ್ನಾಟಕ ಪರಂಪರೆ ಸಮೀಕ್ಷೆ, ವಿಶ್ವಕನ್ನಡ ಸಮ್ಮೇಳನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೧೯೯೫

೬. ಕುಲಕರ್ಣಿ ಎಲ್.ಆರ್., ಮಹಮೂದ್ ಗವಾನ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೯

೭. ಕೃಷ್ಣರಾವ್ ಎಂ.ವಿ., ಮತ್ತು ಕೇಶವಭಟ್ಟ ಎಂ., ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಚಾಮರಾಜಪೇಟೆ, ಬೆಂಗಳೂರು, ೧೯೭೦

೮. ಕಲಬುರ್ಗಿ ಎಂ.ಎಂ., ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ಐಬಿಎಚ್ ಪ್ರಕಾಶನ, ಬೆಂಗಳೂರು, ೧೯೮೦

೯. ಕೃಷ್ಣ ಕೋಲ್ಹಾರ ಕುಲಕರ್ಣಿ, ಬುಸಾತಿನ್ ಸಲಾತೀನ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೦. ಕಾಶಿನಾಥ ರೆಡ್ಡಿ ಎಚ್., ಹುಮನಾಬಾದ್ ತಾಲ್ಲೂಕು ಪರಿಚಯ, ಬೀದರ ಜಿಲ್ಲಾ ೭ನೇ ಕನ್ನಡ ಸಾಹಿತ್ಯ ಸಮ್ಮೇಳನ, ೨೦೦೩

೧೧. ಗಾಯತ್ರಿ ನಾವಡ, ಭಾರತೀಯ ಸ್ತ್ರೀವಾದ ಒಂದು ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೧೨. ಗುರುದತ್ತ ಪ್ರದಾನ, ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೪

೧೩. ಗುರುಲಿಂಗಪ್ಪಾ ದಬಾಲೆ, ಬೀದರ ಜಿಲ್ಲೆಯ ಅನುಭಾವಿ ಕವಿಗಳು, ಗುರುಬಸವೇಶ್ವರ ಸಂಸ್ಥಾನ ಮಠ, ಹುಲಸೂರು, ೨೦೦೬

೧೪. ಚಂದ್ರಶೇಖರ ಕಂಬಾರ, ಕನ್ನಡ ಜಾನಪದ ವಿಶ್ವಕೋಶ, ಸಂಪುಟ ೧, ೨, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೫

೧೫. ಚೆನ್ನಕ್ಕ ಎಲಿಗಾರ, ಬಂಕಾಪುರದ ಶೋಧ, ಚೆನ್ನಗಂಗಾ ಪ್ರಕಾಶನ, ಧಾರವಾಡ, ೧೯೯೦

೧೬. ಚೆನ್ನಣ್ಣ ವಾಲೀಕಾರ, ಹೈದ್ರಾಬಾದ್ ಕರ್ನಾಟಕ ಗ್ರಾಮದೇವತೆಗಳ ಜಾನಪದೀಯ ಅಧ್ಯಯನ, ದಲೀತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ, ೧೯೯೮

೧೭. ಚೆನ್ನಣ್ಣ ವಾಲೀಕಾರ, ಜಾನಪದಲೋಕ, ದಲಿತ ಬಂಡಾಯ ವಿಚಾರ ಪ್ರಚಾರ, ಗುಲಬರ್ಗಾ, ೧೯೯೩

೧೮. ಚಂದ್ರಶೇಖರಪ್ಪ ಟಿ.ಜಿ., ಮಧ್ಯಕಾಲೀನ ಭಾರತದ ಇತಿಹಾಸ, ಪೂರ್ಣಚಂದ್ರ ಪ್ರಕಾಶನ, ಶಿವಮೊಗ್ಗ, ೨೦೦೨

೧೯. ಚಿದಾನಂದಮೂರ್ತಿ ಎಂ., ಜನ-ಜನಪದ, ಜಾನಪದ ಸಂ.೩, ಸ್ವಪ್ನ ಬುಕ್ ಹೌಸ್, ಬೆಂಗಳೂರು, ೨೦೦೨

೨೦. ಜಗನಾಥ ಹೆಬ್ಬಾಳೆ, ಬೀದರ ಜಿಲ್ಲೆಯ ಬುಲಾಯಿ ಹಾಡುಗಳು, ಶ್ರೀಮತಿ ನೀಲಗಂಗಾ ಪ್ರಕಾಶನ, ಬಿದರ, ೧೯೯೬

೨೧. ಜವರೇಗೌಡ ದೇ., ಜಾನಪದ ಅಧ್ಯಯನ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩

೨೨. ನಾಗೇಗೌಡ, ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ.೧, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೪

೨೩. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಡಿಯಾ, ಸಂ.೩, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೯

೨೪. ನಾಯಕ ಹಾ.ಮಾ., ಜಾನಪದ ಸ್ವರೂಪ, ತಳುಕಿನ ವೆಂಕಣ್ಣಯ್ಯನ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೭೧

೨೫. ನಾಗರಾಜ್‌ರಾವ್, ದಿ ಚಾಲುಕ್ಯಾಸ್ ಆಫ್ ಕಲ್ಯಾಣ, ದ ಮೈಥಿಕ್ ಸೊಸೈಟಿ, ಬೆಂಗಳೂರು, ೧೯೮೩

೨೬. ನಾಗಯ್ಯ ಜೆ.ಎಂ., ಆರನೆಯ ವಿಕ್ರಮಾದಿತ್ಯನ ಶಾಸನಗಳ ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ, ೧೯೯೨

೨೭. ನಂಜುಂಡಸ್ವಾಮಿ ಎ.ಎಸ್., ರಾಷ್ಟ್ರಕೂಟರ ಇತಿಹಾಸ, ಸಮಾಜ ಪುಸ್ತಕಾಲಯ, ಧಾರವಾಡ, ೨೦೦೪

೨೮. ಘರಾಮರ್‌ಜಂಗ್ ಬಹದ್ದೂರ್, ಎ ಗೈಡ್ ಟು ಬೀದರ್ ವಿಥ್ ಹಿಸ್ಟಾರಿಕಲ್ ನೋಟ್ಸ್, ಲಾರೆನ್ಸ್ ಇಸ್ಲಾಮ ಪ್ರೆಸ್, ಮೌಂಟ್ ರೋಡ್, ಕಲ್ಕತ್ತ, ೧೯೪೪

೨೯. ಪಾಂಡುರಂಗರಾಯ ದೇಸಾಯಿ, ಕರ್ನಾಟಕ ಕಲಚೂರಿಗಳು, ಆಲೂರು ವೆಂಕಟರಾಯ ಪ್ರತಿಷ್ಠಾನ, ಧಾರವಾಡ, ೧೯೮೩

೩೦. ಪ್ರದೀಪಕುಮಾರ ಹೆಬ್ರಿ, ಕರ್ನಾಟಕ ಪ್ರೇಕ್ಷಣೆಯ ಸ್ಥಳಗಳು, ವಿಜಲಕ್ಷ್ಮಿ ಪ್ರಕಾಶನ, ಮೈಸೂರು, ೧೯೯೪

೩೧. ಪುರುಷೋತ್ತಮ ಬಿಳಿಮಲೆ, ಹಂಪಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬(೧೯೯೮)

೩೨. ಪಾಟೀಲ ಬಿ.ಸಿ., ಜಾನಪದ ಬದುಕು, ನೀಲಾಂಬಿಕಾ ಪ್ರಕಾಶನ, ಧಾರವಾಡ, ೧೯೯೬

೩೩. ಪುರುಷೋತ್ತಮ ಬಿಳಿಮಲೆ, ಕನ್ನಡ ಅಧ್ಯಯನ, ಗಾಳಿಸಂಚಿಕೆ, ಸಂ.೫, ಸಂ.೩, ೧೯೯೯

೩೪. ಬರ್ಗಸ್ ಜಹಾನ್, ಹಿಸ್ಟರಿ ಆಫ್ ರೈಜ್ ಆಫ್ ದ ಮಹಮದನ್ ಪವರ್ ಇನ್ ಇಂಡಿಯಾ, ಕಲ್ಕತ್ತ ಪಬ್ಲಿಕೇಷನ್ಸ್, ೧೯೫೮

೩೫. ಬಸವರಾಜ ಸಬರದ, ಬೀದರ ಜಿಲ್ಲಾ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೨

೩೬. ಬಸವರಾಜ ಕೆ.ಆರ್., ಹಿಸ್ಟರಿ ಆ್ಯಂಡ್ ಕಲ್ಚರ್ ಆಫ್ ಕರ್ನಾಟಕ, ಚಾಲುಕ್ಯ ಪಬ್ಲಿಕೇಷನ್, ಧಾರವಾಡ, ೧೯೮೪

೩೭. ಭೈರೋಡಗಿ ಜಿ.ಎಂ., ಬೀದರ ಜಿಲ್ಲೆಯ ಶಾಸನಗಳು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೯೦

೩೮. ಬಸವರಾಜ ಪೊಲೀಸ್ ಪಾಟೀಲ, ಜಾನಪದ ಸಿರಿ, ವಿದ್ಯಾಸಾಹಸ ಪ್ರಕಾಶನ, ಗುಲಬರ್ಗಾ, ೧೯೯೦

೩೯. ಬಸವರಾಜ ಪೊಲೀಸ್ ಪಾಟೀಲ, ಜಾನಪದ ಚಿಂತನೆ, ಅಮರ ಪ್ರಕಾಶನ, ಗುಲಬರ್ಗಾ, ೨೦೦೧

೪೦. ಬಸವರಾಜ ಎನ್.ಅಕ್ಕಿ, ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ, ಸೋಮೇಶ್ವರ ಪ್ರಕಾಶನ, ಧಾರವಾಡ, ೨೦೦೪

೪೧. ಮೈತ್ರಿ ಕೆ.ಎಂ., **ಸುಲ್ತಾನ ಸುರುಳಿ**, ಮೈತ್ರಿ ಪ್ರಕಾಶನ, ಬೀದರ, ೧೯೯೪

೪೨. ಮುರಲೀಧರ ಕುಲಕರ್ಣಿ, **ಪ್ರವಾಸಿ ಕಂಡ ಬೀದರ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಬೀದರ, ೧೯೯೭

೪೩. ಯಾಜ್ದಾನಿ ಜಿ., **ದಿ ಆ್ಯಂಟಿಕ್ಸ್ ಆಫ್ ಬೀದರ್**, ಪಬ್ಲಿಕ್ ಪ್ರಿಂಟೆಡ್ ಎಟ್ ದ ಬಾಪ್ಟಿಸ್ಟ್ ಮಿಶನ್, ಕಲ್ಕತ್ತ, ೧೯೧೭

೪೪. ಯಾಜ್ದಾನಿ ಜಿ., **ಬೀದರ್ ಇಟ್ಸ್ ಹಿಸ್ಟರಿ ಆ್ಯಂಡ್ ಮಾನುಮೆಂಟ್ಸ್**, ಆಕ್ಸಫರ್ಡ್ ಯೂನಿವರ್ಸಿಟಿ, ಲಂಡನ್, ೧೯೪೭

೪೫. ಯಾಸೀನ ಖುದ್ದೂಸಿ ಎಂ. ಮತ್ತು ಸೀತಾರಾಮ ಜಾಗಿರ್‌ದಾರ, **ಕರ್ನಾಟಕದ ಪರ್ಶಿಯನ್ ಅರೇಬಿಕ್ ಮತ್ತು ಉರ್ದು ಶಾಸನಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೪೬. ರಾಮಣ್ಣ ಕ್ಯಾತನಹಳ್ಳಿ, **ಬೀದರ ಜಿಲ್ಲೆಯ ಜನಪದ ಕಥೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ೧೯೭೬

೪೭. ರಾಮಣ್ಣ ಕ್ಯಾತನಹಳ್ಳಿ, **ಬೀದರ ಜಿಲ್ಲೆಯ ಜನಪದ ಗೀತೆಗಳು**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೬

೪೮. ರಂಗಸ್ವಾಮಿ ಸಿ.ವಿ., **ಮಧ್ಯಕಾಲೀನ ಭಾರತದ ಇತಿಹಾಸ**, ವಿಜಯ ಬುಕ್‌ಡಿಪೊ ಮತ್ತು ಪ್ರಕಾಶನ, ಗದಗ, ೧೯೮೦

೪೯. ರಾಮಚಂದ್ರೇಗೌಡ ಹಿ.ಸಿ., **ಜಾನಪದ ಅಂತರಂಗ**, ಮಾನವಿ ಪ್ರಕಾಶನ, ಮೈಸೂರು, ೧೯೮೭

೫೦. ರಾಮಲಿಂಗಪ್ಪ ಎಚ್., **ಕರ್ನಾಟಕ ಇತಿಹಾಸ ಪರಿಚಯ**, ನವಿತಾ ಪ್ರಕಾಶನ, ಮೈಸೂರು, ೧೯೯೭

೫೧. ರಾಮಲಿಂಗಪ್ಪ ಎಚ್., **ಕರ್ನಾಟಕ ಇತಿಹಾಸ**, ಕಲಾ ಪ್ರಕಾಶನ, ಬೆಂಗಳೂರು, ೧೯೯೯

೫೨. ರಂಗಸ್ವಾಮಯ್ಯ ಜಿ.ಆರ್. ಮತ್ತು ಷೇಕ್‌ಅಲಿ ಬಿ., **ದಕ್ಷಿಣ ಭಾರತದ ಇತಿಹಾಸ**, ಚೇತನ ಬುಕ್‌ಹೌಸ್, ಮೈಸೂರು, ೨೦೦೧

೫೩. ರಂಗಸ್ವಾಮಯ್ಯ ಜಿ.ಆರ್., **ಕರ್ನಾಟಕ ಸಂಕ್ಷಿಪ್ತ ಚರಿತ್ರೆ**, ಚೇತನ್ ಬುಕ್ ಹೌಸ್, ಬೆಂಗಳೂರು, ೨೦೦೧

೫೪. ರಹಮತ್ ತರೀಕೆರೆ, **ಕರ್ನಾಟಕದ ಸೂಫಿಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೫೫. ಲಕ್ಷ್ಮಣ್ ತೆಲಗಾವಿ, **ಸ್ಥಳೀಯ ಚರಿತ್ರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೫೬. ಲಕ್ಷ್ಮಣ್ ತೆಲಗಾವಿ, ವೀರನಾಯಕ ಹರತಿ, ವಾಲ್ಮಿಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೪

೫೭. ವಿವೇಕ ರೈ ಬಿ.ಎ., ಅನ್ವಯಿಕ ಜಾನಪದ, ರಾಜೇಶ ಪವರ್ ಪ್ರೆಸ್, ಮಂಗಳ ಗಂಗೋತ್ರಿ, ೧೯೮೫

೫೮. ವಿವೇಕ ರೈ ಬಿ.ಎ., ತುಳು ಜಾನಪದ ಸಾಹಿತ್ಯ, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೮೫

೫೯. ವೀರಣ್ಣ ದಂಡೆ, ಜಾನಪದ ಕನ್ನಡ ಪ್ರಜ್ಞೆ ಕವಿಮಾರ್ಗ ಪ್ರಕಾಶನ, ಗುಲಬರ್ಗಾ, ೧೯೯೩

೬೦. ವಿರೇಂದ್ರ ಸಿಂಪಿ, ಚೆನ್ನಬಸವಣ್ಣ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ೧೯೯೭

೬೧. ವಿಜಯ್ ಪೂಣಚ್ಚ ತಂಬಂಡ, ಚರಿತ್ರೆ ಸಂಪುಟ ವಿಶ್ವಕೋಶ ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೬೨. ವೀರಣ್ಣ ದಂಡೆ, ದೇಶೀ ದೃಷ್ಟಿ, ಕವಿಮಾರ್ಗ ಪ್ರಕಾಶನ, ಗುಲಬರ್ಗಾ, ೨೦೦೧

೬೩. ವೀರಣ್ಣ ದಂಡೆ, ದೇಶಿ ಸಂ.೧, ಭಾಗ್ಯಶ್ರೀ ಎಂಟರ್‌ಪ್ರೆಸೆಸ್, ಬೆಂಗಳೂರು, ೨೦೦೩

೬೪. ವಿಜಯ್ ಪೂಣಚ್ಚ ತಂಬಂಡ, ಪಳಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೬೫. ವಸು, ಮೌಖಿಕ ಚರಿತ್ರೆ, ಅಂಕಿತ ಪುಸ್ತಕ ಬೆಂಗಳೂರು, ೨೦೦೪

೬೬. ಸಂಕನಗೌಡ ಎಸ್.ಬಿ ಮತ್ತು ರವೀದ್ರಕೊಪ್ಪರ, ಕರ್ನಾಟಕ ಇತಿಹಾಸ, ವಿದ್ಯಾನಿಧಿ ಪ್ರಕಾಶನ, ಗದಗ, ೧೯೮೧ (೧೯೮೪)

೬೭. ಸೂರ್ಯನಾಥ ಕಾಮತ್ ಮತ್ತು ದೇವರಕೊಂಡಾರೆಡ್ಡಿ, ಇತಿಹಾಸ ದರ್ಶನ, ಸಂ.೮, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೯೩

೬೮. ಸುಬ್ಬಣ್ಣ ರೈ, ದಕ್ಷಿಣ ಕನ್ನಡ ಐತಿಹ್ಯಗಳು, ಮುಂಬೈ ವಿಶ್ವವಿದ್ಯಾಲಯ, ಮಾಣಿ ಜೂನಿಯರ್ ಛೇಂಬರ್, ಮಾಣಿ, ೧೯೯೪

೬೯. ಸೂರ್ಯನಾಥ್ ಯು.ಕಾಮತ್, ಎ ಕನ್‌ಸೆಸ್ ಹಿಸ್ಟರಿ ಆಫ್ ಕರ್ನಾಟಕ, ಜೂಪಿಟರ್ ಬುಕ್ಸ್ ಎಂ.ಸಿ.ಸಿ.ಪಬ್ಲಿಕೇಷನ್ಸ್, ಬೆಂಗಳೂರು, ೨೦೦೧

೭೦. ಸೋಮನಾಥ ಯಾಳವಾರ ಮತ್ತು ಪ್ರೇಮಾ ಸಿರ್ಸೆ, ಬೀದರ ಜಿಲ್ಲಾ ದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೨೦೦೫

೭೧. ಶೇಷಗಿರಿರಾವ್ ಎಲ್.ಎಸ್., ಕಿರಿಯರ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪

೭೨. ಶೇರವಾನಿ ಎಚ್.ಕೆ., ಮಹಮದ್ ಗವಾನ್ ದ ಗ್ರೇಟ್ ವಾರಿಯರ್ ಆಫ್ ಬಹಮನಿ, ಅಲಹಬಾದ್ ಪಬ್ಲಿಕೇಷನ್ಸ್, ೧೯೪೨

೭೩. ಶಿವಣ್ಣ ಆರ್.ಜಿ., ಭಾರತದ ಇತಿಹಾಸ ಮತ್ತು ಸಂಸ್ಕೃತಿ, ಪುಷ್ಪಗಿರಿ ಪ್ರಕಾಶನ, ಮೈಸೂರು, ೧೯೯೬

೭೪. ಷೇಕ್‌ಅಲಿ ಬಿ.(ಪ್ರ.ಸಂ), ಕರ್ನಾಟಕ ಚರಿತ್ರೆ ಸಂಪುಟ ೨ ಮತ್ತು ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೭೫. ಶಿವರುದ್ರಸ್ವಾಮಿ ಎಸ್.ಎನ್., ಕರ್ನಾಟಕ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ಪೌರಾಸ್ತ್ಯ ಪ್ರಕಾಶನ, ತಿಪಟೂರು, ಮೈಸೂರು, ೨೦೦೦

೭೬. ಶಿಲಾಕಾಂತ ಪತ್ತಾರ, ಬಾದಾಮಿ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭೭. ಶಿವತಾರಕ ಕೆ.ಬಿ., ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೭೮. ಶ್ರೀಮತಿ ಎಚ್.ಎಸ್., ಸ್ತ್ರೀವಾದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೭೯. ಹಿರೇಮಠ ಆರ್.ಸಿ., ಬಸವಣ್ಣ ಭಕ್ತಿ ಭಂಡಾರ ಬಸವಣ್ಣನ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೮

೮೦. ಹನುಮಾಕ್ಷಿ ಗೋಗಿ, ಬೀದರ ಜಿಲ್ಲೆಯ ಶಾಸನ ಸಂಪುಟ ೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೮೧. ಷಡಕ್ಷರಯ್ಯ ಆರ್.ಎಂ., ಆರ್ಕ್ಯಾಲಜಿ ಇನ್ ಬೀದರ ಡಿಸ್ಟ್ರಿಕ್ಟ್ ವಿಥ್ ಸ್ಪೇಶಲ್ ರೆಫರೆನ್ಸ್ ಟು ಮಾಂಜ್ರಾ ಆ್ಯಂಡ್ ಕಾರಂಜಾ ವಾಲೀಸ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೪

ಅಪ್ರಕಟಿತ ಗ್ರಂಥಗಳು

೧. ಕೊಟ್ರೇಶ್ ಎಂ., ಕೋಟೆ-ಕೊತ್ತಲಗಳು : ಒಂದು ಅಧ್ಯಯನ (ಬಳ್ಳಾರಿ ಜಿಲ್ಲೆ), ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨. ಕರಿಬಸಪ್ಪ ಎ., ಬಳ್ಳಾರಿ ಜಿಲ್ಲೆಯ ಐತಿಹ್ಯಗಳು, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೩. ಬಂಡಯ್ಯಸ್ವಾಮಿ, ಬೀದರ ಜಿಲ್ಲೆಯ ಜಂಗಮರು : ಒಂದು ಅಧ್ಯಯನ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೪. ಮುದ್ದವೀರಪ್ಪ ಕೆ.ವಿ., ಕೋಟೆ-ಕೊತ್ತಲಗಳ ಜಾನಪದೀಯ ಅಧ್ಯಯನ (ತುಮಕೂರು ಜಿಲ್ಲೆ), ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

೫. ಸುಜಾತ ಮಲ್ಲನಗೌಡ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಕೋಟೆಗಳು : ಒಂದು ಅಧ್ಯಯನ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦

೬. ಶ್ರೀಮತಿ ಹೇಮಲತಾ ವಡ್ಡೆ, ಬೀದರ ಜಿಲ್ಲೆಯ ಟೊಕ್ರೆಕೋಳಿ ಬುಡಕಟ್ಟು : ಒಂದು ಸಾಂಸ್ಕೃತಿಕ ಅಧ್ಯಯನ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

೭. ಶ್ರೀನಿವಾಸ ಬೇಂದ್ರೆ, ಬೀದರ ಕನ್ನಡ ಸಾಮಾಜಿಕ ಹಾಗೂ ಪ್ರಾದೇಶಿಕ ಪ್ರಭೇದಗಳು, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೮. ಸುಧಾ ಎ.ಸಿ., ಜನಪದ ಕಾವ್ಯಗಳಲ್ಲಿ ಬಲಿದಾನ : ಒಂದು ಅಧ್ಯಯನ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೯. ಶ್ರೀಮತಿ ಲಕ್ಷ್ಮಿದೇವಿ ಎಲ್., ಕೋಲಾರ ಜಿಲ್ಲೆಯ ಐತಿಹ್ಯಗಳು : ಒಂದು ಅಧ್ಯಯನ, ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

೧೦. ವಿನಯ್‌ಕುಮಾರ ವರ್ಮ, ಎಜುಕೇಷನ್ ಇನ್ ಬೀದರ ಎ ಸ್ಟಡಿ, ಎಂ.ಫಿಲ್. ಪ್ರಬಂಧ, ಮಧುರೈ ಕಾಮರಾಜ ಯೂನಿವರ್ಸಿಟಿ, ಮಧುರೈ, ೨೦೦೬

ನಿಯತಕಾಲಿಕಗಳು/ಪತ್ರಿಕೆಗಳು

೧. ಅಭಿಮತ, ದೆಹಲಿ ಕರ್ನಾಟಕ ಸಂಘ, ಜೂನ್ ೨೦೦೬

೨. ಜನಪದ ಮಾಸಪತ್ರಿಕೆ, ಅಭಿಮಾನ ಪ್ರಕಾಶನ, ಬೆಂಗಳೂರು, ೨೦೦೬

೩. ಜಾನಪದ ಕರ್ನಾಟಕ, ಸಂಪುಟ ೪, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫

೪. ಬಸವ ಬೆಳಗು, ತ್ರೈಮಾಸಿಕ ಪತ್ರಿಕೆ, ಸಂಚಿಕೆ ೧, ಚಿತ್ತರಗಿ ವಿಜಯ ಮಹಾಂತೇಶ್ವರ ಸಂಸ್ಥಾನ ಮಠ, ಇಳಕಲ್, ೨೦೦೩

೫. ವಿಜಯ ಕರ್ನಾಟಕ, ದೀಪಾವಳಿ ವಿಶೇಷಾಂಕ, ಆನಂದ ಪ್ರಿಂಟರ್ಸ್ ಆ್ಯಂಡ್ ಪಬ್ಲಿಸರಸ್ಸ್, ಬೆಂಗಳೂರು, ೨೦೦೦

೬. ಸ್ವಾತಂತ್ರ ಸಂಗ್ರಾಮದ ಸ್ಮೃತಿಗಳು, ತೃತಿಯ ಸಂಪುಟ, ಗೀತಾ ಬುಕ್ ಹೌಸ್, ಮೈಸೂರು, ೧೯೮೦

೭. ಸಂಯುಕ್ತ ಕರ್ನಾಟಕ, ಹೈದರಾಬಾದ್ ಕರ್ನಾಟಕ ವಿಶೇಷ ಪುರವಣಿ, ಡಿಸೆಂಬರ್ ೨೮, ೨೦೦೬

೨. ವಕ್ತೃಗಳು

೧. ಹೆಸರು : ಗೋದಾವರಿ ಗಂಡ ಸದಾಶಿವ

ಊರು : ವಿದ್ಯಾನಗರ ಕಾಲೋನಿ, ಬೀದರ

ವಯಸ್ಸು : ೫೦

ವೃತ್ತಿ ಮತ್ತು ಜಾತಿ : ಗೃಹಿಣಿ, ವಿಶ್ವಕರ್ಮ

ದಿನಾಂಕ : ೧೬.೦೨.೨೦೦೭

೨. ಹೆಸರು : ಬಸಪ್ಪ ತಂದೆ ವೀರಸಂಗಪ್ಪ ಮಾಲಿಪಾಟೀಲ್

ಊರು : ಒಳಕೋಟೆ, ಬೀದರ

ವಯಸ್ಸು : ೬೦

ವೃತ್ತಿ ಮತ್ತು ಜಾತಿ : ದಳಪತಿ, ಲಿಂಗಾಯತ

ದಿನಾಂಕ : ೧೭.೦೨.೨೦೭

೩. ಹೆಸರು : ವೀರಭದ್ರಪ್ಪ ತಂದೆ ಫಾಳೆಪ್ಪ ಕೌಳಾಸ

ಊರು : ವಿದ್ಯಾನಗರ ಕಾಲೋನಿ, ಬೀದರ

ವಯಸ್ಸು : ೮೪

ವೃತ್ತಿ ಮತ್ತು ಜಾತಿ : ವ್ಯಾಪಾರ (ಸ್ವಾತಂತ್ರ ಹೋರಾಟಗಾರ) ಲಿಂಗಾಯತ

ದಿನಾಂಕ : ೧೮.೦೨.೨೦೦೭

೪. ಹೆಸರು : ಅಬ್ದುಲ್ ಶ್ಯಷದ ಷಾ ತಂದೆ ತಾಜೀರಬಾಬಾ

ಊರು : ಅಷ್ಟೂರ, ಬೀದರ ತಾಲ್ಲೂಕು, ಬೀದರ ಜಿಲ್ಲೆ

ವಯಸ್ಸು : ೫೫

ವೃತ್ತಿ ಮತ್ತು ಜಾತಿ : ಒಕ್ಕಲುತನ, ಮುಸ್ಲಿಂ

ದಿನಾಂಕ : ೧೮.೦೨.೨೦೦೭

೫. ಹೆಸರು : ಸುಲ್ತಾನ ಖಲೀಲಶಾ ಬಹಮನಿ ತಂದೆ ದ್ವಿ ಸುಲ್ತಾನಶಾ ಬಹಮನಿ

ಊರು : ಅಷ್ಟೂರ, ಬೀದರ ತಾಲ್ಲೂಕು, ಬೀದರ ಜಿಲ್ಲೆ

ವಯಸ್ಸು : ೩೭

ವೃತ್ತಿ ಮತ್ತು ಜಾತಿ : ಕೂಲಿ ಕೆಲಸ, ಮುಸ್ಲಿಂ

ದಿನಾಂಕ : ೧೯.೦೨.೨೦೦೭

೬. ಹೆಸರು : ಮಹಮದ್ ಆರಿಫ್ ತಂದೆ ಖಾಜಾಸಾಬ್
ಊರು : ಗಾದಗಿ, ಬೀದರ ತಾಲ್ಲೂಕು, ಬೀದರ ಜಿಲ್ಲೆ
ವಯಸ್ಸು : ೩೨
ವೃತ್ತಿ ಮತ್ತು ಜಾತಿ : ಗುತ್ತಿಗೆದಾರ, ಮುಸ್ಲಿಂ
ದಿನಾಂಕ : ೧೯.೦೨.೨೦೦೭

೭. ಹೆಸರು : ವಿಶ್ವನಾಥ ತಂದೆ ಮಾರುತೆಪ್ಪ
ಊರು : ವಿದ್ಯಾನಗರ ಕಾಲೋನಿ, ಬೀದರ
ವಯಸ್ಸು : ೭೬
ವೃತ್ತಿ ಮತ್ತು ಜಾತಿ : ಮಾಜಿ ಸುಭೇದಾರ, ಲಿಂಗಾಯತ
ದಿನಾಂಕ : ೨೧.೦೨.೨೦೦೭

೮. ಹೆಸರು : ಶಾಂತಪ್ಪ ದೇವರಾಯ (ದೇಶಾಂಶ ಹುಡುಗಿ)
ಊರು : ಅಲ್ಲಮಪ್ರಭುನಗರ, ಬೀದರ
ವಯಸ್ಸು : ೭೧
ವೃತ್ತಿ ಮತ್ತು ಜಾತಿ : ಶಾಲಾ ತನಿಖಾಧಿಕಾರಿಯಿಂದ ನಿವೃತ್ತಿ, ಲಿಂಗಾಯತ
ದಿನಾಂಕ : ೨೨.೦೨.೨೦೦೭

೯. ಹೆಸರು : ಪಂಚಾಕ್ಷರಿ ಪುಣ್ಯಶೆಟ್ಟಿ
ಊರು : ಕುಂಬರವಾಡ ಬೀದರ
ವಯಸ್ಸು : ೬೮
ವೃತ್ತಿ ಮತ್ತು ಜಾತಿ : ಶಿಕ್ಷಕ ವೃತ್ತಿಯಿಂದ ನಿವೃತ್ತಿ, ಲಿಂಗಾಯತ
ದಿನಾಂಕ : ೨೨.೦೨.೨೦೦೭

೧೦. ಹೆಸರು : ಧೊಂಡಿಬಾ ತಂದೆ ಹಣಮಂತರಾಯ
ಊರು : ಅಗ್ರಹಾರ, ಬೀದರ ತಾಲ್ಲೂಕು, ಬೀದರ ಜಿಲ್ಲೆ
ವಯಸ್ಸು : ೬೫
ವೃತ್ತಿ ಮತ್ತು ಜಾತಿ : ನಿವೃತ್ತಿ ಶಿಕ್ಷಕ
ದಿನಾಂಕ : ೨೪.೦೨.೨೦೦೭

೧೧. ಹೆಸರು : ಶಾಂತಲಿಂಗಸ್ವಾಮಿ ಹಿರೇಮಠ
ಊರು : ಲಾಡಗೇರಿ ಬೀದರ
ವಯಸ್ಸು : ೭೦
ವೃತ್ತಿ ಮತ್ತು ಜಾತಿ : ವಿಶ್ರಾಂತಕರು, ಜಂಗಮರು (ಸ್ವಾಮಿ)
ದಿನಾಂಕ : ೨೪.೦೨.೨೦೦೭

೧೨. ಹೆಸರು : ನಾಗಶೆಟ್ಟಿ ತಂದೆ ಕಂಟೆಪ್ಪ
ಊರು : ಗುರಂಪಳ್ಳಿ ಔರಾದ್ ತಾಲ್ಲೂಕು, ಬೀದರ ಜಿಲ್ಲೆ
ವಯಸ್ಸು : ೬೫
ವೃತ್ತಿ ಮತ್ತು ಜಾತಿ : ಒಕ್ಕಲುತನ, ಲಿಂಗಾಯತ
ದಿನಾಂಕ : ೨೪.೦೨.೨೦೦೭

೧೩. ಹೆಸರು : ಶಿವರಾಯ್ ಒಡೆಯರ್
ಊರು : ಮಾಡ್ಯಾಳ, ಆಳಂದ ತಾಲ್ಲೂಕು, ಗುಲಬರ್ಗಾ ಜಿಲ್ಲೆ
ವಯಸ್ಸು : ೬೨
ವೃತ್ತಿ ಮತ್ತು ಜಾತಿ : ದೇವಾಲಯದ ಉಸ್ತುವಾರಿಕೆ, ಒಡೆಯರು(ಕುಡುಒಕ್ಕಲಿಗರು)
ದಿನಾಂಕ : ೦೪.೦೩.೨೦೦೭

೧೪. ಹೆಸರು : ನಾಗಪ್ಪ ತಂದೆ ಕಂಟೆಪ್ಪ
ಊರು : ಚಳಕಾಪೂರ, ಭಾಲ್ಕಿ ತಾಲ್ಲೂಕು, ಬೀದರ ಜಿಲ್ಲೆ
ವಯಸ್ಸು : ೭೦
ವೃತ್ತಿ ಮತ್ತು ಜಾತಿ : ಕೂಲಿ ಕೆಲಸ, ಕಬ್ಬಲಿಗ
ದಿನಾಂಕ : ೦೫.೦೩.೨೦೦೭

೧೫. ಹೆಸರು : ದ್ರೌಪದಿ ಗಂಡ ಶಂಕರ ಡೂಮನೆ
ಊರು : ಅಂಬೇಡ್ಕರ್ ನಗರ, ಬೀದರ
ವಯಸ್ಸು : ೪೦
ವೃತ್ತಿ ಮತ್ತು ಜಾತಿ : ಕೂಲಿ ಕೆಲಸ, ಹರಿಜನ
ದಿನಾಂಕ : ೦೯.೦೩.೨೦೦೭

೧೬. ಹೆಸರು : ಸುಭಾಷರಾವ್ ಅಲ್ಲಾಪುರೆ ತಂದೆ ಮಾಣಿಕಪ್ಪ ಅಲ್ಲಾಪುರೆ
ಊರು : ಬ್ರಹ್ಮನವಾಡಿ, ಬೀದರ್
ವಯಸ್ಸು : ೪೭
ವೃತ್ತಿ ಮತ್ತು ಜಾತಿ : ದೂರವಾಣಿ ಇಲಾಖೆಯಲ್ಲಿ ಸೇವೆ, ಲಿಂಗಾಯತ
ದಿನಾಂಕ : ೧೧.೦೩.೨೦೦೭